**ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೆಂಟನೆಯ ಅಧಿವೇಶನ

**27ನೇ ಡಿಸೆಂಬರ್ 2022**
**ಮಂಗಳವಾರ**

## ವಿಷಯಾನುಕ್ರಮಣಿಕೆ (Index)

**01. ಪ್ರಕಟಣೆ**

**ಕರ್ನಾಟಕ ವಿಧಾನಸಭೆಯು "ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 2022" ನ್ನು ಅಂಗೀಕರಿಸಿದ್ದು, ವಿಧಾನ ಪರಿಷತ್ತಿನ ಸಹಮತಿಗೆ ಕಳುಹಿಸಿರುವ ಬಗ್ಗೆ.**

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**926 – ನಗರಾಭಿವೃದ್ಧಿ ಇಲಾಖೆಯ ಪುರಸಭೆಯಿಂದ ಟೆಂಡರ್ ಕಾಮಗಾರಿ ಬಗ್ಗೆ**

– ಶ್ರೀ ಸೂರಜ್ ರೇವಣ್ಣ

– ಶ್ರೀ ಎನ್.ನಾಗರಾಜ್(ಎಂ.ಟಿ.ಬಿ.)(ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**945 – ಬಿಜಿಎಂಎಲ್ ಸಂಸ್ಥೆಯ ಬಳಕೆ ಮಾಡದ 967 ಎಕರೆ ಜಾಗದಲ್ಲಿ ಕೈಗಾರಿಕಾ ಟೌನ್ ಶಿಪ್ ನಿರ್ಮಾಣ ಮಾಡುವ ಬಗ್ಗೆ**

– ಶ್ರೀ ಗೋವಿಂದರಾಜು

– ಡಾ.ಮುರುಗೇಶ್ ಆರ್.ನಿರಾಣಿ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

**954 – ರಾಜ್ಯದಲ್ಲಿ ಯಶಸ್ವಿನಿ ಯೋಜನೆಯನ್ನು ಜಾರಿಗೆ ತರುತ್ತಿರುವ ಬಗ್ಗೆ**

– ಶ್ರೀ ಸಿ.ಎನ್.ಮಂಜುನಾಥ್

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**1032 – ರಾಜ್ಯದಲ್ಲಿರುವ ನೇಕಾರರ ಸಮಸ್ಯೆಗಳು ಮತ್ತು ಸರ್ಕಾರದಿಂದ ಅವರಿಗೆ ಇರುವ ಸೌಲಭ್ಯಗಳ ಕುರಿತು**

– ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೊಳಿ

– ಶ್ರೀ ಶಂಕರ ಬ ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು)

**1012 – ಬೆಳಗಾವಿಯಲ್ಲಿ ಸಕ್ಕರೆ ಆಯುಕ್ತಾಲಯದ ಸ್ಥಾಪನೆ**

– ಶ್ರೀ ಟಿ.ಎ.ಶರವಣ

– ಶ್ರೀ ಶಂಕರ ಬ ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು)

**976 – ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯತ್‌ನಲ್ಲಿಯ ಅವ್ಯವಹಾರಗಳ ಕುರಿತು**

– ಶ್ರೀ ಸುನಿಲ್‌ಗೌಡ ಪಾಟೀಲ್

– ಶ್ರೀ ಎನ್.ನಾಗರಾಜ್(ಎಂ.ಟಿ.ಬಿ.)(ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**999 – ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿರುವ ಬಗ್ಗೆ**

– ಶ್ರೀ ಸಲೀಂ ಅಹಮದ್

– ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**1230 – ಪೌರಕಾರ್ಮಿಕರಿಗಾಗಿ ನಿರ್ಮಿಸುತ್ತಿರುವ ಮನೆಗಳ ಬಗ್ಗೆ**

– ಶ್ರೀ ಎನ್.ರುದ್ರೇಗೌಡ

– ಶ್ರೀ ಎನ್.ನಾಗರಾಜ್(ಎಂ.ಟಿ.ಬಿ.)(ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

**967 – ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ನೀಡುತ್ತಿರುವ ಸಾಲಗಳ ಬಗ್ಗೆ**

– ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**1031 – ರಾಜ್ಯಕ್ಕೆ ಕೈಗಾರಿಕೆಗಳಂದ ಹೂಡಿಕೆ ಮಾಡಿಕೊಂಡಿರುವ ಉದ್ಯೋಗಾವಕಾಶಗಳ ಬಗ್ಗೆ**

– ಡಾ.ಕೆ.ಗೋವಿಂದರಾಜ್'

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**1016 – ಪ್ರತಿ ಜಿಲ್ಲೆಗೆ ಜವಳ ಪಾರ್ಕ್ ಸ್ಥಾಪನೆ ಕುರಿತು**

– ಶ್ರೀ ಕೆ.ಎಸ್.ನವೀನ್

– ಶ್ರೀ ಶಂಕರ ಬ ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಗೆ ಲಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಗೆ ಸಂಬಂಧಿಸಿದಂತೆ ಸಚಿವರ ಹೇಳಕೆಗಳು.**

**ಅ) 2022-23ನೇ ಸಾಲಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕೌನ್ಸಿಲಿಂಗ್ ಸೀಟು ಹಂಚಿಕೆಯಾದ ನಂತರ ಉಳಿದ ಸೀಟುಗಳನ್ನು ಸರ್ಕಾರಿ ಕಾಲೇಜುಗಳ ಹಂತದಲ್ಲಿ ಭರ್ತಿ ಮಾಡಲು ಅವಕಾಶ ಕಲ್ಪಿಸುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಐ.ಟಿ. & ಬಿ.ಟಿ. ವಿಜ್ಞಾನ, ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರ ಪರವಾಗಿ)

**ಆ) ಪೋಲೀಸ್ ಇಲಾಖೆಯ ನೌಕರರಿಗೆ ಹಾಗೂ ಅವರ ಅವಲಂಬಿತರಿಗೆ ಆರೋಗ್ಯ ಭಾಗ್ಯ ಯೋಜನೆ ಅಡಿ ಹೆಲ್ತ್ ಸ್ಮಾರ್ಟ್ ಕಾರ್ಡ್ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗೃಹ ಸಚಿವರ ಪರವಾಗಿ)

**ಇ) ಸರ್ಕಾರದಿಂದ ಎಲ್ಲಾ ಜಿಲ್ಲಾಧಿಕಾರಿಗಳಗೆ ಹಾಗೂ ತಹಸೀಲ್ದಾರ್‌ಗಳಗೆ ಹಿಂದೂ ತಳವಾರರಿಗೆ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರ ನೀಡಲು ಸೂಕ್ತ ಆದೇಶ ನೀಡುವ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ)

**ಈ) ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಕುರಿತು**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ)

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

**ಅ) ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿಯ ಹಲಸಿನಮರದದೊಡ್ಡಿ ಗ್ರಾಮದಲ್ಲಿ ನಡೆದಿರುವ ನರೇಗಾ ಕಾಮಗಾರಿ ಮಾಹಿತಿ ಪಡೆದ ಗ್ರಾಮದ ನಿವಾಸಿ ಶ್ರೀ ಮೂರ್ತಿ ಎಂಬ ಯುವಕನನ್ನು ಹತ್ಯೆಗೈದಿರುವ ಕುರಿತು.**

– ಶ್ರೀ ಎನ್.ರವಿಕುಮಾರ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) ಸಹಕಾರ ಬ್ಯಾಂಕುಗಳಿಂದ ಶೂನ್ಯ ಬಡ್ಡಿ ದರದಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವಾಗ ರೈತರಿಂದ ಅನಾವಶ್ಯಕ ದಾಖಲೆ ಪಡೆಯುವುದನ್ನು ತಡೆಗಟ್ಟುವ ಕುರಿತು.**

– ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ

– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

**ಇ) ಬೆಳಗಾವಿ ನಗರದ ಕೇಂದ್ರ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಉದ್ಘಾಟನೆಗೊಳ್ಳುತ್ತಿರುವ ಕುರಿತು.**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) 2015ರಲ್ಲಿ ನೇಮಕವಾದ ಶ್ರೀ ಕಾಂತರಾಜು ರವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಿದ್ದರೂ ಇಲ್ಲಿಯವರೆಗೆ ವರದಿಯ ಬಗ್ಗೆ ಸರ್ಕಾರ ಕ್ರಮವಹಿಸದೇ ಇರುವುದರ ಕುರಿತು.**

– ಶ್ರೀ ಮರಿತಿಬ್ಬೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಉ) ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿರುವ ಪಿ.ಜಿ. ಒನಕೆ ಓಬವ್ವ ಇಂದ್ರಾಣಿದೇವಿ ರಮಾಬಾಯಿ ಅಂಬೇಡ್ಕರ್ ಹಾಸ್ಟೆಲ್‌ನಲ್ಲಿ ಪೂರೈಸಲಾದ ಆಹಾರದ ಗುಣಮಟ್ಟ ಕುರಿತು.**

– ಶ್ರೀ ಪ್ರಕಾಶ್ ಕೆ.ರಾಥೋಡ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಊ) 2022 ಡಿಸೆಂಬರ್ 24 ರಂದು ರಾತ್ರಿ ಸುರತ್ಕಲ್‌ನ ಕೃಷ್ಣಾಪುರ 4ನೇ ಬ್ಲಾಕ್ ನೈತಂಗಡಿಯಲ್ಲಿ ದಿನಸಿ ಅಂಗಡಿ ಹೊಂದಿದ್ದ ಜಲೀಲ್ ಇವರನ್ನು ದುಷ್ಕರ್ಮಿಗಳು ಕೊಲೆ ಮಾಡಿರುವ ಕುರಿತು.**

– ಶ್ರೀ ಸಲೀಂ ಅಹಮದ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಋ) ಲೀಸ್ ನೀಡಿರುವ ಐ.ಸಿ.ಹೆಚ್.ಆರ್. ಕಟ್ಟಡವನ್ನು ಶಾಶ್ವತವಾಗಿ ಭಾರತೀಯ ಇತಿಹಾಸ ಸಂಶೋಧನಾ ನಿಯಂತ್ರಿಸುವ ಕುರಿತು.**

– ಡಾ.ತೇಜಸ್ವಿನಿಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಎ) ವಿದೇಶದಲ್ಲಿ ಕೊರೋನಾ ಸೋಂಕು ಹೆಚ್ಚಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಗತ್ಯ ಆರೋಗ್ಯ ಸೇವೆಗಳ ಹಾಗೂ ಔಷಧಿ ಸಂಗ್ರಹ ಇನ್ನಿತರೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವ ಕುರಿತು.**

– ಶ್ರೀ ಡಿ.ಎಸ್.ಅರುಣ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಏ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಸೌಪರ್ಣಿಕ ನದಿಯ ಹತ್ತಿರ ಅಕ್ರಮ ಮರಳು ಗಣಿಗಾರಿಕೆ ನಿಯಂತ್ರಿಸುವ ಕುರಿತು.**

– ಶ್ರೀ ಮಂಜುನಾಥ ಭಂಡಾರಿ

– ಶ್ರೀ ಆಚಾರ್ ಹಾಲಪ್ಪ ಬಸಪ್ಪ(ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಐ) ಉತ್ತರ ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳಲ್ಲಿ ನೆಲೆಸಿರುವ ಕೊಂಕಣಿ ಭಾಷಿಕರ ಭಾಷೆ, ಕಲೆ, ಸಾಹಿತ್ಯ ಅಭಿವೃದ್ಧಿ, ಶಿಕ್ಷಣ ಹಾಗೂ ಸಂಶೋಧನೆಗಾಗಿ ವಿಶ್ವವಿದ್ಯಾಲಯ ಕೊಂಕಣಿ ಆದ್ಯಯನ ಪೀಠಕ್ಕೆ ಅನುದಾನ ಬಿಡುಗಡೆ ಕುರಿತು.**

– ಶ್ರೀ ಎಸ್.ವ್ಹಿ.ಸಂಕನೂರ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**5. ಕಾರ್ಯದರ್ಶಿಯವರ ವರದಿ**

ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ

1. ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2022

2.ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 2022ರ ಮಂಡನೆ

6. **ವರದಿಗಳನ್ನೊಪ್ಪಿಸುವುದು**

2021-22ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 9ನೇ ವರದಿ.

**7. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರಗಳನ್ನು ಒದಗಿಸದಿರುವ ಕುರಿತು**

- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

8. **ಶಾಸನ ರಚನೆ**

**<u>ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ</u>**

**(ಅ) ಕರ್ನಾಟಕ ಸ್ಟ್ಯಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2022**

- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ನಸೀರ್ ಅಹ್ಮದ್
- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧಪಕ್ಷದ ಮುಖ್ಯ ಸಚೇತಕರು)
- ಶ್ರೀ ಮರಿತಿಬ್ಬೇಗೌಡ
- ಶ್ರೀ ಶರವಣ ಟಿ.ಎ.

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**9. ನಿಯಮ 330ರ ಮೇರೆಗೆ ಚರ್ಚೆ**

**ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆವಿಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಹಾಗೂ ಹಣ ಹೂಡಿಕೆ ಮಾಡಿ ವಂಚಿತರಾದವರಿಗೆ ಪರಿಹಾರ ಒದಗಿಸದಿರುವ ಕುರಿತು.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಪ್ರಕಾಶ್ ಕೆ.ರಾಥೋಢ್(ವಿರೋಧಪಕ್ಷದ ಮುಖ್ಯ ಸಚೇತಕರು)
- ಶ್ರೀ ಪಿ.ಆರ್.ರಮೇಶ್
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್
- ಶ್ರೀ ನಸೀರ್ ಅಹ್ಮದ್
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದವನ್ನು ಶಾಶ್ವತವಾಗಿ ಪರಿಹರಿಸಲು ಸರ್ಕಾರವು ವಿಫಲವಾಗಿರುವ ಕುರಿತು.**

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಪ್ರಕಾಶ್ ಕೆ.ರಾಥೋಢ್(ವಿರೋಧಪಕ್ಷದ ಮುಖ್ಯ ಸಚೇತಕರು)

**11. ಪ್ರಕಟಣೆ**

**ಕರ್ನಾಟಕ ವಿಧಾನಸಭೆಯು ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ ವಿಧೇಯಕ, 2022 ವನ್ನು ಅಂಗೀಕರಿಸಿದ್ದು, ವಿಧಾನ ಪರಿಷತ್ತಿನ ಸಹಮತಿಯನ್ನು ಕೋರಿರುವ ಬಗ್ಗೆ.**

**12. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಮುಂದುವರೆದ ಚರ್ಚೆ**

**ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದವನ್ನು ಶಾಶ್ವತವಾಗಿ ಪರಿಹರಿಸಲು ಸರ್ಕಾರವು ವಿಫಲವಾಗಿರುವ ಕುರಿತು.**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಶರವಣ ಟಿ.ಎ.
- ಡಾ: ತೇಜಸ್ವಿನಿ ಗೌಡ
- ಪ್ರತಾಪಸಿಂಹ ನಾಯಕ್.ಕೆ
- ಶ್ರೀ ಕೆ.ಎಸ್.ನವೀನ್
- ಶ್ರೀ ಎಸ್.ರವಿ
- ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಎನ್.ರವಿಕುಮಾರ್
- ಶ್ರೀ ಪಿ.ಆರ್.ರಮೇಶ್
- ಶ್ರೀ ಎಂ.ನಾಗರಾಜು
- ಶ್ರೀ ತಳವಾರ್ ಸಾಬಣ್ಣ
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ

**13. ಅಧಿಕೃತ ನಿರ್ಣಯ**

**ಮಹಾರಾಷ್ಟ್ರದ ಜನತೆಯು ಅನಾವಶ್ಯಕವಾಗಿ ಸೃಷ್ಟಿಸುವ ಗಡಿ ವಿವಾದವನ್ನು ಖಂಡಿಸಿ, ರಾಜ್ಯದ ಹಿತರಕ್ಷಣೆಗೆ ಕಟಿಬದ್ಧರಾಗಿರುವ ಬಗ್ಗೆ.**

- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**(ನಿರ್ಣಯ ಅಂಗೀಕರಿಸಲ್ಪಟ್ಟಿತು)**

**14. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಆ) ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ), ವಿಧೇಯಕ, 2022**

- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಎನ್.ರವಿಕುಮಾರ್
- ಶ್ರೀ ಪಿ.ಆರ್.ರಮೇಶ್
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ
- ಶ್ರೀ ಎಂ.ನಾಗರಾಜು
- ಶ್ರೀ ಅರವಿಂದ ಕುಮಾರ್ ಅರಳಿ
- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಮರಿತಿಬ್ಬೇಗೌಡ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

<><><>

**(1189) 27.12.2022 11.00 ಪಿಕೆ:ಬಿಎನ್ಎಸ್**

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, 27ನೇ ಡಿಸೆಂಬರ್ 2022**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು**

**ಪೀಠದಲ್ಲಿ ಉಪಸ್ಥಿತರಾದರು**

## 1. ಪ್ರಕಟಣೆ

**ಸಭಾಪತಿಯವರು:–** ವಿಧಾನಸಭೆಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:

*"ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 26.12.2022ರಂದು* ***"ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 2022"*** *ನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ"*

## 2, ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಪ್ರಶ್ನೆ ಸಂಖ್ಯೆ: 926

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೇ, ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಬಹಳ ಲೋಪದೋಷಗಳು ಕಂಡುಬರುತ್ತಿವೆ. ನಮ್ಮ ಪ್ರಶ್ನೆ ಇದ್ದದ್ದು, ಮಾನ್ಯ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಯೋಜನೆ-3ರಲ್ಲಿ, ಹಾಸನ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ಹಾಗೂ ಶೌಚಾಲಯ ಬ್ಲಾಕ್‌ಗಳನ್ನು ನಿರ್ಮಿಸುವ ಕಾಮಗಾರಿ ಇಂಡೆಂಟ್ 132657 ಟೆಂಡರನ್ನೇನು ಕರೆಯಲಾಗಿತ್ತೋ ಅದರಲ್ಲಿ ಒಟ್ಟು ಕಾಮಗಾರಿಗೆ ಟೆಂಡರ್‌ನ ಮೊತ್ತ ರೂ.26 ಕೋಟಿ 19 ಲಕ್ಷ ಆಗಿರುತ್ತದೆ. ಇದು excluding GST. ಇದನ್ನು ಸ್ವಲ್ಪ ಗಮನಿಸಬೇಕು. ಗುತ್ತಿಗೆದಾರರ ವಾರ್ಷಿಕ ಟರ್ನ್‌ಓವರ್ ಅರ್ಹತೆ, ಮಾನ್ಯ ಸಚಿವರೇ ಕೊಟ್ಟಿರುವ ಉತ್ತರದಂತೆ, "Usually not less than two times of the estimated annual payments under the contract according to Standard bid documents." ಎಂದು ಹೇಳುತ್ತಾರೆ. ಅಲ್ಲಿಗೆ, ರೂ. 26 ಕೋಟಿ 19 ಲಕ್ಷ ಒಟ್ಟು ಟೆಂಡರ್‌ಗಿಟ್ಟ ಮೊತ್ತವಾದರೆ, ಗುತ್ತಿಗೆದಾರರ ವಾರ್ಷಿಕ ಟರ್ನ್‌ಓವರ್ ಅರ್ಹತೆ ರೂ.52 ಕೋಟಿ 38 ಲಕ್ಷ ಆಗಿರಬೇಕಾಗುತ್ತದೆ. ಆದರೆ ಇಲ್ಲಿ Executive Engineer, Urban development cell, Hassan, ಇವರೇನು ಟೆಂಡರನ್ನು ಆಹ್ವಾನ ಮಾಡಿದ್ದಾರೋ ಅದರಲ್ಲಿ ಗುತ್ತಿಗೆದಾರರು, "to qualify for award of this contract each tenderer in his name should have in the last five years' period achieved in at least two financial years an average annual financial turnover of Rs.34 Crores 93 lakhs..." ಎಂಬುದನ್ನು ನಮೂದು ಮಾಡಿದ್ದಾರೆ.

(ಮುಂದು . . .)

(1190) 27-12-2022 11.10 ಡಿಎಸ್-ಬಿಎನ್ಎಸ್

**ಶ್ರೀ ಸೂರಜ್ ರೇವಣ್ಣ(ಮುಂದು):-**

ಹಾಗೂ line of credit ವಿಷಯ ಬಂದರೆ ಒಟ್ಟು ಮೊತ್ತ ಏನಿದೆ, 26 ಕೋಟಿ 19 ಲಕ್ಷ excluding GST, ದಿನಾಂಕ:14-10-2008 ರಲ್ಲಿ modified clause ಇದೆ. According to standard bid documents, line of credit should be 30% of the total amount of tender, ಎಂದು ಹೇಳುತ್ತಾರೆ. ಆ line of credit for total amount of tender is, 26 ಕೋಟಿ ರೂಪಾಯಿಗಳಿಗೆ 7 ಕೋಟಿ 85 ಲಕ್ಷ ರೂಪಾಯಿಗಳಾಗುತ್ತದೆ. ಆದರೆ ಎಗ್ಸಿಕ್ಯುಟಿವ್ ಇಂಜಿನಿಯರ್‌ರವರು 6 ಕೋಟಿ 55 ಲಕ್ಷ line of credit ಎಂದು ಹೇಳುತ್ತಾರೆ. ಅಲ್ಲಿಗೆ line of credit ನಲ್ಲೂ ಕೂಡ ಇವರೇ modify ಮಾಡಿಕೊಂಡಿದ್ದಾರೆ. It is not according to standard bid documents as per the notification of finance department regarding modified clause dated 14.10.2008. ಅದರ ಪ್ರಕಾರ ಇವರು line of credit ಕೂಡ modify ಮಾಡಿದ್ದಾರೆ. ಗುತ್ತಿಗೆದಾರರ qualification for annual financial turnover ಇರಬೇಕು ಅದನ್ನು ಕೂಡ modify ಮಾಡಿದ್ದಾರೆ. ಇವೆರಡು ವಿಷಯದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಮುಖ್ಯವಾಗಿರುವುದೇನೆಂದರೆ, ಇಲ್ಲೇನು ಎಗ್ಸಿಕ್ಯುಟೀವ್ ಇಂಜಿನಿಯರ್ ಇದ್ದಾರೆ, ಈಗ ನಾವು proper channel ತೆಗೆದುಕೊಂಡರೆ, Executive Engineer, Urban development cell, ಇವರು ಈ ಟೆಂಡರ್‌ನ್ನು ಕರೆದಿರುವಂಥದ್ದು. ಇದರಲ್ಲಿ ಇವರೇ modify ಮಾಡಿರುವಂಥದ್ದು. Municipal Commissioner ಅವರು ಕೂಡ ಇದ್ದಾರೆ. ಎ.ಸಿ. ಯವರು ಮೇಲ್ವಿಚಾರಕರಾಗಿದ್ದಾರೆ, ಜಿಲ್ಲಾಧಿಕಾರಿಯವರು implementing authority ಆಗಿದ್ದಾರೆ. ಕಮೀಷನರ್‌ರವರಿಗೆ ಇಲ್ಲಿ ಏನಾಗುತ್ತಿದೆಯೋ ಅದೆಲ್ಲಾ ಗಮನಕ್ಕೆ ಬಂದಿದೆ. ಇಷ್ಟು ಇದ್ದಾಗ ಈ ಇಲಾಖೆಯಲ್ಲಿ ಇವರೇ ಈ ರೀತಿ modify ಮಾಡಿಕೊಂಡಿರುವುದು ಯಾರ ಗಮನಕ್ಕೂ ಬಂದಿಲ್ಲವೇ ಅಥವಾ ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? Finance Department ನವರು modified clause ಮಾಡಿದಾಗ standard bid documents ಎಂದು ಏನು mention ಮಾಡುತ್ತಾರೆ, ಅದು ಅವರ

ಗಮನಕ್ಕೆ ಬಂದಿದೆಯೇ? ಇಂತಹ ಗಂಭೀರವಾದ ಹಗರಣ ಹಾಸನ ನಗರಸಭೆಯಲ್ಲಿ ನಡೆದಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ?

**ಶ್ರೀ ಎನ್.ನಾಗರಾಜ್(ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಪುರಸಭೆ ಎಂದು ಇದೆ. ಆದರೆ ಅದು ಹಾಸನ ನಗರಸಭೆ. ನಗರಸಭೆಗೆ ಈಗಾಗಲೇ ನಗರೋತ್ಥಾನ 3ನೇ ಹಂತ, ನಗರೋತ್ಥಾನ 4ನೇ ಹಂತ, 14ನೇ/15ನೇ ಹಣಕಾಸು, SFC grant, ವಿಶೇಷ ಅನುದಾನ ಅಡಿಯಲ್ಲಿ ನಗರಸಭೆ ವಾರ್ಡ್‌ವೈಸ್, ಎಲ್ಲಾ ವಾರ್ಡ್‌ಗಳಲ್ಲೂ ಕೂಡ ಟೆಂಡರ್ ಮೂಲಕ ಆರ್ಥಿಕ ಇಲಾಖೆಯ ಮಾನದಂಡಗಳಂತೆ ಟೆಂಡರ್‌ನ್ನು ಕರೆದು ಟೆಂಡರ್ ಆಗಿದೆ. ಅಲ್ಲಿ ಏನು ಲೋಪದೋಷಗಳಾಗಿವೆ ಎಂದು ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ, ಆಗಿರುವಂತಹ ಲೋಪದೋಷಗಳು ಇದುವರೆಗೂ ನಮ್ಮ ಇಲಾಖೆಗಾಗಲಿ ಅಥವಾ ನನ್ನ ಗಮನಕ್ಕಾದರೂ ಬಂದಿಲ್ಲ. ನಿಖರವಾಗಿ ಯಾವ ವಾರ್ಡ್‌ನಲ್ಲಿ, ಯಾವ ಅನುದಾನದಲ್ಲಿ ಲೋಪದೋಷ ಆಗಿದೆ, ಟೆಂಡರ್‌ನಲ್ಲಿ ಲೋಪದೋಷ ಆಗಿದೆಯೇ ಅಥವಾ ಗುಣಮಟ್ಟದಲ್ಲಿ ಲೋಪದೋಷವಾಗಿದೆಯೇ ಎಂಬ ಮಾಹಿತಿಯನ್ನು ನಿಖರವಾಗಿ ನನಗೆ ಕೊಡಲಿ. ಅಂಥವರ ಮೇಲೆ ನಾವು ಕಾನೂನು ಬದ್ಧವಾಗಿ ಕ್ರಮವನ್ನು ಜರುಗಿಸುತ್ತೇವೆ. ಈಗ ಕೊಟ್ಟಿರುವಂತಹ ಹಣ ಅಮೃತ್ ನಗರೋತ್ಥಾನ 3ನೇ ಹಂತದ ಯೋಜನೆಯಡಿಯಲ್ಲಿ 29.75 ಲಕ್ಷ ರೂಪಾಯಿಗಳ ಹಣವನ್ನು ಕೊಟ್ಟಿದ್ದೇವೆ. ಈಗಾಗಲೇ ಸದಸ್ಯರು ಕೇಳಿರುವಂತಹ ಮಾಹಿತಿಯನ್ನು ಅನುಬಂಧ-1, ಅನುಬಂಧ-3, ಅನುಬಂಧ-5 ರಲ್ಲಿ ಬಹಳ ವಿವರವಾಗಿ ವಾರ್ಡ್‌ವಾರು ಏನೇನು ಅಭಿವೃದ್ಧಿಯಾಗಿದೆ ಎಂಬ ಮಾಹಿತಿಯನ್ನು ಕೊಟ್ಟಿದ್ದೇವೆ. 14ನೇ/15ನೇ ಹಣಕಾಸು, SFC grant, ವಿಶೇಷ ಅನುದಾನ, ಅಮೃತ್ ಯೋಜನೆ, ತೆರಿಗೆಯಿಂದ ಬರುವಂತಹ ಅನುದಾನ, ಈ ಎಲ್ಲಾ ಅನುದಾನಗಳಿಂದಲೂ ಕೂಡ ಕಳೆದ 3 ವರ್ಷಗಳಲ್ಲಿ ಏನೇನು ಅಭಿವೃದ್ಧಿಯಾಗಿದೆ, ಟೆಂಡರ್ ಆಗಿರುವಂಥದ್ದನ್ನು ಕೂಡ ಕ್ಲಾಸ್-1 ಗುತ್ತಿಗೆದಾರರಿಗೆ ನಿಯಮಾವಳಿಯಲ್ಲಿ ಎಷ್ಟು ಯಂತ್ರೋಪಕರಣಗಳಿರಬೇಕು, ವಾರ್ಷಿಕ turnover ಇಷ್ಟು ಆಗಿರಬೇಕು ಎಂದು ನಿಯಮಾನುಸಾರ ಇರುವವರಿಗೆ ಮಾತ್ರ ನಾವು ಟೆಂಡರ್‌ನಲ್ಲಿ ಅವರಿಗೆ ಕಾರ್ಯಾದೇಶವನ್ನು ಕೊಟ್ಟಿದ್ದೇವೆ. ಇಲ್ಲದಿದ್ದರೆ technical bid/financial bid ನಲ್ಲಿ ಅವರು ತಿರಸ್ಕೃತರಾಗಿ ಬಿಡುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಲೋಪದೋಷಗಳಾಗಿವೆ ಎಂದು ಹೇಳಿದ್ದಾರೆ. ಇದರಲ್ಲಿ ಗುಣಮಟ್ಟ

ಕಡಿಮೆ ಇದೆ, ಯಾವ ಯಾವ ವಾರ್ಡ್‌ನಲ್ಲಿ ಆಗಿದೆ, ಯಾವ ಯಾವ ಅನುದಾನದಲ್ಲಾಗಿದೆ ಎಂದು ನಿಖರವಾಗಿ ಮಾಹಿತಿಯನ್ನು ಕೊಡಿ. ನಾವು ನಿರ್ದಿಷ್ಟವಾಗಿ ಅವರ ಮೇಲೆ ಕ್ರಮ ಜರುಗಿಸುತ್ತೇವೆ.

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೆ, ಈಗೇನು ಅವರು ಇಂಡೆಂಟ್ ನಂಬರ್ ನಮೂದಿಸಿ 29 ಕೋಟಿ ರೂಪಾಯಿಗಳು ಒಟ್ಟು ಟೆಂಡರ್ ಮೊತ್ತ ಎಂದು ಪ್ರಸ್ತಾಪ ಮಾಡಿದರು. ಮೊದಲನೆಯದಾಗಿ ಜಿಎಸ್‌ಟಿ ಸೇರಿ ಇದನ್ನು ಒಂದೇ ಪ್ಯಾಕೇಜ್ ಮಾಡಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. As per standard bid documents ರೂ. 29 ಕೋಟಿ ಗೆ ಒಂದೇ ಪ್ಯಾಕೇಜ್ ಮಾಡಿದರೆ ಅದು ಸಚಿವ ಸಂಪುಟದಲ್ಲಿ ಅನುಮೋದನೆಗೊಳ್ಳಬೇಕು. ಅದನ್ನು ಮಾಡಿದ್ದಾರೆಯೇ ಎಂದು ಒಂದು ಸ್ಪಷ್ಟನೆಯನ್ನು ಕೊಡಬೇಕು. ಎರಡನೆಯದಾಗಿ ಗುತ್ತಿಗೆದಾರರ ಅರ್ಹತೆ, ವಾರ್ಷಿಕ turnover ಅದು ಡಬಲ್ ಇರಬೇಕೆಂದು ನೀವೇ ಉತ್ತರದಲ್ಲಿ ಕೊಟ್ಟಿದ್ದೀರಿ. ಈಗ ಇಪ್ಪತ್ತಾರು ಕೋಟಿ ಹತ್ತೊಂಬತ್ತು ಲಕ್ಷ ಅದು ಟೆಂಡರ್‌ನ ಒಟ್ಟು ವೆಚ್ಚ. ಅದು ಐವತ್ತೆರಡು ಕೋಟಿ ರೂ. ಇರಬೇಕು. ಆದರೆ ನಿಮ್ಮ ಎಗ್ಸಿಕ್ಯೂಟಿವ್ ಇಂಜಿನಿಯರ್ ಮೂವತ್ತನಾಲ್ಕು ಕೋಟಿ ರೂ. ಎಂದು ಹೇಳುತ್ತಾರೆ. ಇದು ಮುಖ್ಯವಾದ ಸಂಗತಿ. ಇನ್ನೊಂದು ವಿಚಾರವೆಂದರೆ, line of credit ಕೂಡ ಒಟ್ಟು ಗುತ್ತಿಗೆದಾರರ ಮೊತ್ತದ ಶೇಕಡ ಮೂವತ್ತು ಇರಬೇಕೆಂದು ಹೇಳುತ್ತಾರೆ. ಇದರಲ್ಲಿ ಶೇಕಡ ಮೂವತ್ತು ತೆಗೆದುಕೊಂಡರೆ ಏಳು ಕೋಟಿ ಎಂಭತ್ತೈದು ಲಕ್ಷ ರೂ. ಆಗುತ್ತದೆ. ಆದರೆ ಇಲ್ಲಿ line of credit ನ್ನು ಎಗ್ಸಿಕ್ಯೂಟಿವ್ ಇಂಜಿನಿಯರ್ ಆರು ಕೋಟಿ ಐವತ್ತೈದು ಲಕ್ಷ ರೂ. ಇರಬೇಕೆಂದು, ಅಲ್ಲಿಯೂ ಸಹ ಅವರೇ ತಿದ್ದುಪಡಿಯನ್ನು ಮಾಡಿದ್ದಾರೆ. ಇದು ಇಷ್ಟು ಜನ ಅಧಿಕಾರಿಗಳನ್ನು ಏನು ಹೇಳದೆ, ಅವರ ಮೂಲಕ ಹೋಗಿದೆ. ಈಗ ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ನಿಮ್ಮ ಗಮನಕ್ಕೆ ಈ ಮೂರು ಮುಖ್ಯವಾದ ಲೋಪದೋಷಗಳನ್ನು ತಂದಿದ್ದೇನೆ. ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ನೀವು ಟೆಂಡರ್‌ನ್ನು ಕೂಡ ಕೂಡಲೇ ರದ್ದುಪಡಿಸಬೇಕು. ಇದು ಕೌನ್ ಬನೇಗ ಕರೋಡ್‌ಪತಿ ಅಲ್ಲ. According to proper channel ನಾನು ಐದು ಜನರ ಹೆಸರನ್ನು ಹೇಳದೆ. ಒಂದಿಬ್ಬರ ಮೇಲಲ್ಲ. ಇದೊಂದು ಗಂಭೀರವಾದ ಹಗರಣವಾಗಿದೆ. ಟೆಂಡರ್ ರದ್ದುಪಡಿಸುವುದಲ್ಲದೇ ಯಾವ ರೀತಿ ಶಿಸ್ತು ಕ್ರಮ ಜರುಗಿಸುತ್ತೀರಿ ಎಂದು ಸ್ಪಷ್ಟನೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೆ, ಹಿಂದಿನ ನಗರೋತ್ಥಾನ ಮೂರನೇ ಹಂತ ಇದ್ದಂಥ ಸಂದರ್ಭದಲ್ಲಿ ಅದರ ನಿಯಮಗಳೇ ಬೇರೆ ಇತ್ತು. ಈಗ ನಾವು 2022-23ರಲ್ಲಿ ನಗರೋತ್ಥಾನ 4ನೇ ಹಂತ ಕೊಟ್ಟಿದ್ದೇವೆ. ನಗರೋತ್ಥಾನ 4ನೇ ಹಂತದಲ್ಲಿ ನಾವು ಹಾಸನ ನಗರ ಸಭೆಗೆ 40 ಕೋಟಿ ರೂ. ಹಣವನ್ನು ಕೊಟ್ಟಿದ್ದೇವೆ. SFC ವಿಶೇಷ ಅನುದಾನದಲ್ಲಿಯೂ ಕೂಡ ನಗರಸಭೆಗೆ ಹೆಚ್ಚಿನ ಹಣವನ್ನು ನಾವು ಕೊಟ್ಟಿದ್ದೇವೆ. ಇದಕ್ಕೆ ಹೊಸದಾಗಿ ಒಂದು ನಿಯಮಾವಳಿಯನ್ನು ಮಾಡಿದ್ದೇವೆ. ಇದನ್ನು ನಾವು ಜಿಲ್ಲಾ ಕಮಿಟಿ ಮತ್ತು ಸ್ಟೇಟ್ ಕಮಿಟಿ ಎಂದು ಮಾಡಿದ್ದೇವೆ. ಯಾರು ಆ ಜಿಲ್ಲೆಯಲ್ಲಿಯೇ ಉಸ್ತುವಾರಿ ಮಂತ್ರಿಗಳಾಗಿರುತ್ತಾರೆ, ಆ ಉಸ್ತುವಾರಿ ಸಚಿವರುಗಳ ಅಧ್ಯಕ್ಷತೆಯಲ್ಲಿ action plan ಅನುಮೋದನೆ ಆಗಬೇಕು. ನಗರ ಸಭೆಯಲ್ಲಿರತಕ್ಕಂಥ ಸ್ಥಳೀಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಪ್ರೊಸೀಡಿಂಗ್ಸ್ ಆಗಿ.....

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಈ ರೀತಿ ಆಗಿದೆ ಎಂದು ಹೇಳುತ್ತಾರೆ. ತಪ್ಪಾಗಿದ್ದರೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ನಿಯಮಾವಳಿಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿದ್ದಾರೆ.

**ಶ್ರೀ ಸೂರಜ್ ರೇವಣ್ಣ:-** ಮಾನ್ಯ ಸಭಾಪತಿಯವರೆ, according to standard bid documents.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಮೇಲ್ನೋಟಕ್ಕೆ ತಪ್ಪು ಎಂದು ಕಾಣುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ತಪ್ಪಿದ್ದರೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಎನ್.ನಾಗರಾಜ್ (ಎಂ.ಟಿ.ಬಿ):-** ಮಾನ್ಯ ಸಭಾಪತಿಯವರೆ, ಅಂತಹ ತಪ್ಪುಗಳಾಗಿದ್ದರೆ ಅವರ ಮೇಲೆ ನಾವು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 945**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು)(ಶ್ರೀ ಗೋವಿಂದರಾಜು ರವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ತಮಗೆ ಗೊತ್ತಿರುವ ಹಾಗೆ ಭಾರತ ಸರ್ಕಾರದ ಎರಡು ಕೈಗಾರಿಕೋದ್ಯಮ ಕೋಲಾರ ಜಿಲ್ಲೆಯಲ್ಲಿದೆ. ಒಂದು BGML ಇನ್ನೊಂದು BEML. ಮೊಟ್ಟಮೊದಲನೆಯದಾಗಿ ನಾನು ತಮಗೆ ಬಿಜಿಎಂಎಲ್‌ಗೆ ಸಂಬಂಧಪಟ್ಟಂತೆ ಸ್ಪಷ್ಟೀಕರಣವನ್ನು ಕೇಳುತ್ತೇನೆ. ಕೇಂದ್ರ ಸರ್ಕಾರಕ್ಕೆ ಒಂದು ಪ್ರಪೋಸಲ್ ಕಳುಹಿಸಿದ್ದೇವೆಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಅಲ್ಲಿರತಕ್ಕಂಥ ಎಲ್ಲಾ ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರ ಮಾಡಿ, ಅದೇ ರೀತಿಯಾಗಿ ಎರಡನೇ ಹಂತದಲ್ಲಿ, "transfer of balance land with BGML to GoK, auctioning of ore tailing dumps and extraction of gold..." ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಬಹುಶಃ ಇದನ್ನೇನಾದರೂ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರತಕ್ಕಂಥ ಹಟ್ಟಿ ಗಣಿ ವಶಕ್ಕೆ ತೆಗೆದುಕೊಳ್ಳಲು ಏನಾದರೂ ಪ್ರಯತ್ನ ನಡೆದಿದೆಯೇ? ಈಗಾಗಲೇ ಭಾರತ ಸರ್ಕಾರ ಅಲ್ಲಿ ಹೊರಗಡೆ ಬಿದ್ದಿರುವಂತಹ ಅದಿರನ್ನು ಹರಾಜು ಮಾಡುವುದಕ್ಕೆ ಹೊರಟಿದೆ ಎಂದು ಇತ್ತೀಚೆಗೆ ಪತ್ರಿಕೆಯಲ್ಲಿ ವರದಿ ಬಂದಿದೆ. ಅದನ್ನು ನಿಲ್ಲಿಸುತ್ತಾರೆಯೇ ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

(ಮುಂದು)

(1191) 27/12/2022/11:20/ಎಸ್‌ಪಿಆರ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಡಾ||ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಕೋಲಾರ ಚಿನ್ನದ ಗಣಿಯಲ್ಲಿ ಅಂದಾಜು 13 ಸಾವಿರ ಎಕರೆಗಿಂತಲೂ ಹೆಚ್ಚು ಜಮೀನನ್ನು ಈ ಹಿಂದೆ ಈ ಕಂಪೆನಿಗೆ ಹಸ್ತಾಂತರ ಮಾಡಲಾಗಿತ್ತು. ಸದರಿ unit sick ಆದ ನಂತರ, ಅಲ್ಲಿರುವ ಹೆಚ್ಚುವರಿ ಭೂಮಿಯನ್ನು ಕೆ.ಐ.ಎ.ಡಿ.ಬಿ., ಸಂಸ್ಥೆಗೆ ನಾವು ತೆಗೆದುಕೊಳ್ಳುವ ಸಲುವಾಗಿ ಕೇಂದ್ರದ ಕಲ್ಲಿದ್ದಲು ಮತ್ತು ಗಣಿ ಕೈಗಾರಿಕೆ

ಮಂತ್ರಿಗಳಿಗೆ ಪತ್ರ ವ್ಯವಹಾರಗಳನ್ನು ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ, ಅಂದಾಜು 3,500 ಎಕರೆಯಷ್ಟು ಹೆಚ್ಚುವರಿ ಭೂಮಿಯನ್ನು ಮರಳಿ ನೀಡುತ್ತೇವೆ. ಇದಕ್ಕೆ ಸಂಬಂಧಿತ ಚಕ್ಕುಬಂದಿ ಅಂದರೆ ಯಾವ ಯಾವ ಸರ್ವೆ ನಂಬರ್‌ಗಳು ಸದರಿ 3,500 ಎಕರೆ ಪ್ರದೇಶಗಳ ವ್ಯಾಪ್ತಿಗೊಳಪಡುತ್ತವೆ ಎನ್ನುವುದನ್ನು ಮರಳಿ ತಿಳಿಸುವಂತೆ ಅವರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ. ಇದಾದ ನಂತರ ನಾವು ಸಂಪೂರ್ಣವಾಗಿ ಸರ್ವೆ ಮಾಡಿಸಿದ್ದೇವೆ. ಆ ಸಂದರ್ಭದಲ್ಲಿ ಬಹಳಷ್ಟು ಭೂಮಿಯು ಒತ್ತುವರಿಯಾಗಿ, ಅನಧಿಕೃತ ಕಟ್ಟಡಗಳ ನಿರ್ಮಾಣವಾಗಿರುವುದು ಕಂಡು ಬಂದಿತು. ಅಲ್ಲಿನ ಜಿಲ್ಲಾಧಿಕಾರಿಗಳು ಬಹಳಷ್ಟು ಪ್ರಯತ್ನಿಸಿದರು. ಆ ಸ್ವತ್ತುಗಳಿಗೆ property extractಗಳಿರಲಿಲ್ಲ. ಹೀಗಾಗಿ ಐದಾರು ತಿಂಗಳಿನಲ್ಲಿ ಅವುಗಳನ್ನೆಲ್ಲಾ ಸರಿಪಡಿಸಿ, 12 ಸಾವಿರಕ್ಕಿಂತಲೂ ಹೆಚ್ಚಿನ ಭೂಮಿಯನ್ನು ಅಧಿಕೃತವಾಗಿ ಸ್ವತ್ತುಗಳಿಗೆ property extract ಸಿಗುವಂತೆ ಮಾಡಿದರು. ನಂತರದಲ್ಲಿ plus or minus ಸುಮಾರು 3,400 ಎಕರೆಯಷ್ಟು ಭೂಮಿಗೆ ಚಕ್ಕುಬಂಧಿ, ಆಕಾರ ಇತ್ಯಾದಿಗಳನ್ನು ಹಾಕಿ, ಅವುಗಳು ಯಾವ ಕಡೆಗೆ ಬರುತ್ತವೆ ಇತ್ಯಾದಿಗಳೆಲ್ಲವನ್ನೂ ತಿಳಿಸಿ, ಕೇಂದ್ರ ಸರ್ಕಾರಕ್ಕೆ ನಾವು ಪುನಃ ಪತ್ರವನ್ನು ಬರೆದಿದ್ದೇವೆ. ಆಗ ಅಲ್ಲಿನ ಸಮಿತಿಯಲ್ಲಿ ಸದರಿ 3,500 ಎಕರೆಯಷ್ಟು ಭೂಮಿಯನ್ನು ಮಾತ್ರವೇ ನೀಡುವುದಿಲ್ಲ, ಬದಲಾಗಿ ಸ್ವತ್ತಿನ ಮೇಲಿರುವ liabilitiesನೊಂದಿಗೆ ಸಂಪೂರ್ಣವಾಗಿ ಭೂಮಿಯನ್ನು ತೆಗೆದುಕೊಳ್ಳಿ ಎಂಬುದಾಗಿ ಕೇಂದ್ರವು ನಮಗೆ ಪತ್ರದ ಮುಖೇನ ತಿಳಿಸಿತು. ಈ ವಿಚಾರವಾಗಿ ನಾವು ಪತ್ರ ವ್ಯವಹಾರಗಳನ್ನು ಮಾಡಿದ್ದೇವೆ. ಇದರಲ್ಲಿ ಎರಡು ಹಂತಗಳನ್ನು ಮಾಡಿದ್ದೇವೆ. ಮೊದಲನೇ ಹಂತದಲ್ಲಿ 3,500 ಎಕರೆಯಷ್ಟು ಭೂಮಿಯನ್ನು ಹಸ್ತಾಂತರಿಸಿ, ಅದು ಮೂಲತಃ ಕಂದಾಯ ಜಮೀನಾಗಿರುವುದರಿಂದ ಕಂದಾಯ ಇಲಾಖೆಯವರಿಗೆ ನೀಡಿ ಎಂಬುದಾಗಿ ನಾವು ಹೇಳುತ್ತಿದ್ದೇವೆ. Liabilities ಭಾಗವನ್ನು ಎರಡನೇ ಹಂತದಲ್ಲಿ ತೆಗೆದುಕೊಳ್ಳುವುದಾಗಿ ತಿಳಿಸಿದ್ದೇವೆ. ಮೊದಲನೇ ಹಂತದ ಬಗ್ಗೆ ನಂತರದಲ್ಲಿ ಪತ್ರ ವ್ಯವಹಾರಗಳಾಗಿಲ್ಲ. ಹೀಗಾಗಿ ಇದು ಯಾವುದೇ ರೀತಿಯಿಂದಲೂ ಮುಂದುವರೆದಿಲ್ಲ; ಅಷ್ಟಕ್ಕೆ ನಿಂತುಕೊಂಡಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು)(ಶ್ರೀ ಗೋವಿಂದ ರಾಜು ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, "As Is Where Is" Basisನಲ್ಲಿಯೇ ಸರ್ಕಾರವು ಪೂರ್ತಿಯಾಗಿ ತೆಗೆದುಕೊಳ್ಳಲಿ; ಏಕೆಂದರೆ ಇದರಲ್ಲಿ ಕಾಲಹರಣ ಮಾಡುವುದು ಬೇಡ, ಈಗಾಗಲೇ ತುಂಬಾ ಸಮಯವು ಕಳೆದಿದೆ.

**ಡಾ॥ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಅಲ್ಲಿ asset ಗಿಂತಲೂ ಹೆಚ್ಚಿನ liability ಇದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಇದನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಕೇರಳ ರಾಜ್ಯದವರೂ ಸಹ ಇದೇ ರೀತಿಯಾಗಿ ತೆಗೆದುಕೊಳ್ಳುತ್ತಿದ್ದಾರೆ. ಕೇರಳ ರಾಜ್ಯದಲ್ಲಿ ಭಾರತ ಸ್ವಾಮ್ಯದ ನಿಗಮವು ಇದೆ. ಕೇರಳ ರಾಜ್ಯ ಸರ್ಕಾರವು "As Is Where Is" Basis ರೀತಿಯಲ್ಲಿಯೇ ತೆಗೆದುಕೊಳ್ಳುತ್ತಿದೆ. ಹೀಗಾಗಿ ನಮ್ಮ ರಾಜ್ಯ ಸರ್ಕಾರವು ಈ ರೀತಿಯಾಗಿ ಏಕೆ ಮಾಡಬಾರದೆಂದು ನಾನು ಪ್ರಶ್ನಿಸಬಯಸುತ್ತೇನೆ.

**ಡಾ॥ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಇದು ಸರಳವಿದ್ದು, ಇದಕ್ಕೆ ಸಮಯ ಬೇಕಾಗುತ್ತದೆ. ಎರಡು ಹಂತಗಳಲ್ಲಿ ಮಾಡೋಣವೆಂದು ನಾವು ಹೇಳಿದ್ದೇವೆ. ಒಂದು ಹಂತದಲ್ಲಿ 3,500 ಎಕರೆ ಜಮೀನನ್ನು ಹಸ್ತಾಂತರ ಮಾಡಿ, ಎರಡನೇ ಹಂತದಲ್ಲಿ ಭೂಮಿ ಬೆಲೆ ಮತ್ತು liability ಎಷ್ಟಾಗುತ್ತದೆ ಮತ್ತು ಅಲ್ಲಿ ಯಂತ್ರೋಪಕರಣಗಳು ಎಷ್ಟಿವೆ ಎನ್ನುವುದನ್ನು ತಿಳಿಯಬೇಕು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಲ್ಲಿನ ಅದಿರನ್ನು ಹರಾಜು ಮಾಡುತ್ತಾರೆ; ಇದರಿಂದ ಸರ್ಕಾರಕ್ಕೆ ಲಾಭವಾಗುವುದಿಲ್ಲ. ಹೀಗಾಗಿ ನಾನು ಹೇಳುತ್ತಿದ್ದೇನೆ. ಅದಿರಿನ ಹರಾಜಿನಲ್ಲಿ ಸರ್ಕಾರಕ್ಕೆ ಏನೂ ಸಿಗುವುದಿಲ್ಲ.

**ಡಾ॥ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಅದಿರನ್ನು ಹರಾಜು ಹಾಕುವುದಕ್ಕೆ ಯಾರೂ ಸಹ ಮುಂದೆ ಬಂದಿರುವುದಿಲ್ಲ. ಅಲ್ಲಿ 32 ಮಿಲಿಯನ್ ಟನ್‌ಗಿಂತಲೂ ಹೆಚ್ಚಿನ dump ಇದೆ. ಈ ಹಿಂದೆ ನಾನು ಗಣಿಗಾರಿಕೆ ಇಲಾಖೆಯ ಮಂತ್ರಿಯಾಗಿ ಕೆಲಸ ನಿರ್ವಹಿಸಿದ್ದಾಗ ...

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವೇ ಮಾಡಬೇಕೆಂದು ಇಲ್ಲ; ಇದನ್ನು ಬೇರೆಯವರೂ ಸಹ ಮಾಡುತ್ತಾರೆ, ಹೀಗಾಗಿ ಸರ್ಕಾರವು ಟೆಂಡರ್‌ನ್ನು ಮಾಡಲಿ. ಟೆಂಡರ್‌ದಾರರು ಬಂದು ಪ್ರೋಸೆಸಿಂಗ್ ಮಾಡಿ ಅದನ್ನು ತೆಗೆದುಕೊಂಡು ಹೋಗುತ್ತಾರೆ.

**ಡಾ||ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ಚಿನ್ನದ ಗಣಿಯನ್ನು ಹರಾಜು ಮಾಡುತ್ತಿಲ್ಲ; ಅಲ್ಲಿನ dump ಅನ್ನು ಹರಾಜು ಮಾಡಬೇಕಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಲ್ಲಿನ dump ಇದೆಯಲ್ಲಾ, ಅದು ಪ್ರೋಸೆಸ್ ಮಾಡಿರುವ ore ಆಗಿದೆ.

**ಡಾ||ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಸ್ವಲ್ಪ ಪ್ರಮಾಣವನ್ನು ಮರಳಿ, ಆ ಹಳ್ಳಿಯಲ್ಲಿ ರಾಶಿ ಮಾಡುವಾಗ ಮೊದಲ ಹಾಗೂ ಎರಡನೇ ಬಾರಿಗೆ ಮಾಡುತ್ತೇವೆ. ಈ ರೀತಿಯಾಗಿ ನಾವು ಇದನ್ನು ಎರಡನೇ ಬಾರಿಗೆ reprocess ಮಾಡಿ, ಪ್ರತಿ ಟನ್‌ಗೆ ಎಷ್ಟು ಗ್ರಾಂಗಳಷ್ಟು ಚಿನ್ನ ದೊರೆಯುತ್ತದೆ ಎನ್ನುವುದನ್ನು ನೋಡಲು ನಾವು ಪ್ರಯತ್ನಿಸಿದ್ದೇವೆ. ಆದರೆ, ಈ ಪ್ರಕ್ರಿಯೆಯು ಮುಂದಕ್ಕೆ ಹೋಗಲಿಲ್ಲ. ಹೀಗಾಗಿ ಇದು ನಮಗೆ ಕಾರ್ಯಸಾಧ್ಯವಾಗುವುದಾದರೆ, ಅದನ್ನು ನಾವೇ ಮಾಡಬಹುದಾಗಿದೆ. ಏಕೆಂದರೆ, ಈ ಸಂಬಂಧಿತ ಎಲ್ಲಾ ಉಪಕರಣಗಳು ನಮ್ಮಲ್ಲಿವೆ. ಇದನ್ನು ಮತ್ತೊಬ್ಬರು ಹರಾಜು ಹಾಕುವ ಅವಶ್ಯಕತೆಯೂ ಸಹ ನಮಗಿಲ್ಲ. ಆದರೆ, ಪ್ರಕ್ರಿಯೆಯಿಂದ ಉಂಟಾದ dump ಅನ್ನು ಎಲ್ಲಿ ಹಾಕಬೇಕು ಎನ್ನುವುದೇ ಸಮಸ್ಯೆಯಾಗಿದೆ ಅಷ್ಟೇ. ಏಕೆಂದರೆ, ಬಹಳಷ್ಟು ಪ್ರದೇಶಗಳನ್ನು ಇಲ್ಲಿ ಕವರ್ ಮಾಡಲಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಸಂಬಂಧದ ಪ್ರಸ್ತಾವನೆಯನ್ನು ಸರ್ಕಾರವು ಮುಂದುವರೆಸಿ, ಆದಷ್ಟು ಬೇಗನೇ ಕೇಂದ್ರ ಸರ್ಕಾರದಿಂದ ಆದೇಶವನ್ನು ಪಡೆದುಕೊಳ್ಳಲಿ. ಬಿ.ಜಿ.ಎಂ.ಎಲ್., ಭೂಮಿಗೆ ಸಂಬಂಧಪಟ್ಟಂತೆ, ಸದರಿ ಪ್ರಸ್ತಾವನೆಯು ಭಾರತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಆದರೆ, Mega

Integrated Industrial Townships ಮಾಡೋಣ ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವುದಾಗಿ ಅಲ್ಲಿನ ಉಪ ಆಯುಕ್ತರು ತಿಳಿಸುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಕೋಲಾರ ಜಿಲ್ಲೆ, ಕೆ.ಜಿ.ಎಫ್., ಮತ್ತು ನರಸಾಪುರ ಪ್ರದೇಶಗಳು ಬೆಂಗಳೂರು ನಗರಕ್ಕೆ ಹತ್ತಿರವಾಗಿವೆ ಎನ್ನುವುದು ತಮಗೆ ತಿಳಿದಿದೆ. ಈ ಕಾರಣಕ್ಕಾಗಿ ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಪ್ರಶಸ್ತವಾಗಿದೆ. ಈ ಬಗ್ಗೆ ದಿನಾಂಕ 01/12/2022 ರಂದು ಸರ್ಕಾರಿ ಆದೇಶವಾಗಿದೆ, ಈ ಬಗ್ಗೆ ಸಚಿವರಿಗೆ ಮಾಹಿತಿ ಇದೆಯೋ ಅಥವಾ ಇಲ್ಲವೋ ಎನ್ನುವುದು ತಿಳಿದಿಲ್ಲ. ಅದೇನೆಂದರೆ, ಕೋಲಾರ ಜಿಲ್ಲೆಯ ಕೆ.ಜಿ.ಎಫ್., ತಾಲ್ಲೂಕಿನ ರಾಬರ್ಟ್‌ಸನ್ ಹೋಬಳಿಯ ಕೆ.ಜಿ.ಎಫ್., ಪ್ರದೇಶದಲ್ಲಿರುವ ಬಿ.ಜಿ.ಎಂ.ಎಲ್. ಕಾರ್ಖಾನೆಯು ಉಪಯೋಗಿಸದೇ ಇರುವ ಬಾಂದರದ ಗಡಿ ಗ್ರಾಮದ ಸರ್ವೇ ನಂ. 100 ರಲ್ಲಿ 294 ಎಕರೆ ಮತ್ತು ಮತ್ತೊಂದು ಸರ್ವೆ ನಂಬರಿನಲ್ಲಿ 673 ಎಕರೆ ಜಮೀನು ಒಟ್ಟಾರೆಯಾಗಿ 967 ಎಕರೆ ಜಮೀನನ್ನು ಕರ್ನಾಟಕ ಸಾರ್ವಜನಿಕ ನಿಗಮ ನಿಯಮಿತಕ್ಕೆ ಹಸ್ತಾಂತರ ...

**ಸಭಾಪತಿಯವರು:-** ಈ ಬಗ್ಗೆ ಏನಾಗಬೇಕೆಂಬುದನ್ನು ಹೇಳಿ. ಅದನ್ನು ಬಿಟ್ಟು ತಿಳುವಳಿಕೆ ಇರುವವರು ನೀವು ಹೀಗೆ ಓದುತ್ತಿದ್ದರೆ ಹೇಗೆ?

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಿಗಮದ ಉದ್ದೇಶವೇನು? ಅವರು ಮಾರಾಟ ಮಾಡುತ್ತಾರೆ. ಕೈಗಾರಿಕೆ ಸ್ಥಾಪಿಸಬೇಕೆಂದು ಸರ್ಕಾರವು ಹೇಳುತ್ತದೆ. ರಾಜ್ಯ ಸರ್ಕಾರವು ಹೇಳಿದ ಸಂಸ್ಥೆಗಳಿಗೆ ಸೇರಿದ ಜಮೀನುಗಳನ್ನು ಮಾರಾಟ ಮಾಡುವುದು ಮತ್ತು ಬೆಲೆಬಾಳುವ ಜಮೀನನ್ನು ಮಾರಾಟ ಮಾಡುವುದು, ಗುತ್ತಿಗೆ ನೀಡುವುದು, ಖರೀದಿ ಮಾಡುವುದು ಇತ್ಯಾದಿಗಳಲ್ಲಿ ಮಧ್ಯಸ್ಥಿಕೆಯ ಪಾತ್ರವನ್ನು ವಹಿಸತಕ್ಕದ್ದು. ಇದರಿಂದ ಸರ್ಕಾರದ ಪ್ರಸ್ತಾವನೆಗೆ ಒಳ್ಳೆಯದಾಗುವುದಿಲ್ಲ.

**ಸಭಾಪತಿಯವರು:-** ಮಂತ್ರಿಗಳೇ ಈ ಬಗ್ಗೆ ನೇರವಾಗಿ ಉತ್ತರ ಹೇಳಿ.

**ಡಾ||ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಇದೇ ವಿಷಯವಾಗಿ ಹಿಂದಿನ ಅಧಿವೇಶನದಲ್ಲಿ ಸದನದಲ್ಲಿ ಉತ್ತರಿಸುವ ಪ್ರಶ್ನೆಯಾಗಿದ್ದು, ಈ ಬಗ್ಗೆ ಉತ್ತರಿಸಿದ್ದೇವೆ. ಈ ವಿಚಾರವಾಗಿ ಈಗಾಗಲೇ ಪತ್ರ ವ್ಯವಹಾರವಾಗಿದೆ. ಇಡೀ ದೇಶದಲ್ಲಿರುವ ಸರ್ಕಾರಿ ಸ್ವಾಮ್ಯದಲ್ಲಿರುವ ಕಾರ್ಖಾನೆಗಳಿಗೆ ಹೆಚ್ಚುವರಿ ಭೂಮಿಯನ್ನು ಆಯಾ ರಾಜ್ಯದ ಕಂದಾಯ ಇಲಾಖೆಗೆ ಬಿಟ್ಟುಕೊಟ್ಟು ಅಲ್ಲಿಂದಲೇ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲ ಮಾಡಿಕೊಡಬೇಕು ಎನ್ನುವ ಸುತ್ತೋಲೆಯನ್ನು ದೇಶದ ಎಲ್ಲಾ ರಾಜ್ಯಗಳಿಗೆ ಕಳುಹಿಸಿದ್ದಾರೆ. ಅದರಂತೆ ಬಿ.ಇ.ಎಂ.ಎಲ್., ಸಂಸ್ಥೆಯು ಒಂದಾಗಿದೆ. ಬಿ.ಇ.ಎಂ.ಎಲ್., ಬಳಿ 960 ಎಕರೆಯಷ್ಟು ಭೂಮಿಯು ಹೆಚ್ಚುವರಿಯಾಗಿ ಇರುವುದು ಕಂದಾಯ ಇಲಾಖೆಯಲ್ಲಿದೆ. ಇವತ್ತಿನವರೆಗೂ ಸಹ ಅದು idle ಆಗಿದೆ. ಈ ವಿಚಾರವಾಗಿ ನಮ್ಮ ಇಲಾಖೆಯಿಂದ ಕಂದಾಯ ಇಲಾಖೆಗೆ ಸಾಕಷ್ಟು ಬಾರಿ ಪತ್ರ ಬರೆಯಲಾಗಿದೆ. ಆದರೆ ಈ ಬಗ್ಗೆ ಅವರಿಂದ ಉತ್ತರ ಬರುತ್ತಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಕೆ.ಐ.ಎ.ಡಿ.ಬಿ., ಮತ್ತು ಕೆ.ಎಸ್.ಎಸ್.ಐ.ಡಿ.ಸಿ., ಸಂಸ್ಥೆಗಳಿಗೆ ಬರಬೇಕು.

**ಡಾ||ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಅದು ಎಲ್ಲಿಯಾದರೂ ಬರಲಿ. ನಿಮ್ಮ ಉದ್ದೇಶವೇ ನಮ್ಮದಾಗಿದೆ. ಆದರೆ ಸದರಿ ಭೂಮಿಯು idle ಆಗಿರಬಾರದು. ಇದು ನೂರು ಕಿಲೋಮೀಟರ್‌ಗಳಿಗಿಂತಲೂ ದೂರ ಇರುವುದರಿಂದ, ಇದನ್ನು ನೇರವಾಗಿ ನಮಗೆ ಹಸ್ತಾಂತರಿಸಿದರೆ, ಅದನ್ನು ಜವಳಿ ಅಥವಾ ಸಣ್ಣ ಕೈಗಾರಿಕೆ ಯಾವುದಕ್ಕಾದರೂ ನೀಡಲಿ. ಸದರಿ ಜಮೀನನ್ನು ನಮಗೆ ಹಸ್ತಾಂತರಿಸಿದರೆ, ನಾವು ತಕ್ಷಣವೇ ಅದನ್ನು ಅಭಿವೃದ್ಧಿಪಡಿಸುತ್ತೇವೆ. ಏಕೆಂದರೆ, ಅಲ್ಲಿ ಬೇಡಿಕೆ ಇದೆ. ಹೀಗಾಗಿ ನಾವು ಅದನ್ನು ಬೇಗನೇ ನೀಡುವುದಕ್ಕೆ ಸಾಧ್ಯವಿದೆ. ಇತ್ತೀಚಿನ ಅಧಿವೇಶನದ ಸಂದರ್ಭದಲ್ಲಿ, ಮುಖ್ಯಮಂತ್ರಿಗಳೇ ಈ ಬಗ್ಗೆ ಶೀಘ್ರದಲ್ಲಿ ತೀರ್ಮಾನ ತೆಗೆದುಕೊಂಡು ಜಮೀನನ್ನು ಹಸ್ತಾಂತರಿಸುವ ಬಗ್ಗೆ ಉತ್ತರಿಸಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಸದರಿ ಜಮೀನು ಕಂದಾಯ ಇಲಾಖೆಯಿಂದ ನಮ್ಮ ಇಲಾಖೆಗೆ ಬಂದಿರುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಸಚಿವರು ಈ ವಿಷಯವನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡು ಹೋಗಬೇಕು; ಈ ಬಗ್ಗೆ ಭರವಸೆಯನ್ನು ನೀಡಬೇಕು.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಸಿ.ಎನ್.ಮಂಜೇಗೌಡರವರದ್ದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಬಹಳ ಪ್ರಮುಖವಾದ ಅಂಶಗಳಿವೆ. ದಯಮಾಡಿ ಅವಕಾಶ ಮಾಡಿಕೊಡಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ....

**ಸಭಾಪತಿಯವರು:–** ಯಾರಿಗೂ ಅವಕಾಶವನ್ನು ನೀಡುವುದಿಲ್ಲ. ಶ್ರೀ ಮಂಜೇಗೌಡರೇ, ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ನಾನು ಅದೇ ಭಾಗದಿಂದ ಬಂದಿರುವವನಾದ್ದರಿಂದ ನನಗೆ ಒಂದು ನಿಮಿಷಗಳ ಅವಕಾಶ ನೀಡಿ.

**ಸಭಾಪತಿಯವರು:–** ನಿಮಗೆ ಅವಕಾಶವನ್ನು ನೀಡುವುದಕ್ಕಾಗುವುದಿಲ್ಲ. ಎಲ್ಲರೂ ಅವಕಾಶವನ್ನು ಕೇಳುತ್ತಿದ್ದರೆ ಹೇಗೆ? ಇದೇ ವಿಚಾರವಾಗಿ ಸದಸ್ಯರು ಬಹಳ ವಿಸ್ತೃತವಾಗಿ ಮಾತನಾಡಿದ್ದಾರೆ.

**ಡಾ॥ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಒಂದು ಪ್ರಮುಖವಾದ ಅಂಶವೇನೆಂದರೆ, .....

**ಸಭಾಪತಿಯವರು:–** ಸಚಿವರೇ ನೀವು ಬಹಳ ಸ್ಪಷ್ಟವಾಗಿ ಹೇಳಿ.

**ಡಾ||ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಸದರಿ ೨೬೦ ಎಕರೆ ಪ್ರದೇಶಗಳಷ್ಟು ಭೂಮಿಯು ನಿಷ್ಫಲವಾಗಿ ಕಂದಾಯ ಇಲಾಖೆಯಲ್ಲಿ ಕಳೆದ ಒಂದೂವರೆ ವರ್ಷದಿಂದ ಇದೆ. ಇದನ್ನು ಅವರು ಜವಳಿ, ಸಣ್ಣ ಕೈಗಾರಿಕೆ ಅಥವಾ ಯಾರಿಗಾದರೂ ಸರಿ ಹಸ್ತಾಂತರಿಸಲಿ.

**ಸಭಾಪತಿಯವರು:–** ಇದನ್ನು ಮಾಡುವವರು ಯಾರು?

**ಡಾ||ಮುರುಗೇಶ್ ಆರ್.ನಿರಾಣಿ:–** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯವರು ಇದನ್ನು ಮಾಡಬೇಕು.

**ಸಭಾಪತಿಯವರು:–** ಇದು ನಿಮ್ಮದೇ ಸರ್ಕಾರ ಆಗಿರುವುದರಿಂದ ನೀವು ಮಾಡಿಸಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ.

**ಸಭಾಪತಿಯವರು:–** ಕೇಳಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯು ನಿಮ್ಮ ಸರ್ಕಾರದಡಿ ಬರುತ್ತದೆ. ಇದು ಕಳೆದ ಒಂದೂವರೆ ವರ್ಷಗಳಿಂದ ನಡೆಯುತ್ತಿದೆ. ಗಣಿ ಇಲಾಖೆಯೂ ಸಹ ನಿಮ್ಮ ಸರ್ಕಾರದಡಿ ಬರುತ್ತದೆ. ನೀವು ಇದನ್ನು 'ಡಬಲ್ ಇಂಜಿನ್' ಸರ್ಕಾರ ಎಂಬುದಾಗಿ ಹೇಳುತ್ತೀರಿ. ಕೇಂದ್ರದ ಗಣಿ ಇಲಾಖೆಯ ಮಂತ್ರಿಗಳು ಇದೇ ವಿಚಾರವಾಗಿ 2–3 ಬಾರಿ ಹೇಳಿಕೆಗಳನ್ನು ನೀಡಿದ್ದಾರೆ. ಇದನ್ನು ನಾವು ಹಸ್ತಾಂತರ ಮಾಡುತ್ತೇವೆ, ಇದರಿಂದ ಉಪಯೋಗವಾಗಲು ಯಾವುದಾದರೂ ಕಾರ್ಖಾನೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಾಗಿ ಅವರು ತಿಳಿಸಿದ್ದಾರೆ. ಆದರೂ ಸಹ ಇದರಲ್ಲಿ ಏಕೆ ವಿಳಂಬವಾಗುತ್ತಿದೆ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಿಮಗೆ ಸಮಯವಿಲ್ಲವೇ? ಕಂದಾಯ ಮತ್ತು ಗಣಿ ಇಲಾಖೆಯವರನ್ನು ಹಾಗೂ ಬಿ.ಜಿ.ಎಂ.ಎಲ್. ಸಂಸ್ಥೆಯವರನ್ನು ಸಭೆಗೆ ಕರೆಸಿ ಮಾತನಾಡಿ, ಒಂದು ನಿರ್ಣಯ ತೆಗೆದುಕೊಳ್ಳಬಹುದಲ್ಲವೇ? You are a Cabinet Minister. You have every authority. ತಕ್ಷಣವೇ ಈ ಬಗ್ಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಿ. ದಯಮಾಡಿ ಈ ವಿಚಾರದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕು.

**ಡಾ||ಮುರುಗೇಶ್ ಆರ್.ನಿರಾಣಿ:-** ಮಾನ್ಯ ಸಭಾಪತಿಯವರೇ, ಸದರಿ ಜಮೀನನ್ನು ಕೂಡಲೇ ಹಸ್ತಾಂತರ ಮಾಡಿಸುವ ಬಗ್ಗೆ ಮುಖ್ಯಮಂತ್ರಿಗಳು ಉತ್ತರಿಸಿದ್ದಾರೆ.

**ಸಭಾಪತಿಯವರು:-** ಸದಸ್ಯರು ಹೇಳುವುದು ಸರಿ ಇದೆ. ನಿಮ್ಮದೇ ಸರ್ಕಾರ ಇರುವುದರಿಂದ ಈ ಬಗ್ಗೆ ನೀವು ಅಗತ್ಯ ಕ್ರಮ ತೆಗೆದುಕೊಳ್ಳಿ. ಅಲ್ಲಿ ವೃಥಾ ವ್ಯರ್ಥ ಮಾಡುವುದು ಬೇಡ. ಸದಸ್ಯರು ಹೇಳಿದಾಗ ತಾವು ತಿಳಿದುಕೊಳ್ಳಬೇಕು.

**ಪ್ರಶ್ನೆ ಸಂಖ್ಯೆ: 954**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರವು ಉತ್ತರಿಸಿದೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಆರೋಗ್ಯ ಮತ್ತು ಶಿಕ್ಷಣ ಬಹಳ ಪ್ರಮುಖವಾದವು. ಆದರೆ, ಸಹಕಾರ ಸಚಿವರು ನೀಡಿರುವ ಉತ್ತರದಲ್ಲಿ ದಿನಾಂಕ 01/11/2022 ರಿಂದ ಪ್ರಾರಂಭಿಸಿ ದಿನಾಂಕ 31/12/2022 ಕ್ಕೆ ಇದನ್ನು ಕೊನೆ ಮಾಡುವ ಗಡುವನ್ನು ನೀಡಿದ್ದಾರೆ. ಇದರಲ್ಲಿ, ಯಾವುದಾದರೂ ಸಹಕಾರ ಸಂಘಗಳಲ್ಲಿ, ಹಾಲಿನ ಡೈರಿಗಳಲ್ಲಿ ಸದಸ್ಯರಾಗಿರಬೇಕು ಎಂಬುದಾಗಿ ತಿಳಿಸಿದ್ದಾರೆ. ನೊಂದಾಯಿಸಲು ಸದಸ್ಯರಾಗಿ ಮೂರು ತಿಂಗಳೊಳಗಾಗಿರಬೇಕು; ಇತ್ತೀಚಿನ ಖಾಸಗಿ ಕಾರ್ಖಾನೆ ಕಂಪೆನಿಗಳಲ್ಲಿ ಕೆಲಸ ಮಾಡುವ ನೌಕರರ ಸಂಬಳ 30 ಸಾವಿರ ಇರುವವರು ನೋಂದಣಿ ಮಾಡಬಹುದೆಂದು ಸರ್ಕಾರವು ತಿಳಿಸಿದೆ. ಎಷ್ಟೋ ರೈತರು ಸಹಕಾರ ಸಂಘಗಳಲ್ಲಾಗಲೀ ಅಥವಾ ಸೊಸೈಟಿಗಳಲ್ಲಾಗಲೀ ಸದಸ್ಯರಾಗಿರುವುದಿಲ್ಲ. ಹೀಗಾಗಿ ಇವರುಗಳೇನು ಮಾಡಬೇಕು ಎನ್ನುವುದರ ಬಗ್ಗೆ ನಾನು ಪ್ರಶ್ನಿಸಬಯಸುತ್ತೇನೆ. ಖಾಸಗಿ ಕಾರ್ಖಾನೆ, ಆಸ್ಪತ್ರೆ, ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರು ಯಾವುದೇ ಸೊಸೈಟಿಯಲ್ಲಾಗಲೀ ಅಥವಾ ಹಾಲಿನ ಡೈರಿಯಲ್ಲಾಗಲೀ ಸದಸ್ಯರಾಗಿರುವುದಿಲ್ಲ. ಹೀಗಾಗಿ ಇವರುಗಳೇನು ಮಾಡಬೇಕೆಂದು ನಾನು ಪ್ರಶ್ನಿಸಬಯಸುತ್ತೇನೆ.

(ಮುಂದು)

1192/27-12-2022/11-30/bkp-gr ಸಭಾಪತಿಯವರು ಪೀಠದಲ್ಲಿದ್ದರು

**ಶ್ರೀ.ಸಿ.ಎನ್.ಮಂಜೇಗೌಡ(ಮುಂದು..)**

ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಯಾವುದೇ ಜಮೀನು ಇಲ್ಲದೇ, ಕೂಲಿ ಮಾಡಿಕೊಂಡು ಜೀವನ ಮಾಡುವವರು ಹೇಗೆ ನೋಂದಾಯಿಸಬೇಕು, ಇನ್ನು ಒಂದು ವರ್ಷದವರೆಗೆ ಈ ಒಂದು ಅವಧಿಯನ್ನು ವಿಸ್ತರಿಸಬೇಕೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್( ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೆ, ಈ ಯಶಸ್ವಿನಿ ಯೋಜನೆಯನ್ನು ತಂದಂತಹ ಉದ್ದೇಶವೇ ಸಹಕಾರಿಗಳಿಗೆ. ಸಹಕಾರಿಗಳು ಒಂದಲ್ಲ, ಒಂದು ಯಾವುದಾದರೂಂದು ಸಂಘ-ಸಂಸ್ಥೆಯಲ್ಲಿ ಯಾವುದಾದರೊಂದು ರೂಪದಲ್ಲಿ ಸದಸ್ಯತ್ವ ನೋಂದಾವಣಿ ಪಡೆದಿರುತ್ತಾರೆ. ಈಗ ಇದು ಕಾರ್ಪೋರೇಷನ್ ಮಟ್ಟದಲ್ಲಿ ಇರಲಿಲ್ಲ. ಮತ್ತೆ, ಸಿಟಿ ಲಿಮಿಟ್‌ನಲ್ಲಿ ಇರಲಿಲ್ಲ. ಸಿಟಿ ಲಿಮಿಟ್‌ನಲ್ಲೂ ಕೂಡ ಅದನ್ನು ಇಂಟ್ರಡ್ಯೂಸ್ ಮಾಡಿರುತ್ತೇವೆ ಒಂದಲ್ಲ ಒಂದು ಸಹಕಾರ ಸಂಸ್ಥೆಗಳಲ್ಲಿ ಯಾವುದಾದರೊಂದು ರೂಪದಲ್ಲಿ ಅವರು ನೋಂದಾವಣಿ ಆಗಿರುತ್ತಾರೆ. ಅದಕ್ಕೋಸ್ಕರವೇ ಈ ಯಶಸ್ವಿನಿ ಯೋಜನೆಯನ್ನು ತಂದಿರುವುದಾಗಿದೆ ಹಿಂದೆ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಇದನ್ನು ತಂದಿದ್ದರು. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಆರೋಗ್ಯ ಮಂತ್ರಿಗಳು ಇದನ್ನು ಆಯುಷ್ಮಾನ್‌ಗೆ ಮರ್ಜ್ ಮಾಡಿದರು. ಕರ್ನಾಟಕ ರಾಜ್ಯದಾದ್ಯಂತಹ ಎಲ್ಲರ ಒತ್ತಾಯದ ಮೇರೆಗೆ ಇದನ್ನು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಘೋಷಣೆ ಮಾಡುವ ಮೂಲಕ ಇಂಟ್ರಡ್ಯೂಸ್ ಮಾಡಿದ್ದಾರೆ. 300 ಕೋಟಿ ರೂಪಾಯಿಗಳ ಅನುದಾನವನ್ನು ಸಹ ಒದಗಿಸಿದ್ದಾರೆ. ಇದನ್ನು ಮಾಡಿದ ಮೇಲೆ ಇದು ನೌಕರರಿಗೆ ಇರಲಿಲ್ಲ. 30,000/-ರೂ.ಗಳನ್ನು ತರತಕ್ಕಂತಹವರಿಗೆ ಅದು ಗಾರ್ಮೆಂಟ್ಸ್ ಇರಬಹುದು, ಬೇರೆ ಬೇರೆ ಇರಬಹುದು. ಅವರೆಲ್ಲರಿಗೂ ಕೂಡ ಇಂಟ್ರಡ್ಯೂಸ್ ಮಾಡಿ ಎನ್ನತಕ್ಕಂತಹ ಒತ್ತಡ ಬಂದ ಮೇಲೆ ಅವರಿಗೂ ಕೂಡ ಅದನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಮತ್ತೆ ತಿದ್ದುಪಡಿಯನ್ನು ನಾವು ಕೂಡ ಮಾಡಿದ್ದೇವೆ. ಡಿಸೆಂಬರ್ 31ಕ್ಕೆ 30 ಲಕ್ಷ ಸದಸ್ಯತ್ವವನ್ನು ಟಾರ್ಗೆಟ್ ಮಾಡಬೇಕೆನ್ನುವುದನ್ನು ಮಾಡಿದ್ದೇವೆ. ನಿನ್ನೆಯವರೆಗೆ 19,67,287 ಜನ ಸದಸ್ಯರಾಗಿದ್ದಾರೆ. ಇನ್ನು ಸಹ ಸಮಯ ಇದೆ. ಇದಕ್ಕೆ ಡಿಸೆಂಬರ್ 31ರವರೆಗೆ ಸಮಯ ಇದೆ. ಸದಸ್ಯತ್ವ ಪಡಯಲಿಕ್ಕೆ ಇನ್ನು ಸಹ ಸಮಯ ಇದೆ. ನಮ್ಮ ಟಾರ್ಗೆಟ್ 30 ಲಕ್ಷ ಆಗಿರುತ್ತದೆ. 30 ಲಕ್ಷ ರೀಚ್ ಆಗುತ್ತಾರೆನ್ನುವ ವಿಶ್ವಾಸ ಇದೆ. ಆದ್ದರಿಂದ ಇದರ ಅವಧಿಯನ್ನು ಮುಂದುವರಿಸ ಲಿಕ್ಕೆ ಇನ್ನು ಸಮಯ ಇರುವುದರಿಂದ ಅದರ ಬಗ್ಗೆ ಇನ್ನು ಯೋಚನೆ ಮಾಡಿಲ್ಲ. ನಮ್ಮ ಟಾರ್ಗೆಟ್ ಏನಿದೆ, ಅದನ್ನು ನಾವು ಕಂಪ್ಲೀಟ್ ಮಾಡುತ್ತೇವೆ. ಆದರೆ, ಎಲ್ಲರನ್ನೂ ಈ ಒಂದು ಸ್ಕೀಂನಲ್ಲಿ ತರಲಿಕ್ಕೆ ಆಗುವುದಿಲ್ಲ. ಒಂದಲ್ಲ

ಒಂದು ಯಾವುದಾದರೊಂದು ಸಂಸ್ಥೆಯಲ್ಲಿ ನೋಂದಾವಣಿಯಾಗುವುದಕ್ಕೆ ಮಾಡುತ್ತಿದ್ದೇವೆ. ಅಸ್ಪತ್ರೆಗಳ ವಿಚಾರದಲ್ಲೂ ಅಷ್ಟೆ. ಆಯುಸ್ಮಾನ್‌ರಲ್ಲಿ ಎಷ್ಟು ರೋಗಗಳು ಇವೆ, ಅದೆಲ್ಲವನ್ನೂ ಸಹ ಇದರಲ್ಲಿಯೂ ಸಹ ಇಂಟ್ರಡ್ಯೂಸ್ ಮಾಡಿದ್ದೇವೆ. ಆಸ್ಪತ್ರೆಗಳು ಕೂಡ ಬೇಕಾದಷ್ಟು ನೋಂದಾವಣಿಗೂ ಕೂಡ ಬರುತ್ತಿದ್ದಾರೆ. 469 ಆಸ್ಪತ್ರೆಗಳು ಈಗಾಗಲೇ ಈ ವಿಚಾರದಲ್ಲಿ ಕನ್ಸ್‌ಲ್ಟ್ ಮಾಡಿದ್ದಾರೆ. ಅದರಲ್ಲಿ 334 ಆಸ್ಪತ್ರೆಗಳು ಕೂಡ ಕರಾರು ಮಾಡಿಕೊಂಡಿದ್ದಾರೆ. ಕೆಲವು ಆಸ್ಪತ್ರೆಗಳು . ...

(ಗೊಂದಲ)

**ಶ್ರೀ.ಸಿ.ಎನ್.ಮಂಜೇಗೌಡ:-** ನಾನು ಕೇಳುತ್ತಿರುವಂತಹದ್ದು.

**ಸಭಾಪತಿಯವರು:-** ಸಚಿವರು ಮೊದಲು ಉತ್ತರ ಹೇಳಲಿ, ನಂತರ ನೀವು ಮಾತನಾಡಿ.

**ಶ್ರೀ.ಸಿ.ಎನ್.ಮಂಜೇಗೌಡ:-** ನನಗೆ ಇದು ಬೇಕಾಗಿಲ್ಲ. ಈ ಅವಧಿಯನ್ನು ವಿಸ್ತರಣೆ ಮಾಡಬೇಕಷ್ಟೆ.

**ಸಭಾಪತಿಯವರು:-** ಶ್ರೀಯುತ ಮಂಜೇಗೌಡ ರವರೆ, ಅವರು ಉತ್ತರವನ್ನು ಹೇಳುತ್ತಾರೆ, ಅದು ಸರಿಯಿಲ್ಲವೆಂದರೆ ಎದ್ದು ನೀವು ಕೇಳಿ.

**ಶ್ರೀ.ಸಿ.ಎನ್.ಮಂಜೇಗೌಡ:-** ಈ ಅವಧಿಯನ್ನು ವಿಸ್ತರಣೆ ಮಾಡಬೇಕಷ್ಟೆ. ಈಗ ನೀವು 30 ಲಕ್ಷ ಟಾರ್ಗೆಟ್ ಕೊಟ್ಟಿದ್ದೀರಿ. ಅದರಲ್ಲಿ 19 ಲಕ್ಷ ಜನರು ಸದಸ್ಯತ್ವ ಪಡೆದಿದ್ದಾರೆ ಅಷ್ಟೆ. ಉಳಿದ ಅವಧಿಯಲ್ಲಿ 11 ಲಕ್ಷ ಜನರು ಸದಸ್ಯತ್ವವನ್ನು ಪಡೆಯುತ್ತಾರೆಯೇ? ನೀವು ಟಾರ್ಗೆಟ್ ಕೊಟ್ಟಿದ್ದೀರಿ. ಇನ್ನು ಎಷ್ಟು ದಿನ ಬಾಕಿ ಇದೆ ಎಂದು ಸಚಿವರು ಹೇಳಬೇಕು. ನೀವು ಯಾವಾಗಿನಿಂದ ಜಾರಿ ಕೊಟ್ಟಿರುವುದು. ಅದನ್ನು ನವೆಂಬರ್ 1 ರಿಂದ ಜಾರಿ ಕೊಟ್ಟಿದ್ದೀರಿ.

**ಶ್ರೀ ಎಸ್.ಟಿ.ಸೋಮಶೇಖರ್:-** ರಾಜ್ಯದ ಈ ಇಲಾಖೆಯ ಎಲ್ಲಾ ಅಧಿಕಾರಿಗಳು ಇದೇ ವಿಚಾರದಲ್ಲಿ ಮಗ್ನರಾಗಿದ್ದಾರೆ. ಈ ಕೆಲಸವನ್ನು ಮಾಡಬೇಕೆಂದು ತೀರ್ಮಾನ

ಮಾಡಿದ್ದೇವೆ. 19,67,287 ನಿನ್ನೆಯವರೆಗೆ ಆಗಿದೆ. ಇನ್ನು 31ನೇ ತಾರೀಖಿನವರೆಗೆ ಸಮಯ ಇದೆ. 30 ಲಕ್ಷ ಟಾರ್ಗೆಟ್ ಅನ್ನು ಮಾಡುವಂತಹದ್ದಕ್ಕೆ ಕೆಲಸ ಮಾಡುತ್ತೇವೆ.

**ಶ್ರೀ.ಸಿ.ಎನ್.ಮಂಜೇಗೌಡ:-**ಮಾನ್ಯ ಸಭಾಪತಿಯವರೆ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗೆ 5 ಲಕ್ಷ ಸದಸ್ಯತ್ವವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:-** ಶ್ರೀಯುತ ಮಂಜೇಗೌಡ ರವರೆ, ಕುಳಿತುಕೊಳ್ಳಿ. ಸಚಿವರು ಮಾತನಾಡುತ್ತಾರೆ, ನಂತರ ನಿಮಗೆ ಅವಕಾಶ ಕೊಡುತ್ತೇನೆ, ಕೇಳಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೆ, 31ನೇ ತಾರೀಖಿನೊಳಗೆ 30 ಲಕ್ಷ ಸದಸ್ಯತ್ವ ಆಗಲಿಲ್ಲವೆಂದ ಮೇಲೆ ಇದಕ್ಕೆ ಪ್ರತ್ಯೇಕ ಒಂದು ಕಮಿಟಿ ಇರುತ್ತದೆ. ಆ ಕಮಿಟಿಯವರು ತೀರ್ಮಾನವನ್ನು ಮಾಡುತ್ತಾರೆ. 31ನೇ ತಾರೀಖಿನೊಳಗೆ ನಾವು 30 ಲಕ್ಷ ಟಾರ್ಗೆಟ್ ಏನು ಕೊಟ್ಟಿದ್ದೇವೆ, ಆ ಒಂದು ಟಾರ್ಗೆಟ್ ಆಗಲಿಲ್ಲವೆಂದರೆ ಆ ಕಮಿಟಿಯವರು ಸಮಯವನ್ನು ವಿಸ್ತರಣೆ ಮಾಡುವಂತಹ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಆದರೆ, ಅಷ್ಟರೊಳಗೆ 30 ಲಕ್ಷ ಟಾರ್ಗೆಟ್ ಆಗುತ್ತದೆ ಎನ್ನುವ ನಂಬಿಕೆ ನನಗೆ ವಿಶ್ವಾಸ ಇದೆ. ಆಗಲಿಲ್ಲವೆಂದರೆ ಸಮಯವನ್ನು ವಿಸ್ತರಣೆ ಮಾಡುವುದಕ್ಕೆ ನಾವು ಅವರಿಗೆ ನಿರ್ದೇಶನ ಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ.ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೆ, ಇವರ ಒಂದು ನಿಯಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂದು ಹೇಳಿ, ಅವರಿಗೆ ಜಾತಿ ಪ್ರಮಾಣ ಪತ್ರ ಕೊಡಬೇಕೆಂದು ಸಹ ಹೇಳಿದ್ದೀರಿ. ಇದರಲ್ಲಿ ಮಾಜಿ ಸೈನಿಕರನ್ನು ಸೇರಿಸಿ. ಬಿಜೆಪಿ ಸರ್ಕಾರ ರೂಲಿಂಗ್ ಬರಬೇಕಾದರೆ ಮಾಜಿ ಸೈನಿಕರು ಮತ್ತು ಸೈನಿಕರು ಕಾರಣರು ಅಲ್ಲವೇ? ಆದರೆ ನೀವು ಅವರಿಗೆ ಏನು ಬೆನಿಫಿಟ್ ಕೊಡುತ್ತಿದ್ದೀರಿ? ಒಂದು ಕಾಲಂನಲ್ಲಿ ಮಾಜಿ ಸೈನಿಕರಿಗೆಂದು ನಿಗದಿಪಡಿಸಿ. ಆದಾದ ಮೇಲೆ ನೀವು ಏನು ಸದಸ್ಯತ್ವವನ್ನು ಕೊಡುವಂತಹ ಸಮಯದಲ್ಲಿ ಏನು ಅಪರೇಷನ್ ಆಗಬೇಕೆಂದರೆ ಯಾವ ಒಂದು ರೋಗಿ ಆಸ್ಪತ್ರೆಗೆ ದಾಖಲಾಗುತ್ತಾನೆ, ಅವನು ದಾಖಲಾದ ಮೇಲೆ ಅವನನ್ನು ತಪಾಸಣೆ ಮಾಡಿ, ಅವನಿಗೆ ಅಪರೇಷನ್ ಆಗಬೇಕೆಂದು ಕಂಡು ಬಂದಂತಹ ಪಕ್ಷದಲ್ಲಿ ಅದನ್ನು ನೀವು ಇಂಟರ್‌ನೆಟ್ ಮೂಲಕ ಅನುಷ್ಠಾನ ಮಾಡುವಂತಹ ಸಂಸ್ಥೆಗೆ ಕಳಹಿಸಿಕೊಡಬೇಕು. ಅವರು ಓಕೆ ಮಾಡಿದ ಮೇಲೆ ಅಪರೇಷನ್

ಮಾಡಬೇಕೆನ್ನುವ ಷರತ್ತನ್ನು ಇಲ್ಲಿ ಹಾಕಿದ್ದೀರಿ. ಅವನು ಆಸ್ಪತ್ರೆಗೆ ಬರುವಾಗಲೇ ಸಿರಿಯಸ್ ಆಗಿ ಬಂದರೆ ಅವನು ಅಪರೇಷನ್ ಮಾಡಲಿಕ್ಕೆ ಮೇಲ್ ಕೊಟ್ಟುಕೊಂಡು ಅಲ್ಲಿಂದ ಬರುವಷ್ಟರಲ್ಲಿ ಸತ್ತೆ ಹೋಗುತ್ತಾನೆ ಅಲ್ಲವೇ? ಆ ಒಂದು ನಿಯಮವನ್ನು ತೆಗೆಯಿರಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೆ, ಹಿಂದೆ ಯಶಸ್ವಿನಿ ಯೋಜನೆ ಏನಿತ್ತು, ಅದರಲ್ಲಿ ಏನೆಲ್ಲಾ ಸ್ವಲ್ಪ ಅಡಚಣೆ, ತೊಂದರೆಗಳಿತ್ತು, ಅದೆಲ್ಲವನ್ನು ಈಗ ಮರುಪರಿಶೀಲಿಸಿ, ಈಗ ಅದನ್ನು ವ್ಯವಸ್ಥಿತಗೊಳಿಸುವಲ್ಲಿ ಮಾಡಿದ್ದೇವೆ. ಮತ್ತೆ ಎಲ್ಲಾ ಆಸ್ಪತ್ರೆಗಳ ಜೊತೆಯಲ್ಲಿ ಸಿನಿಯರ್ ಡಾಕ್ಟರ್‌ಗಳ ಜೊತೆಯಲ್ಲಿ ಕನ್ಸಲ್ಟೇಷನ್ ಮಾಡಿಯೇ ಮತ್ತು ಹಿಂದೆ ಆಗಿರುವಂತಹ ತೊಂದರೆಗಳನ್ನು ಸರಿಪಡಿಸಿ ಈಗ ಅದನ್ನು ಮಾಡಿದ್ದೇವೆ. ಎಸ್.ಸಿ./ಎಸ್‌ಟಿ. ಜನಾಂಗದವರಿಗೆ ಸರ್ಕಾರದವರೇ 500 ಮತ್ತು 1000 ರೂ.ಗಳ ಫೀಸ್ ಏನಿದೆ ಅದನ್ನು ಕಟ್ಟಿ ಕೊಡುವಂತಹ ಕೆಲಸವನ್ನು ಮಾಡುತ್ತೇವೆ. ಎಷ್ಟೋ ಜನ ಮಿಲಿಟರಿಯವರು ಒಂದಲ್ಲಾ ಒಂದು ಈ ಸಹಕಾರಿ ಸಂಸ್ಥೆಗಳಲ್ಲಿ ಅವರು ಕೂಡ ಸದಸ್ಯರು ಇರುತ್ತಾರೆ. ಅವರನ್ನು ಹೊರತುಪಡಿಸಲಿಕ್ಕೆ ನಾವು ಏನೂ ಮಾಡಲಿಲ್ಲ?

**ಶ್ರೀ.ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೆ, ಅವರಿಗೆ ಫ್ರೀ ಸದಸ್ಯತ್ವವನ್ನು ಕೊಡಲಿ.

**ಸಭಾಪತಿಯವರು:-** ಶ್ರೀಯುತ ಮಂಜೇಗೌಡ ರವರೆ, ಕುಳಿತುಕೊಳ್ಳಿ. ಸಚಿವರು ಮಾತನಾಡುತ್ತಾರೆ, ಆ ರೀತಿಯಲ್ಲಿ ಮತ್ತೆ ಮತ್ತೆ ಹೇಳುವುದು ಸರಿಯಲ್ಲ.

**ಶ್ರೀ.ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೆ, ಯಶಸ್ವಿನಿ ಯೋಜನೆ ಎಂದರೆ ಬಡವರ ಪಾಲಿನ ಸಂಜೀವಿನಿ.

**ಸಭಾಪತಿಯವರು:-** ಶ್ರೀಯುತ ಪ್ರಕಾಶ್ ರಾಥೋಡ್ ರವರ ಪ್ರಶ್ನೆ 94(904)ಗೆ ಉತ್ತರ ಬಂದಿರುವುದಿಲ್ಲ, ಈವಿಚಾರದಲ್ಲಿ ಸಭಾನಾಯಕರು ಗಮನಿಸಬೇಕು. 11-30 ಗಂಟೆಯಾದರೂ ಉತ್ತರ ಇಲಾಖೆಯಿಂದ ಬಾರದೇ ಇದ್ದರೆ ಉತ್ತರ ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಿ. ಅದಕ್ಕೆ ನೀವು ಸಮಯವನ್ನು ಕೇಳುತ್ತೀರಿ. ಅಧಿವೇಶನ

ಎಷ್ಟು ದಿನ ನಡೆಯುತ್ತಿದೆ ಎನ್ನುವುದರ ಬಗ್ಗೆ ಅಧಿಕಾರಿಗಳಿಗೆ ಪರಿಜ್ಞಾನ ಇರುವುದಿಲ್ಲ. ಇದಕ್ಕೆ 15 ದಿವಸ, ತಿಂಗಳು ಸಮಯವನ್ನು ಕೊಡಿ ಎಂದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** 15 ದಿವಸ ಸಮಯ ಅವರು ಕೇಳಿರಬಹುದು.

**ಸಭಾಪತಿಯವರು:–** ಸಭಾ ನಾಯಕರೆ, ಅವರು 15 ದಿವಸ ಸಮಯ ಕೇಳಿದ್ದಾರೆ, ಅಧಿವೇಶನ 15 ದಿವಸ ನಡೆಯುತ್ತದೆಯೇ? ಇದು ಸರಿಯಾದ ಪದ್ಧತಿಯಲ್ಲ. ಅಧಿಕಾರಿಗಳಿಗೆ ಸ್ವಲ್ಪ ಹೇಳಿ, ಬಿಗಿ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಆಗಬಹುದು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೆ, ಉತ್ತರ ಬಂದಿಲ್ಲ.
**ಸಭಾಪತಿಯವರು:–** ಈ ವಿಚಾರವಾಗಿ ಮತ್ತೆ ನೀವು ಏತಕ್ಕೆ ಮಾತನಾಡುತ್ತಿದ್ದೀರಿ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಕ್ಕರೆ ಸಚಿವರು ಇಲ್ಲಿಯೇ ಇದ್ದಾರೆ. ಮಾನ್ಯ ಸಚಿವರು ಏನು ಹೇಳಿದರು ಎಂದರೆ ಸದನ ಮುಗಿಯಯುವುದರೊಳಗೆ ಸಕ್ಕರೆ ಬೆಳೆಗಾರರ ಬೆಂಬಲ ಬೆಲೆ ಘೋಷಣೆ ಮಾಡುತ್ತೇವೆಂದು ಹೇಳಿದ್ದರು. ಮಾನ್ಯ ಸಚಿವರು ಇಲ್ಲಿಯೇ ಇದ್ದು ಇದರ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿದ್ದಾರೆಂದು ಹೇಳಲಿ. ಜೊತೆಗೆ ಮಾನ್ಯ ಸದಸ್ಯರಾದ ಶ್ರೀ ಸವದಿ ಸಂಗಪ್ಪ ಲಕ್ಷ್ಮಣ ರವರು ಸಹ ಇಲ್ಲಿಯೇ ಇದ್ದಾರೆ.

**ಸಭಾಪತಿಯವರು:–**ಶ್ರೀಯುತ ಪ್ರಕಾಶ್ ರಾಥೋಡ್ ರವರೆ, ಸ್ವಲ್ಪ ಕುಳಿತುಕೊಳ್ಳಿ. ಸಚಿವರೆ, ಇವರ ಪ್ರಶ್ನೆಯನ್ನು ತೆಗೆದುಕೊಂಡರೆ ಉತ್ತರವನ್ನು ಹೇಳುತ್ತೀರಾ?

**ಶ್ರೀ ಶಂಕರ್ ಬಿ. ಪಾಟೀಲ್ ಮುನೇನಕೊಪ್ಪ**(ಜವಳಿ ಮತ್ತು ಕೈಮಗ್ಗ ಇಲಾಖೆ ಹಾಗೂ ಕಬ್ಬು ಅಭಿವೃದ್ಧಿ ನಿರ್ದೇಶನಾಲಯ ಸಚಿವರು):- ಮಾನ್ಯ ಸಭಾಪತಿಯವರೆ, ಇವರ ಪ್ರಶ್ನೆಗೆ ಈಗ ಉತ್ತರ ಹೇಳಲಿಕ್ಕೆ ಆಗುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ಆದ ಮೇಲೆ ಆದರೂ ಒಂದು ಹೇಳಿಕೆಯನ್ನು ಸಚಿವರು ಮಾಡಲಿಕ್ಕೆ ಹೇಳಿ.

**ಸಭಾಪತಿಯವರು:-** ಹಾಗಾದರೆ, ಕುಳಿತುಕೊಳ್ಳಿ. ಮತ್ತೆ ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿಯವರ ಪ್ರಶ್ನೆ 95(1000) ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ.

**ಶ್ರೀ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಿಷಯ ಗೊತ್ತಾಯಿತು. ಆದರೆ, ನಾಳೆ ಕಂದಾಯ ತೆಗೆದುಕೊಳ್ಳಬೇಕು.

**ಪ್ರಶ್ನೆ ಸಂಖ್ಯೆ 1032**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಚನ್ನರಾಜ್ ಬಸವರಾಜ್ ಹಟ್ಟಿಹೊಳಿ:-** ಮಾನ್ಯ ಸಭಾಪತಿಯವರೆ, ನೇಕಾರರಿಗೆ ಸಂಬಂಧಪಟ್ಟ ಪ್ರಶ್ನೆ ಇದಾಗಿದ್ದು, ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಸಚಿವರು ಕೊಟ್ಟಂತಹ ಉತ್ತರದ ಪ್ರಕಾರ ರಾಜ್ಯದಲ್ಲಿ 54250 ಕೈಮಗ್ಗ ನೇಕಾರರು ಹಾಗೂ 97,133 ವಿದ್ಯುತ್ ಮಗ್ಗ ನೇಕಾರರು ಇರುತ್ತಾರೆ. ವಿಶೇಷವಾಗಿ ನಮ್ಮ ಬೆಳಗಾವಿ ಜಿಲ್ಲೆಗೆ ಸಂಬಂಧಪಟ್ಟಂತೆ ವಿದ್ಯುತ್ ಮಗ್ಗ ನೇಕಾರರು 22,524 ಹಾಗೂ ಕೈಮಗ್ಗ ನೇಕಾರರು 5353 ಜನರು ಇರುತ್ತಾರೆ. ನೇಕಾರರಿಗೆ 1 ರೂಪಾಯಿ 20 ಪೈಸೆ ದರದಲ್ಲಿ ವಿದ್ಯುತ್ ಸಬ್ಸಿಡಿ ಯೋಜನೆಯನ್ನು ಸರ್ಕಾರದವರು ಕೊಡಲಾಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ.

**ಮುಂದು.**

(1193) 27.12.2022 11.40 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಚನ್ನರಾಜ ಬಸವರಾಜ ಹಟ್ಟಿಹೊಳಿ (ಮುಂದು):-**

ಆದರೆ ಇದು minimum charge ಹಾಗೂ GST, FI charge ಮತ್ತು ಇನ್ನುಳಿದ ಚಾರ್ಜ್‌ಗಳನ್ನು ಸೇರಿಸಿ ಪ್ರತಿ ಯೂನಿಟ್‌ಗೆ ರೂ.3.25 ಬರುತ್ತಿದೆ. ಮಾನ್ಯ ಸಚಿವರಿಗೆ ನನ್ನ ಪ್ರಶ್ನೆ ಏನೆಂದರೆ ನೇರವಾಗಿ ರೂ.1.25 ಅನ್ನು ಸಬ್ಸಿಡಿ ವಿದ್ಯುತ್ ಯೋಜನೆಯಾಗಿ ನೀಡುತ್ತಿದ್ದು ಬೇರೆ surcharge ಗಳು, ಇನ್ನಿತರ minimum charge ಗಳನ್ನು ಹೊರತುಪಡಿಸಿ ಅವರಿಗೆ ನೇರವಾಗಿ ರೂ.1.25 ಕ್ಕೆ ವಿದ್ಯುತ್ ಅನ್ನು ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ತಾವೆಲ್ಲರೂ ಕಂಡಂತೆ ಕೋವಿಡ್ ಸಮಯದಲ್ಲಿ ನೇಕಾರರು ಬಹಳಷ್ಟು ಕಷ್ಟವನ್ನು ಅನುಭವಿಸಿದ್ದಾರೆ. ನಷ್ಟವನ್ನೂ ಅನುಭವಿಸಿದ್ದಾರೆ. ನೇಕಾರ ವೃತ್ತಿ ಮಾಡುವವರಿಗೆ ಶೇ.3 ಬಡ್ಡಿ ದರದಲ್ಲಿ ಸಾಲಸೌಲಭ್ಯವನ್ನು ನೀಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಹಲವಾರು ನೇಕಾರ ಬಾಂಧವರು ನನ್ನ ಬಳಿ ಬಂದು ಚರ್ಚೆ ಮಾಡುವ ಸಂದರ್ಭದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಈ 3% ಯೋಜನೆ ಅವರ ಖಾತೆಗೆ ಜಮಾ ಆಗಿರುವುದಿಲ್ಲ.

ಅವರು 13-14% ಬಡ್ಡಿ ದರದಲ್ಲಿ ತಮ್ಮ ವೃತ್ತಿಯನ್ನು ಮಾಡುತ್ತಿದ್ದು, ನೇರವಾಗಿ ಅಷ್ಟು ಹಣವನ್ನು ತುಂಬುತ್ತಿದ್ದಾರೆ. ಮಾನ್ಯ ಸಚಿವರು ಕಳೆದ 3 ವರ್ಷಗಳಿಂದ ಈ 3% ಬಡ್ಡಿಯ ಯೋಜನೆ ಏಕೆ ಜಾರಿಯಾಗಿರುವುದಿಲ್ಲ ಎನ್ನುವುದರ ಬಗ್ಗೆ ನನಗೆ ಉತ್ತರ ಕೊಡಬೇಕು. ನೇಕಾರ ಬಾಂಧವರು ನನ್ನ ಬಳಿ ಬಂದು ತಮ್ಮ ಕಷ್ಟಗಳನ್ನು ಹೇಳಿಕೊಂಡಿದ್ದಾರೆ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಚನ್ನರಾಜ ಹಟ್ಟಿಹೊಳಿಯವರು ನೇಕಾರರ ವಿದ್ಯುತ್ ಕೈಮಗ್ಗದ ಬಗ್ಗೆ ಕೇಳಿದ್ದಾರೆ. ಬಹಳ ದಿನಗಳಿಂದ ನೇಕಾರ ಬಂಧುಗಳು ತಮಿಳುನಾಡು ಮಾದರಿಯಲ್ಲಿ ವ್ಯವಸ್ಥೆ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದರು. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ 17.12.2022ರಂದು ಒಂದು ಸಭೆಯನ್ನು ಮಾಡಿ ಬಹಳಷ್ಟು ವರ್ಷಗಳಿಂದ ನೇಕಾರರು ಎದುರಿಸುತ್ತಿರುವ ಸಮಸ್ಯೆಯನ್ನು ನೂರಕ್ಕೆ ತೊಂಭತ್ತೊಂಭತ್ತರಷ್ಟು ನಿವಾರಿಸಿ ಸರ್ಕಾರದಿಂದ ಆದೇಶವನ್ನು ಮಾಡಲಾಗಿದೆ. ಇದೇ ಸುವರ್ಣ ಸೌಧದಲ್ಲಿ ರಾಜ್ಯದ ಎಲ್ಲಾ ನೇಕಾರ ಬಂಧುಗಳು ಬಂದು ಸನ್ಮಾನ ಮಾಡಿರುವುದು ಇಡೀ ರಾಜ್ಯಕ್ಕೆ ತಿಳಿದಿದೆ. ಬಹಳ ದಿನಗಳಿಂದ ಇದ್ದಂತಹ ಸಮಸ್ಯೆಗಳು 100ಕ್ಕೆ 99 ರಷ್ಟು ಪರಿಹಾರವಾಗಿರುವುದರ ಮೂಲಕ ಸರ್ಕಾರ ನೇಕಾರರ ಪರವಾಗಿ ನಿಂತಿದೆ ಎಂದು ಹೇಳಲು ಬಯಸುತ್ತೇನೆ.

**ಶ್ರೀ ಚನ್ನರಾಜ ಬಸವರಾಜ ಹಟ್ಟಿಹೊಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರಕ್ಕೆ ನಾನು ಇಷ್ಟನ್ನು ಹೇಳಬಯಸುತ್ತೇನೆ. ನೇಕಾರ ಬಂಧುಗಳಿಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲಿಯೋ ಒಂದು ಕಡೆ ಇನ್ನೂ ಕೂಡ ಅನಾಥ ಪ್ರಜ್ಞೆ ಕಾಡುತ್ತಿದೆ. ಇನ್ನೂ ಕೆಲವು ಬೇಡಿಕೆಗಳಿಗೆ ಸರ್ಕಾರ ತಕ್ಷಣವೇ ಸ್ಪಂದಿಸಬೇಕೆಂದು ನಾನು ಕೇಳಬಯಸುತ್ತೇನೆ. ವಿಶೇಷವಾಗಿ ನಮ್ಮ ಬೆಳಗಾವಿ ತಾಲ್ಲೂಕಿನಲ್ಲಿ ಅನೇಕರಿಗೆ ನೇಕಾರಿಕೆಯು ವೃತ್ತಿಯಾಗಿದೆ. ಬೆಳಗಾವಿ ತಾಲ್ಲೂಕಿನ ಸುಳೇಭಾವಿ ಗ್ರಾಮದಲ್ಲಿ ಶೇ.90 ರಷ್ಟು ನೇಕಾರಿಕೆಯನ್ನು ಅವಲಂಬಿಸಿರುವ ಕುಟುಂಬಗಳಿವೆ. ಕೋವಿಡ್ ಸಂದರ್ಭದಲ್ಲಿ ಇರಬಹುದು ಅಥವಾ ಅವರ ಅನೇಕ ಅಡಚಣೆಗಳಿಗೆ 25 ರಿಂದ 30 ಜನರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಅವರಿಗೆ ಆದಷ್ಟು ಬೇಗ ಪರಿಹಾರವನ್ನು ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:–** ಮಾನ್ಯ ಸಭಾಪತಿಯವರೇ, ಕೋವಿಡ್ ಸಂದರ್ಭದಲ್ಲಿ ನಿಧನರಾಗಿದ್ದ ನೇಕಾರ ಬಂಧುಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 2 ಲಕ್ಷ ರೂಪಾಯಿಯನ್ನು ಅವರ ಖಾತೆಗೆ ಜಮಾ ಮಾಡುವಂತಹ ಕೆಲಸ ಈಗಾಗಲೇ ಆಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮತ್ತ್ಯಾವುದಾದರೂ ಉಳಿದಿದ್ದರೆ ನೋಡಿ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಮಾಡಿಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ 1012**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ತಮಗೂ ತಿಳಿದಿರುವಂತೆ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿರುವ ಹೇಳಿಕೆಯ ಪ್ರಕಾರ ಬೆಳಗಾವಿಯ ಸುವರ್ಣಸೌಧದಲ್ಲಿ ಸಕ್ಕರೆ ಆಯುಕ್ತಾಲಯ ಸ್ಥಾಪನೆ ಮಾಡಿದ್ದು, ಅದು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುತ್ತಿಲ್ಲ. ದಿನಾಂಕ 01.10.2021ರ ಆದೇಶದನ್ವಯ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯವನ್ನು ಪೂರ್ಣ ಪ್ರಮಾಣದಲ್ಲಿ ಮಾಡಲಾಗುವುದೆಂದು ಇದೆ. ಆದರೆ ಅದು ಇಲ್ಲಿ ಆಗುತ್ತಿಲ್ಲ. ಈ ಭಾಗದ ರೈತರ ಪ್ರಮುಖ ಬೆನ್ನೆಲುಬಾಗಿರುವ ಕಬ್ಬಿಗೆ ಸಂಬಂಧಪಟ್ಟಂತೆ ಸರ್ಕಾರ ತೀವ್ರವಾಗಿ ಪರಿಗಣಿಸಬೇಕು. ಇದು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಬೇಕು. ಇಲ್ಲಿರತಕ್ಕಂತಹ ರೈತರಿಗೆ ಅನುಕೂಲವಾಗುವಂತೆ ಕೆಲಸ ಮಾಡಬೇಕು ಎಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:–** ಮಾನ್ಯ ಸಭಾಪತಿಯವರೇ, ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರ ಮಾಡುವುದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ ಅಧಿವೇಶನ ಮುಗಿದ ತಕ್ಷಣವೇ ಸುವರ್ಣ ಸೌಧಕ್ಕೆ ಆ ಕಛೇರಿಯನ್ನು ಸ್ಥಳಾಂತರಿಸುವ ನಿರ್ಣಯವನ್ನು ಈಗಾಗಲೇ ಮಾಡಿದ್ದೇವೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಸಚಿವರು ಬೆಳಗಾವಿಗೆ ಸ್ಥಳಾಂತರ ಮಾಡುವುದಾಗಿ ಹೇಳಿದರು. ಮಂಡ್ಯ, ಮೈಸೂರು ಭಾಗದ ರೈತರು ಇಲ್ಲಿಗೆ ಬರಬೇಕಾಗುತ್ತದೆಯೇ? ಅಲ್ಲಿಯೇ ಈ ರೀತಿಯ ಕಾರ್ಯ ನಿರ್ವಹಣೆ ಮಾಡುವ ವ್ಯವಸ್ಥೆ ಇದೆಯೇ?

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ:–** ಮಾನ್ಯ ಸಭಾಪತಿಯವರೇ, ರಾಜ್ಯದ ಎಲ್ಲಾ ರೈತ ಬೆಳೆಗಾರರಿಗೆ ಮತ್ತು ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ಅನುಕೂಲವಾಗುವಂತೆ ಬೆಂಗಳೂರಿನ ಕಛೇರಿ ನಿರ್ವಹಿಸಲಾಗುವುದು. ಇಲ್ಲಿಯೂ ಕೂಡ ಒಬ್ಬ ಅಧಿಕಾರಿಯನ್ನು ನೇಮಕ ಮಾಡಲಾಗುತ್ತದೆ. 73 ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು 60 ಕಾರ್ಖಾನೆಗಳು ಉತ್ತರ ಕರ್ನಾಟಕದಲ್ಲಿವೆ. ಅದಕ್ಕೆ

ಬೆಂಗಳೂರಿನಲ್ಲಿಯೂ ಕಛೇರಿ ಇರಲಿದ್ದು, ಒಬ್ಬ ಅಧಿಕಾರಿಯನ್ನು ನೇಮಕ ಮಾಡಲಾಗುವುದು. ಬೆಳಗಾವಿಯಲ್ಲಿ ಸುವರ್ಣಸೌಧದಲ್ಲಿಯೇ ಆ ಕಛೇರಿಯನ್ನು ಪ್ರಾರಂಭಿಸುತ್ತೇವೆ.

**ಪ್ರಶ್ನೆ ಸಂಖ್ಯೆ 976**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಕಾಶ್ ರಾಥೋಡ್ (ಶ್ರೀ ಸುನಿಲ್‌ಗೌಡ ಪಾಟೀಲ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯಿತಿಯಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಯಾವ ರೀತಿಯ ಅವ್ಯವಹಾರಗಳು ನಡೆದಿವೆ ಮತ್ತು ಯಾರು ಅವ್ಯವಹಾರ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣ ಪಂಚಾಯಿತಿಯ ಹಿಂದಿನ ಮುಖ್ಯಾಧಿಕಾರಿ ಶ್ರೀ ಡಿ.ಎನ್.ತಹಶೀಲ್ದಾರ್ ಇವರು 2019-20ನೇ ಸಾಲಿನ 14ನೇ ಹಣಕಾಸು ಯೋಜನೆಯಡಿ ಮಂಜೂರಾದ ಕ್ರಿಯಾ ಯೋಜನೆಯಲ್ಲಿ ವಾರ್ಡ್ ನಂ.02ರಲ್ಲಿ ಬರುವ ಭೀಮಾಶಂಕರ ಗುಡಿಯಿಂದ ನಾಗಠಾಣರವರ ಮನೆವರೆಗೆ ಸಿಸಿ ರಸ್ತೆ ನಿರ್ಮಾಣ ಮಾಡುವುದಾಗಿ ಕಾಮಗಾರಿಗೆ ಅನುಮೋದನೆ ಪಡೆದುಕೊಂಡಿದ್ದು, ಪ್ರಸ್ತಾಪಿತ ಕಾಮಗಾರಿ ನಿರ್ವಹಿಸದೆ ಅದನ್ನು ಬೇರೆ ಕಡೆಯಲ್ಲಿ ಮಾಡಿದ್ದಾರೆ. ಶಹನೂರ ಪೆಂಡಾರಿ ಅವರ ಮನೆಯಿಂದ ಮಸೂತಿಯವರ ಮನೆಯವರೆಗೆ ಹಾಗೂ ಕಮಟಗಿ ಅವರ ಮನೆಯಿಂದ ಹತ್ತರಕಿಹಾಳರವರ ಕಾಂಪೌಂಡ್‌ವರೆಗೆ ಸಿ.ಸಿ. ರಸ್ತೆ ನಿರ್ಮಾಣ ಮಾಡಿದ್ದು, ಅವರ ಮೇಲೆ ಕ್ರಮ ಜರುಗಿಸುವುದಾಗಿ ಈಗಾಗಲೇ ದಿನಾಂಕ 24.09.2021 ರಂದು ಜಿಲ್ಲಾಧಿಕಾರಿಗಳು ವಿಚಾರಣೆಯನ್ನು ಮಾಡಿದ್ದಾರೆ. ಜಿಲ್ಲಾಧಿಕಾರಿಯವರ ಆದೇಶ ಆದ ಮೇಲೆ ನ್ಯಾಯಾಧೀಶರು ಮತ್ತೊಮ್ಮೆ ವಿಚಾರಣೆಯನ್ನು ಮಾಡಿದ್ದಾರೆ. ಹಿಂದಿನ ತಹಶೀಲ್ದಾರ್ ಎಂಬುವವರು ಮಾಡುವ ಕೆಲಸದಲ್ಲಿ ಲೋಪ ಆಗಿದೆ. ಅವರಿಗೆ Show Cause Notice ಅನ್ನು ಕೊಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನ್ಯಾಯಾಧೀಶರಿಂದ ತನಿಖೆಯಾಗಿದ್ದು, ಅದು ಸಾಬೀತಾಗಿದೆ. ಜಿಲ್ಲಾಧಿಕಾರಿಗಳು ಸಾಬೀತು ಮಾಡಿದ್ದಾರೆ. 2020ರಲ್ಲಿ ಮಾಡಿರುವ ಈ ಲೋಪದಲ್ಲಿ ಅವರನ್ನು ಕೂಡಲೇ suspend ಮಾಡಬೇಕು. ದಿನಾಂಕ 14.02.2022 ರಂದು ಅವರಿಗೆ ನೋಟಿಸ್ ಅನ್ನು ನೀಡಲಾಗಿದೆ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರತಕ್ಕಂತಹ ಪ್ರಶ್ನೆ ಸರಿಯಾಗಿದೆ.

(1194) 27-12-2022, 11.50 ಕೆಜಿ.ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಸರಿಯಾಗಿದೆ. 14ನೇ ಹಣಕಾಸು ಯೋಜನೆಯಡಿ ಮಂಜೂರಾದ ಕ್ರಿಯಾ ಯೋಜನೆಯಲ್ಲಿ ವಾರ್ಡ್ ನಂ.2 ರಲ್ಲಿ ಬರುವ ಭೀಮಾಶಂಕರ ಗುಡಿಯಿಂದ ನಾಗಠಾಣರವರ ಮನೆವರೆಗೆ ಸಿ.ಸಿ., ರಸ್ತೆ ನಿರ್ಮಾಣ ಮಾಡುವುದಾಗಿ ಕಾಮಗಾರಿಗೆ ಅನುಮೋದನೆ ಪಡೆದುಕೊಂಡು ಪ್ರಸ್ತಾಪಿತ ಕಾಮಗಾರಿ ನಿರ್ವಹಿಸದೆ ಅದನ್ನು ಅಲ್ಲಿಗೆ ಬಿಟ್ಟು, ಅವರ ಹಂತದಲ್ಲಿಯೇ ಬದಲಾದ ಕಾಮಗಾರಿಯ ಕ್ರಿಯಾ ಯೋಜನೆಗೆ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿಯನ್ನು ಪಡೆದುಕೊಳ್ಳದೇ ಕರ್ತವ್ಯ ಲೋಪ ಎಸಗಿರುತ್ತಾರೆಂದು ವಿಜಯಪುರ ಜಿಲ್ಲಾಧಿಕಾರಿಯವರು ದಿನಾಂಕ 24-09-2021 ರಂದು ಪೌರಾಡಳಿತ ನಿರ್ದೇಶನಾಲಯಕ್ಕೆ ವರದಿಯನ್ನು ಕೊಟ್ಟಿರುತ್ತಾರೆ. ಇದರ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗಳು ತನಿಖೆ ಮಾಡಿದ್ದಾರೆ. ಈ ಪ್ರಕರಣದ ಸತ್ಯಾಸತ್ಯತೆಯ ಪರಾಮರ್ಶೆಗಾಗಿ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ನಿರ್ದೇಶನಾಲಯದ ದಿನಾಂಕ 20-05-2022 ರ ಆದೇಶದಲ್ಲಿ ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಈಗಾಗಲೇ ಅವರು ಸಹ ತನಿಖೆಯನ್ನು ಮಾಡಿದ್ದಾರೆ. ನಾವು ಸಹ ಅವರಿಗೆ ಈಗಾಗಲೇ ನೋಟಿಸ್‌ನ್ನು ಸಹ ಕೊಟ್ಟಿದ್ದೇವೆ. ಕೂಡಲೇ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಜಿಲ್ಲಾಧಿಕಾರಿಯವರು ತಪ್ಪು ಆಗಿದೆ ಎಂದು ಹೇಳಿದ್ದಾರೆ ಅಲ್ಲವೇ; ಅವರು ತಮ್ಮ ನೋಟಿಸ್‌ಗೆ ತಡೆಯಾಜ್ಞೆಯನ್ನು ತರುತ್ತಾರೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಇಷ್ಟೊಂದು ಅವ್ಯವಹಾರ ನಡೆದಿದೆ, ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ. ಅವರು ನಿಯಮಾನುಸಾರ ಎಲ್ಲವನ್ನು ಉಲ್ಲಂಘನೆ ಮಾಡಿದ್ದಾರೆ. ಹಾಗಾಗಿ, ಅವರನ್ನು immediately suspend ಮಾಡಿ enquiry ಮಾಡಲಿ. ಈಗ ಮಾನ್ಯ ಸಚಿವರು ಅವರನ್ನು ಕೂಡಲೇ suspend ಮಾಡುತ್ತೇವೆಂದು ಹೇಳಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು ಬಿಡಿ. ಮಾನ್ಯ ಸಚಿವರೇ ಅವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಿ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ಅವರ ವಿರುದ್ದ ಕ್ರಮವನ್ನು ತೆಗೆದುಕೊಂಡು ಅವರನ್ನು suspend ಮಾಡುತ್ತೇವೆ. ಇದರಲ್ಲಿ ಏನಾಗಿದೆ ಎಂದರೆ, ಯಾವುದು Action

Plan approval ಆಗಿದೆಯೋ, ಅದರ ಕಾಮಗಾರಿಗಳನ್ನು ಹೊರತುಪಡಿಸಿ, ಅವರ ಹಂತದಲ್ಲಿ ಬೇರೆ ರಸ್ತೆಯ ಕಾಮಗಾರಿಯನ್ನು ಮಾಡಿದ್ದಾರೆ. ಇದು ಜಿಲ್ಲಾಧಿಕಾರಿಯವರ ವರದಿಯಲ್ಲಿ ಬಂದಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಈಗ ತಪ್ಪು ಮಾಡಿದಂತಹ ಅಧಿಕಾರಿಯ ವಿರುದ್ದ ಯಾವುದೇ ಕ್ರಮವಾಗುವುದಿಲ್ಲವೆಂದು ಸರ್ಕಾರದಲ್ಲಿ ಆಗಿಬಿಟ್ಟಿದೆ. ತಪ್ಪಾಗಿದ್ದರೆ, ಅವರ ವಿರುದ್ಧ ತಕ್ಷಣವೇ ಕ್ರಮತೆಗೆದುಕೊಳ್ಳಿ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):–** ಮಾನ್ಯ ಸಭಾಪತಿಯವರೇ, ಅವರ ವಿರುದ್ಧ ತಕ್ಷಣ ಕ್ರಮ ತೆಗೆದುಕೊಂಡು ಅವರನ್ನು suspend ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 99 (1005)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ಅಬ್ದುಲ್ ಜಬ್ಬರ್‌ರವರೇ, ತಮ್ಮ ಪ್ರಶ್ನೆ ಸಂಖ್ಯೆ **99 (1005)** ಕ್ಕೆ ಉತ್ತರ ನೀಡಲು ಮಾನ್ಯ ಸಚಿವರು 15 ದಿವಸಗಳ ಕಾಲ ಟೈಮ್‌ನ್ನು ಕೇಳಿದ್ದಾರೆ.

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೇ, ಒಂದು ಅಧಿವೇಶನದಲ್ಲಿ ನನ್ನದು ಒಂದು ಅಥವಾ ಎರಡು ಚುಕ್ಕೆ ಗುರುತಿನ ಪ್ರಶ್ನೆಗಳು ಬರುತ್ತವೆ. ಅವುಗಳನ್ನು ಈ ರೀತಿ ಮಾಡಿದರೆ ಹೇಗೆ?

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ,.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು**):– ಮಾನ್ಯ ಸಭಾಪತಿಯವರೇ, ತಾವು ಆಗಲೇ ಸೂಚನೆಯನ್ನು ಕೊಟ್ಟಿದ್ದೀರಿ. ಸದನದ ಮುಗಿಯುವುದರೊಳಗೆ ಉತ್ತರ ಕೊಡುತ್ತೇವೆ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೇ, ಒಂದು ಅಧಿವೇಶನಕ್ಕೆ ನನ್ನದು ಒಂದು ಅಥವಾ ಎರಡು ಪ್ರಶ್ನೆಗಳು ಬರುತ್ತವೆ. ಅವುಗಳನ್ನು ಈ ರೀತಿ ಮಾಡಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಸರ್ಕಾರಕ್ಕೆ ಎಷ್ಟು ದಿವಸ ಸದನ ನಡೆಯುತ್ತದೆ ಎಂದು ಗೊತ್ತಿದೆಯೇ? ಮಾನ್ಯ ಸಚಿವರು 15 ದಿವಸಗಳ ಕಾಲ ಟೈಮ್ ತೆಗೆದುಕೊಳ್ಳುತ್ತಾರೆಂದರೆ ಹೇಗೆ? 15 ರಿಂದ 20 ದಿವಸಗಳ ಮೊದಲೇ ಪ್ರಶ್ನೆಯನ್ನು ಕೇಳಿರುತ್ತಾರೆ. ಏಕೆ 15 ದಿವಸಗಳ ಕಾಲ ಟೈಮ್ ಬೇಕೆಂದು ಸ್ಪಷ್ಟವಾದ ಕಾರಣವನ್ನು ತಿಳಿಸುವುದಿಲ್ಲ. 15 ದಿವಸ ಕಾಲ, ಒಂದು ತಿಂಗಳ ಕಾಲವಕಾಶ ಕೊಡಿ ಎಂದರೆ, ಅರ್ಥ ಏನು? ಇದರು ಸರಿಯಾದ ಕ್ರಮವಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಶುಕ್ರವಾರದಂದು ಉತ್ತರ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಕೆ.ಅಬ್ದುಲ್ ಜಬ್ಬರ್‌ರವರೇ, ಶುಕ್ರವಾರದಂದು ಉತ್ತರ ಕೊಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದೀರಿ. ಹಾಗಾಗಿ, ನಾವು ಸದನ ಮುಗಿಯುವುದರೊಳಗೆ ಉತ್ತರ ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಆಯಿತು. ಕೊಡಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಶುಕ್ರವಾರದಂದು ಸದನ ನಡೆಯುತ್ತದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ನಾವು ಸರ್ಕಾರದಿಂದ ಉತ್ತರ ಬರಲಿ ಎಂದು ಪ್ರಶ್ನೆಗಳನ್ನು ಕೇಳುತ್ತೇವೆ. ಮಾನ್ಯ ಸಚಿವರು 15 ದಿವಸಗಳು ಬಿಟ್ಟು ಕೊಡುತ್ತೇವೆಂದರೆ, ನಾವು ಸರ್ಕಾರಕ್ಕೆ ಪತ್ರ ಬರೆದು ಉತ್ತರವನ್ನು ತೆಗೆದುಕೊಳ್ಳುತ್ತೇವೆ. ನಮಗೆ ಅಷ್ಟೊಂದು ತಲೆ ಇಲ್ಲವೆಂದು ಅವರು ಹೇಳುವುದು ಬೇಕಾಗಿಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಭಾನಾಯಕರಿಗೆ ಹೇಳಿದ್ದೇನೆ. ಆದಷ್ಟು ಬೇಗ ಉತ್ತರ ಕೊಡುತ್ತಾರೆ. ಮಾನ್ಯ ಸಭಾನಾಯಕರೇ, ಮುಂದಿನ ಬಾರಿ ಈ ರೀತಿ ಹೇಳಬಾರದು. ಸಭೆ ಮುಗಿಯುವುದರೊಳಗೆ ಉತ್ತರ ಕೊಡಬೇಕು. 15 ದಿವಸಗಳಿಗೆ ಕೊಡುತ್ತೇವೆ. ಒಂದು ತಿಂಗಳಿಗೆ

ಕೊಡುತ್ತೇವೆಂದರೆ, ಆಗುವುದಿಲ್ಲ. ಮಾನ್ಯ ಸಚಿವರುಗಳು ಅವರ ಮನಸ್ಸಿಗೆ ಬಂದಂತೆ ಕೊಟ್ಟರೆ, ನಾನು ಅದನ್ನು ಒಪ್ಪುವುದಿಲ್ಲ. ಈಗಲೇ ತಿಳಿಸಿದ್ದೇನೆ.

**ಪ್ರಶ್ನೆ ಸಂಖ್ಯೆ ೧೦೦**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇದರಲ್ಲಿ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರನ್ನು ನೇಮಕ ಮಾಡಲು ಇರುವ ಮಾನದಂಡಗಳೇನು ಎಂಬ ಪ್ರಶ್ನೆಯನ್ನು ಕೇಳಿದ್ದೇನೆ. ನನಗೆ ಮಾಹಿತಿ ಇರುವ ಪ್ರಕಾರ, ಇದರಲ್ಲಿ ಒಂದು notification ಇದೆ. *ಅದು "applicant shall have atleast 5 years of work experience in the field of child rights and child protection."* ಎಂದು ಇದೆ. ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರಾಗುವವರು ಯಾವುದೇ ಪಕ್ಷದ ಮುಖಂಡರಾಗಿರಬಾರದು ಎಂಬ ಮಾನದಂಡ ಇದೆ. ನಮಗೆ ಇರುವಂತಹ ಮಾಹಿತಿ ಪ್ರಕಾರ ಶ್ರೀ ನಾರಾಯಣಗೌಡ ಎಂಬುವವರು ರಾಜ್ಯ ಬಿಜೆಪಿ ಜಿಲ್ಲಾಧ್ಯಕ್ಷರಾಗಿದ್ದರು. ಇವರು ಚುನಾವಣೆಯನ್ನು contest ಮಾಡಿದ್ದರು. ಇಂತಹವರನ್ನು ನೇಮಕ ಮಾಡಿದ್ದಾರೆ. ಎರಡನೇದಾಗಿ, ಈ ಆಯೋಗಕ್ಕೆ ಸದಸ್ಯರನ್ನು ನೇಮಕ ಮಾಡಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿದೆ. ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮಾನ್ಯ ಸದಸ್ಯರಾಗಿದ್ದ ಶ್ರೀಮತಿ ತಾರಾರವರನ್ನು ನೇಮಕ ಮಾಡಿದ್ದರು. ಆ ಸಂದರ್ಭದಲ್ಲಿ ಅಧಿಕಾರಿಗಳು ಇವರನ್ನು ನೇಮಕ ಮಾಡುವುದಕ್ಕೆ ಬರುವುದಿಲ್ಲವೆಂದು ಬರೆದು ಕಳುಹಿಸಿದ್ದರು, ಆಗ ಮತ್ತೆ stay ಮಾಡಿ ಬದಲಾವಣೆ ಮಾಡಿದರು. ಇಷ್ಟು ಆದ ಮೇಲೆಯೂ ಸಹ ಒಬ್ಬ ಬಿಜೆಪಿ ಮುಖಂಡರನ್ನು ಯಾವುದೇ experience ಇಲ್ಲದಿರುವವರನ್ನು ಇಂತಹ ಸಂಸ್ಥೆಗೆ ನೇಮಕ ಮಾಡಿದರೆ, ಅವರು ಏನು ನ್ಯಾಯ ಕೊಡುತ್ತಾರೆ? ಅದಕ್ಕೆ ಮಾನ್ಯ ಸಚಿವರು ಅವರ ಆತ್ಮ ಸಾಕ್ಷಿಯಾಗಿ ಉತ್ತರ ಕೊಡಬೇಕು.

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ಆಯೋಗದ ಅಧ್ಯಕ್ಷರನ್ನು ನಿಯಮಾನುಸಾರ ನೇಮಕ ಮಾಡಲಾಗಿದೆ. ಮಾನ್ಯ ಸದಸ್ಯರು ಆಯೋಗಕ್ಕೆ ಯಾರು ಸದಸ್ಯರು ಇಲ್ಲ ಹಾಗೂ ಅಧ್ಯಕ್ಷರಾಗುವವರಿಗೆ 5 ವರ್ಷಗಳ ಅನುಭವ ಇಲ್ಲವೆಂದು ಹೇಳಿದ್ದಾರೆ. ಆದರೆ, ಇವರ ವಿರುದ್ಧ ಯಾವುದೇ ಕ್ರಿಮಿನಲ್ ಅಪರಾಧ ಇಲ್ಲ ಮತ್ತು ಅವರಿಗೆ 65 ವರ್ಷಗಳ ಒಳಗೆ ವಯಸ್ಸು ಇರುವುದರಿಂದ ಅವರನ್ನು ನೇಮಕ ಮಾಡಲಾಗಿದೆ. ಇದರ ಬಗ್ಗೆ ಈಗಾಗಲೇ ಮಾನ್ಯ ಉಚ್ಛ

ನ್ಯಾಯಾಲಯಕ್ಕೆ ಹೋಗಿದ್ದಾರೆ. ಈ ಪ್ರಕ್ರಿಯೆ ಮೇಲೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋದಂತಹ ಸಂದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ *'selection and appointment of the respondent No. 5 shall remain subject to the result of the petition.'* ಎಂದು ಹೇಳಿದೆ. ಹಾಗಾಗಿ, ಇದು ಮಾನ್ಯ ನ್ಯಾಯಾಲಯದಿಂದ ಬರುವವರೆಗೆ ಏನು ಮಾತನಾಡುವುದಕ್ಕೆ ಆಗುವುದಿಲ್ಲ. ನಾವು ಅಧ್ಯಕ್ಷರನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ ನಿಯಮಾನುಸಾರ ಮಾಡಿದ್ದೇವೆ. ಅವರು ಯಾವುದರಲ್ಲಿಯೂ ಸದಸ್ಯರು ಆಗಿರುವುದಿಲ್ಲ ಎಂಬುದನ್ನು ತಿಳಿದುಕೊಂಡು ಮಾಡಿದ್ದೇವೆ. ಅವರು ಈ ಹಿಂದೆ ಯಾವುದೋ ಕಾಲದಲ್ಲಿ ಸದಸ್ಯರು ಆಗಿದ್ದರು ಎಂದು ಮಾನ್ಯ ಸದಸ್ಯರು ಹೇಳಿದ ಮೇಲೆ ನನಗೆ ಇದು ತಿಳಿಯಿತು.

**ಸಭಾಪತಿಯವರು:-** ಮಾನ್ಯ ಸಚಿವರೇ, Whether the matter is pending before the court?

**SRI ACHAR HALAPPA BASAPPA:-** Yes Sir.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಹಾಗಾದರೆ, ನಾವು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ನ್ಯಾಯಾಲಯದ ಬಗ್ಗೆ ಹೇಳುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅವರದ್ದು ತಪ್ಪು, ತಮ್ಮದ್ದು ತಪ್ಪು ಬಿಡಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಆಯೋಗದ ಅಧ್ಯಕ್ಷರಾಗುವವರಿಗೆ 5 ವರ್ಷಗಳ ಅನುಭವನ ಇರಬೇಕು.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಒಂದು ನಿಮಿಷ ಕೇಳಿ. When the matter is pending before the court, we can't discuss it. ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ನ್ಯಾಯಾಲಯದಲ್ಲಿ ವಿಷಯ ಬಾಕಿ ಇದ್ದಂತಹ ಸಂದರ್ಭದಲ್ಲಿ ನಾವು ಚರ್ಚೆ ಮಾಡುವುದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ಈ ವಿಷಯ ನ್ಯಾಯಾಲಯದಲ್ಲಿ ಬಾಕಿ ಇದ್ದಾಗ, ನಾವು ಕಾನೂನನ್ನು ಬಿಟ್ಟು, ಎಲ್ಲಾ ನಿಯಮಾವಳಿಗಳನ್ನು ಬಿಟ್ಟು ಸದನವನ್ನು ನಡೆಸುವುದಕ್ಕೆ ಆಗುತ್ತದೆಯೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸುನೀಲ್ ವಲ್ಯಾಪುರ್‌ರವರೇ ನಾನು ಹೇಳಿದ್ದೇನೆ ಅಲ್ಲವೇ; ತಾವು ಏಕೆ ಹೇಳುತ್ತಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಡಿ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸುನೀಲ್ ವಲ್ಯಾಪುರ್‌ರವರು ಬಂದು ಸಭಾಪತಿಯವರ ಪೀಠದಲ್ಲಿ ಕುಳಿತುಕೊಂಡು ಆ ಮಾತನ್ನು ಹೇಳಲಿ. ಸಭಾಪತಿಯವರು ಏತಕ್ಕೆ ಇದ್ದಾರೆ?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಡಿ. ನ್ಯಾಯಾಲಯದಲ್ಲಿ ಯಾವುದೇ ವಿಷಯ ಬಾಕಿ ಇದ್ದರೂ ಸಹ, ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಲ್ಯಾಪೂರೆರವರು ಇನ್ನೂ ಸಚಿವರು ಆಗಿಲ್ಲ. ಹಾಗಾಗಿ, ಅವರು ಸಚಿವರಾದ ಮೇಲೆ ಉತ್ತರ ಕೊಡಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಲೀಂರವರೇ, ಒಂದು ನಿಮಿಷ ಕೇಳಿ.,

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಏನಾದರೂ ಬದ್ಧತೆ ಇರಲಿಲ್ಲವೇ; ಸರ್ಕಾರಕ್ಕೆ rules and regulations ಗೊತ್ತಿರಲಿಲ್ಲವೇ; ಯಾರೋ ಒಬ್ಬ ಬಿಜೆಪಿ ಮುಖಂಡರನ್ನು ನೇಮಕ ಮಾಡಿದ್ದಾರೆ. ನಿಯಮದಲ್ಲಿ 5 ವರ್ಷಗಳ ಕಾಲ ಅನುಭವ ಇರಬೇಕೆಂದು ಹೇಳಿದ್ದಾರೆ. ಎಲ್ಲಾ ಕಡೆ ಮಾಡಿಕೊಳ್ಳಲಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ, ಈ ಸಂಸ್ಥೆಗೆ 5 ವರ್ಷಗಳ ಅನುಭವ ಇರುವವರನ್ನು ನೇಮಕ ಮಾಡಬೇಕೆಂದು ಹೇಳಿದ್ದರು. ಕಳೆದ ಬಾರಿ ಮಾನ್ಯ ಸದಸ್ಯರಾದ ಶ್ರೀಮತಿ ತಾರರವರನ್ನು ನೇಮಕ ಮಾಡಿದ್ದರು. ಅದನ್ನು stay ಮಾಡಿದ್ದರು ಎಂದು ಅವರಿಗೆ ಗೊತ್ತಿವೇ; ಈ ಸರ್ಕಾರಕ್ಕೆ ನಾಚಿಕೆಯಾಗಬೇಕು,

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶಿತರು):-** ಮಾನ್ಯ ಸದಸ್ಯರೇ, ಕಳೆದ ಬಾರಿ ಈ ಆಯೋಗಕ್ಕೆ ಕಾಂಗ್ರೆಸ್ ಪಕ್ಷದ ಸದಸ್ಯರು ಅಧ್ಯಕ್ಷರಾಗಿದ್ದರು.

**(ಗೊಂದಲ)**

**ಶ್ರೀ ಆಚಾರ ಹಾಲಪ್ಪ ಬಸಪ್ಪ:-** ಮಾನ್ಯ ಸಭಾಪತಿಯವರೇ, ನಾಚಿಕೆಯಾಗುವಂತಹ ಪ್ರಶ್ನೆ ಇಲ್ಲ. ನಾವು ನಿಯಮಾನುಸಾರ ನೇಮಕ ಮಾಡಿದ್ದೇವೆ. ಈಗ ಅದು ನ್ಯಾಯಾಲಯಲ್ಲಿದೆ

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸದಸ್ಯರಾದ ರುದ್ರೇಗೌಡರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ 1230**

**(ಉತ್ತರವನ್ನು ಲಗತ್ತಿಸಲಾಗಿದೆ**

**ಶ್ರೀ ಎಸ್.ರುದ್ರೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಯಾರು ನಗರಗಳನ್ನು ಸ್ವಚ್ಛ ಮಾಡಿ slum ಗಳಲ್ಲಿ ವಾಸ ಮಾಡುತ್ತಾರೆ ಅಂತಹವರ ಬಗ್ಗೆ ಸರ್ಕಾರ ಅತ್ಯಂತ ಕಳಕಳಿಯನ್ನು ಹೊಂದಿದೆ. ನಮ್ಮ ರಾಜ್ಯಲ್ಲಿ ಎಲ್ಲೆಲ್ಲಿ ನಗರಸಭೆಗಳು ಮತ್ತು ಪುರಸಭೆಗಳಿವೆ ಅಂತಹ ಕಡೆಗಳಲ್ಲಿ ಪೌರಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿ ಇಲ್ಲಿಯವರೆಗೆ 5188 ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ, ಅದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ, ಶಿವಮೊಗ್ಗದಲ್ಲಿ ಕಟ್ಟುತ್ತಿರುವಂತಹ ಮನೆಗಳ ಬಗ್ಗೆ ಮಾನ್ಯ ಸಚಿವರು ನನಗೆ ವರದಿಯನ್ನು ಕೊಟ್ಟಿದ್ದಾರೆ. ಕಳೆದ ಜನವರಿ ತಿಂಗಳನಲ್ಲಿ ನಾನು ಆ ಸ್ಥಳಕ್ಕೆ ಭೇಟಿ ಕೊಟ್ಟು ಅಲ್ಲಿರುವಂತಹ ಸರ್ಕಾರದ ಇಂಜಿನಿಯರ್‌ರವರ ಜೊತೆಗೆ ಚರ್ಚೆ ಮಾಡಿದಾಗ, structural work complete ಆಗಿದಂತಹ ಸಂದರ್ಭದಲ್ಲಿ ಗುಣಮಟ್ಟ ಅಷ್ಟಾಗಿ ಸಮಾಧಾನಕರವಾಗಿರಲಿಲ್ಲ. ಆಗ ಅದನ್ನು ಅವರ ಗಮನಕ್ಕೆ ತಂದಾಗ ಅವರು ಗುತ್ತಿಗೆದಾರರು ನಮ್ಮ ಮಾತುಗಳನ್ನು ಕೇಳುವುದಿಲ್ಲವೆಂದು ಉತ್ತರ ಕೊಟ್ಟರು. ಈ ರೀತಿಯ ಅಸಹಾಯಕತೆಯಲ್ಲಿ ನಮ್ಮ ಇಂಜಿನಿಯರ್‌ರವರುಗಳು ಕೆಲಸಗಳನ್ನು ಮಾಡಿದರೆ, ಕಟ್ಟಡದ ಗುಣಮಟ್ಟವನ್ನು ಕಾಪಾಡುವುದು ಹೇಗೆ? ಇದು ಒಂದು. ಎರಡನೆಯದಾಗಿ, ಮಾನ್ಯ ಸಚಿವರು ಎಲ್ಲೆಲ್ಲಿ quality survey ಮಾಡಿಸುತ್ತಿದ್ದಾರೆ ಹಾಗೂ ಎಲ್ಲಿಂದ ಅದರ ವರದಿಯನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನುವುದರ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ, ಬಹಳ ಸಂತೋಷ. ಈಗ ಮೊನ್ನೆ ನಾನು ಭೇಟಿಕೊಟ್ಟಂತಹ ಸಂದರ್ಭದಲ್ಲಿಯೂ ಅಂತಹ ಸುಧಾರಣೆ ಕಂಡುಬಂದಿಲ್ಲ. ಹಾಗಾಗಿ, ಮಾನ್ಯ ಸಚಿವರು ಸದರಿ ಸ್ಥಳಕ್ಕೆ ಒಂದು ಬಾರಿ ಭೇಟಿ ಮಾಡಿ ಗುಣಮಟ್ಟದ ಬಗ್ಗೆ ಚರ್ಚೆ ಮಾಡಲಿ ಎಂದು ಮನವಿ ಮಾಡುತ್ತೇನೆ. ಏಕೆಂದರೆ, ಅದಕ್ಕೆ ಒಂದು ಚದುರಕ್ಕೆ ರೂ.1,65,000/-ಗಳನ್ನು ಖರ್ಚು ಮಾಡಲಾಗುತ್ತಿದೆ. ಇದು ಕಡಿಮೆ ಮೊತ್ತವಲ್ಲ. Duplex houses design ಬಹಳ ಚೆನ್ನಾಗಿದೆ. ಆದರೆ, ಗುಣಮಟ್ಟದ ಬಗ್ಗೆ ಮಾನ್ಯ ಸಚಿವರು ಗಮನಿಸಬೇಕೆಂದು ಅವರ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಒಂದು ಬಾರಿ ಅಲ್ಲಿಗೆ ವಿಸಿಟ್ ಮಾಡುವಂತೆ ಹೇಳಿದ್ದಾರೆ, ತಾವು ಒಂದು ವಿಸಿಟ್ ಮಾಡಿ.

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.):-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಈಗಾಗಲೇ 5188 ಮನೆಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಇದರಲ್ಲಿ ಎರಡು ಹಂತದ ಮನೆಗಳಿವೆ. ಒಂದು ಸ್ವಂತ ನಿವೇಶನ ಇರುವಂತಹ ಪೌರಕಾರ್ಮಿಕರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುಪಾತದಲ್ಲಿ 7.50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಆಗ ಅವರೇ ಸ್ವಂತ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ.

**(ಮುಂದು., )**

**(1195) 27-12-2022 (12.00) ಎಂವಿ-ಎಕೆ** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ನಾಗರಾಜ್ (ಎಂಟಿಬಿ) (ಮುಂದು):-**

ಮತ್ತೆ ಜಿ+2 (Ground+2) ಮನೆಗಳನ್ನು ಕೊಟ್ಟಿರುವಂಥದ್ದು, ಈಗಾಗಲೇ ರಾಜ್ಯದಲ್ಲಿ ಯಾವ್ಯಾವ ಸ್ಥಳೀಯ ಸಂಸ್ಥೆಗಳಲ್ಲಿ ಕೊಟ್ಟಿರುವಂಥದ್ದಕ್ಕೆ ನಾವು ಈಗಾಗಲೇ ಏಜೆನ್ಸಿಗಳನ್ನು ಫಿಕ್ಸ್ ಮಾಡಿದ್ದೇವೆ. Omega Consultants ಹಾಗೂ ಬೆಂಗಳೂರು ಮೂಲದ ಸಿವಿಲ್‌ಟೆಕ್ ಲ್ಯಾಬ್ ಇವರುಗಳನ್ನು ನೇಮಕ ಮಾಡಿಕೊಂಡಿದ್ದೇವೆ. ಈಗಾಗಲೇ ನಿರ್ಮಾಣವಾಗಿರುವ ಮನೆಗಳ ಗುಣಮಟ್ಟವನ್ನು ಪರೀಕ್ಷಿಸಿ, ಭಾವಚಿತ್ರದೊಂದಿಗೆ ಸಿ.ಡಿ.ಯನ್ನು ಸಹ ನೀಡಿದ್ದೇವೆ. ಹಾಗಾಗಿ ಮಾನ್ಯ ಸದಸ್ಯರು ಹೇಳಿದಂತೆ ಹಾಗೂ ಈಗಾಗಲೇ ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಮಾಣವಾಗಿರುವಂತಹ ಸುಮಾರು 168 ಪೌರಕಾರ್ಮಿಕರ ಮನೆಗಳ ಗುಣಮಟ್ಟದ ವರದಿಯನ್ನು ಪಡೆದು, ಗುಣಮಟ್ಟದಲ್ಲಿ ಏನಾದರೂ ಲೋಪದೋಷಗಳು ಕಂಡುಬಂದರೆ, ಕೂಡಲೇ ಗುತ್ತಿಗೆದಾರರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 967**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಭಾರಿ ಸಮಗ್ರವಾದ ಉತ್ತರವನ್ನು ನೀಡಿದ್ದಾರೆ. ಆದರೆ, ನನ್ನ ಆಕ್ಷೇಪಣೆ ಇರುವುದು ಏನೆಂದರೆ, ಹಾಸನ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್‌ನ ಅವ್ಯವಹಾರದ ಐದು ಆರೋಪಗಳಗೆ ಸಂಬಂಧಿಸಿದಂತೆ ದಿನಾಂಕ 14.08.2020ರಲ್ಲಿ ಕಲಂ 64ರ ವಿಚಾರಣೆಗೆ ಸಹಕಾರ ಇಲಾಖೆಯ ಜಂಟಿ ನಿಬಂಧಕರು, ಮೈಸೂರು ಇವರನ್ನು ನೇಮಕ ಮಾಡಿದ್ದಾರೆ. ಅವರನ್ನು ದಿನಾಂಕ 14.08.2020ರಲ್ಲಿ ನೇಮಕ ಮಾಡಿದ್ದರೂ ಸಹ ಅದನ್ನು ಅವರು ವಿಚಾರಣೆ ಮಾಡಿರುವುದಿಲ್ಲ. ಆ ನಂತರ 04.01.2021ರಲ್ಲಿ ಮತ್ತೊಂದು ಬಾರಿ ವಿಚಾರಣೆಯನ್ನು ಕೈಗೊಂಡು, ಅದನ್ನು ಪೂರ್ಣಗೊಳಸಲು ಕೋರಿರುತ್ತಾರೆ. ಆದರೆ, ಅದೂ ಸಹ ಆಗುವುದಿಲ್ಲ. ಈಗ ದಿನಾಂಕ 09.12.2022ರಲ್ಲಿ ವಿಚಾರಣೆಗೆ ಮತ್ತೊಬ್ಬರನ್ನು ನೇಮಕ ಮಾಡಿದ್ದಾರೆ. ಉತ್ತರದಲ್ಲಿ ಮೂರು ತಿಂಗಳನಲ್ಲಿ ವಿಚಾರಣೆ ಮಾಡುತ್ತೇವೆಂದು ಹೇಳದ್ದಾರೆ. ಈಗ ಇದಕ್ಕೆ ಎರಡು ವರ್ಷ ತಡವಾಗಿರುವುದಕ್ಕೆ ಇಲ್ಲಿ ಏನೋ ತಪ್ಪು ಕಲ್ಪನೆ ಬರುತ್ತಿದೆ. ಅವರು ಇದನ್ನು ಮೂರು ತಿಂಗಳನಲ್ಲಿ ಮಾಡುವುದಕ್ಕೆ ಆಗುತ್ತದೆಯೇ ಎಂದು ಮಾನ್ಯ ಸಚಿವರು ತಿಳಸಬೇಕು. ಅದರ ಜೊತೆಗೆ ಮತ್ತೊಂದು ವಿಚಾರ ಏನೆಂದರೆ, ನಾನು ಅರ್ಜಿ ಸಮಿತಿಯಲ್ಲಿ ಸದಸ್ಯನಾಗಿದ್ದೇನೆ. ಈ ವಿಷಯ ಅರ್ಜಿ ಸಮಿತಿಗೂ ಸಹ ಬಂದಿತ್ತು. ಅಲ್ಲಿಗೆ ಸಹಕಾರ ಇಲಾಖೆಯ ನಿಬಂಧಕರು ಬಂದು, ಜಂಬೂರು ಗ್ರಾಮಪಂಚಾಯಿತಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಒಂದು ಸದಸ್ಯತ್ವ ಕೊಡುವುದಕ್ಕೆ ಅರ್ಜಿ ಸಮಿತಿಯಲ್ಲಿ ಒಪ್ಪಿಕೊಂಡಿದ್ದಾರೆ. ಆದರೆ, ಇಲ್ಲಿಯವರೆಗೂ ಸಹ ಡಿ.ಸಿ.ಸಿ. ಬ್ಯಾಂಕ್‌ನವರು ಕೊಡುತ್ತಿಲ್ಲ. ಈ ಎರಡನ್ನು ಸಹ ಮಾಡಲೇಬೇಕು. ಇದು ಬಹಳ ವರ್ಷಗಳಂದ ಬಾಕಿ ಇದೆ ಎಂದು, ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ಸದಸ್ಯತ್ವ ಕೊಡುವಂಥದ್ದಕ್ಕೆ ಡಿ.ಸಿ.ಸಿ. ಬ್ಯಾಂಕ್‌ನವರು ಅಡ್ಡಿಪಡಿಸುತ್ತಿದ್ದಾರೆ. ಇದು ಸಮಿತಿಯಲ್ಲಿ ಆಗಿ, ಕಳೆದ ಬಾರಿಯ ಅಧಿವೇಶನದಲ್ಲಿಯೂ ಸಹ ಇದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ನೀಡಿದ್ದೇನೆ. ಒಂದು ತಿಂಗಳ ಒಳಗಡೆ ಅವರು ಏನಾದರೂ ಕೊಡದೇ ಇದ್ದಂತಹ ಪಕ್ಷದಲ್ಲಿ ಡಿ.ಸಿ.ಸಿ. ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರನ್ನು suspend ಮಾಡುತ್ತೇನೆ ಎಂದು ಅಸೆಂಬ್ಲಿಯಲ್ಲಿ ತಿಳಸಿದ್ದೇನೆ. ಎರಡನೆಯದಾಗಿ, ಡಿ.ಸಿ.ಸಿ. ಬ್ಯಾಂಕ್‌ನ ಅವ್ಯವಹಾರದ ಬಗ್ಗೆ ಹೇಳುವುದಾದರೆ, ಈಗ ಹಾಸನ ಜಿಲ್ಲೆ ಎಂದರೆ, ಎಲ್ಲಾ ಅಧಿಕಾರಿಗಳು ಒಂದು ರೀತಿಯಲ್ಲಿ ಭಯಭೀತರಾಗಿದ್ದಾರೆ. ಅಧಿಕಾರಿಗಳು ಹಾಸನದ

ಡಿ.ಸಿ.ಸಿ. ಬ್ಯಾಂಕ್‌ನ ವಿಚಾರಣೆಗೆ ಹೋಗುವುದಿಲ್ಲ. ಅದು ಏಕೆ ಎಂದು ಅದನ್ನು ಇಲ್ಲಿ ಬಿಚ್ಚಿ ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ರಾಜೇಂದ್ರ ರಾಜಣ್ಣ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಏನು ಬೇಕಾದರೂ ಮಾಡಬಹುದು ಎಂದು ಅರ್ಥವೇ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ,...

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣರವರಿಗೆ ಬೇಸರವಾಗಬಾರದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಸರ್ಕಾರವೂ ಸಹ ಹೆದರಿಕೊಳ್ಳುತ್ತಿದೆಯೇ?

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನನಗೆ ಬೇಸರವಾಗುವಂತಹ ಪ್ರಶ್ನೆ ಇಲ್ಲ. ಅವರು ಜನರಿಗೆ ನ್ಯಾಯ ಕೊಡಿಸುವಂತಹ ಸರ್ಕಾರದ ಸಚಿವರು. ಅವರು ಈ ರೀತಿ ಹೇಳುವುದು ಸಮಜಾಯಿಷಿಯಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಇಲ್ಲಿ ಸರ್ಕಾರ ಮತ್ತು ಸಹಕಾರ ಸಚಿವರು ಹೆದರಿಕೊಳ್ಳುವಂತಹ ಪ್ರಶ್ನೆ ಇಲ್ಲ. ಆದರೆ, ಅಧಿಕಾರಿಗಳು ಡಿ.ಸಿ.ಸಿ. ಬ್ಯಾಂಕ್ ಹಾಸನಕ್ಕೆ ಹೋಗಿ ವಿಚಾರಣೆ ಮಾಡುವಂಥದ್ದಕ್ಕೆ ಭಯಭೀತರಾಗುತ್ತಿದ್ದಾರೆ.

**ಶ್ರೀ ರಾಜೇಂದ್ರ ರಾಜಣ್ಣ:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳಿಗೆ ರಕ್ಷಣೆ ನೀಡಲಿ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಈಗ ನಾವು ರಕ್ಷಣೆ ಕೊಡುತ್ತೇವೆಂದರೂ ಸಹ ಅಧಿಕಾರಿಗಳು ಅಲ್ಲಿಗೆ ಹೋಗುತ್ತಿಲ್ಲ.

**ಸಭಾಪತಿಯವರು:–** ಅಧಿಕಾರಿಗಳು ರಕ್ಷಣೆ ತೆಗೆದುಕೊಳ್ಳುವುದಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಅದಕ್ಕೆ ಈಗ ಇಷ್ಟೆಲ್ಲಾ ಆದಮೇಲೆ ಒಬ್ಬರ ಬಳಿ ಮಾತನಾಡಿ, ಅವರಿಗೆ ಏನೆಲ್ಲಾ ರಕ್ಷಣೆ ಬೇಕು ಮತ್ತು ಸರ್ಕಾರ ಮತ್ತು ಸಹಕಾರ ಇಲಾಖೆ ನಿಮ್ಮ ಪರವಾಗಿ ಇರುತ್ತದೆ. ಹಾಗೆಯೇ ಸಹಕಾರ ಸಚಿವನಾಗಿ ನಿಮಗೆ ಎಲ್ಲಾ ರೀತಿಯ ರಕ್ಷಣೆಯನ್ನು ನೀಡುತ್ತೇವೆ. ಆದುದರಿಂದ ನೀವು ಡಿ.ಸಿ.ಸಿ. ಬ್ಯಾಂಕ್‌ಗೆ ಹೋಗಿ, ಅಲ್ಲಿ ವಿಚಾರಣೆ ಮಾಡಿ, ಮೂರು

ತಿಂಗಳಿನಲ್ಲಿ ವರದಿ ನೀಡಿ ಎನ್ನುವಂತಹ ಸೂಚನೆಯನ್ನು ನೀಡಿದ್ದೇವೆ. ಅವರು ಮೂರು ತಿಂಗಳಿನಲ್ಲಿ ವಿಚಾರಣೆ ಮಾಡಿ ವರದಿ ನೀಡುವಂಥದ್ದಕ್ಕೆ ಸಹಕಾರ ಇಲಾಖೆ ಆದೇಶ ಸಹ ಮಾಡಿದೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳಿದಾಗ, ಅಲ್ಲಿ ಈ ರೀತಿಯ ಪರಿಸ್ಥಿತಿ ಇದೆ ಎಂದು ನನಗೆ ಗೊತ್ತಿರಲಿಲ್ಲ. ಮಾನ್ಯ ಸಚಿವರಿಗೆ ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 1003**

**ಸಭಾಪತಿಯವರು:–** ಡಾ||ತಳವಾರ್ ಸಾಬಣ್ಣನವರ ತಮ್ಮ ಪ್ರಶ್ನೆ ಸಂಖ್ಯೆ.1003 ಆರೋಗ್ಯ ಮತ್ತು ಕುಟುಂಬ ಇಲಾಖೆಗೆ ವರ್ಗಾವಣೆಗೊಂಡಿರುತ್ತದೆ.

**ಡಾ||ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ನಾನು ಎರಡು ಉಪ ಪ್ರಶ್ನೆಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಸಭಾಪತಿಯವರು:–** ನಾನು ಏನು ಮಾಡುವುದಕ್ಕೆ ಆಗುವುದಿಲ್ಲ. ಈಗ ತಾವು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ||ತಳವಾರ್ ಸಾಬಣ್ಣನವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಈ ಪ್ರಶ್ನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಗೆ ವರ್ಗಾವಣೆ ಮಾಡಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, Infant Mortality Rate ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಶಿಶು ಮರಣವಾಗಿರುವಂಥದ್ದು, ಹೆಚ್ಚಿನ ಭಾಗ ಉತ್ತರ ಕರ್ನಾಟಕದ ಭಾಗದಲ್ಲಿರುವಂತಹ ಬೆಳಗಾವಿ, ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಜಿಲ್ಲೆಗಳ ಈ ಭಾಗದಲ್ಲಿ. ಇಪ್ಪತ್ತೊಂದನೇ ತಾರೀಖಿನಂದು "ಪ್ರಜಾವಾಣಿ" ದಿನಪತ್ರಿಕೆಯಲ್ಲಿ ಅದರ ಅಂಕಿ–ಅಂಶಗಳು ಬಂದಿದೆ. ತಾವು ಸ್ವಲ್ಪ ಆ ಅಂಕಿ–ಅಂಶಗಳನ್ನು ನೋಡಿ.

**ಸಭಾಪತಿಯವರು:–** ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ತಿಳಿಸಿದ್ದಾರೆ. ಆದರೆ, ಆ ಪ್ರಶ್ನೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾವಣೆಯಾಗಿದೆ. ಈ ಪ್ರಶ್ನೆಗೆ ಯಾರು ಉತ್ತರ ನೀಡುತ್ತಾರೆ?

**ಡಾ||ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ನನ್ನ ಎರಡು ಉಪ ಪ್ರಶ್ನೆಗಳಿಗೆ ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಚಿವರು ಉತ್ತರವನ್ನು ನೀಡಬಹುದು.

**ಸಭಾಪತಿಯವರು:–** ಮಾನ್ಯ ಆಚಾರ್ ಹಾಲಪ್ಪ ಬಸಪ್ಪರವರೆ, ಮಾನ್ಯ ಸದಸ್ಯರಾದ ಡಾ||ತಳವಾರ್ ಸಾಬಣ್ಣನವರ ಪ್ರಶ್ನೆಗೆ ತಾವು ಉತ್ತರ ನೀಡುತ್ತೀರಾ?

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಅದಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ಮಾಹಿತಿ ಇಲ್ಲ. ಅದರ ಮಾಹಿತಿ ಇದ್ದಿದ್ದರೆ ಉತ್ತರ ನೀಡುತ್ತಿದ್ದೆ.

**ಡಾ||ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಹೆಸರಿನಲ್ಲಿಯೇ ಮಾಹಿತಿ ಬಂದಿದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಡಾ||ತಳವಾರ್ ಸಾಬಣ್ಣನವರು ಕೇಳಿರುವ ಪ್ರಶ್ನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಿಂದ ನಾಳೆ ಉತ್ತರವನ್ನು ಒದಗಿಸಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಿ.ಎಂ.ಲಿಂಗಪ್ಪನವರು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ.

**ಶ್ರೀ ಸಿ.ಎಂ.ಲಿಂಗಪ್ಪ:–** ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲೆಯಲ್ಲಿ ಚಿರತೆಗಳ ಹಾವಳಿ ಬಹಳ ಕಡಿಮೆ ಎಂದು ಕೇಳಿದ್ದೇನೆ.

**ಪ್ರಶ್ನೆ ಸಂಖ್ಯೆ: 1031**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) (ಡಾ.ಕೆ.ಗೋವಿಂದರಾಜ್ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಕಳೆದ ಮೂರು ವರ್ಷಗಳಲ್ಲಿ ಆಗಿರುವಂತಹ ಒಪ್ಪಂದಗಳು ಎಷ್ಟು ಎಂದು. ಅದರಲ್ಲಿ ಸುಮಾರು 77 ಒಪ್ಪಂದಗಳಾಗಿವೆ, ಇನ್ನು ಕೇವಲ 9 ಮಾತ್ರ ಅನುಮೋದನೆಗೆ ಏಕಗವಾಕ್ಷಿ ಯೋಜನೆಯಲ್ಲಿದೆ ಎಂದು ತಿಳಿಸಿದ್ದಾರೆ. ಈಗ ಅದು ಅನುಷ್ಠಾನಗೊಂಡಾಗ ಎಷ್ಟು ಉದ್ಯೋಗ ಸಿಗುತ್ತದೆಂದು ಕೇಳಿದರೆ, ಇದಕ್ಕೆ ಸುಮಾರು ಮೂರು-ನಾಲ್ಕು ವರ್ಷ ಬೇಕೆಂದು ತಿಳಿಸಿದ್ದಾರೆ. ಇದರಲ್ಲಿರುವಂತಹ ಕಂಪನಿಗಳನ್ನು ನೋಡಿದರೆ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಾದ ಮಂಜುನಾಥ್ ಭಂಡಾರಿಯವರು ಈ ವಿಷಯವನ್ನು raise ಮಾಡಿದ್ದರು. ಒಂದು university ಗೆ ಸುಮಾರು 800 ಕೋಟಿ investment, ಆದರೆ ಹತ್ತು ಸಾವಿರ ಉದ್ಯೋಗವೆಂದು ಹೇಳುತ್ತಾರೆ. ಮತ್ತೊಂದು ReNew Power Pvt., Ltd., ಎಂದು ಹೇಳುತ್ತಾರೆ. ಅದರಲ್ಲಿ ಸುಮಾರು ಇಪ್ಪತ್ತು ಸಾವಿರ ಕೋಟಿ ಬಂಡವಾಳ ಹೂಡಿಕೆ ಮತ್ತು ಇಪ್ಪತ್ತು ಸಾವಿರ ಉದ್ಯೋಗ ಸೃಜನೆ ಎಂದು ಹೇಳಲಾಗಿದೆ. ಈಗ ನಾವು overall ಮೊನ್ನೆ G.I.M. (Global Investors Meet) ಬಗ್ಗೆ ಮಾತನಾಡುತ್ತಿದ್ದೆವು. ಅವರ ಅವಧಿಯಲ್ಲಿ ಶೇಕಡಾ 14ರಷ್ಟು ಮಾತ್ರ ಅನುಷ್ಠಾನಗೊಂಡಿದೆ ಎಂದು. ಈಗ overall ಅಲ್ಲಿಂದ, ಇಲ್ಲಿಯವರೆಗೆ ಆಗಿರುವಂತಹ G.I.M. ಗಳಲ್ಲಿ ಅನುಷ್ಠಾನಗೊಂಡಿರುವುದು ಶೇಕಡಾ 24ರಷ್ಟು ಮಾತ್ರ. ನಾವು ಭೂಮಿ ತೆಗೆದುಕೊಂಡು ಇಷ್ಟು ಲಕ್ಷ ಉದ್ಯೋಗಗಳನ್ನು ಕೊಡುತ್ತೇವೆಂದು, ರೈತರನ್ನು ಬೀದಿಗೆ ತರುತ್ತಿದ್ದಾರೆ ಎಂದು ನಮ್ಮ ಮೊದಲನೆ ಆಪಾಧನೆಯಾಗಿದೆ. ಎರಡನೆಯದಾಗಿ, ಬೆಂಗಳೂರಿನಲ್ಲಿರುವಂತಹ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಇವರ ಬಳಿ infrastructure ಇಲ್ಲ. ಇಡೀ ದೇಶದಲ್ಲಿಯೇ ಎರಡನೆ ಅತಿ ಹೆಚ್ಚು ತೆರಿಗೆ ಸಂಗ್ರಹಿಸುತ್ತಿರುವುದು ಕರ್ನಾಟಕ ರಾಜ್ಯವಾಗಿದೆ. ಅಂದರೆ, ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳಿಂದ ಒಂದು ವರ್ಷಕ್ಕೆ ಸುಮಾರು ಮೂರು ಲಕ್ಷ ಕೋಟಿ ತೆರಿಗೆ ಸಂಗ್ರಹವಾಗುತ್ತದೆ. It is second highest in the country. ಮೊನ್ನೆಯ ದಿವಸ ಐ.ಟಿ., ಬಿ.ಟಿ.,ಯವರು ಮಳೆ ಬಂದಾಗ ಟ್ರ್ಯಾಕ್ಟರ್ ಮತ್ತು ಮಹಡಿಗಳ ಮೇಲೆ ಇದ್ದರು. ಅವರಿಗೆ ಸುಮಾರು 224 ಕೋಟಿ ನಷ್ಟವಾಗಿದೆ ಎಂದು ಅವರುಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದರು. ಅಂದರೆ, ನೀವು ನಮಗೆ ಅನುಕೂಲ ಮಾಡಿ, ಇಲ್ಲವೆ ನಾವು ಈ ರಾಜ್ಯವನ್ನು ಬಿಟ್ಟು ಹೋಗುತ್ತೇವೆಂದು ಹೇಳಿದರು. ಇದನ್ನೆಲ್ಲಾ ಸರಿಪಡಿಸದೆ, ಬಡ್ಡಿ ದುಡ್ಡಿನಲ್ಲಿ 75

ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದರು, ಹಾಗಾದರೆ ಬಡ್ಡಿ ದುಡ್ಡು ಸರ್ಕಾರದ ಹಣ ಅಲ್ಲವೇ? G.I.M. ಗೆ ಖರ್ಚು ಮಾಡಿದ್ದು. ಮೊನ್ನೆಯ ದಿವಸ ಅವರ ಒಂದು ರೂಪಾಯಿಗಳನ್ನು ಖರ್ಚು ಮಾಡಿಲ್ಲವೆಂದರು. ನ್ಯಾಯಮೂರ್ತಿಗಳಾದ ಶ್ರೀ ಸಂತೋಷ್ ಹೆಗಡೆಯವರು ಈ ರೀತಿ ಹೇಳುತ್ತಾರೆ. ಅಂದರೆ, ಐ.ಟಿ. ಕಂಪನಿಯವರು ಪದೇ ಪದೇ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರಕ್ಕೆ ಬಹುದೊಡ್ಡ ಆದಾಯ ತರುವಂತಹ ವಲಯವನ್ನು ನಿರ್ಲಕ್ಷ್ಯ ಮಾಡುವುದು ಸರಿಯಲ್ಲ. ನಿಮ್ಮ ದುರಾಸೆ ಸಾಕು, ಕಳಪೆ ಕಾಮಗಾರಿಯಿಂದ ಬೆಂಗಳೂರಿಗೆ ಸಾಕಾಗಿದೆ ಎಂದು ತಮ್ಮ ಅಸಮಾಧಾನವನ್ನು ಹೊರಗೆ ಹಾಕಿದ್ದಾರೆ. ಐ.ಟಿ. ಉದ್ಯೋಗಿಗಳಿಂದ ಕೂಡ ಸರ್ಕಾರದ ಮೇಲೆ ಆಕ್ರೋಶ, ಕೂಡಲೇ ಅವರ ಬೇಡಿಕೆಗಳನ್ನು ಈಡೇರಿಸಬೇಕು. ಈ ರೀತಿಯಲ್ಲಿ ಮಾಡುವುದನ್ನು ಬಿಟ್ಟು, ಅವರು ಯಾವ್ಯಾವುದಕ್ಕೋ ಖರ್ಚುಗಳನ್ನು ಮಾಡುತ್ತಾರೆ. ಈಗ ಅವರು ಉದ್ಯೋಗಗಳನ್ನು ನೀಡುತ್ತೇವೆಂದು ಹೇಳುತ್ತಾರೆ. ನವೆಂಬರ್ ಡೇಟಾದ ಪ್ರಕಾರ ಶೇಕಡಾ 17ರಷ್ಟು ಉತ್ಪಾದನೆ ಕಡಿಮೆಯಾಗಿದೆ. ಅದೇರೀತಿ ನವೆಂಬರ್ ತಿಂಗಳನಲ್ಲಿ employment data ಶೇಕಡಾ 8.96ಕ್ಕೆ ಬಂದಿದೆ. ಎಲ್ಲಿ ಉದ್ಯೋಗವನ್ನು ಕೊಡುತ್ತಾರೆ, ಅವರು ರೈತರಿಂದ ಜಮೀನುಗಳನ್ನು ಕಿತ್ತುಕೊಳ್ಳುತ್ತಾರೆ; ಆ ಜಮೀನುಗಳನ್ನು ರಿಯಲ್ ಎಸ್ಟೇಟ್‌ನವರಿಗೆ ಕೊಡುತ್ತಾರೆ. ಇಲ್ಲಿ ಇಪ್ಪತ್ತು ಸಾವಿರದಿಂದ ಐವತ್ತು ಸಾವಿರದವರೆಗೆ ಉದ್ಯೋಗಗಳನ್ನು ನೀಡುತ್ತೇವೆಂದು ಹೇಳುತ್ತಾರೆ. ಅವರು ನೀಡಿರುವಂತಹ ಅನುಬಂಧದಲ್ಲಿ ಏರ್‌ಟೆಲ್ ಮತ್ತು ಜಿಯೋದಲ್ಲಿ ಸುಮಾರು ಐವತ್ತು ಸಾವಿರ, ರಿಲಯನ್ಸ್ ಇಪ್ಪತ್ತು ಸಾವಿರ ಜನ ಎಂದು ಇದೆ. ಇವುಗಳೆಲ್ಲಾ ಆಗುವಂತಹ ಕೆಲಸವೇ? ಕೇವಲ ಒಡಂಬಡಿಕೆಗಳನ್ನು ಮಾಡುವುದು, ಜನರಿಗೆ ಈ ರೀತಿ ಹೇಳುವುದು.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ನೀವು ನೀಡಿರುವ ಮಾಹಿತಿಗೆ ಮಾನ್ಯ ಸಚಿವರು ಉತ್ತರ ನೀಡಲಿ ಬಿಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದನ್ನು ನಾನು ಹೇಳುವುದಲ್ಲ, ಮಿತಿಮೀರಿದ ಲಂಚಾವತಾರ, ಇದರಿಂದ ಯಾವುದೇ ಕೆಲಸಗಳು ಆಗುತ್ತಿಲ್ಲ. ಇಷ್ಟೆಲ್ಲಾ ಆದರೂ ಸಹ ಅವರು ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆಂದು ಹೇಳುತ್ತಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಈ ರಾಜ್ಯದ ಒಬ್ಬ ದೊಡ್ಡ ಕೈಗಾರಿಕೋದ್ಯಮಿ, ಅವರೆ ಈ ರೀತಿ ಸುಳ್ಳು ಹೇಳುತ್ತಾರೆಂದರೆ, ಇದು ಏಕೆ ಎಂಬುದು ನನ್ನ ಪ್ರಶ್ನೆಯಾಗಿದೆ.

**(ಮುಂದು)**

(1196) 27.12.2022 12.10 LL-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮುರುಗೇಶ್ ಆರ್. ನಿರಾಣಿ:-** ಮಾನ್ಯ ಸಭಾಪತಿಯವರೇ, 2010 ಮತ್ತು 2012ರಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಾವು ಮಾಡಿದ್ದೇವೆ. ಅದರಲ್ಲಿ ನಾವು ಗರಿಷ್ಠ ಪ್ರಯತ್ನವನ್ನು ಮಾಡಿ ಆ ಸಂದರ್ಭದಲ್ಲಿ ಒಂದು ಲಕ್ಷದ ಇಪ್ಪತ್ತೈದು ಸಾವಿರ ಭೂಮಿಯನ್ನು ರೈತರ ಒಪ್ಪಿಗೆ ಆಧಾರದ ಮೇರೆಗೆ K.I.A.D.B. (Karnataka Industrial Area Development Board) ಗೆ acquisition ಮಾಡಿದ್ದೇವೆ. ಅದಕ್ಕೆ ಅಂತಿಮ ಅಧಿಸೂಚನೆಯನ್ನು ಸಹ ಹೊರಡಿಸಿದ್ದೆವು. "ಕುಂಬಾರಿನಿಗೆ ವರುಷ, ದೊಣ್ಣೆಗೆ ನಿಮಿಷ" ಎನ್ನುವ ರೀತಿ, ಮುಂದಿನ ಸರ್ಕಾರ ಅಧಿಕಾರಕ್ಕೆ ಬಂದಾಗ, ತನ್ನ ಮೊದಲನೆ ಸಚಿವ ಸಂಪುಟ ಸಭೆಯಲ್ಲಿ ಅದನ್ನು ಡಿನೋಟಿಫೈ ಮಾಡಿದರು. ಆ ಸಂದರ್ಭದಲ್ಲಿ ರೂ.2,400.00 ಕೋಟಿಗಳ ಹಣವನ್ನು ಬೇರೆ ಬೇರೆ ಕಂಪನಿಯವರು ಭೂಸ್ವಾಧೀನಕ್ಕಾಗಿ ಠೇವಣಿ ಇಟ್ಟಿದ್ದರು. ಸರ್ಕಾರ ಅದನ್ನು ಡಿನೋಟಿಫೈ ಮಾಡಿದ್ದರಿಂದ, ಠೇವಣಿ ಇಟ್ಟಿದ್ದಂತಹ ಹಣವನ್ನು ವಾಪಸ್ಸು ತೆಗೆದುಕೊಂಡರು. ಈ ರೀತಿಯಾಗಿ ಬಂದಿರುವಂತಹ ಯೋಜನೆಗಳು ನಾವು ಭೂಮಿ ಕೊಡುವುದಕ್ಕೆ ಆಗದೇ ಇರುವುದರಿಂದ ಮುಂದೆ ಅದರ conversion ratio ಬಹಳ ಕಡಿಮೆಯಾಯಿತು. ಅದಕ್ಕೆ ಮೂಲ ಕಾರಣವೇ ಅದು.

ಎರಡನೆಯದಾಗಿ, 2022ನೇ ನವೆಂಬರ್ ತಿಂಗಳ 2, 3 ಮತ್ತು 4ನೇ ತಾರೀಖಿನಂದು ಮೂರು ದಿವಸ ಜಾಗತಿಕ ಬಂಡವಾಳ ಹೂಡಿಕೆದಾರರು ಸಮಾವೇಶ ಮಾಡಿದ್ದು, ಅಂದಾಜು ರೂ.9.81 ಲಕ್ಷ ಕೋಟಿ ರೂಪಾಯಿ ಮೊತ್ತದ MoU (Memorandum of Understanding) ಗಳಿಗೆ ನಾವು ಸಹಿ ಹಾಕಿದ್ದೇವೆ. ಅದರಲ್ಲಿ ನಾವು ನೇರವಾಗಿ MoU ಗಳಿಗೆ ಸಹಿ ಮಾಡಿರುವುದಿಲ್ಲ. ಅದನ್ನು ಹೈ ಲೆವೆಲ್ ಕಮಿಟಿಯಲ್ಲಿ ತಂದು, ಅದರಲ್ಲಿ ನಾವು genuine ಆಗಿ ಯಾರಿಗೆ ಭೂಮಿ ಕೊಡಲಿಕ್ಕೆ ಸಾಧ್ಯವಿದೆ, ಯಾರಿಗೆ ನೀರು, ವಿದ್ಯುತ್, skilled workers, concession, subsidy, ಇತ್ಯಾದಿಗಳನ್ನು ಕೊಡುವಂತಹ ಆಧಾರದ ಮೇರೆಗೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಎಲ್ಲಾ ಸಚಿವರು ಮತ್ತು ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಅವರಿಗೆ ಮಂಜೂರು ಮಾಡಿದ್ದೇವೆ. ಮೊನ್ನೆ ನಡೆದಿರುವಂತಹ G.I.M. (Global Investors Meet) ನಿಂದ ಹಿಡಿದು 90 ದಿವಸಗಳವರೆಗೆ ಉಳಿದಿರುವಂತಹ ಪ್ರಸ್ತಾವನೆಗಳನ್ನು ಸಹ ನಾವು ಕ್ಲಿಯರ್ ಮಾಡುತ್ತೇವೆ.

ಈ ಸಂದರ್ಭದಲ್ಲಿ ಕೇವಲ 50 ಸಾವಿರ ಎಕರೆ ಭೂಮಿ ಅಂದರೆ, ಬೆಂಗಳೂರಿನಲ್ಲಿ ಶೇಕಡ 10 ರಷ್ಟು ಮತ್ತು ಬೆಂಗಳೂರನ್ನು ಹೊರತುಪಡಿಸಿ ಶೇಕಡ 90 ರಷ್ಟು ಭೂಮಿಯನ್ನು ಭೂಸ್ವಾಧೀನ ಮಾಡುತ್ತಿದ್ದೇವೆ. ಯಾವುದೇ ಭೂಮಿಯನ್ನು ಕಿತ್ತುಕೊಂಡಿರುವ ಆಪಾದನೆಯನ್ನು ಮಾನ್ಯ ಸದಸ್ಯರು ಏನು ಮಾಡಿದ್ದಾರೆ, ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ಏಕೆಂದರೆ, ಒಟ್ಟಾರೆಯಾಗಿ ಇದುವರೆವಿಗೂ ಭೂಸ್ವಾಧೀನ ಮಾಡಿಕೊಂಡಿರುವುದರಲ್ಲಿ ಶೇಕಡ 100 ರಲ್ಲಿ less than one per cent ಮಾತ್ರ ನಾವು ಕೈಗಾರಿಕೆ ಸಲುವಾಗಿ ಉಪಯೋಗ ಮಾಡುತ್ತಿದ್ದೇವೆ. ಮೊದಲನೆ ಹಂತದಲ್ಲಿ ಇಲ್ಲಿಯವರೆಗೆ ಇರುವಂಥದ್ದು, ಒಂದು ಲಕ್ಷದ ಅರವತ್ತು ಸಾವಿರ ಎಕರೆ ಭೂಮಿ ಜೊತೆಗೆ ಇವೊತ್ತಿನ ದಿವಸ ಐವತ್ತು ಸಾವಿರ ಎಕರೆಯನ್ನು ಹೊಸದಾಗಿ ಭೂಸ್ವಾಧೀನ ಮಾಡುತ್ತಿದ್ದೇವೆ. ಅಂದರೆ, ಒಟ್ಟಾರೆಯಾಗಿ ಎರಡು ಲಕ್ಷದ ಹತ್ತು ಸಾವಿರ ಎಕರೆ ಭೂಮಿಯನ್ನು, ಅದರಲ್ಲಿಯೂ ಕೃಷಿಗೆ ಯೋಗ್ಯವಲ್ಲದ ಮತ್ತು ಕೈಗಾರಿಕೆಗೆ ಸೂಕ್ತವಾಗಿರುವಂತಹ ಗರಿಷ್ಠ ಒಣ ಭೂಮಿಯನ್ನು ಮಾತ್ರ ನಾವು ಭೂಸ್ವಾಧೀನ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ಇತ್ತೀಚೆಗೆ ನಡೆದಿರುವಂತಹ G.I.M. ನಲ್ಲಿ conversion ratio more than 75% ನಿಶ್ಚಿತವಾಗಿ ಆಗುತ್ತದೆ. ತಮಗೆಲ್ಲಾ ಗೊತ್ತಿರುವಂತೆ, ಯಾವುದೇ ಒಂದು ಯೋಜನೆ ಮಾಡಬೇಕಾದರೆ, depending on the project cost and size of the project, ಅದು ಒಂದು ವರ್ಷದಿಂದ ಐದು ಅಥವಾ ಏಳು ವರ್ಷದವರೆಗೆ ಆಗುತ್ತದೆ. ಉದಾಹರಣೆಗೆ, ಇವೊತ್ತಿನ ದಿವಸ ಒಂದು ಸ್ಟೀಲ್ ಪ್ಲಾಂಟ್ ಮಾಡಬೇಕಾದರೆ, ಮೂವತ್ತಾರು ಸಾವಿರ ಕೋಟಿ ರೂಪಾಯಿ ಯೋಜನೆ ಆಗಿರುತ್ತದೆ. ಅಂತಹ ಯೋಜನೆಯನ್ನು ಒಂದು ವರ್ಷದಲ್ಲಿಯೇ ಮಾಡಿ, ಉದ್ಯೋಗಾವಕಾಶ ಕೊಡುವುದಕ್ಕೆ ಆಗುವುದಿಲ್ಲ. ಅದೇ ರೀತಿ, green hydrogen ಎಂದು ಇದೆ. ಅದಕ್ಕಾಗಿ ಸುಮಾರು ಎರಡು ಲಕ್ಷ ಕೋಟಿ MoU ಗಳಿಗೆ ನಾವು ಸಹಿ ಮಾಡಿದ್ದೇವೆ. ಆ ಯೋಜನೆಗಳು ಅನುಷ್ಠಾನ ಆಗಬೇಕಾದರೆ ಕನಿಷ್ಠ ಐದು ವರ್ಷಗಳ ಅವಧಿ ಬೇಕು. ಒಂದು ವೇಳೆ ಸಣ್ಣ ಯೋಜನೆಗಳಾಗಿದ್ದರೆ, ಅವು ಒಂದು ಅಥವಾ ಎರಡು ವರ್ಷದಲ್ಲಿ ಅನುಷ್ಠಾನ ಆಗುತ್ತದೆ. ಆದರೆ, ದೊಡ್ಡ ಯೋಜನೆಗಳು ಕನಿಷ್ಠ ಐದು ವರ್ಷಗಳ ಅವಧಿ ಬೇಕಾಗುತ್ತದೆ. ನೂರಕ್ಕೆ ನೂರರಷ್ಟು ಅನುಷ್ಠಾನ ಆಗುತ್ತದೆ. ಬರುವಂತಹ ದಿವಸಗಳಲ್ಲಿ ಅಂದರೆ, ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ ಉದ್ಯೋಗಾವಕಾಶಗಳನ್ನು ಕೊಡುತ್ತೇವೆಂದು ಹೇಳಿದ್ದು, ಅದು ನಿಶ್ಚಿತವಾಗಿ ಆ ಸಮಯದಲ್ಲಿ ಬಂದೇ ಬರುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇನ್ನು ಮುಂದಿನ ಆರೇಳು ವರ್ಷಗಳಲ್ಲಿ ಉದ್ಯೋಗಾವಕಾಶಗಳನ್ನು ಕೊಡುವುದು ಸರಿ. ಆದರೆ, ಈ ಹಿಂದೆ ಒಡಂಬಡಿಕೆ ಮಾಡಿಕೊಂಡಿರುವ ಯೋಜನೆಗಳು ಏತಕ್ಕೆ ಇನ್ನು ಅನುಷ್ಠಾನ ಮಾಡಿರುವುದಿಲ್ಲ? ಎರಡನೆಯದಾಗಿ, Industrial Corridors ಎಂದು ಏನು ಮಾಡುತ್ತಾರೆ, ಅಲ್ಲಿಗೆ ಮೂಲಭೂತ ಸೌಕರ್ಯಗಳನ್ನೇ ಕೊಡುವುದಿಲ್ಲ. ಅಲ್ಲಿ Fire Station ಇರುವುದಿಲ್ಲ. ಈ ಬಗ್ಗೆ ನಾನು ಒಂದು ಉದಾಹರಣೆಯನ್ನು ಸಹ ಈ ಹಿಂದೆ ಕೊಟ್ಟಿದ್ದೆನು. ಬೆಂಗಳೂರು ಸಮೀಪದ ಹಾರೋಹಳ್ಳಿಯಲ್ಲಿ ಸುಮಾರು 40 ಕಾರ್ಖಾನೆಗಳು ಬೆಂಕಿಯಿಂದಾಗಿ ಸುಟ್ಟು ಹೋಗಿರುತ್ತವೆ. ಸರ್ಕಾರದಿಂದ ಕೈಗಾರಿಕೆಗಳನ್ನು ಮಾಡುವುದಕ್ಕೆ ಅಲ್ಲಿ ಸುಮಾರು ಹತ್ತು ಸಾವಿರ ಭೂಮಿಯನ್ನು ಕೊಟ್ಟಿದ್ದಾರೆ. ಅಲ್ಲಿ ಸುಮಾರು ಹತ್ತು ವರ್ಷಗಳಿಂದ ಅಲ್ಲಿ ಕೈಗಾರಿಕೆ ಪ್ರದೇಶ ಇದೆ. ಆದರೆ, ಅಲ್ಲಿ ಒಂದು Fire Station ಇರುವುದಿಲ್ಲ. ಅಗ್ನಿ ಅನಾಹುತಗಳು ಸಂಭವಿಸಿದಾಗ, ಅಲ್ಲಿಗೆ ಬೇರೆ ಕಡೆಯಿಂದ ಅಗ್ನಿ ನಂದಿಸುವ ವಾಹನಗಳು ಬರಬೇಕು. ಆ ವಾಹನಗಳು ಅಲ್ಲಿಗೆ ಬರುವಷ್ಟರಲ್ಲಿಯೇ ಸುಮಾರು ಕಾರ್ಖಾನೆಗಳು ಸುಟ್ಟು ಹೋಗಿರುತ್ತವೆ.

**ಶ್ರೀ ಮುರುಗೇಶ್ ಆರ್. ನಿರಾಣಿ:–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಹೊಸದಾಗಿ, S.I.R. bill ತೆಗೆದುಕೊಂಡು ಬರುತ್ತಿದ್ದೇವೆ. S.I.R. ಅಂದರೆ Special Investment Region ಎನ್ನುವಂತಹ ವಿಧೇಯಕವನ್ನು ಟೇಬಲ್ ಮಾಡಿದ್ದು, ಅದು ಇವೊತ್ತಿನ ದಿವಸ ಚರ್ಚೆಗೆ ಬರುತ್ತಿದೆ. ಇದುವರೆವಿಗೂ ನಾವು ಏನು ಮಾಡುತ್ತಿದ್ದೇವೆಂದರೆ, ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ, ಅವರು ಕೊಟ್ಟಿರುವಂತಹ ತೆರಿಗೆಯನ್ನು ಗ್ರಾಮ ಪಂಚಾಯಿತಿಯಿಂದ ಹಿಡಿದು ಮಹಾನಗರ ಪಾಲಿಕೆಯವರೆಗೆ ಅದನ್ನು ಅವರು ಉಪಯೋಗ ಮಾಡಿಕೊಳ್ಳುತ್ತಿದ್ದರು. ಅದರಿಂದ, ಅದು reinvestment ಕೈಗಾರಿಕೆಗಳಿಗೆ ಆಗುತ್ತಿರಲಿಲ್ಲ. ಅದರ ಸಲುವಾಗಿ ಇವೊತ್ತಿನ ದಿವಸ ಹೊಸ ಆಕ್ಟ್ ಅನ್ನು ತಿದ್ದುಪಡಿಗೆ ತಂದು, S.I.R. ದಲ್ಲಿ ವಸೂಲಿಯಾಗಿರುವಂತಹ ತೆರಿಗೆಯಲ್ಲಿ ಶೇಕಡ 30 ರಷ್ಟು ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ನೀಡುತ್ತಿದ್ದೇವೆ. ಇದರಿಂದಾಗಿ, ಒಳಚರಂಡಿ ವ್ಯವಸ್ಥೆ, ಬೀದಿ ದೀಪದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಅಥವಾ ರಸ್ತೆಗಳ ಸುಧಾರಣೆ ಇರಬಹುದು ಇಂತಹ ಕೆಲಸಗಳಿಗೆ ಉಪಯೋಗವಾಗುತ್ತಿದೆ. ಇನ್ನುಳಿದ ಶೇಕಡ 70 ರಷ್ಟು ತೆರಿಗೆ ಹಣದಲ್ಲಿ ಮೊದಲು ಏನು ಖರ್ಚು ಮಾಡುತ್ತಿದ್ದೆವು, ಅದರಲ್ಲಿಯೇ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ

ಮಾಡಿಕೊಡುತ್ತಿದ್ದೇವೆ. ಇನ್ನೊಂದು ವಿಚಾರವೇನೆಂದರೆ, ಎಲ್ಲಾದಕ್ಕೂ ನಾವು ಬೇರೆಯವರ ಮೇಲೆ ಅವಲಂಬಿತರಾಗಿದ್ದೆವು. ಈ ಹಿಂದೆ ಕೈಗಾರಿಕೆ ಪ್ರದೇಶ ಮಾಡುವುದಕ್ಕೆ ಟೌನ್ ಪ್ಲಾನಿಂಗ್‌ನಲ್ಲಿ ಅನುಮೋದನೆ ಪಡೆದ ನಂತರ, ಅದು ಬೇರೆ ಇಲಾಖೆಗೆ ಹೋಗಬೇಕಾಗಿತ್ತು. ಅದನ್ನು ಸಹ ಆಂತರಿಕವಾಗಿ ಅಭಿವೃದ್ಧಿ ಮಾಡುವುದರ ಸಲುವಾಗಿ ಹೊಸ ಆಕ್ಟ್ ತರುತ್ತಿದ್ದೇವೆ. ಇದು ಬರುವುದರಿಂದ ಇಡೀ ಕರ್ನಾಟಕ ರಾಜ್ಯಾದ್ಯಂತ ಶೇಕಡ 30 ರಷ್ಟು ವಸೂಲಿಯಾಗಿರುವಂತಹ ತೆರಿಗೆಯನ್ನು ಕೈಗಾರಿಕೆಗಳ ಅಭಿವೃದ್ಧಿಗೆ ಕೊಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಮತ್ತೊಂದು ವಿಷಯವೇನೆಂದರೆ, ಕೈಗಾರಿಕೆ ಪ್ರದೇಶಕ್ಕಾಗಿ ಭೂಸ್ವಾಧೀನ ಮಾಡಿಕೊಂಡ ಭೂಮಿಯಲ್ಲಿ ರಿಯಲ್ ಎಸ್ಟೇಟ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆದರೆ, ಇದನ್ನು ಮಾಡುತ್ತಿರುವುದು ಎಷ್ಟು ಒಳ್ಳೆಯದಿದೆ ಎಂದರೆ, ಭೂಸ್ವಾಧೀನ ಮಾಡಿಕೊಂಡ ಶೇಕಡ 100 ರಷ್ಟು ಭೂಮಿಯಲ್ಲಿ ಶೇಕಡ 15 ರಷ್ಟು ಭೂಮಿಯನ್ನು ಮಾತ್ರ ನಾವು ಅಲ್ಲಿ ಕೆಲಸ ಮಾಡುತ್ತಿರುವವರಿಗೆ 'Walk to Work' concept ನಲ್ಲಿ ಭೂಮಿಯನ್ನು ನೀಡುತ್ತಿದ್ದೇವೆ. ಉದಾಹರಣೆಗೆ, ಬೆಂಗಳೂರಿನಲ್ಲಿ ಕೈಗಾರಿಕೆ ಇರುವಂತಹವರು, ದೇವನಹಳ್ಳಿ ಅಥವಾ ಹೊಸಕೋಟೆಯಲ್ಲಿ ಇರುವಂತಹ ಕೈಗಾರಿಕೆಗಳಿಗೆ ಹೋಗುವುದಕ್ಕೆ ಒಂದು ತಾಸು ಮತ್ತು ಬರುವುದಕ್ಕೆ ಒಂದು ತಾಸು ಸಮಯ ಬೇಕಾಗುತ್ತದೆ. ಅದಕ್ಕೆ ಪೆಟ್ರೋಲ್/ಡೀಸೆಲ್ ನಷ್ಟವಾಗುತ್ತದೆ. ಟ್ರಾಫಿಕ್ ಸಮಸ್ಯೆಯಿಂದ ಅವರ ಸಮಯ ಸಹ ಹಾಳಾಗುತ್ತದೆ. ಒಂದು ವೇಳೆ ನಾವು ಕೈಗಾರಿಕಾ ಪ್ರದೇಶದಲ್ಲಿಯೇ ಶೇಕಡ 15 ರಷ್ಟು ಭೂಮಿಯನ್ನು ಕೊಟ್ಟರೆ, ಅಲ್ಲಿ ವಸತಿ ಸಮುಚ್ಚಯಗಳು, ವಾಣಿಜ್ಯ ಕಟ್ಟಡಗಳು, ಹೋಟೆಲ್, ಆಸ್ಪತ್ರೆ ಹಾಗೂ ಇತ್ಯಾದಿ ಸೌಕರ್ಯಗಳನ್ನು ಅಲ್ಲಿಯೇ ಕೊಟ್ಟರೆ, ಅವರು ಆ ಪ್ರದೇಶದಲ್ಲಿದ್ದುಕೊಂಡೇ ಕೆಲಸಕ್ಕೆ ಹೋಗಬಹುದು. ಅದರಂತೆ, ಶೇಕಡ 85 ರಷ್ಟು ಕೈಗಾರಿಕೆಗಳಿಗೆ ಮತ್ತು ಇನ್ನುಳಿದ ಶೇಕಡ 15 ರಷ್ಟು ಕಮರ್ಷಿಯಲ್‌ಗೆ ಮಾಡುವಂಥದ್ದನ್ನು ನಾವು ಮಾಡಿದ್ದೇವೆ. ಇದು ಬಹಳ ಪ್ರಶಂಶನೀಯವಾಗುತ್ತಿದೆ. ಏಕೆಂದರೆ, ಅವರು ಕೈಗಾರಿಕೆಗಳಿಗೆ ಹೋಗುವುದಕ್ಕೆ ತಮ್ಮ ವಾಹನವನ್ನು ಹೊರಗಡೆ ತೆಗೆಯುವ ಅವಶ್ಯಕತೆಯಿಲ್ಲ. ಮನೆಯಿಂದ ನಡೆದುಕೊಂಡು ಕೈಗಾರಿಕೆಗಳಿಗೆ ಹೋಗಿ ವಾಪಸ್ಸು ಬರಬಹುದು. ಇದರಿಂದಾಗಿ, ಬಹಳ ಉಳಿತಾಯವಾಗುತ್ತಿದೆ.

**ಪ್ರಶ್ನೆ ಸಂಖ್ಯೆ: 1016**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇಲ್ಲಿ ನನ್ನ ಮೂಲ ಪ್ರಶ್ನೆ ಏನೆಂದರೆ, ವಿಶೇಷವಾಗಿ ಬೆಂಗಳೂರು ಮಹಾನಗರದಲ್ಲಿ ಇರುವಂತಹ ಗಾರ್ಮೆಂಟ್ ಇಂಡಸ್ಟ್ರಿಗಳಲ್ಲಿ ಇವೊತ್ತಿನ ದಿವಸ ಸುಮಾರು ಲಕ್ಷಾಂತರ ಸಂಖ್ಯೆಯ ಜನರು ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಂದ ಒಂದು ರೀತಿಯಾಗಿ ವಲಸೆ ಕಾರ್ಮಿಕರಾಗಿ ಅಲ್ಲಿಗೆ ಬಂದು ಕೆಲಸ ಮಾಡುತ್ತಿದ್ದಾರೆ. ವಿಶೇಷವಾಗಿ ಹಳ್ಳಿಗಳಲ್ಲಿ ಯಾರಿಗೆ ಕೃಷಿ ಭೂಮಿ ಇರುವುದಿಲ್ಲ ಅಥವಾ ಕೆಳ/ಮಧ್ಯಮ ವರ್ಗದಲ್ಲಿರುವಂತಹವರು ಹೆಚ್ಚಿನದಾಗಿ ಈ ಗಾರ್ಮೆಂಟ್ ಇಂಡಸ್ಟ್ರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಹೊಸ ಜವಳಿ ಮತ್ತು ಸಿದ್ಧ ಉಡುಪಿನ ನೀತಿಯನ್ನು 2019ರಲ್ಲಿ ಜಾರಿಗೆ ತಂದಿದೆ ಎಂದು ತಿಳಿಸಿದ್ದಾರೆ. ಆದರೆ, ಮೇಲ್ನೋಟಕ್ಕೆ ಕಾಣುತ್ತಿರುವುದು ಏನೆಂದರೆ, Integrated Textile Park ಗಳನ್ನು ಸರ್ಕಾರ ಸುಮಾರು ಆರು ಜಿಲ್ಲೆಗಳಲ್ಲಿ ಸ್ಥಾಪನೆ ಮಾಡಿದೆ, ಅಲ್ಲಿ ಅದು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ. ಏಕೆಂದರೆ, ಸರ್ಕಾರ ತನ್ನ ಜವಾಬ್ದಾರಿಯನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ನಿರ್ವಹಿಸಿದ್ದರೂ ಸಹ, ಯಾರು ಈ ಜವಳಿ ಪಾರ್ಕ್‌ಗಳನ್ನು ನಿರ್ಮಾಣ ಮಾಡಿದ್ದಾರೆ, ಅವರು ಅದನ್ನು ಒಂದು ರೀತಿ ರಿಯಲ್ ಎಸ್ಟೇಟ್ ಪ್ರಾಜೆಕ್ಟ್ ರೀತಿ ಮಾಡುತ್ತಿದ್ದಾರೆ. ಏಕೆಂದರೆ, ಆ ಜವಳಿ ಪಾರ್ಕ್‌ಗಳು ಅಭಿವೃದ್ಧಿಯಾದ ನಂತರ, ಅದಕ್ಕೆ ಅವರು ಒಂದು ಬೆಲೆಯನ್ನು ನಿಗದಿಗೊಳಿಸುತ್ತಾರೆ. ಆ ಬೆಲೆಯನ್ನು ಕೊಟ್ಟವರು ಮಾತ್ರ ಅಲ್ಲಿ ಬಂದು ಕಾರ್ಖಾನೆಯನ್ನು ಸ್ಥಾಪನೆ ಮಾಡುವುದು ಆಗುತ್ತಿದೆ. ಇದರಿಂದಾಗಿ, ಯಾರಿಗೆ ತೊಂದರೆಯಾಗುತ್ತಿದೆ ಎಂದರೆ, ಎಲ್ಲಿ ಉದ್ಯೋಗ ಸಿಗಬೇಕಾಗಿತ್ತೋ, ಇವೊತ್ತಿನ ದಿವಸ ಅಲ್ಲಿಯ ಜನರಿಗೆ ಉದ್ಯೋಗ ಸಿಗುತ್ತಿಲ್ಲ. ವಿಶೇಷವಾಗಿ, ಇವೊತ್ತಿನ ದಿವಸ ಬದಲಾದ ವಾತಾವರಣ, ಬದಲಾದ ಪರಿಸ್ಥಿತಿಯಲ್ಲಿ ಚೈನಾ ಮತ್ತು ಪಾಕಿಸ್ತಾನ ದೇಶಗಳ ಇಡೀ ಪ್ರಪಂಚ ವಿಶ್ವಾಸ ಕಳೆದುಕೊಂಡಿದ್ದು, ಭಾರತ ದೇಶದ ಮೇಲೆ ಹೆಚ್ಚು ವಿಶ್ವಾಸ ಹೊಂದಿರುತ್ತದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಭಾರತ ಸಿದ್ಧ ಉಡುಪಿನ ರಫ್ತಿಗೆ ಭಾರತ ಒಂದು ದೊಡ್ಡ ಕೇಂದ್ರವಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ರೀತಿ ಸರ್ಕಾರ ಪ್ರತಿ ತಾಲ್ಲೂಕಿನಲ್ಲಿ ಕೋರ್ ತಾಲ್ಲೂಕು ಅಥವಾ ಕೋರ್ ಏರಿಯಾವನ್ನು ಗುರುತಿಸಿ, 15 ಎಕರೆ

ಎನ್ನುವಂತಹ ಕನಿಷ್ಠ ಕಂಡೀಷನ್ ಇಟ್ಟಿದ್ದಾರೆ, ಅದನ್ನು ಸ್ವಲ್ಪ ಸಡಿಲಗೊಳಿಸಿ, ಪ್ರತಿ ತಾಲ್ಲೂಕಿಗೆ ಅಥವಾ ಪ್ರತಿ ಜಿಲ್ಲೆಗೆ ಒಂದು thrust area ಎಂದು ಗುರುತಿಸಬೇಕು. ಯಾರೇ ಗಾರ್ಮೆಂಟ್ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡಬೇಕಾದರೆ, ಇಂಟಿಗ್ರೇಟೆಡ್ ಪಾರ್ಕ್‌ಗೆ ಸಿಗುತ್ತಿರುವಂತಹ ಸೌಲಭ್ಯವನ್ನು ಇವರಿಗೂ ಕೊಡಬೇಕೆಂಬ ವಿನಂತಿಯನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮಾಡುತ್ತೇನೆ.

**ಶ್ರೀ ಶಂಕರ ಬಿ. ಪಾಟೀಲ ಮುನೇನಕೊಪ್ಪ:–** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ ಮತ್ತು ದೇಶದಲ್ಲಿ ಜವಳಿ ಮತ್ತು ಸಿದ್ಧ ಉಡುಪಿನ ಮುಖಾಂತರ ನಮ್ಮ ಅನೇಕ ಟೆಕ್ಸ್‌ಟೈಲ್ ಪಾರ್ಕ್‌ಗಳನ್ನು ನಾವು ಪ್ರಾರಂಭ ಮಾಡತಕ್ಕಂಥದ್ದು ಆಗಿದೆ. ಜೊತೆಗೆ, ಅತಿ ಹೆಚ್ಚು ಜನರಿಗೆ ಉದ್ಯೋಗಾವಕಾಶ ಸಿಗುವಂಥದ್ದು, ನಮ್ಮ ಜವಳಿ ಇಲಾಖೆಯಲ್ಲಿ ಆಗುತ್ತದೆ. ಮಾನ್ಯ ಸದಸ್ಯರಾದಂತಹ ಶ್ರೀ ನವೀನ್ ಕೇಳುತ್ತಿರುವಂಥದ್ದು, ಟೆಕ್ಸ್‌ಟೈಲ್ ಪಾರ್ಕ್ ಮಾಡಿರುವಂಥದ್ದರಲ್ಲಿ ರಿಯಲ್ ಎಸ್ಟೇಟ್ ರೀತಿಯಲ್ಲಿ ಅವರ ಲಾಭಕ್ಕಾಗಿ ಮಾಡುತ್ತಿದ್ದಾರೆನ್ನುವುದನ್ನು ಸದನದ ಗಮನಕ್ಕೆ ತಂದಿದ್ದಾರೆ, ಅದನ್ನು ಸ್ವತಃ ನಾನೇ ಖುದ್ದು ಪರಿಶೀಲನೆ ಮಾಡಿ, ಅಲ್ಲಿ ಉದ್ಯೋಗಾವಕಾಶ ಕೊಡುವಂಥದ್ದರಲ್ಲಿ ವಿಳಂಬ ಮಾಡುವಂಥದ್ದು ಕಂಡುಬಂದರೆ, ಆ ಟೆಕ್ಸ್‌ಟೈಲ್ ಪಾರ್ಕ್ ವಿರುದ್ಧ ಕ್ರಮ ತೆಗೆದುಕೊಳ್ಳುವಂಥದ್ದನ್ನು ಸರ್ಕಾರ ಮಾಡುತ್ತದೆ. ಮಾನ್ಯ ಸದಸ್ಯರು ಕೇಳಿರುವುದೇನೆಂದರೆ, ಜವಳಿ ಪಾರ್ಕ್ ಇನ್ನು ಹೆಚ್ಚಿನ ರೀತಿಯಲ್ಲಿ ರಾಜ್ಯದಲ್ಲಿ ಆಗಬೇಕೆನ್ನುವುದಾಗಿದೆ. ಈಗಾಗಲೇ ಮೈಸೂರಿನಲ್ಲಿ ಸಿಲ್ಕ್ ಕ್ಲಸ್ಟರ್‌ಗಳನ್ನು ತೆಗೆದುಕೊಂಡು ಬಂದಿದ್ದೇವೆ ಮತ್ತು ಹಾವೇರಿ ಜಿಲ್ಲೆ, ಧಾರವಾಡ ಜಿಲ್ಲೆ, ರಾಯಚೂರು ಜಿಲ್ಲೆ ಮತ್ತು ಉಡುಪಿ ಜಿಲ್ಲೆ ಇರಬಹುದು ಅಲ್ಲಿ ಹೊಸ ಜವಳಿ ಪಾರ್ಕ್‌ಗಳನ್ನು ಮಾಡತಕ್ಕಂತಹ ಒಂದು ನಿರ್ಣಯವನ್ನು ನಾವು ಮಾಡಿದ್ದೇವೆ ಎನ್ನುವಂತಹ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೆ.ಎಸ್. ನವೀನ್:–** ಮಾನ್ಯ ಸಭಾಪತಿಯವರೇ, ಮತ್ತೊಂದು ಸಲಹೆ ಏನೆಂದರೆ, ಇದಕ್ಕೆ ಸಂಬಂಧಪಟ್ಟ ಹಾಗೆ ಟೆಕ್ಸ್‌ಟೈಲ್ ಪಾರ್ಕಿನ ಜೊತೆಗೆ ancillary ಯೂನಿಟ್‌ಗಳನ್ನು ಜಾಸ್ತಿ ಮಾಡಬೇಕಾಗುತ್ತದೆ.

(ಮುಂದು…)

(1197) 27.12.2022 12.20 YL-RN (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎಸ್.ನವೀನ್ (ಮುಂದು):-**

ಇದಕ್ಕೆ ಎಲ್ಲೆಲ್ಲಿ ಹೆಚ್ಚು ಗಮನ ಕೊಡಲಾಗುತ್ತದೆ ಅಂಥದ್ದಕ್ಕೆ ಮನೆಯಲ್ಲಿಯೇ ಮಾಡುವಂಥ ಯೋಜನೆಗಳಿಗೆ ಸರ್ಕಾರ ಒತ್ತು ನೀಡಿದರೆ, ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿರುವಂಥ ಬಹಳಷ್ಟು ಜನರಿಗೆ allied ಸಣ್ಣ ಕೈಗಾರಿಕೆಗಳನ್ನು ಮನೆಯಲ್ಲಿ ಮಾಡಲು ಅನುಕೂಲವಾಗುತ್ತದೆ ಎಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಶಂಕರ ಪಾಟೀಲ್ ಬಿ.ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಸರ್ಕಾರ ಗಮನಹರಿಸುತ್ತದೆ.

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆ ಮುಗಿಯಿತು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 27ನೇ ಡಿಸೆಂಬರ್ 2022 ಸಮೂಹ-2ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 122 ಪ್ರಶ್ನೆಗಳ ಪೈಕಿ 88 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ**

**ಸಚಿವರ ಹೇಳಿಕೆಗಳು**

**ಅ) ವಿಷಯ:- 2022-23ನೇ ಸಾಲಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕೌನ್ಸಿಲಿಂಗ್ ಸೀಟು ಹಂಚಿಕೆಯಾದ ನಂತರ ಉಳಿದ ಸೀಟುಗಳನ್ನು ಸರ್ಕಾರಿ ಕಾಲೇಜುಗಳ ಹಂತದಲ್ಲಿ ಭರ್ತಿ ಮಾಡಲು ಅವಕಾಶ ಕಲ್ಪಿಸುವ ಬಗ್ಗೆ.**

*****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಉನ್ನತ ಶಿಕ್ಷಣ, ಐ.ಟಿ. & ಬಿ.ಟಿ. ವಿಜ್ಞಾನ ತಂತ್ರಜ್ಞಾನ, ಕೌಶಾಲ್ಯಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ದಿನಾಂಕ: 20.12.2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಆ) ವಿಷಯ:- ಪೊಲೀಸ್ ಇಲಾಖೆಯ ನೌಕರರಿಗೆ ಹಾಗೂ ಅವರ ಅವಲಂಬಿತರಿಗೆ ಆರೋಗ್ಯ ಭಾಗ್ಯ ಯೋಜನೆ ಅಡಿ ಹೆಲ್ತ್ ಸ್ಮಾರ್ಟ್ ಕಾರ್ಡ್ ಕುರಿತು.**

*********

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಿ.ಎಸ್.ಅರುಣ್‌ರವರು ದಿನಾಂಕ: 21.12.2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಇ) ವಿಷಯ:- ಸರ್ಕಾರದಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ತಹಸೀಲ್ದಾರ್‌ಗಳಿಗೆ ಹಿಂದೂ ತಳವಾರರಿಗೆ ಪರಿಶಿಷ್ಟ ಪಂಗಡದ ಪ್ರಮಾಣ ನೀಡಲು ಸೂಕ್ತ ಆದೇಶ ನೀಡುವ ಕುರಿತು.**

*****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ತಳವಾರ್ ಸಾಬಣ್ಣರವರು ದಿನಾಂಕ: 22.12.2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**ಈ) ವಿಷಯ:- ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಕುರಿತು.**

*****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಸಾರಿಗೆ ಹಾಗೂ ಪರಿಶಿಷ್ಟ ವರ್ಗಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜು ಮತ್ತು ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್‌ರವರು ದಿನಾಂಕ: 23.12.2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:- ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಾತನೂರ ಹೋಬಳಿಯ ಹಲಸಿನಮರದದೊಡ್ಡಿ ಗ್ರಾಮದಲ್ಲಿ ನಡೆದಿರುವ ನರೇಗಾ ಕಾಮಗಾರಿ ಮಾಹಿತಿ ಪಡೆದ ಗ್ರಾಮದ ನಿವಾಸಿ ಶ್ರೀ ಮೂರ್ತಿ ಎಂಬ ಯುವಕನನ್ನು ಹತ್ಯೆಗೈದಿರುವ ಕುರಿತು.**

*****

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನರೇಗಾ ಕಾಮಗಾರಿ ಅವ್ಯವಹಾರದ ಕುರಿತು ಪ್ರಶ್ನಿಸಿದ್ದಕ್ಕೆ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಾತನೂರ ಹೋಬಳಿಯ ಹಲಸಿನಮರದದೊಡ್ಡಿ ಗ್ರಾಮದ ಶ್ರೀ ಮೂರ್ತಿ ಎಂಬ ಯುವಕನ ಮೇಲೆ ದಿನಾಂಕ: 23.12.2022 ರಂದು ಶುಕ್ರವಾರದಂದು ಕೆಲ ದುಷ್ಕರ್ಮಿಗಳು ಅವರ ಮೇಲೆ ದಾಳಿ ಮಾಡಿ ಹತ್ಯೆ ಮಾಡಲಾಗಿದ್ದು, ಹಲಸಿನಮರದದೊಡ್ಡಿ ಗ್ರಾಮದಲ್ಲಿ ನಡೆದಿರುವ ನರೇಗಾ ಕಾಮಗಾರಿಗಳ ವಿವರವನ್ನು ಮಾಹಿತಿ ಹಕ್ಕು ಕಾಯ್ದೆ ಅಡಿ ಅವರು ಪಡೆದುಕೊಂಡಿದ್ದರು. ಈ ಕಾಮಗಾರಿಗಳಲ್ಲಿ ಅಕ್ರಮ, ಅವ್ಯವಹಾರ ನಡೆದಿರುವ ಕುರಿತು ನರೇಗಾ ಓಂಬಡ್ಸ್‌ಮನ್‌ಗೆ ಕೂಡ ಇವರು ದೂರು ಸಲ್ಲಿಸಿದ್ದರು ಎಂಬ ಮಾಹಿತಿ ಇದೆ.

ಈ ನರೇಗಾ ಕಾಮಗಾರಿಗಳಲ್ಲಿ ಅಕ್ರಮ ನಡೆಸಿದ್ದವರ ತಂಡಗಳು ಈ ಹಿಂದೆ ಮೂರ್ತಿ ಎಂಬ ಯುವಕನ ಮೇಲೆ 2-3 ಬಾರಿ ಹಲ್ಲೆ ನಡೆಸಿದ್ದರು ಎಂಬ ಮಾಹಿತಿ ಇದೆ. ರಾಜಕೀಯ ಹಳೆ ವೈಷಮ್ಯದಿಂದಲೇ ಅವರ ಹತ್ಯೆ ನಡೆದಿದೆ. ರಾಜ್ಯ ಸರ್ಕಾರವು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಹತ್ಯೆಗೈದ ದುಷ್ಕರ್ಮಿಗಳನ್ನು ಕೂಡಲೇ ಪತ್ತೆ ಮಾಡಿ, ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಹಾಗೂ ಈ ಪ್ರಕರಣವನ್ನು ಸಿ.ಒ.ಡಿ. ತನಿಖೆಗೆ ವಹಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

**ಆ) ವಿಷಯ:– ಸಹಕಾರ ಬ್ಯಾಂಕುಗಳಿಂದ ಶೂನ್ಯ ಬಡ್ಡಿ ದರದಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವಾಗ ರೈತರಿಂದ ಅನಾವಶ್ಯಕ ದಾಖಲೆ ಪಡೆಯುವುದನ್ನು ತಡೆಗಟ್ಟುವ ಕುರಿತು.**

*****

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ರಾಜ್ಯದ ರೈತರಿಗೆ ಘನ ಸರ್ಕಾರವು ಸಹಕಾರ ಬ್ಯಾಂಕುಗಳಿಂದ ಶೂನ್ಯ ಬಡ್ಡಿ ದರದಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಅನುಕೂಲವಾಗಲು ಸಾಲ ಸೌಲಭ್ಯವನ್ನು ಕಲ್ಪಿಸಿರುತ್ತದೆ. ಇದರಿಂದ ರೈತಾಪಿ ವರ್ಗದ ಜನರಿಗೆ ತುಂಬಾ ಸಹಾಯಕಾರಿ ಆಗಿದ್ದು, ಇದೊಂದು ಶ್ಲಾಘನೀಯ ವಿಷಯ ಆಗಿರುತ್ತದೆ.

ಆದರೆ, ಸದರಿ ಬ್ಯಾಂಕುಗಳು ರೈತರ ಜಮೀನುಗಳನ್ನು ಅಡವಿಟ್ಟುಕೊಂಡು ನೀಡುವ ಬೆಳೆ ಸಾಲ ಅಥವಾ ಕೃಷಿ ಸಾಲಕ್ಕೆ ಒಂದೇ ಜಮೀನಿಗೆ ಸಂಬಂಧಪಟ್ಟ ಸುಮಾರು 20 ರಿಂದ 25 ದಾಖಲಾತಿಗಳನ್ನು ನೀಡುವಂತೆ ರೈತರಿಗೆ ತಿಳಿಸುತ್ತಿದ್ದು, ಸದರಿ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯುವಲ್ಲಿ ರಾಜ್ಯದ ರೈತಾಪಿ ವರ್ಗವು ಹೈರಾಣಾಗುತ್ತಿದ್ದು, ಕೃಷಿ ಸಾಲ ಎಂಬುದು ರೈತರಿಗೆ ಜಟಿಲ ವರ್ತುಲದಂತೆ ಭಾಸವಾಗುತ್ತಿದೆ. ಇದರ ಪರಿಣಾಮವಾಗಿ ರೈತರು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲವನ್ನು ಪಡೆಯಲು ಹಿಂದೇಟು ಹಾಕುತ್ತಿದ್ದು, ಅವರ ತುರ್ತು ಅಗತ್ಯಗಳಿಗಾಗಿ ಖಾಸಗಿ ಸಾಲಗಾರರು, ಲೇವಾದೇವಿಗಾರರು, ಚಿನ್ನಾಭರಣ ಗಿರವಿ ಅಂಗಡಿಯವರಿಂದ ಮತ್ತು ಇತ್ಯಾದಿ ಮಾರ್ಗಗಳಿಂದ ಹೆಚ್ಚಿನ ಬಡ್ಡಿ ದರಕ್ಕೆ ಸಾಲವನ್ನು ಪಡೆಯುತ್ತಿರುವುದು ಸಾಮಾನ್ಯವಾಗಿರುತ್ತದೆ ಎಂದು ವಿಶ್ವವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಒಂದೇ ಜಮೀನಿಗೆ ಸಂಬಂಧಪಟ್ಟಂತೆ ಭೂ ಹಿಡುವಳಿ ಪ್ರಮಾಣ ಪತ್ರ, ಗೇಣಿ ರಹಿತ ಪ್ರಮಾಣ ಪತ್ರ, ಮೌಲ್ಯಮಾಪನ ಪ್ರಮಾಣ ಪತ್ರ, ಕೈಬರಹ ಪಹಣಿಗಳು, 20 ವರ್ಷಗಳ ಹಿಂದಿನ ಇ.ಸಿ.ಎಸ್ಟಿಮೇಟ್ ಪ್ರತಿ, ಲೀಗಲ್ ಒಪಿನಿಯನ್, ವಂಶವೃಕ್ಷ ಪ್ರಮಾಣ ಪತ್ರ, ಬೇಬಾಕಿ ಪ್ರಮಾಣ

ಪತ್ರಗಳು ಹಾಗೂ ಇನ್ನಿತರ 10 ರಿಂದ 25 ದಾಖಲೆಗಳನ್ನು ಬ್ಯಾಂಕಿನವರು ಪಡೆದು, ಪ್ರತಿ ಎಕರೆ ಜಮೀನಿಗೆ 20 ಸಾವಿರ ರೂಪಾಯಿಗಳನ್ನು ರೈತರಿಗೆ ಬೆಳೆ ಸಾಲ ಅಥವಾ ಕೃಷಿ ಸಾಲದ ರೂಪದಲ್ಲಿ ನೀಡುತ್ತಿದ್ದಾರೆ.

ಮೇಲೆ ತಿಳಿಸಲಾದ ದಾಖಲೆಗಳನ್ನು ರೈತರು ಇಲಾಖೆಗಳಿಂದ ಅರ್ಜಿ ಸಲ್ಲಿಸಿ ಪಡೆಯುವುದಕ್ಕೆ ಸರಿಸುಮಾರು 45 ದಿನಗಳವರೆಗೆ ಕಾಯಬೇಕಾಗುತ್ತದೆ. ಆದ್ದರಿಂದ ರೈತರಿಗೆ ಕೃಷಿ ಸಾಲ ಎನ್ನುವುದು ವರ್ತುಲದೊಳಗೆ ಸಿಲುಕಿಕೊಂಡು ಉಸಿರುಗಟ್ಟುವ ವಾತಾವರಣವಾಗಿದೆ.

ರೈತರ ಜಮೀನುಗಳನ್ನು ಅಡವಿಟ್ಟುಕೊಂಡು ಬ್ಯಾಂಕುಗಳು ಕೃಷಿ ಸಾಲ ನೀಡಲು ರೈತರಿಂದ ಪಡೆಯುತ್ತಿರುವ ದಾಖಲೆಗಳನ್ನು ಕಡಿಮೆ ಮಾಡಿ, ರೈತರಿಗೆ ಕೃಷಿ ಸಾಲ ನೀಡಿಕೆಯಲ್ಲಿ ಸರಳೀಕರಣವನ್ನು ಅನುಸರಿಸಬೇಕು. ಒಂದೇ ಜಮೀನಿಗೆ ಅಷ್ಟೊಂದು ದಾಖಲೆಗಳು ಅನವಶ್ಯಕ. ಇಷ್ಟೆಲ್ಲಾ ಕಾರಣಗಳಿಂದ ರೈತರು ಬ್ಯಾಂಕಿನತ್ತ ಮುಖ ಮಾಡದೇ ಖಾಸಗಿ ಲೇವಾದೇವಿಗಳಿಂದ ಚಕ್ರ ಬಡ್ಡಿಗೆ ಸಾಲವನ್ನು ಪಡೆದು ಅದನ್ನು ತೀರಿಸಲಾಗದೆ ಸಾಲದ ಸುಳಿಯಲ್ಲಿ ಸಿಲುಕಿ ಎಲ್ಲವನ್ನೂ ಕಳೆದುಕೊಳ್ಳುವ ಹಂತಕ್ಕೆ ತಲುಪಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರವು ಸೂಕ್ತ ಕ್ರಮಕೈಗೊಂಡು ರೈತಾಪಿ ವರ್ಗದವರಿಗೆ ದೊರೆಯುವ ಸಾಲ ಸೌಲಭ್ಯದಲ್ಲಿ ಸಲ್ಲಿಸುವ ದಾಖಲೆಗಳನ್ನು ಕಡಿಮೆಗೊಳಿಸಬೇಕೆಂದು ಅಥವಾ ರೈತರಿಂದ ಅನಾವಶ್ಯಕ ದಾಖಲೆ ಪಡೆಯುವುದನ್ನು ತಡೆಗಟ್ಟಿ ರಾಜ್ಯದ ರೈತಾಪಿ ವರ್ಗದವರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಂದಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಸಂಬಂಧಿಸಿದಂತೆ, ಸುಮಾರು ಇಪ್ಪತ್ನಾಲ್ಕು ಸಾವಿರ ಕೋಟಿ ಮೂವತ್ಮೂರು ಲಕ್ಷ ರೈತರಿಗೆ ಈ ವರ್ಷ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ವಿಶೇಷವಾಗಿ ಮೂವತ್ಮೂರು ಲಕ್ಷ ರೂಪಾಯಿಯಲ್ಲಿ ಮೂರು ಲಕ್ಷ ಹೊಸ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ನೀಡಬೇಕೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಇಂತಹ ಸಮಸ್ಯೆಗಳು ಉದ್ಭವಿಸುತ್ತದೆ ಎಂಬ ಉದ್ದೇಶದಿಂದ FRUITS Portal ಎನ್ನುವಂತಹ ಒಂದು ಹೊಸ System App ಮಾಡಿ, ಸುಮಾರು 21 ಡಿ.ಸಿ.ಸಿ. ಬ್ಯಾಂಕುಗಳು ಅದರ ಮುಖಾಂತರ ನೋಂದಣಿ,

ಇನ್ನಿತರೆ ಕೆಲಸವನ್ನು ಮಾಡುವಂಥ ವ್ಯವಸ್ಥೆ ಮಾಡಿದ್ದೇವೆ. ಎಲ್ಲಿಯೂ ಸಹ ಸಮಸ್ಯೆ ಉದ್ಭವಿಸುತ್ತಿಲ್ಲ. ಎಲ್ಲಿಯಾದರೂ ದೂರು ಕಂಡು ಬಂದಲ್ಲಿ ಸಂಬಂಧಪಟ್ಟಂತಹ Joint Registrar ರವರು 4 ಡಿವಿಜನ್ನಲ್ಲಿಯೂ ನಾಲ್ಕು Joint Registrar ರವರು ಇರುತ್ತಾರೆ. ಆ 21 ಡಿ.ಸಿ.ಸಿ. ಬ್ಯಾಂಕ್ ವಿಚಾರಣೆ ಮಾಡುವುದು, ಸಮಸ್ಯೆ ಏನಾದರೂ ಇದ್ದರೆ ಬಗೆಹರಿಸುವಂಥ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಕೆಲವು ಕಡೆ ವಾಸ ಇದ್ದು, ಅವರ ಜಮೀನು ಬೇರೆ ಬೇರೆ ಗ್ರಾಮಾಂತರ ಪ್ರದೇಶದಲ್ಲಿರುತ್ತದೆ. ಆಧಾರ್ ಕಾರ್ಡ್ ಇರಬೇಕೆಂದು ಕಡ್ಡಾಯವಾಗಿ ಮಾಡಿದ್ದರೂ ಕೂಡಾ ಆಧಾರ್ ಕಾರ್ಡ್‌ನಲ್ಲಿ ಬೆಂಗಳೂರಿನ ವಿಳಾಸವಿದ್ದರೂ ಅವರ ಜಮೀನು ಒಂದು ಬ್ಯಾಂಕಿನ ವ್ಯಾಪ್ತಿಯಲ್ಲಿದ್ದರೆ ಅವರಿಗೆ ಸಹ ಸಾಲ ನೀಡಬೇಕೆಂದು modify ಮಾಡಿದ್ದೇವೆ. ಆಖಿತವಾಗಿ ಯಾವುದಾದರೂ ಏರಿಯಾಗೆ ಸಂಬಂಧಪಟ್ಟವರಿಗೆ ಯಾವುದಾದರೂ ಬ್ಯಾಂಕಿನಲ್ಲಿ ಸಮಸ್ಯೆ ಇದ್ದು, ದೂರು ಕಂಡು ಬಂದರೆ 100 ಪರ್ಸೆಂಟ್ ನಿವಾರಣೆ ಮಾಡಿ, ಸುಮಾರು ಇಪ್ಪತ್ನಾಲ್ಕು ಸಾವಿರ ಕೋಟಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ರೈತರಿಗೆ ಸಾಲ ನೀಡುವಂಥ ವ್ಯವಸ್ಥೆ ಮಾಡಿದ್ದೇವೆ. ಇದುವರೆವಿಗೂ ನಮ್ಮ ಇಲಾಖೆಗೆ ಈ ರೀತಿಯಾಗಿ ಯಾವುದೇ ದೂರು ಬಂದಿಲ್ಲ. ಮಾನ್ಯ ಸದಸ್ಯರಿಗೆ ಏನಾದರೂ ಆಖಿತ ಮಾಹಿತಿ ಇದ್ದರೆ, ಅದನ್ನು ನಮಗೆ ನೀಡಿದರೆ ತಕ್ಷಣವೇ ಸರಿಪಡಿಸುವಂಥ ಕೆಲಸ ಮಾಡುತ್ತೇವೆ.

**ಇ) ವಿಷಯ:- ಬೆಳಗಾವಿ ನಗರದ ಕೇಂದ್ರ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಉದ್ಘಾಟನೆಗೊಳ್ಳುತ್ತಿರುವ ಕುರಿತು.**

*****

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮೂರು ರಾಜ್ಯಗಳಗೆ ಸಾರಿಗೆ ಸಂಪರ್ಕ ಕೇಂದ್ರ ಸ್ಥಾನವಾಗಿರುವ ಬೆಳಗಾವಿ ನಗರದ ಕೇಂದ್ರ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಇಂದು ಉದ್ಘಾಟನೆಗೊಳ್ಳುತ್ತಿರುವ ಬಗ್ಗೆ "ಅಪೂರ್ಣ ಬಸ್ ನಿಲ್ದಾಣ ಉದ್ಘಾಟನೆ ನಾಳೆ" ಎನ್ನುವ ಶಿರೋನಾಮೆಯಡಿ ನಿನ್ನೆ ದಿನಾಂಕ: 26.12.2022 ರ ವಿಜಯವಾಣಿ ಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಬೆಳಗಾವಿ ನಗರದ ಹೃದಯ ಭಾಗದಲ್ಲಿನ ಸುಮಾರು 9 ಎಕರೆ ವಿಶಾಲ ಪ್ರದೇಶದಲ್ಲಿ 2016ರ ಡಿಸೆಂಬರ್‌ನಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಂದ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಅಲ್ಲದೇ 2018ರ ಫೆಬ್ರವರಿ ಹೊತ್ತಿಗೆ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸುವಂತೆ ಸರ್ಕಾರ ಸೂಚನೆ ನೀಡಿತ್ತು. ಆದರೆ 2022 ಪೂರ್ಣಗೊಳ್ಳುತ್ತಿದ್ದರೂ ಕಳೆದ 6 ವರ್ಷಗಳಿಂದ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದ್ದು, ಕಾಮಗಾರಿ ಅರ್ಧದಷ್ಟು ಪೂರ್ಣಗೊಂಡಿರದಿದ್ದರೂ ತರಾತುರಿಯಲ್ಲಿ ಉದ್ಘಾಟನೆ ದಿನಾಂಕ ಘೋಷಿಸಿರುವುದು ಆಶ್ಚರ್ಯವಾಗಿರುತ್ತದೆ.

ಈಗಾಗಲೇ ಗುತ್ತಿಗೆ ಕಾಲಾವಧಿ ಮುಗಿದು ಬರೋಬ್ಬರಿ 4 ವರ್ಷಗಳು ಕಳೆದಿದ್ದರೂ ಅಂದಾಜು 40 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಕೇಂದ್ರ ಬಸ್ ನಿಲ್ದಾಣ ಕಾಮಗಾರಿ ಮಾತ್ರ ಪೂರ್ಣಗೊಂಡಿಲ್ಲ. ಬಸ್ ನಿಲ್ದಾಣದಲ್ಲಿ ವಿಶ್ರಾಂತಿ ಗೃಹ, ನೀರು, ಶೌಚಾಗೃಹ, ಪಾರ್ಕಿಂಗ್, ವಿದ್ಯುತ್, ನಾಮಫಲಕ ಸೌಲಭ್ಯಗಳಿಲ್ಲದಿರುವುದರಿಂದ ಮೂರು ರಾಜ್ಯಗಳಿಗೆ ಸಂಚರಿಸುವ ಬಸ್ ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿರುತ್ತದೆ.

ರಾಜ್ಯದಲ್ಲಿ ಬೆಂಗಳೂರು ಮಹಾನಗರ ಹೊರತುಪಡಿಸಿದರೆ ನೆರೆಯ ಗೋವಾ, ಮಹಾರಾಷ್ಟ್ರಗಳೊಂದಿಗೆ ಬೆಳಗಾವಿ ನಗರ ಸಾರಿಗೆಯು ಅತಿ ಹೆಚ್ಚು ಸಂಪರ್ಕ ಹೊಂದಿದೆ. ದಿನನಿತ್ಯ 500 ರಿಂದ 800 ಬಸ್‌ಗಳು ಬಂದು ಹೋಗುತ್ತಿದ್ದು, 1 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಈ ನಿಲ್ದಾಣವನ್ನು ಅವಲಂಬಿಸಿದ್ದಾರೆ. ಲಕ್ಷ ಲಕ್ಷ ಆದಾಯವಿದ್ದರೂ ಆದಾಯದಲ್ಲಿ ಮಾತ್ರ ಆರ್ಥಿಕ ನಷ್ಟ ಎಂದು ಬಿಂಬಿಸಲಾಗುತ್ತಿದೆ.

ಆದಕಾರಣ, ನಮ್ಮ ಸರ್ಕಾರದ ಅವಧಿಯಲ್ಲಿ ಶಂಕು ಸ್ಥಾಪನೆ ನೆರವೇರಿಸಿ ಪ್ರಾರಂಭಗೊಂಡ ಬೆಳಗಾವಿ ಕೇಂದ್ರ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗೆ ವೇಗ ನೀಡಿ ಬಸ್ ಪ್ರಯಾಣಿಕರಿಗೆ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದ ತರುವಾಯವೇ ಲೋಕಾರ್ಪಣೆಗೊಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(1198) 27.12.2022/12.30/ಎಸ್‌ಕೆ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಈ) ವಿಷಯ: 2015ರಲ್ಲಿ ನೇಮಕವಾದ ಶ್ರೀ ಕಾಂತರಾಜುರವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಿದ್ದರೂ ಇಲ್ಲಿ-ಯವರೆಗೆ ವರದಿಯ ಬಗ್ಗೆ ಸರ್ಕಾರ ಕ್ರಮವಹಿಸದೇ ಇರುವುದರ ಕುರಿತು**.

-----

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶಿಕ್ಷಣ ಹಾಗೂ ಉದ್ಯೋಗದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುವ ಘನ ಉದ್ದೇಶವನ್ನು ವೈಜ್ಞಾನಿಕವಾಗಿ ಜಾರಿಗೆ ತರಲು ಅನುಕೂಲವಾಗುವಂತೆ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ (ಜಾತಿವಾರು) ನಡೆಸಲು 2015ರಲ್ಲಿ ಶ್ರೀ ಕಾಂತರಾಜುರವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಲಾಯಿತು. ಸುಮಾರು 160 ಕೋಟಿ ವೆಚ್ಚದಲ್ಲಿ ಭಾರತದಲ್ಲೇ ಪ್ರಥಮ ಬಾರಿಗೆ ಸಮೀಕ್ಷೆ ನಡೆಸಲಾಗಿರುತ್ತದೆ. ಸಮೀಕ್ಷೆ ಪೂರ್ಣಗೊಳಿಸಿ, ವರದಿಯನ್ನು ಒಪ್ಪಿಸಲು ಸರ್ಕಾರಕ್ಕೆ ಸಮಯ ಕೋರಿ ಪತ್ರ ಬರೆದರೂ, ಸರ್ಕಾರ ವರದಿ ಸಲ್ಲಿಸಲು ಅವಕಾಶ ನೀಡಲಿಲ್ಲ. ಆಯೋಗದ ಅವಧಿ ಪೂರ್ಣಗೊಂಡಿದೆ ಎಂದು ಸರ್ಕಾರ ಆಯೋಗದ ಅಧ್ಯಕ್ಷರಿಗೆ ಪತ್ರದ ಮೂಲಕ ತಿಳಿಸಿದ ದಿನಾಂಕದಂದೇ ಶ್ರೀ ಕಾಂತರಾಜುರವರು ಹಾಗೂ ಆಯೋಗದ ಇತರೆ ಸದಸ್ಯರುಗಳು ವರದಿಗೆ ಸಹಿ ಮಾಡಿ, ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಿ, ಸಮಿತಿಯ ಸದಸ್ಯ ಕಾರ್ಯದರ್ಶಿಯವರ ವಶಕ್ಕೆ ಸೆಪ್ಟೆಂಬರ್-2019ರಲ್ಲಿ ವರದಿಯನ್ನು ಒಪ್ಪಿಸಲಾಯಿತು.

2019ರಿಂದ ಇದುವರೆಗಿನ ಎಲ್ಲಾ ಸರ್ಕಾರಗಳು ಸದರಿ ವರದಿಯನ್ನು ಪರಿಶೀಲಿಸದೇ ಇರುವುದು ದುರ್ದೈವದ ಸಂಗತಿ. ದೀರ್ಘಕಾಲದಿಂದ ಬಹಳಷ್ಟು ವರ್ಗಗಳ ನೊಂದ ಜನತೆ ಸೂಕ್ತವಾದ ಮೀಸಲಾತಿಗಾಗಿ ಚಳುವಳಿಗಳ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಸರ್ಕಾರ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿಯಿಂದ ವಂಚಿತರಾಗಿರುವ, ಹಿಂದುಳಿದ ವರ್ಗಗಳ ಹಿತ ಕಾಯುವ ಸರ್ಕಾರಗಳು 2019 ರಿಂದ ಇದುವರೆವಿಗೂ ಶ್ರೀ ಕಾಂತರಾಜುರವರ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳದೇ ಇರುವುದು ಸರ್ಕಾರದ ನೈತಿಕತೆ ಬಗ್ಗೆ

ಸಾರ್ವಜನಿಕರಿಗೆ ಸಂಶಯ ಉಂಟಾಗಿದೆ. ಈ ವರದಿಯ ಸಾಧಕ–ಬಾಧಕಗಳ ಬಗ್ಗೆ ಸರ್ಕಾರ ಚರ್ಚೆ ಮಾಡಿ, ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಮಾರ್ಪಡಿಸುವ ಸಂಪೂರ್ಣ ಅಧಿಕಾರ ಸರ್ಕಾರಕ್ಕಿದೆ. ಆದರೂ ಇಲ್ಲಿಯವರೆವಿಗೂ ವರದಿಯನ್ನು ಸರ್ಕಾರ ಪರಿಶೀಲನೆ ಮಾಡದೇ ಇರುವುದು ಶೋಚನೀಯ ಸಂಗತಿ.

ಆದಕಾರಣ, ಸದರಿ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಎರಡೂ ಸದನಗಳಲ್ಲಿ ಮಂಡಿಸಿ, ಸರ್ಕಾರ ನೈತಿಕತೆಯ ಜವಾಬ್ದಾರಿಯನ್ನು ವ್ಯಕ್ತಪಡಿಸಿ, ನೊಂದ ವರ್ಗಗಳಿಗೆ ಸೂಕ್ತ ಮೀಸಲಾತಿ ಸೌಲಭ್ಯ ಕಲ್ಪಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಶ್ನೆಗೆ 2015 ರಲ್ಲಿ ಶ್ರೀ ಕಾಂತರಾಜುರವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಲಾಗಿದೆ. ಸುಮಾರು 160 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಸದಸ್ಯ ಕಾರ್ಯದರ್ಶಿಯವರಿಗೆ ಇದನ್ನು ಒಪ್ಪಿಸಲಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಕೆ.ಪಿ. ನಂಜುಂಡಿಯವರು ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಚರ್ಚೆ ಮಾಡಿದ ನಂತರ ಅಂತಿಮ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

**ಉ) ವಿಷಯ: ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿರುವ ಪಿ.ಜಿ., ಒನಕೆ ಓಬವ್ವ ಇಂದ್ರಾಣಿದೇವಿ ರಮಾಬಾಯಿ ಅಂಬೇಡ್ಕರ್ ಹಾಸ್ಟೆಲ್‌ನಲ್ಲಿ ಪೂರೈಸಲಾದ ಆಹಾರದ ಗುಣಮಟ್ಟ ಕುರಿತು.**

-----

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ರಾಜ್ಯದ ಹಾಸ್ಟೆಲ್‌ಗಳಿಗೆ ಪೂರೈಕೆಯಾಗುತ್ತಿರುವ ಆಹಾರ ಧಾನ್ಯಗಳು ಕಳಪೆಮಟ್ಟದದ್ದಾರಿಂದ, ಇದನ್ನು ಸೇವಿಸಿದ, ವಿದ್ಯಾರ್ಥಿಗಳ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೀರುತ್ತಿರುವ ವಿಚಾರವನ್ನು ಸದನದಲ್ಲಿ ಶೂನ್ಯವೇಳೆಯಲ್ಲಿ ಅಡಿಯಲ್ಲಿ ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿರುವ ಪಿ.ಜಿ., ಒನಕೆ ಓಬವ್ವ, ಇಂದ್ರಾಣಿದೇವಿ, ರಮಾಬಾಯಿ ಅಂಬೇಡ್ಕರ್ ಎಂಬ ಹೆಸರಿನ ನಾಲ್ಕು ಹಾಸ್ಟೆಲ್‌ಗಳಲ್ಲಿ 1000ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿದ್ದಾರೆ. ಒಂದೇ ಅಡುಗೆ ಮನೆಯಲ್ಲಿ ಕಾಲಿಡಲಾಗದಷ್ಟೂ ಗಲೀಜಾಗಿದ್ದು, ಈ ಸ್ಥಳದಲ್ಲಿ ಎಲ್ಲಂದರಲ್ಲಿ ಆಹಾರ ಧಾನ್ಯಗಳು ಹಾಗೂ ತರಕಾರಿ ಮೂಟೆಗಳನ್ನು ತುಂಬಿರುವುದರಿಂದ, ಅಕ್ಕಿ ಮತ್ತು ಬೇಳೆಗಳಿಗೆ ಹುಳ ಹತ್ತಿಕೊಂಡು, ತರಕಾರಿಗಳು ಕೊಳೆತು ಹೋಗಿರುವ ಪದಾರ್ಥಗಳಿಂದ ಅಡುಗೆ ಗುತ್ತಿಗೆದಾರರು ಸಿದ್ಧಪಡಿಸಿದ ಆಹಾರವನ್ನು ಈ ನಾಲ್ಕೂ ಹಾಸ್ಟೆಲ್‌ಗಳಿಗೆ ಪೂರೈಕೆಯಾಗಿರುತ್ತದೆ. ಮಹಿಳಾ ವಿಶ್ವವಿದ್ಯಾಲಯದಲ್ಲಿರುವ ಹಾಸ್ಟೆಲ್‌ನಲ್ಲಿ ಕೊಳೆತ ತರಕಾರಿ ಮತ್ತು ಹುಳುಗಳಿರುವ ಕಳಪೆ ಮಟ್ಟದ ಆಹಾರ ಧಾನ್ಯಗಳಿಂದ ತಯಾರದ ಊಟವನ್ನು ವಿದ್ಯಾರ್ಥಿನಿಯರು ಹಣವನ್ನು ಪಾವತಿಸಿ ಸೇವಿಸುವ ಪರಿಸ್ಥಿತಿ ಎದುರಾಗಿದೆ. ಇದರ ಬಗ್ಗೆ ದೂರ ನೀಡಿದರೂ ವಿದ್ಯಾರ್ಥಿನಿಯರಿಗೆ ಧಮಕಿ ಹಾಕುತ್ತಾರೆ ಎಂದು ವಿದ್ಯಾರ್ಥಿನಿಯರು ಪತ್ರಿಕಾ ಹೇಳಿಕೆಯಲ್ಲಿ ಹೇಳಿರುತ್ತಾರೆ.

ರಾಜ್ಯದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಬೇಕೆಂಬ ಕನಸನ್ನು ಹೊತ್ತು ಹಳ್ಳಿಗಳಿಂದ ಬಂದು ಅನಿವಾರ್ಯವಾಗಿ ಹಾಸ್ಟೆಲ್‌ಗಳಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಈ ಹಾಸ್ಟೆಲ್‌ಗಳಲ್ಲಿ ಪೂರೈಸುವ ಆಹಾರಗಳಿಗೆ ತಿಂಗಳಿಗೆ ರೂ.1,500 ರಿಂದ ರೂ. 1,800 ರವರೆಗೆ ಹಣವನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡಲಾಗುತ್ತಿರುತ್ತದೆ. ಆದಕಾರಣದಿಂದ ರಾಜ್ಯದ ಹಾಸ್ಟೆಲ್‌ಗಳಲ್ಲಿ ಕಳಪೆ ಆಹಾರವನ್ನು ಒದಗಿಸುವುದನ್ನು ತಡೆಗಟ್ಟಿ, ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸುವ ಸಲುವಾಗಿ ಸೂಕ್ತ ಕ್ರಮ ವಹಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗಂಭೀರವಾದ ವಿಷಯವನ್ನು ಉಲ್ಲೇಖ

ಮಾಡಿದ್ದಾರೆ. ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿರುವ ಪಿ.ಜಿ., ಒನಕೆ ಓಬವ್ವ, ಇಂದ್ರಾಣಿದೇವಿ, ರಮಾಬಾಯಿ ಅಂಬೇಡ್ಕರ್ ಸೇರಿದಂತೆ ಕೆಲವು ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿನಿಯರಿಗೆ ಕಳಪೆ ಮಟ್ಟದ ಊಟವನ್ನು ಕೊಡಲಾಗುತ್ತಿದೆ ಮತ್ತು ಅಲ್ಲಿರುವಂತಹ ಅಡುಗೆ ಸಾಮಾಗ್ರಿಗಳಲ್ಲಿ ಲೋಪವಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ಅಧಿಕಾರಿಗಳನ್ನು ತಕ್ಷಣ ಅಲ್ಲಿಗೆ ಕಳುಹಿಸಿ, ಇದರ ಬಗ್ಗೆ ತನಿಖೆ ಮಾಡಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಈಗಾಗಲೇ, ಎಲ್ಲೆಲ್ಲಿ ಈ ರೀತಿಯಾದಂತಹ ಸಮಸ್ಯೆಗಳಾಗಿವೆಯೋ, ಅದೆಲ್ಲವುಗಳಿಗೆ ಬಹಳ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ವರದಿಯನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಇವತ್ತೇ ಆಹಾರ ಪದ್ಧತಿಯಲ್ಲಿ ಆಗುವಂತಹ ಬದಲಾವಣೆಯನ್ನು ಕೂಡ ಮಾಡುತ್ತೇವೆ.

ಊ) **ವಿಷಯ: 2022 ಡಿಸೆಂಬರ್ 24 ರಂದು ರಾತ್ರಿ ಸುರತ್ಕಲ್‌ನ ಕೃಷ್ಣಾಪುರ 4ನೇ ಬ್ಲಾಕ್ ನೈತಂಗಡಿಯಲ್ಲಿ ದಿನಸಿ ಅಂಗಡಿ ಹೊಂದಿದ್ದ ಜಲೀಲ್ ಇವರನ್ನು ದುಷ್ಕರ್ಮಿಗಳು ಕೊಲೆ ಮಾಡಿರುವ ಕುರಿತು.**

-----

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಪೋಲೀಸ್ ಠಾಣೆ ವ್ಯಾಪ್ತಿಯ ಕಾಟಿಪಳ್ಳ 4ನೇ ಬ್ಲಾಕ್‌ನ ನೈತಂಗಡಿ ಬಳಿ ಜೀವನದ ನಿರ್ವಹಣೆಗಾಗಿ "ಲತೀಫಾ ಸ್ಟೋರ್" ನಡೆಸುತ್ತಿದ್ದ ಅಬ್ದುಲ್ ಜಲೀಲ್ ಎನ್ನುವ ವ್ಯಕ್ತಿಯ ಮೇಲೆ ಕೆಲವು ದುಷ್ಕರ್ಮಿಗಳು ಚೂರಿ ಇರಿದು ಸಾವಿಗೆ ಕಾರಣವಾಗಿರುವ ಪ್ರಕರಣ ಜರುಗಿರುವ ಸಂಗತಿಯನ್ನು ಸದನದಲ್ಲಿ ಶೂನ್ಯವೇಳೆಯಲ್ಲಿ ಅಡಿಯಲ್ಲಿ ಪ್ರಸ್ತಾಪಿಸಲು ನನಗೆ ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಕಾಟಿಪಳ್ಳ 4ನೇ ಬ್ಲಾಕ್‌ನ ನೈತಂಗಡಿ ಬಳಿ ಫ್ಯಾನ್ಸಿ ಅಂಗಡಿ ಹೊಂದಿರುವ ಅಬ್ದುಲ್ ಜಲೀಲ್‌ರವರಿಗೆ ಶನಿವಾರ ಅಂದರೆ ದಿನಾಂಕ 24.12.2022 ರಂದು ಸುಮಾರು 8.00 ಗಂಟೆಗೆ ಇಬ್ಬರು ದುರ್ಷರ್ಮಿಗಳು ಡ್ರಾಗ್ಯರ್‌ನಿಂದ ಎದೆ ಹಾಗೂ ಹೊಟ್ಟೆ ಭಾಗಕ್ಕೆ ಇರಿದು ಪರಾರಿಯಾಗಿದ್ದು, ತಕ್ಷಣ ಸದರಿಯವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರೂ ಸಹ ತೀವ್ರ ರಕ್ತ ಸ್ರಾವದಿಂದ

ಜಲೀಲ್‌ರವರು ಮೃತಪಟ್ಟಿರುತ್ತಾರೆ. ಈ ಹಿಂದೆ ನಡೆದ ಅನೇಕ ಘಟನೆಗಳಿಗೆ ಸರ್ಕಾರವು ಸೂಕ್ತ ಸಮಯಕ್ಕೆ ಸರಿಯಾದ ಕ್ರಮವನ್ನು ವಹಿಸದೇ ಇರುವುದರಿಂದ ಅಮಾಯಕರ ಹತ್ಯೆ ನಡೆಯುತ್ತಿರುತ್ತದೆ. ಇಂತಹ ಘಟನೆಗಳನ್ನು ತಡೆಯಲು ಸರ್ಕಾರ ವಿಫಲವಾಗಿದೆ.

ರಾಜ್ಯದಲ್ಲಿ ಇಂತಹ ಪುನರಾವರ್ತಿತ ಶಾಂತಿ ಕದಡುವ ಘಟನೆಗಳಿಂದ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದೆಗೆಟ್ಟಿರುವ ವಿಚಾರಕ್ಕೆ ಸರ್ಕಾರವು ಸೂಕ್ತ ಕ್ರಮವನ್ನು ವಹಿಸುವ ಸಲುವಾಗಿ ಹಾಗೂ ಮೃತಪಟ್ಟ ಕುಟುಂಬಕ್ಕೆ ಈ ಹಿಂದೆ ಈ ರೀತಿ ನಡೆದ ಘಟನೆಯಲ್ಲಿ ನೀಡಿದ ಪರಿಹಾರದಂತೆ ರೂ.25 ಲಕ್ಷಗಳನ್ನು ನೀಡಿ, ತಪ್ಪಿತಸ್ಥರ ವಿರುದ್ಧ UAPA (Unlawful Activities (Prevention) Amendment, Act) ರಡಿಯಲ್ಲಿ ಕ್ರಮಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಯಾರೂ ಮಾತನಾಡುವಂತಿಲ್ಲ. ಮಾನ್ಯ ಸದಸ್ಯರು ಕೇಳಿರುವ ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಸಭಾನಾಯಕರು ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಶ್ರೀ ಅಬ್ದುಲ್ ಜಬ್ಬಾರ್ ಮತ್ತು ಶ್ರೀ ಸಲೀಂರವರು ಶೂನ್ಯ ವೇಳೆ ಪ್ರಶ್ನೆಗೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ, ಹೇಗೆ ಸ್ವಾಮಿ? ಅಲ್ಲಿ ಜನರು ಸಾಯುತ್ತಿದ್ದಾರೆ. ಸುರತ್ಕಲ್‌ನಲ್ಲಿ ಇಪ್ಪತ್ತು ವರ್ಷಗಳಿಂದ ಎಷ್ಟು ಜನ ಸತ್ತಿದ್ದಾರೆ ಎಂದು ನೋಡಿದರೆ, ಬಹಳ ಆಶ್ಚರ್ಯವಾಗುತ್ತದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇದನ್ನು ಬೇರೆ ಯಾವ ನಿಯಮದಡಿಯಲ್ಲಿ ತೆಗೆದುಕೊಂಡು ಬನ್ನಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಇದರ ಬಗ್ಗೆ ...ಅವರು ಅದೇ ಜಿಲ್ಲೆಯವರಾದ್ದರಿಂದ, ಅದರ ಬಗ್ಗೆ ಗೊತ್ತಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಏನಾದರೂ ತರುತ್ತೀರಾ ನೋಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಜನರಿಗೆ ರೂಲ್ ಏನು ಗೊತ್ತು ಹೇಳಿ?

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಬೇರೆಯವರಿಗಾದರೆ ಸರ್ಕಾರ ಪರಿಹಾರವಾಗಿ ರೂ. 25 ಲಕ್ಷ ಕೊಡುತ್ತಾರೆ.

**ಸಭಾಪತಿಯವರು:–** ತಾವು ನಿಯಮದಲ್ಲಿ ತರಲಿಲ್ಲವೆಂದರೆ, ನಾನೇನೂ ಮಾಡಲಿ. ಮಾನ್ಯ ಸಭಾನಾಯಕರೇ ಹೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಬೇರೆ ರೂಪದಲ್ಲಿ ತರಲಿ.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿ ಕಾನೂನು ವ್ಯವಸ್ಥೆ ಇದೆಯೋ ಇಲ್ಲವೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಬೇರೆ ರೂಪದಲ್ಲಿ ಕೇಳುತ್ತಿದ್ದಾರೆ. ಬಹುಶಃ ನನಗೆ ಗೊತ್ತಿರುವಂತೆ, ತಾವೇ ಇದಕ್ಕೆ ಅವಕಾಶ ಕೊಟ್ಟು, ನಿಯಮ 330 ರಡಿಯಲ್ಲಿ ಹಾಕಿದ್ದೀರಿ. ಅದರಲ್ಲಿ ಚರ್ಚೆ ಮಾಡಿದರೆ, ಸರ್ಕಾರ ಉತ್ತರ ಕೊಡುತ್ತದೆ. ಈಗಾಗಲೇ ಅಪಾದಿತರ ಮೇಲೆ ಸರ್ಕಾರ ಕಠಿಣವಾದ, ನಿರ್ದಾಕ್ಷಣ್ಯವಾದ ಕ್ರಮವನ್ನು ಕೈಗೊಂಡಿದೆ.

**ಸಭಾಪತಿಯವರು:-** ಇದರ ಬಗ್ಗೆ ಚರ್ಚೆ ಮಾಡುವುದು ಬೇಡ. ನಿಯಮ 330 ರಡಿಯಲ್ಲಿ ಚರ್ಚೆ ಮಾಡೋಣ. ಡಾ॥ ತೇಜಸ್ವಿನಿ ಗೌಡರವರೇ, ತಾವು ಶೂನ್ಯ ವೇಳೆ ಪ್ರಸ್ತಾವ ಮಾಡಿ.

**ಋ) ವಿಷಯ: ಲೀಸ್ ನೀಡಿರುವ ಐ.ಸಿ.ಹೆಚ್.ಆರ್. ಕಟ್ಟಡವನ್ನು ಶಾಶ್ವತವಾಗಿ ಭಾರತೀಯ ಇತಿಹಾಸ ಸಂಶೋಧನಾ ನಿಯಂತ್ರಿಸುವ ಕುರಿತು.**

-----

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ವ್ಯಾಪ್ತಿಯಲ್ಲಿರುವ ಕಾನೂನು ಕಾಲೇಜಿ (ಹಳೆಯ) ಕಟ್ಟಡದಲ್ಲಿ ಕಳೆದ 25 ವರ್ಷಗಳಿಂದ ಭಾರತೀಯ ಇತಿಹಾಸ ಸಂಶೋಧನಾ ಅನುಸಂಧಾನ ಮಂಡಳಿ INDIAN COUNCIL FOR HISTORICAL RESEARCH ನ ಪ್ರಾದೇಶಿಕ (ZONAL) ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಈ ಕೇಂದ್ರವನ್ನು (ICHR) ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಗಳು 1998 ರಲ್ಲಿ ಕೇಂದ್ರ ಸರ್ಕಾರದಲ್ಲಿ ಮಾನವ ಸಂಪನ್ಮೂಲ ಸಚಿವರು ಆಗಿದ್ದ ಶ್ರೀಯುತ ಎಸ್. ಆರ್. ಬೊಮ್ಮಾಯಿಯವರು ಸ್ಥಾಪಿಸಿರುತ್ತಾರೆ. ದಕ್ಷಿಣ ಭಾರತದ ಮಹತ್ವದ ಐತಿಹಾಸಿಕ ರಾಜ್ಯಗಳಾದ ಕರ್ನಾಟಕ, ಕೇರಳ, ಆಂಧ್ರಪ್ರದೇಶ ತಮಿಳುನಾಡು ಹಾಗೂ ಮಹಾರಾಷ್ಟ್ರಗಳನ್ನೊಳಗೊಂಡ ಪ್ರಾದೇಶಿಕ ಕೇಂದ್ರ ಇದಾಗಿದೆ. ಈ ಭಾಗದ ಐದು ರಾಜ್ಯಗಳ ಇತಿಹಾಸ, ಸಂಸ್ಕೃತಿ ಪರಂಪರೆಯ ಬಗ್ಗೆ ಅಧ್ಯಯನ, ಸಂಶೋಧನೆ, ಪ್ರಬಂಧ ಮಂಡನೆ ಹಾಗೂ ಪ್ರಕಟಣೆಯ ಮೂಲಕ ದಕ್ಷಿಣ ಭಾರತದ ಹೆಮ್ಮೆಯ ಇತಿಹಾಸವನ್ನು ದಾಖಲಿಸುವುದರ ಜೊತೆಗೆ ಭಾರತ ಹಾಗೂ ಜಗತ್ತಿಗೆ ಪಚುರ ಪಡಿಸುವ

ಪ್ರತಿಷ್ಠಿತ ಉದ್ದೇಶ ಹಾಗೂ ಗುರಿಯನ್ನು ಇದು ಹೊಂದಿದೆ. ಹೀಗಾಗಿ ಪ್ರಸ್ತುತ ರಾಜ್ಯದಲ್ಲಿ ದಿವಂಗತರಾದ ಶ್ರೀ ಎಸ್. ಆರ್ ಬೊಮ್ಮಾಯಿಯವರ ಸುಪುತ್ರರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದು, ಹಿರಿಯ ಬೊಮ್ಮಾಯಿ (ಎಸ್ಆರ್) ಯವರು ICHR ಕೇಂದ್ರಕ್ಕೆ ನೀಡಿರುವ ೩೦ ವರ್ಷಗಳ Lease ಬದಲು ಈ ಕಟ್ಟಡವನ್ನು ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಹಳೆಯ ಕಾನೂನು ಕಾಲೇಜಿನ ಶಾಶ್ವತವಾಗಿ ICHR ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಗೆ ಹಳೆಯ ಕಾನೂನು ಕಾಲೇಜಿಗೆ ಸೇರಿದ ಒಟ್ಟು ಕಟ್ಟಡ ಪ್ರದೇಶವನ್ನು ಶಾಶ್ವತವಾಗಿ ಹಂಚಿಕೆ ಮಾಡಿ ಭೂಮಿ ಹಾಗೂ ಕಟ್ಟಡದ ಒಡೆತನವನ್ನು ನೀಡಬೇಕಾಗಿ ಉನ್ನತ ಶಿಕ್ಷಣ ಸಚಿವರಲ್ಲಿ ಕೋರುತ್ತೇನೆ.

ಇದರಿಂದಾಗಿ ಕರ್ನಾಟಕ ರಾಜ್ಯವೂ ಸೇರಿದಂತೆ ನೆರೆಯ ಆಂಧ್ರ ಪ್ರದೇಶ, ತಮಿಳುನಾಡು, ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಬೆಳಕು ಕಾಣದಿರುವ ಗತ ವೈಭವದ ಭವ್ಯ ಇತಿಹಾಸ, ರಾಜರುಗಳು ವೀರಗಾಥೆ, ಕೋಟೆ, ಕೊತ್ತಲ, ಅರಮನೆ, ಆಳ್ವಿಕೆ ಹೀಗೆ ವಿವಿಧ ಕೊಡುಗೆಗಳ ಮೇಲೆ ಮೌಲ್ಯಯುತ ಸಂಶೋಧನೆ ನಡೆಸಿ, ಪುಸ್ತಕಗಳನ್ನು ಪ್ರಕಟಿಸುವುದು. ಸಾಕ್ಷ್ಯ ಚಿತ್ರ ನಿರ್ಮಿಸುವುದು ಹೀಗೆ ಬಹು ದೊಡ್ಡ ಕೊಡುಗೆ ನೀಡಲು ನಮ್ಮ ಇತಿಹಾಸ ರಕ್ಷಿಸಲು ಸಹಾಯವಾಗುತ್ತದೆ. ಈ ಕೇಂದ್ರವನ್ನು ICHR ಗೆ ನೀಡಿದಲ್ಲಿ ಕೇಂದ್ರ ರಾಜ್ಯಗಳ ಅನುದಾನದಿಂದ ಅಭಿವೃದ್ಧಿ ಪಡಿಸಿದಲ್ಲಿ, ಪ್ರಾದೇಶಿಕ ಕೇಂದ್ರದಡಿ ಬರುವ ಐದು ರಾಜ್ಯಗಳಿಂದ ಬರುವ ಸಂಶೋಧನಾ ವಿದ್ಯಾರ್ಥಿಗಳು ಇಲ್ಲಿಯೇ ನೆಲೆಸಿ, ರಾಜ್ಯದಾದ್ಯಂತ ಪ್ರವಾಸ ಮಾಡಿ ಕೊಡುಗೆ ನೀಡಲು ಸಹಾಯವಾಗುತ್ತದೆ. ಆದಕಾರಣ ತುರ್ತಾಗಿ ICHR ಗೆ ಈ ಕಟ್ಟಡ ನೀಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಶ್ನೆಗೆ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

(ಮುಂದು)

(1199) 27.12.2022, 12.40,TCH-VK (ಸಭಾಪತಿಯವರ ಉಪಸ್ಥಿತಿ)

**ಎ)ವಿಷಯ:- ವಿದೇಶದಲ್ಲಿ ಕೊರೋನಾ ಸೋಂಕು ಹೆಚ್ಚಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಗತ್ಯ ಆರೋಗ್ಯ ಸೇವೆಗಳ ಹಾಗೂ ಔಷಧಿ ಸಂಗ್ರಹ ಇನ್ನಿತರೆ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವ ಕುರಿತು.**

----

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿದೇಶದಲ್ಲಿ ಕೊರೋನಾ ಸೋಂಕು ಹೆಚ್ಚಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮತ್ತಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಿರುವುದು "ಕನ್ನಡ ಪ್ರಭ" ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಕೊರೋನಾ ರೂಪಾಂತರದ ಓಮಿಕ್ರೋನ್ ಬಿಎಫ್-7 ಒಬ್ಬರಿಂದ 17 ರಿಂದ 18 ಜನರಿಗೆ ಹರಡುವ ಸಾಧ್ಯತೆಗಳವೆ. ವಿದೇಶಗಳಲ್ಲಿ ನಿತ್ಯ 50 ಸಾವಿರಕ್ಕೂ ಅಧಿಕ ಪ್ರಕರಣಗಳು ದಾಖಲಾಗುತ್ತಿವೆ. ಸದ್ಯಕ್ಕೆ ರಾಜ್ಯ ಸರ್ಕಾರ ಲಾಕ್‌ಡೌನ್‌ನಂತಹ ಯಾವುದೇ ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಿದೆ. ಆದರೆ, ಹೊಸ ವರ್ಷ ಸಮೀಪಿಸುತ್ತಿದ್ದು, ಶಿವಮೊಗ್ಗ ಸೇರಿದಂತೆ ಬೆಂಗಳೂರಿನ ಹಲವು ಕಡೆಗಳಲ್ಲಿ ಸಂಭ್ರಮಾಚರಣೆ ಜೋರಿರಲಿದೆ. ಅದರಲ್ಲೂ ಕಳೆದ ಎರಡು ವರ್ಷ (2021 ಹಾಗೂ 2022ರಲ್ಲಿ) ಸಂಪೂರ್ಣ ನಿರ್ಬಂಧ ವಿಧಿಸಲಾಗಿತ್ತು. ಆದರೆ ಈ ಬಾರಿ ಭರ್ಜರಿಯಾಗಿ ಹೊಸ ವರ್ಷ ಸ್ವಾಗತಕ್ಕೆ ಜನರು ಸಜ್ಜಾಗಿದ್ದಾರೆ. ಒಂದು ವೇಳೆ, ಮುಂಜಾಗ್ರತಾ ಕ್ರಮ ಕೈಗೊಳ್ಳದಿದ್ದರೆ ರಾಜ್ಯದಲ್ಲಿಯೂ ಈ ಸೋಂಕು ಹೆಚ್ಚಳವಾಗಬಹುದು ಎಂಬ ಆತಂಕದಲ್ಲಿ ರಾಜ್ಯ ಸರ್ಕಾರವಿದೆ. ಎಲ್ಲವನ್ನು ಅರಿತುಕೊಂಡು ಸರ್ಕಾರ ಹೊಸ ವರ್ಷಾಚರಣೆಗೆ ಅನುಮತಿಸಬೇಕು.

ಬೆಂಗಳೂರು ಸೇರಿದಂತೆ ಶಿವಮೊಗ್ಗ ಹಾಗೂ ಇತರೆ ಭಾಗಗಳಿಗೆ ಪ್ರತ್ಯೇಕವಾದ ಮಾರ್ಗಸೂಚಿಯನ್ನು ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂಬುದು ಸಹ ಸಾಮಾನ್ಯವಾಗಿ ಕೇಳಿಬರುತ್ತಿದ್ದು, ರಾಜ್ಯದ ಕೊರೋನ ಸಕ್ರಿಯ ಪ್ರಕರಣಗಳಲ್ಲಿ ಶೇ.99 ರಷ್ಟು ಬೆಂಗಳೂರಿನಲ್ಲಿವೆ. ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಅಲ್ಲದೆ, ಬೆಂಗಳೂರಿನ ಬ್ರಿಗೇಡ್ ರಸ್ತೆ ಸೇರಿದಂತೆ

ಹಲವು ಹೋಟೆಲ್ ರೆಸ್ಟೋರೆಂಟ್ ಸೇರಿ ಹಲವೆಡೆ ಹೊಸ ವರ್ಷದ ಸಂಭ್ರಮಾಚರಣೆಗಳು ಜೋರಿರುತ್ತದೆ.

ರಾಜ್ಯ ಸರ್ಕಾರ ಮುನ್ನೆಚ್ಚರಿಕೆ ಸಲುವಾಗಿ ಹಾಗೂ ರಾಜ್ಯದ ಜನರ ಆರೋಗ್ಯ ಮತ್ತು ರಕ್ಷಣೆ ಸಲುವಾಗಿ ಅಗತ್ಯ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕು. ವ್ಯಾಪಾರೋದ್ಯಮಕ್ಕೆ ಧಕ್ಕೆಯಾಗದಂತೆ ಕಾಳಜಿ ವಹಿಸಬೇಕು. ಅಂತರರಾಷ್ಟ್ರೀಯ ವಿಮಾನಯಾನಗಳ ಮೇಲೆ ಕಣ್ಗಾವಲಿರಿಸಿ ತೀವ್ರ ನಿಗಾ ವಹಿಸುವಂತಹ ಕ್ರಮಗಳಿಗೆ ಸರ್ಕಾರ ಸಿದ್ಧವಾಗಬೇಕು. ಸಾರ್ವಜನಿಕ ವಲಯದಲ್ಲಿ ಆರ್ಥಿಕ ಭೀತಿ ಎದುರಾಗದಂತೆ, ಅಗತ್ಯ ಆರೋಗ್ಯ ಸೇವೆಗಳು, ಔಷಧಿ ಸಾಮಗ್ರಿಗಳ ಸಂಗ್ರಹ ಇನ್ನಿತರೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್‌ರವರು ಶೂನ್ಯವೇಳೆಯಲ್ಲಿ ಕೇಳಿರುವ ಪ್ರಶ್ನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

**ಏ)ವಿಷಯ:- ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಸೌಪರ್ಣಿಕ ನದಿಯ ಹತ್ತಿರ ಅಕ್ರಮ ಮರಳು ಗಣಿಗಾರಿಕೆ ನಿಯಂತ್ರಿಸುವ ಕುರಿತು.**

----

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ಅಕ್ರಮ ಮರಳುಗಾರಿಕೆ ಸಿಸಿಟಿವಿ ಮತ್ತು ಗೇಟ್ ಧ್ವಂಸ; ಅಧಿಕಾರಿಗಳ ಮೃಧು ಧೋರಣೆ; ಅಕ್ರಮ ದಂಧೆಕೋರರ ಅಟ್ಟಹಾಸ" ಎಂಬ ಶಿರ್ಷಿಕೆಯಡಿಯಲ್ಲಿ ದಿನಾಂಕ 25.12.2022ರ ವಿಜಯವಾಣಿ ದಿನ ಪತ್ರಿಕೆಯಲ್ಲಿ ವರದಿಯಾಗಿದೆ.

ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಸೌಪರ್ಣಿಕ ನದಿಯ ಹೂಳೆತ್ತುವ ಪರವಾನಿಗೆಯು ಕರ್ನಾಟಕ ಮಿನರಲ್ ಪ್ರೈವೇಟ್ ಲಿಮಿಟೆಡ್‌ನ ಮೂಲಕ ಮಂಗಳೂರಿನ ವ್ಯಕ್ತಿಯೊಬ್ಬರಿಗೆ ಗುತ್ತಿಗೆಯಾಗಿರುತ್ತದೆ. ಆದರೆ, ಅವರು ಬೇರೊಬ್ಬರಿಗೆ ಮರಳು ತೆಗೆಯಲು ಗುತ್ತಿಗೆ ನೀಡಿರುತ್ತಾರೆ.

ದಿನಾಂಕ 22.12.2022ರ ರಾತ್ರಿ ಸೌಪರ್ಣಿಕ ನದಿ ತೀರದಲ್ಲಿ ಅಕ್ರಮ ಮರಳು ಗಣಿಗಾರಿಕೆ ತಡೆಯಲು ಅಳವಡಿಸಲಾಗಿದ್ದ ಸಿಸಿಟಿವಿ ಹಾಗೂ ಗೇಟ್‌ಗಳನ್ನು ಪುಡಿಗಟ್ಟಿ ಮರಳು ದಂಧೆಕೋರರು ಅಟ್ಟಹಾಸ ಮೆರೆದಿರುವ ಕುರಿತು ವರದಿಯಾಗಿದೆ.

ಸೌಪರ್ಣಿಕ ನದಿಯಲ್ಲಿ ಮರಳು ತೆಗೆಯುವುದರಿಂದ ನದಿಯ ಆಳ ಹೆಚ್ಚಿದ್ದು, ಈಗಾಗಲೇ ಪಡುಕೋಣೆ ಪರಿಸರದ ಭಾವಿಗಳಲ್ಲಿ ನೀರು ಉಪ್ಪಾಗಿರುತ್ತದೆ ಎಂದು ಸುತ್ತಮುತ್ತಲಿನ ಪರಿಸರ ವಾಸಿಗಳು ಆರೋಪಿಸಿರುತ್ತಾರೆ. ಇದೇ ರೀತಿ ಮುಂದುವರೆದಲ್ಲಿ ಕುಡಿಯುವ ನೀರಿನ ಬರ ಎದುರಿಸುವ ಸಾಧ್ಯತೆಯಿದೆ ಹಾಗೂ ನದಿಪಾತ್ರ ಹಿಗ್ಗಿ ಕೃಷಿ ಭೂಮಿ ಆವರಿಸಿಕೊಳ್ಳುವ ಅಪಾಯವಿದೆ.

ಈ ಪ್ರದೇಶದಲ್ಲಿ ಹೂಳೆತ್ತುವ ಅಡ್ಡದಾರಿ ಮೂಲಕ ಮರಳು ತೆಗೆದು ಮಾರಾಟ ಮಾಡಲಾಗುತ್ತಿದೆ. ಲಘುಯಂತ್ರ ಬಳಸಿ ಹೂಳು ತೆಗೆದು ಸಮುದ್ರ ಅಥವಾ ನದಿಯ ತಗ್ಗು ಪ್ರದೇಶಕ್ಕೆ ಹಾಕಬೇಕು ಎನ್ನುವ ನ್ಯಾಯಾಲಯದ ಸ್ಪಷ್ಟ ನಿರ್ದೇಶನವಿದ್ದರೂ, ಡಂಪಿಂಗ್ ಯಾರ್ಡ್ ಮಾಡಿ ಮರಳನ್ನು ನೇರವಾಗಿ ಲೋಡ್ ಮಾಡಿ ಮಾರಾಟ ಮಾಡಲಾಗುತ್ತಿದೆ.

ಆದುದರಿಂದ, ಸೌಪರ್ಣಿಕ ನದಿಯ ಸುತ್ತಮುತ್ತಲ ಪರಿಸರಕ್ಕೆ ಹಾನಿಯನ್ನು ತಡೆಯಲು, ಕೂಡಲೇ ಅಕ್ರಮ ಮರಳು ಗಣಿಗಾರಿಕೆಯನ್ನು ನಿಯಂತ್ರಿಸಿ, ಸಂಬಂಧಪಟ್ಟವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಅಲ್ಲಿಂದ ಬಂದಿರತಕ್ಕಂಥ ವರದಿಯನ್ನು ಪಡೆದುಕೊಂಡಿದ್ದೇನೆ. ಅಲ್ಲಿ ಯಾವುದೇ ಸಿಸಿ-ಟಿವಿ ಹಾಳಾಗಿಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಉತ್ತರವನ್ನೂ ಕೂಡ ತಮಗೆ ಕೊಟ್ಟಿದ್ದೇನೆ. ಮಾನ್ಯ ಸದಸ್ಯರ ಪತ್ರದ ಮೂರನೆಯ ಪ್ಯಾರದಲ್ಲಿ ಏನು ಹೇಳಿದ್ದಾರೆಂದರೆ, "ಈ ಪ್ರದೇಶದಲ್ಲಿ ಹೂಳೆತ್ತುವ ಅಡ್ಡದಾರಿ ಮೂಲಕ ಮರಳು ತೆಗೆದು ಮಾರಾಟ ಮಾಡಲಾಗುತ್ತಿದೆ. ಲಘು ಯಂತ್ರ ಬಳಸಿ ಹೂಳು ತೆಗೆದು ಸಮುದ್ರ ಅಥವಾ ನದಿಯ ತಗ್ಗು ಪ್ರದೇಶಕ್ಕೆ ಹಾಕಬೇಕು ಎನ್ನುವ

ನ್ಯಾಯಾಲಯದ ಸ್ಪಷ್ಟ ನಿರ್ದೇಶನವಿದ್ದರೂ, ಡಂಪಿಂಗ್ ಯಾರ್ಡ್ ಮಾಡಿ ಮರಳನ್ನು ನೇರವಾಗಿ ಲೋಡ್ ಮಾಡಿ ಮಾರಾಟ ಮಾಡಲಾಗುತ್ತಿದೆ" ಎಂದು ಹೇಳಿದ್ದಾರೆ.

**ಶ್ರೀ ಮಂಜುನಾಥ್ ಭಂಡಾರಿ:–** ಮಾನ್ಯ ಸಭಾಪತಿಯವರೇ, ಆ ಉತ್ತರ ನನಗೆ ಬಂದಿಲ್ಲ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಇರುವ ಉತ್ತರವನ್ನೇ ಕೊಟ್ಟುಬಿಡಲೇ?

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರ ಬಂದಿರದಿದ್ದರೆ ಉತ್ತರವನ್ನು ಆಮೇಲೆ ಕೊಡಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಯವರೇ, ನಾನು ಇಲ್ಲೇ ಹೇಳಿಬಿಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಈಗ ಚರ್ಚೆ ಮಾಡುವುದು ಬೇಡ, ಆಮೇಲೆ ಉತ್ತರ ಕೊಡಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ . . .

**ಸಭಾಪತಿಯವರು:–** ಮಾನ್ಯ ಸಚಿವರೇ, ತಮ್ಮ ಹತ್ತಿರ ಬರೆದಿರುವ ಉತ್ತರ ಇದ್ದರೆ ಓದಿ. ಒಂದುವೇಳೆ ಉತ್ತರ ಇಲ್ಲದಿದ್ದರೆ ಆಮೇಲೆ ಕಳುಹಿಸಿಕೊಡಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಮಾನ್ಯ ಸಭಾಪತಿಯವರೇ, ಅವರು ಏನು ಕೇಳಿದ್ದಾರೋ ಅದಕ್ಕೆ ಸಂಬಂಧಿಸಿದಂತೆ ಈಗ ಕೆಲವು ಮಾತುಗಳನ್ನು ಹೇಳುತ್ತೇನೆ ನಂತರ ಉತ್ತರವನ್ನು ಕಳುಹಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಏನೂ ಆಗಿಲ್ಲ. ನಾನು ವರದಿಯನ್ನು ತರಿಸಿಕೊಂಡಿದ್ದೇನೆ. ತಮಗೂ ಗೊತ್ತಿರುವಂತೆ 2020ರ ಹೊಸ ಮರಳು ನೀತಿ ಪ್ರಕಾರ ನಾವು ಕೆಎಸ್‌ಎಂಸಿಎಲ್‌ಗೆ ಕೊಟ್ಟಿದ್ದೇವೆ. ಅವರು ಟೆಂಡರ್ ಕರೆದಿದ್ದಾರೆ. ಆ ಪ್ರಕಾರ ಶ್ರೀ ಸುಧಾಕರ ಎಸ್.ಪುಂಜ ಎನ್ನುವ ವ್ಯಕ್ತಿಗೆ ಟೆಂಡರ್ ಕೊಟ್ಟಿದ್ದಾರೆ. ಅವರಿಂದ ದಿನಾಂಕ 22.12.2022ರ ರಾತ್ರಿ ನಡೆದಿರತಕ್ಕಂಥದ್ದು ಇಲ್ಲ ನನಗೆ ವರದಿ ಕೂಡ ಆಗಿಲ್ಲ. ಅನಂತರ ಕೂಡ ಆಗಿಲ್ಲವೆಂದು ನನಗೆ ವರದಿಯನ್ನು ಕೊಟ್ಟಿದ್ದಾರೆ. ಇನ್ನು ಎರಡನೆಯ ವಿಚಾರ ಏನೆಂದರೆ, ಆ ಭಾಗದಲ್ಲಿ ಮರಳನ್ನು

ತೆಗೆಯುವುದರಿಂದ ಬಾವಿಗಳಲ್ಲಿ ನೀರು ಉಪ್ಪಾಗುತ್ತಿದೆ. ಆದರೆ ಇದುವರೆಗೂ ಕೂಡ ಮೈನರ್ ಇರಿಗೇಷನ್‌ನವರಿಂದ ಕೂಡ ಯಾವುದೇ ವರದಿ ಬಂದಿಲ್ಲ. ತಾವು ಹೇಳಿದ್ದನ್ನು ಇನ್ನೊಮ್ಮೆ ಪರಿಶೀಲನೆ ಮಾಡಿ ಆ ರೀತಿಯದ್ದು ಏನಾದರೂ ಇದ್ದರೆ ಮಾಡುತ್ತೇವೆ. ಸಿಆರ್‌ಜಡ್‌ನೊಳಗೆ ಬರತಕ್ಕಂಥ ಕಂಡಿಷನ್ ಕೇಳಿದ್ದೀರಿ. ಆದರೆ ಆ ಪ್ರದೇಶ ಸಿಆರ್‌ಜಡ್ ನೊಳಗೆ ಬರುವುದಿಲ್ಲ. ಹಾಗಾಗಿ, ಅದು ನಾನ್ ಸಿಆರ್‌ಝಡ್ ಇರುವುದರಿಂದ, ಇವತ್ತಿನ ದಿವಸ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆಯಿಂದ ಏನು ನಿಯಮಗಳಿವೆ, ಆ ನಿಯಮಾನುಸಾರ ಅಲ್ಲಿ ಮರಳನ್ನು ತೆಗೆಯುವುದಕ್ಕೆ ಕಾನೂನು ರೀತ್ಯಾ ಅವಕಾಶವನ್ನು ಮಾಡಿಕೊಟ್ಟಿರುವುದು. ಕೊನೆಯದಾಗಿ ಇದು ಅಕ್ರಮವಾಗಿ ನಡೆಯುತ್ತಿದೆಯೆಂದು ಹೇಳಿದರು. ಒಂದುವೇಳೆ ಅದು ಅಕ್ರಮವಾಗಿ ನಡೆಯುತ್ತಿದ್ದರೆ, ಅದನ್ನು ಇನ್ನೊಮ್ಮೆ ಪರಿಶೀಲನೆ ಮಾಡುವುದಕ್ಕೂ ಕೂಡ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳುತ್ತೇನೆ. ಅಂತಹದ್ದೇನಾದರೂ ಆಗಿದ್ದರೆ ಸೂಕ್ತ ಕ್ರಮವನ್ನು ಕೂಡ ತೆಗೆದುಕೊಳ್ಳುತ್ತೇನೆ.

**ಐ)ವಿಷಯ:- ಉತ್ತರ ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳಲ್ಲಿ ನೆಲೆಸಿರುವ ಕೊಂಕಣಿ ಭಾಷಿಕರ ಭಾಷೆ, ಕಲೆ, ಸಾಹಿತ್ಯ ಅಭಿವೃದ್ಧಿ ಶಿಕ್ಷಣ ಹಾಗೂ ಸಂಶೋಧನೆಗಾಗಿ ವಿಶ್ವವಿದ್ಯಾಲಯ ಕೊಂಕಣಿ ಅಧ್ಯಯನ ಪೀಠಕ್ಕೆ ಅನುದಾನ ಬಿಡುಗಡೆ ಕುರಿತು.**

----

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ವಿಶ್ವವಿದ್ಯಾಲಯದ ಕೊಂಕಣಿ ಅಧ್ಯಯನ ಪೀಠಕ್ಕೆ ತಕ್ಷಣವೇ ಅನುದಾನ ಬಿಡುಗಡೆ ಮಾಡುವಂತೆ ಆಗ್ರಹಿಸಿ, "ಸಂಯುಕ್ತ ಕರ್ನಾಟಕ" "ಕನ್ನಡ ಪ್ರಭ" ಇನ್ನೂ ಮುಂತಾದ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಉತ್ತರ ಕರ್ನಾಟಕ ಭಾಗದಲ್ಲಿ ಕೊಂಕಣಿ ಭಾಷೆ ಮತ್ತು ಅದರ ಸಂಸ್ಕೃತಿಯನ್ನು ಉಳಿಸಲು ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಕೊಂಕಣಿ ಭಾಷೆಯ ತರಗತಿಗಳನ್ನು ಪ್ರಾರಂಭಿಸಲು ಕರ್ನಾಟಕ ಸರ್ಕಾರ 2018-19ನೇ ಸಾಲಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರೂ.1 ಕೋಟಿ ವೆಚ್ಚದಲ್ಲಿ ಕೊಂಕಣಿ ಅಧ್ಯಯನ ಪೀಠ ಸ್ಥಾಪಿಸಲಾಯಿತು. ಸದರಿ ಅಧ್ಯಯನ ಪೀಠಕ್ಕೆ 2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆಯಡಿ (2202-03-102-0-02-103) 88 ಲಕ್ಷ ಹಣವನ್ನು ಬಿಡುಗಡೆ ಮಾಡಿ ಕೊಂಕಣಿ ಅಧ್ಯಯನ ಪೀಠದ

ಅಭಿವೃದ್ಧಿಗೆ ಬಳಸಲು ಸೂಚಿಸಿತ್ತು. ಆದರೆ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳು ಈ ಅನುದಾನವನ್ನು ವಿಶ್ವವಿದ್ಯಾಲಯದ ವಸತಿ ನಿಲಯದ ದುರಸ್ತಿ ಕಾರ್ಯಕ್ಕೆ ಬಳಸಿಕೊಂಡಿರುವುದರಿಂದ, ಕಳೆದ ನಾಲ್ಕು ವರ್ಷಗಳಿಂದ ಅಧ್ಯಯನ ಪೀಠದ ಕಾರ್ಯ ಚಟುವಟಿಕೆಗಳನ್ನು ನಡೆಸಲು ಅನಾನುಕೂಲವಾಗಿದೆ. ಹಾಗಾಗಿ, ತಕ್ಷಣವೇ ಅನುದಾನ ಬಿಡುಗಡೆ ಮಾಡುವಂತೆ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಧಾರವಾಡ ಹಾಗೂ ಬೆಳಗಾವಿಯ ವಿವಿಧ ಕೊಂಕಣಿ ಭಾಷಿಕ ಸಂಘಟನೆಗಳು ಆಗ್ರಹಿಸಿರುತ್ತವೆ.

ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನೆಲೆಸಿರುವ ಕೊಂಕಣಿ ಭಾಷಿಕರ ಭಾಷೆ, ಕಲೆ, ಸಾಹಿತ್ಯ, ಶಿಕ್ಷಣ ಹಾಗೂ ಸಂಶೋಧನೆಗಾಗಿ ವಿಶ್ವವಿದ್ಯಾಲಯ ಕೊಂಕಣಿ ಅಧ್ಯಯನ ಪೀಠಕ್ಕಾಗಿ ಈಗಾಗಲೇ ಬಿಡುಗಡೆ ಮಾಡಿದ ಹಣವನ್ನು ಪುನಃ ನೀಡಲು ನಾಲ್ಕು ವರ್ಷಗಳಿಂದ ಕುಲಪತಿಗಳಿಗೆ, ಗೌರವಾನ್ವಿತ ರಾಜ್ಯಪಾಲರಿಗೆ ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ವಿನಂತಿಸಿದರೂ ಇದುವರೆಗೆ ಹಣ ಬಿಡುಗಡೆಯಾಗಿರುವುದಿಲ್ಲ. ಹಾಗಾಗಿ, ತಕ್ಷಣವೇ ಹಣ ಬಿಡುಗಡೆ ಮಾಡಿ ಅಧ್ಯಯನ ಪೀಠದ ಚಟುವಟಿಕೆಗಳನ್ನು ಆರಂಭಿಸಲು ನಿಕಟಪೂರ್ವ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ವಿನಂತಿಸಿದ್ದಾರೆ.

ಆದ್ದರಿಂದ ವಿಶ್ವವಿದ್ಯಾಲಯದ ಕೊಂಕಣಿ ಅಧ್ಯಯನ ಪೀಠಕ್ಕೆ ತಕ್ಷಣವೇ ಹಣ ಬಿಡುಗಡೆ ಮಾಡಲು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ವ್ಹಿ.ಸಂಕನೂರರವರು ಶೂನ್ಯವೇಳೆಯಲ್ಲಿ ಕೇಳಿರುವ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

## 5. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕವಿಪ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1) ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2022

2) ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 2022.

**(ಮುಂದು...)**

(1200)27.12.2022/12.50/ಎಂ.ಎಂ-ವಿ.ಕೆ (ಸಭಾಪತಿಯವರ ಉಪಸ್ಥಿತಿ)

## 06. ವರದಿಗಳನ್ನೊಪ್ಪಿಸುವುದು

**ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ** ಸಭಾಪತಿಯವರೇ, ನಾನು 15ನೇ ವಿಧಾನಸಭೆಯ 2021-22ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯನಾದ ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ಕವಚ-108ಕ್ಕೆ ಸಂಬಂಧಿಸಿದ ಸಮಿತಿಯ 8ನೇ ವರದಿ ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸಂಬಂಧಿಸಿದ "ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ" ಕುರಿತ 9ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**7. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರಗಳನ್ನು ಒದಗಿಸದಿರುವ ಕುರಿತು**

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಮಂಡಿಸಿರುವ ಉತ್ತರಗಳು ಇವತ್ತು 122 ಪ್ರಶ್ನೆಗಳಿಗೆ ೮೮ ಉತ್ತರಗಳು ಮಾತ್ರ ಬಂದಿವೆ. ಮಾನ್ಯ ಸದಸ್ಯರಾದ ರಾಜೇಂದ್ರ ರಾಜಣ್ಣನವರು ಮತ್ತು ಮಾನ್ಯ ಹರೀಶ್ ಕುಮಾರ್‌ರವರ ಪ್ರಶ್ನೆಗಳಿಗೆ ಲಿಖಿತ ಉತ್ತರಗಳು ಬಂದೇ ಇಲ್ಲ. ಅವು ಸ್ಟಾರ್ಡ್ ಆಗಿಲ್ಲ. ಆದರೂ ನಮಗೆ written reply ಬಂದಿಲ್ಲ. ಈ ರೀತಿ ಮೊದಲನೆ ದಿವಸದಿಂದ ಇವತ್ತಿನವರೆಗೂ ಆಗಿದೆ. ದಯವಿಟ್ಟು ಅದನ್ನು ಬೇಗ ಕೊಡಬೇಕು. ಸದನ ಮುಗಿಯುವುದರೊಳಗೆ ಎಲ್ಲಾ ಪ್ರಶ್ನೆಗಳಿಗೂ ಲಿಖಿತ ಉತ್ತರಗಳನ್ನು ಕೊಡಬೇಕೆಂದು ಮನವಿ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಇದರ ಬಗ್ಗೆ ಪ್ರತಿ ಸಲ ನಾನೂ ಹೇಳುತ್ತೇನೆ, ನೀವೂ ಹೇಳುತ್ತೀರಿ. ನಮ್ಮಿಬ್ಬರದ್ದೂ ಹೇಳಿದಂತೆ ನಡೆಯುವುದಿಲ್ಲ. ಅವರಿಗೆ ಉತ್ತರಗಳನ್ನು ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, 122 ಪ್ರಶ್ನೆಗಳ ಪೈಕಿ ೮೮ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಿದ್ದೇನೆ. ಉಳಿದ ಪ್ರಶ್ನೆಗಳಿಗೆ ಇನ್ನು 2-3 ದಿನಗಳಲ್ಲಿ ಉತ್ತರಗಳನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:-** ಇವರು advance ಆಗಿ ಪ್ರಶ್ನೆಗಳನ್ನು ಕೊಟ್ಟಿರುತ್ತಾರೆ. ಆಗ ಅಧಿಕಾರಿಗಳು ತಕ್ಷಣವೇ ಉತ್ತರಗಳನ್ನು ತಯಾರು ಮಾಡಿ ಮಂತ್ರಿಗಳಿಗೆ ಕೊಡಬೇಕಲ್ಲವೇ? ದಯಮಾಡಿ ಇದರ ಬಗ್ಗೆ ಟೈಟ್ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸದನ ಮುಗಿಯುವುದರೊಳಗೆ ಉತ್ತರಗಳನ್ನು ತರಿಸಿಕೊಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಪ್ರಕಾಶ್ ರಾಥೋಡ್‌ರವರು ಹೇಳಿದ್ದೇನೆಂದರೆ, ಹಿಂದೆ ಅವರು ಕೇಳಿದಂತಹ ಪ್ರಶ್ನೆಗಳಿಗೆ ಸದನ ಪ್ರಾರಂಭವಾದ ಮೇಲೂ ಸಹ

ಉತ್ತರ ಬಂದಿಲ್ಲ. ಮೊದಲೆಲ್ಲಾ ಉತ್ತರಗಳನ್ನು ಕಳುಹಿಸಿಕೊಡುತ್ತೇವೆ ಎಂದು ಹೇಳುತ್ತಿದ್ದರು. ಪ್ರತಿ ಸದನದಲ್ಲಿಯೂ ಸಹ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಸಭಾಪತಿಯವರು:-** ಈಗ ಏನು ಮಾಡೋಣ ಹೇಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಏನೆಂದರೆ, ಸರ್ಕಾರ ಇಲ್ಲ ಎಂದು ಹೇಳಿಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ಯಾವ ಗೊಂದಲವೂ ಇಲ್ಲ. ಅವರು, ಸದನ ಮುಗಿದ ಮೇಲಾದರೂ ಉತ್ತರ ಕೊಟ್ಟಿದ್ದೀರಾ ಎಂದು ಕೇಳುತ್ತಿದ್ದಾರೆ. ಸದನ ಮುಗಿದ ಮೇಲೆಯೂ ಎಲ್ಲಾ ಉತ್ತರಗಳನ್ನು ತರಿಸಿ ಅವರ ಕೊಠಡಿಗೆ ಕೊಡುವಂತಹ ಕೆಲಸಗಳನ್ನು ಮಾಡುತ್ತೇವೆ. ಯಾವುದಾದರೂ ನಿರ್ದಿಷ್ಟ ಪ್ರಶ್ನೆಗಳಿದ್ದರೆ ತಿಳಿಸಿದ್ದಲ್ಲಿ ಮತ್ತೆ ಅದಕ್ಕೆ ಉತ್ತರ ತರಿಸಿಕೊಡುತ್ತೇವೆ.

**ಸಭಾಪತಿಯವರು:-** ಈಗ ಸದನ ಮುಗಿಯುವುದರೊಳಗೆ ಎಷ್ಟಾಗುತ್ತದೆ ಅಷ್ಟು ಉತ್ತರಗಳನ್ನು ಕೊಡಿ. ಆಗದಿದ್ದರೆ 7-8 ದಿನಗಳೊಳಗೆ ಉತ್ತರಗಳನ್ನು ಅವರಿಗೆ ತಲುಪಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆಗಲಿ. ಅವರ ಕೊಠಡಿಗೇ ಉತ್ತರಗಳನ್ನು ಕಳುಹಿಸಿಕೊಡುತ್ತೇವೆ. ಅಕಸ್ಮಾತ್ ಯಾವುದಕ್ಕಾದರೂ ಉತ್ತರ ಬಂದಿಲ್ಲವೆಂದರೆ ಅದನ್ನು ತರಿಸಿಕೊಡುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್(ಸಹಕಾರ ಸಚಿವರು)**:- ಮಾನ್ಯ ಸಭಾಪತಿಯವರೇ, ನಾನು ಬೆಂಗಳೂರಿಗೆ ಹೋಗಬೇಕಾಗಿರುವುದರಿಂದ ನಿಯಮ 330ರ ಮೇರೆಗೆ ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರ ಸೂಚನೆಗೆ ಸಂಬಂಧಿಸಿದಂತೆ ಹೇಳಬೇಕಾಗಿದೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ನಾನು ಈಗ ವಿಧೇಯಕವನ್ನು ಪ್ರಾರಂಭ ಮಾಡಿದ್ದೇನೆ. ಇದು ತುಂಬಾ ಸಿಂಪಲ್ ಆಗಿದೆ ಇದನ್ನು ಮುಗಿಸಿಬಿಡುತ್ತೇನೆ. ಅದನ್ನು ನಂತರ ತೆಗೆದುಕೊಳ್ಳಿ.

**ಸಭಾಪತಿಯವರು:-** ಆಯಿತು.

## ೮. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2022

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಆರ್. ಅಶೋಕ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರ್. ಅಶೋಕ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಬೀದಿ ಬದಿಯ ವ್ಯಾಪಾರಿಗಳೇನಿದ್ದಾರೆ ಹೂವು, ಹಣ್ಣು ತರಕಾರಿಗಳನ್ನು ಮಾರುವ ಮಾರಾಟಗಾರರು ಲೋನ್ ತೆಗೆದುಕೊಂಡರೆ ಅದರ ಮೇಲೆ stamp duty ಏನಿತ್ತು ಅದನ್ನು ತೆಗೆದು ಹಾಕಿ ಅವರಿಗೆ ಸಹಾಯ ಮಾಡುವಂತಹ ದೃಷ್ಟಿಯಿಂದ, stamp duty ಹಾಕುವುದರಿಂದ ಅವರಿಗೆ ಹೊರೆಯಾಗುತ್ತದೆ ಮತ್ತು ತಡವಾಗುತ್ತದೆ. ಆ ದೃಷ್ಟಿಯಿಂದ stamp duty ಏನಿತ್ತು ಅದನ್ನು .5% ಅನ್ನು ತೆಗೆದು ಹಾಕಿ ಅದನ್ನು 0% ಮಾಡುವುದು ಈ ವಿಧೇಯಕದ ಉದ್ದೇಶವಾಗಿದೆ. ಆದ್ದರಿಂದ ಇದರ ಸಾಧಕ–ಬಾಧಕಗಳ ಬಗ್ಗೆ ವಿರೋಧಪಕ್ಷಗಳು ಚರ್ಚೆ ಮಾಡಿದರೆ ಒಳ್ಳೆಯದೆಂದು ಹೇಳಬಯಸುತ್ತೇನೆ.

**ಶ್ರೀ ಸಿ.ಎನ್. ಮಂಜೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲಿ ಎಲ್ಲದಕ್ಕೂ stamp duty ಗೆ exemption ಕೊಟ್ಟಿರುವುದನ್ನು ಸ್ವಾಗತ ಮಾಡುತ್ತೇನೆ. ಆದರೆ ಕಾನೂನಿನಲ್ಲಿ ಮಾಜಿ ಸೈನಿಕರಿಗೆ stamp duty exemption ಕೊಡಬೇಕೆಂದು ಇದ್ದರೂ ಕೂಡ ನೀವು exemption ಏತಕ್ಕೆ ಕೊಡುತ್ತಿಲ್ಲ?

**ಸಭಾಪತಿಯವರು:–** ಇವರನ್ನು ಅಲ್ಲಿಗೆ ವಾಪಸ್ ಕಳುಹಿಸಬೇಕು.

**ಶ್ರೀ ಸಿ.ಎನ್. ಮಂಜೇಗೌಡ:-** ಇದು ನಿಜ. ನಾನು ಮಿಲಿಟರಿ ಸೇವೆದಿಂದ ಬಂದಿರುವವನು. ನಾನು ಹೇಳುವುದೇನೆಂದರೆ, stamp duty exemption ಯಾರಿಗೆ ಕೊಡಬೇಕೋ ಅವರಿಗೆ ಕೊಡಿ. ನಾನು ಅದಕ್ಕೆ ವಿರೋಧವಿಲ್ಲ. ಆದರೆ ಮಾಜಿ ಸೈನಿಕರಿಗೆ ಕಾನೂನಿನಲ್ಲಿ stamp duty exemption ಕೊಡಬೇಕೆಂದು ಇದ್ದರೂ ಸಹ ನೀವು ಏತಕ್ಕೆ ಅವರಿಗೆ ಕೊಡುತ್ತಿಲ್ಲ?

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವು ಬೀದಿ ಬದಿ ವ್ಯಾಪಾರಿಗಳಿಗೆ ಸಂಬಂಧಪಟ್ಟಿದೆ. ಮಾನ್ಯ ಸದಸ್ಯರು ಅದಕ್ಕೆ ಸಂಬಂಧಪಟ್ಟ ಬಿಲ್ ತಂದರೆ ಅದಕ್ಕೆ ನಾವು ಉತ್ತರ ಕೊಡುತ್ತೇವೆ. ಇದು ಬೀದಿ ಬದಿ ವ್ಯಾಪಾರಿಗಳಿಗೆ ಮಾತ್ರ.

**ಶ್ರೀ ಸಿ.ಎನ್. ಮಂಜೇಗೌಡ:-** ಈ ಪ್ರಶ್ನೆ ಪುನಃ ಬರುತ್ತದೆ. ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಅದು ಬರುವುದು ತಡವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ಆ ಪ್ರಶ್ನೆಯನ್ನು ಇಲ್ಲಿ ಕೇಳುವುದಕ್ಕೆ ಬರುವುದಿಲ್ಲ. ಕಂದಾಯ ಸಚಿವರು ಹೇಳಿರುವುದೇನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂಬ ಪ್ರಸ್ತಾವನೆಯನ್ನು ಮಂಡಿಸಲಾಗಿದೆ ಎಂದು ಇದೆ. ಹೀಗಿರುವಾಗ ನೀವು ಮಿಲಿಟರಿಗೆ ಏತಕ್ಕೆ ಹೋಗುತ್ತೀರಿ?

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮಿಲಿಟರಿಗೆ ಏತಕ್ಕೆ ಹೋಗುತ್ತೇನೆಂದರೆ, ಈ ದೇಶವನ್ನು ಕಾಯುತ್ತಿರುವವರು ಅವರು. ನಾನು ಅಲ್ಲಿಂದ ಬಂದಿರುವುದರಿಂದ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:-** ಅದು ಆಗುವುದಿಲ್ಲ. ಅಲ್ಲಿಂದ ಬಂದಿರುವುದಕ್ಕೆಲ್ಲಾ ಭಾಗವಹಿಸುವುದಕ್ಕಾಗುತ್ತದೆಯೇ? ಈಗ ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಲಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು. ಇದು Prime Minister Street

Vendor's AtmaNirbhar Nidhi ಯಲ್ಲಿ ತೆಗೆದುಕೊಂಡಿರುವಂತಹ ಅಥವಾ ಆ ಮಾರ್ಗಸೂಚಿಯಲ್ಲಿ ಬರುವಂತಹ ಸಾಲವನ್ನು ಕೊಡುವುದಕ್ಕೆ ಮಾತ್ರ ಅನ್ವಯವಾಗುತ್ತದೆಯೇ ಅಥವಾ ರಾಜ್ಯಮಟ್ಟದಲ್ಲಿ ಬೇರೆ ಬೇರೆ ಯೋಜನೆಯಡಿಯಲ್ಲಿ ಸಹಕಾರ ಸಂಘಗಳಲ್ಲಿ, ಸಹಕಾರ ಬ್ಯಾಂಕುಗಳಲ್ಲಿ ಅಥವಾ ಬೇರೆ ಬೇರೆ Non–Banking Financial Company ಗೂ ಅನ್ವಯವಾಗುತ್ತದೆಯೇ ಎನ್ನುವ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಕೋರುತ್ತೇನೆ. ಹಾಗೂ street vendors ಯೋಜನೆಯಲ್ಲಿ ಯಾವ ಮೊತ್ತದವರೆಗೆ tax exemption ಕೊಡುತ್ತೀರಿ ಅಥವಾ ತಾವು ವಾಪಸ್ ಅದನ್ನು ಕಟ್ಟುತ್ತೀರಾ ಎನ್ನುವುದನ್ನು clarify ಮಾಡಬೇಕೆಂದು ಕೇಳಬಯಸುತ್ತೇನೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು)**:– ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಜೊತೆಗೆ ಕೇಂದ್ರ ಸರ್ಕಾರದ ಇನ್ನೊಂದು ಸ್ಕೀಂ ಸಹ ಇದೆ. ಅದು MSME ಗೆ ತೆಗೆದುಕೊಂಡು ಬಂದಿದ್ದಾರೆ. ಅದಕ್ಕೆ no collateral ಹಾಗೂ ಯಾವುದೇ stamp paper registration ಇಲ್ಲ. ಆ ರೀತಿ upper limit ಏನಾದರೂ ಫಿಕ್ಸ್ ಮಾಡಿದ್ದೀರಾ? 50 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಾ? 05 ಲಕ್ಷ ರೂಪಾಯಿ, 10 ಲಕ್ಷ ರೂಪಾಯಿಗಳನ್ನೆನಾದರೂ ಕೊಡುತ್ತಿದ್ದೀರಾ? ಕೇಂದ್ರ ಸರ್ಕಾರದವರು 50 ಲಕ್ಷ ರೂಪಾಯಿವರೆಗೆ for MSME sectors without collateral and without executing any documents ಕೊಡುತ್ತಿದ್ದಾಗ ತಾವು stamp duty exemption ಮಾಡುತ್ತಿರುವುದನ್ನು ಸ್ವಾಗತ ಮಾಡುತ್ತೇವೆ. ಆದರೆ ಎಷ್ಟರಮಟ್ಟಿಗೆ ನೀವು ಕೊಡುತ್ತಿದ್ದೀರಿ? ನೀವು ಸ್ಟಾಂಪ್ ಡ್ಯೂಟಿಯಿಂದ ಅವರನ್ನು ವಜಾ ಮಾಡುವುದು ಬೇಕಾಗಿಲ್ಲ, ಅವರು ಸ್ಟಾಂಪ್ ಡ್ಯೂಟಿಗೆ ಬರುವುದೇ ಬೇಕಾಗಿಲ್ಲ ಅವರಿಗೆ ಉಚಿತವಾಗಿ ಮಾಡಿ. ಇವರಿಗೆ personal guaranty ಯಲ್ಲಿ ಕೊಡಲಿ. ಆ ರೀತಿ ಏನಾದರೂ ಯೋಚನೆ ಮಾಡಿ ಎಂದು ನಿಮಗೆ ಸಲಹೆ ಕೊಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಸರ್ಕಾರವು ಕರ್ನಾಟಕ ಸ್ಟಾಂಪು ಅಧಿನಿಯಮ, 1957ಗೆ ಮತ್ತಷ್ಟು ತಿದ್ದುಪಡಿಯನ್ನು ತಂದಿದೆ ಇದು ಸ್ವಾಗತಾರ್ಹ ಮಸೂದೆ ಎಂದು ನಾನು ಭಾವಿಸಿದ್ದೇನೆ. ವಿಶೇಷವಾಗಿ ಬೀದಿ ಬದಿ ವ್ಯಾಪಾರಿಗಳಿಗೆ ಸೌಲಭ್ಯಗಳನ್ನು ಕೊಡುವ ಮುಖಾಂತರ ಈ ಬಿಲ್ಲನ್ನು ತಂದಿದ್ದಾರೆ ಆದರೆ

ಮಾನ್ಯ ತಿಪ್ಪೇಸ್ವಾಮಿಯವರು ಏನು ಕೇಳಿದರು ಅದನ್ನೆ ನಾನೂ ಕೇಳಬೇಕೆಂದಿದ್ದೆ. ನಾನು ಅದನ್ನು ಪುನಃ ಕೇಳುವುದಿಲ್ಲ. ಅದರ ಸ್ಪಷ್ಟನೆ ಕೊಡಲಿ ಮತ್ತು ಈ ವಿಧೇಯಕವು ಸ್ವಾಗತಾರ್ಹವಾದ ಮಸೂದೆಯೆಂದು ನಾವೆಲ್ಲರೂ ಒಪ್ಪುತ್ತೇವೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಆದರೆ ಒಂದೆರಡು clarification ಏನೆಂದರೆ, ಬೀದಿ ಬದಿ ವ್ಯಾಪಾರಿಗಳಿಗೆ ಕೊಡುವಂತಹ ಸಾಲದ ಮೇಲೆ stamp duty exemption ಕೊಡುತ್ತಿರುವುದು ಒಬ್ಬ ವ್ಯಕ್ತಿಗೆ ಎಷ್ಟು ಮೊತ್ತದವರೆಗೆ ಸಾಲವನ್ನು ಕೊಡುವುದಕ್ಕೆ ಈ ನಿಯಮದಲ್ಲಿ ಅವಕಾಶವಿದೆ ಮತ್ತು ಈ ಸ್ಟಾಂಪ್ ಡ್ಯೂಟಿಯನ್ನು ಎಷ್ಟು ಮೊತ್ತದವರೆಗೆ exempt ಮಾಡುತ್ತದೆ ಎನ್ನುವ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕು ಮತ್ತು ಇನ್ನೊಂದು ವಿನಂತಿಯೇನೆಂದರೆ, ಸನ್ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಕಾಂಗ್ರೆಸ್ ಜನತಾದಳ ಸಮ್ಮಿಶ್ರ ಸರ್ಕಾರ ಇದ್ದಾಗ ಬೀದಿ ಬದಿ ವ್ಯಾಪಾರಿಗಳಿಗೆ ಪ್ರತಿನಿತ್ಯ ಅವರು ವ್ಯಾಪಾರ ಮಾಡುವುದಕ್ಕೋಸ್ಕರ ಒಂದು ಹೊಸ ಯೋಜನೆಯನ್ನು ತೆಗೆದುಕೊಂಡು ಬಂದರು. ಆದರೆ ಆ ಯೋಜನೆ ಈಗ ಯಾವ ಹಂತದಲ್ಲಿದೆ, ಸಾಲ ಕೊಡುವಂತಹವರಿಗೆ, ತೆಗೆದುಕೊಳ್ಳುವವರಿಗೆ ಕೂಡ ಸ್ಟಾಂಪ್ ಡ್ಯೂಟಿ ಏನಾದರೂ ಇದ್ದರೆ ಅದನ್ನು exempt ಮಾಡುತ್ತೀರಾ? ಬೀದಿ ಬದಿ ವ್ಯಾಪಾರಿಗಳೆಂದರೆ ಯಾರಿಗೂ ಕೂಡ ಅಲ್ಲಿ 01 ಲಕ್ಷ, 50 ಲಕ್ಷ ಕೊಡುವಂತಹದ್ದು ಇಲ್ಲ.

(ಮುಂದು)

(1201) 27-12-2022 1-00 KH/BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಅತ್ಯಂತ ಕಡುಬಡವರಿಗೆ 10 ಸಾವಿರ, 5 ಸಾವಿರ, 15 ಸಾವಿರ, 20 ಸಾವಿರ, 50 ಸಾವಿರ ರೂಪಾಯಿಯೊಳಗೆ ಸಾಲ ಕೊಡುವಂತಹ ಒಂದು ಹೊಸ ಯೋಜನೆಯನ್ನು ಬಡವರಿಗೋಸ್ಕರ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಮತ್ತು ಮಾನ್ಯ ಜಿ.ಪರಮೇಶ್ವರ್ ನೇತೃತ್ವದ ಸಮ್ಮಿಶ್ರ ಸರ್ಕಾರ ಜಾರಿಗೆ ತಂದಿತ್ತು. ಇದಕ್ಕೂ ಆ ಸವಲತ್ತನ್ನು extend ಮಾಡುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ತಾವು ಪರಿಶೀಲಿಸಬೇಕು ಮತ್ತು ಈ ಯೋಜನೆಯಲ್ಲಿ stamp duty ಅನ್ನು ಎಷ್ಟು

ಮೊತ್ತದವರೆಗೆ exempt ಮಾಡಲಾಗುತ್ತದೆ. ಒಬ್ಬ ವ್ಯಕ್ತಿಗೆ ಎಷ್ಟು ಸಾಲವನ್ನು ಕೊಡುವುದಕ್ಕೆ ಅವಕಾಶ ಇದೆ ಎನ್ನುವುದನ್ನು ತಿಳಿಸಬೇಕು. ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ಶರವಣ ಟಿ.ಎ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಕಂದಾಯ ಸಚಿವರು ತಂದಿರುವಂತಹ "ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ 2022 ಅನ್ನು ಸ್ವಾಗತ ಮಾಡುತ್ತಾ, ಒಂದು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಬಯಸುತ್ತೇನೆ. ತಮಗೂ ಗೊತ್ತಿರುವ ಹಾಗೆ ಹಿಂದಿನ ಮೈತ್ರಿ ಸರ್ಕಾರದಲ್ಲಿ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಮತ್ತು ಮಾನ್ಯ ಬಂಡೆಪ್ಪ ಕಾಶಂಪುರ್‌ರವರು ಸಹಕಾರ ಸಚಿವರಿದ್ದಾಗ "ಬಡವರ ಬಂಧು" ಎಂದು ಈ ಬೀದಿಬದಿ ವ್ಯಾಪಾರಿಗಳು ಯಾರಿದ್ದಾರೆ? ಹೂವು, ಹಣ್ಣು, ತರಕಾರಿ ವ್ಯಾಪಾರ ಇರಬಹುದು, ಈ ರೀತಿಯ ಅನೇಕ ಬಡ ಕುಟುಂಬಗಳಿಗೆ ಕನಿಷ್ಠ 10 ಸಾವಿರದಿಂದ 1 ಲಕ್ಷ ರೂಪಾಯಿಯವರೆಗೂ ಉಚಿತವಾಗಿ ಬಡ್ಡಿ ಇಲ್ಲದೇ ಲೋನ್ ಕೊಡುವಂತಹ ಒಂದು ಕಾರ್ಯಕ್ರಮವನ್ನು "ಬಡವರ ಬಂಧು" ಎನ್ನುವ ಹೆಸರಿನಲ್ಲಿ ತಂದಿದ್ದರು. ಈ ಸರ್ಕಾರ ಹೋಗಿ ಬಿ.ಜೆ.ಪಿ. ಸರ್ಕಾರ ಬಂದತಕ್ಷಣ ಈ ಕಾರ್ಯಕ್ರಮ ಕಸದಬುಟ್ಟಿಗೆ ಹೋಗಿಬಿಟ್ಟಿದೆ. ಇದಕ್ಕೆ ಇನ್ನು ಜೀವ ಕೊಟ್ಟಿಲ್ಲ. ಮೊನ್ನೆಯ ದಿವಸ ತರಕಾರಿ ವ್ಯಾಪಾರಿಗಳು ಪ್ರತಿಭಟನೆ ಮಾಡುತ್ತಿದ್ದರು. ಈ ಯೋಜನೆಯ ಬಗ್ಗೆ ಮಾನ್ಯ ಸಚಿವರು ತಿಳುವಳಿಕೆ ಕೊಡಬೇಕು. ಬಹುಶಃ ಈ ಕಾರ್ಯಕ್ರಮವನ್ನು ಮತ್ತೊಮ್ಮೆ ಜಾರಿಗೆ ತಂದರೆ ಅನೇಕ ಬಡವರು ಮತ್ತು ಲಕ್ಷಾಂತರ ಬೀದಿಬದಿ ವ್ಯಾಪಾರಿಗಳು ಏನಿದ್ದಾರೆ, ಅವರ ಜೀವನದಲ್ಲಿಯೂ ಕೂಡ ಒಂದು ಒಳ್ಳೆಯ ಕಾರ್ಯಕ್ರಮವಾಗುತ್ತದೆ. ಮತ್ತೊಮ್ಮೆ ಈ ಕಾರ್ಯಕ್ರಮವನ್ನು ತೆಗೆದುಕೊಂಡು ಬರಬೇಕೆಂದು ಹೇಳಿ ಈ ಸಂದರ್ಭದಲ್ಲಿ ತಮಗೆ ಸಲಹೆ ಕೊಡುವುದಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಬೀದಿ ವ್ಯಾಪಾರಿಗಳಿಗೆ ಯಾವ್ಯಾವ ಆರ್ಥಿಕ ಸಂಸ್ಥೆಗಳಿಂದ ಸಹಾಯಧನ ಅಥವಾ zero percent ಬಡ್ಡಿ ದರದಲ್ಲಿ ಸಾಲ ಕೊಡುತ್ತೇವೆ ಎಂದು ಹಿಂದಿನ ಸರ್ಕಾರ ತಂದಿದೆಯೋ, ಅದು ಈಗ ಮುಂದುವರೆದಿದೆ. ಇದನ್ನು ತೆಗೆದುಕೊಳ್ಳುವವರು ಕಡಿಮೆಯಾಗಿದ್ದರೆ ಮತ್ತು ಕೊಡುವುದರಲ್ಲಿ ವಿಳಂಬವಾಗಿದ್ದರೆ ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಆರ್.ಅಶೋಕ್‌ರವರು ಮಾತನಾಡಬೇಕು.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಇನ್ನು ಮಾನ್ಯ ಎಸ್.ರವಿಯವರು ಮಾತನಾಡಬೇಕು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದನ್ನು ಮುಂದುವರೆಸಿದ್ದರೆ ನಾವು ಅಭಿನಂದಿಸುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಎಲ್ಲರೂ ಮಾತನಾಡಿದ್ದಾರೆ. ಈಗ ಯಾರು ಮಾತನಾಡುವುದಿಲ್ಲ. ತಮಗೆ ಲೇಟ್ ಆಯಿತೇ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ರವಿಯವರು ಮಾತನಾಡುತ್ತಾರೆ ಎಂದು ಹೇಳಿದರು.

**ಸಭಾಪತಿಯವರು:–** ಮಾನ್ಯ ಎಸ್.ರವಿಯವರು ಏನು ಮಾತನಾಡುವುದಿಲ್ಲ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, . . .

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ನೆನ್ನೆ ತಂದಿರುವ ಬಿಲ್ಲು ಪೂರ್ತಿ ಅವರದ್ದೇ ಆಗಿತ್ತು. ನನಗೆ ಅದರದ್ದೇನೂ benefit ಇಲ್ಲ. ಪೂರ್ತಿ benefit ಅವರಿಗೆ ಬರುವುದು.

**ಸಭಾಪತಿಯವರು:–** ಮಾನ್ಯ ಸಚಿವರೇ, ಹೌದು. ಇವತ್ತು ಅವರು tired ಆಗಿದ್ದಾರೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನೆನ್ನೆ ತಂದಿರುವ ಬಿಲ್ಲು ನಮ್ಮ ಬಿಲ್ಲು ಅಲ್ಲ. ನನ್ನನ್ನು ಕೆಣಕುವುದಕ್ಕೆ ಹೋಗಬೇಡಿ. ಅದು real estate ವಿಷಯಕ್ಕೆ ಸಂಬಂಧಪಟ್ಟಿದ್ದಾಗಿದೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಪೂರ್ತಿ benefit ಅವರಿಗೆ ಸಿಗುವುದು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಆಯಿತು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಎಷ್ಟೋ ಎಕರೆ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

**ಸಭಾಪತಿಯವರು:–** ಮಾನ್ಯ ಸಚಿವರೇ, ತಾವು ಉತ್ತರವನ್ನು ಹೇಳಿ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಮುದ್ರಾಂಕ ಕಾಯಿದೆ 1957 ಕಲಂ 19ಕ್ಕೆ ತಿದ್ದುಪಡಿಯನ್ನು ಏನು ತರುತ್ತಿದ್ದೇವೆ ಇದು ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ ಮೀಸಲಾದ ಎಲ್ಲಾ ಸಾಲಗಳಿಗೆ ಸಂಬಂಧಪಟ್ಟಿರುವಂತಹದ್ದಾಗಿದೆ. ಇದನ್ನು ಈಗಾಗಲೇ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೇವೆ. ಇದನ್ನು ಬಜೆಟ್‌ನಲ್ಲಿ ಓದಿದ್ದೀವಿ. ಇದಕ್ಕೆ ಸಂಬಂಧಪಟ್ಟಂತೆ ತರುತ್ತಿದ್ದೀವಿ ಅಷ್ಟೇ. ಮೊದಲು ಮುದ್ರಾಂಕ ಶುಲ್ಕ ಶೇಕಡಾ 0.1 ರಷ್ಟು ಇತ್ತು. 10 ಲಕ್ಷದ ಸಾಲದ ಮೊತ್ತಕ್ಕೆ ಏನು ಮುದ್ರಾಂಕ ಶುಲ್ಕ ಬರುತ್ತಿತ್ತು. ಅದನ್ನು ಮನ್ನಾ ಮಾಡಿದ್ದೀವಿ. ಇಲ್ಲ, ಇನ್ನು ಮೇಲೆ ಅವರು ಯಾವುದೇ ಹಣವನ್ನು ಕಟ್ಟುವ ಆಗಿಲ್ಲ. ಇದರಿಂದ, ಬೀದಿಬದಿ ವ್ಯಾಪಾರಿಗಳು ದಾಖಲೆ ಪತ್ರಗಳನ್ನು ಒತ್ತೆ ಇಡುತ್ತಾರೆ, ಸ್ವತ್ತುಗಳನ್ನು ಒತ್ತೆ ಇಡುತ್ತಾರೆ, ಅದರ ಸಾಲದ ಕರಾರು ಪತ್ರ ಮಾಡಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ನಮ್ಮ stamp duty ಏನು ಕಟ್ಟಬೇಕಾಗಿತ್ತು. ಅದನ್ನು ಮನ್ನಾ ಮಾಡಿದ್ದೇವೆ. ಈಗ ಅದು ಇಲ್ಲ. ಇದರಿಂದ ಸುಮಾರು 2 ಲಕ್ಷ ಬೀದಿಬದಿ ವ್ಯಾಪಾರಿಗಳಿಗೆ ಸಹಾಯವಾಗುತ್ತದೆ. ಯಾರು ಹೂವು, ಹಣ್ಣು, ತರಕಾರಿ ಮಾರಾಟ ಮಾಡುತ್ತಾರೆ. ಈ ರೀತಿಯವರಿಗೆ ಸಹಾಯವಾಗುತ್ತದೆ. ಹಿಂದೆ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಇದ್ದಾಗ ಏನು ತಂದಿದ್ದರೋ, ಅದನ್ನು ಅವರ ಅಧಿಕಾರವಧಿಯಲ್ಲಿ ಮಾಡಿದ್ದಾರೆ. ಅದರಲ್ಲಿಯೇ ಅವರು ನಿಯಮಗಳನ್ನು ಮಾಡಿದ್ದಾರೆ. ಹಿಂದೆ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ತಂದಾಗ ಲೋನ್ ಹೇಗೆ ಕೊಡಬೇಕು. ಅದಕ್ಕೆ ಸಬ್ಸಿಡಿ ಏನಿದೆ, ಎಲ್ಲವನ್ನೂ ಆ ಸರ್ಕಾರವೇ declare ಮಾಡಿಬಿಟ್ಟಿದೆ. ಅದರ ಪ್ರಕಾರವೇ ನಡೆದುಕೊಂಡು ಹೋಗುತ್ತಿದೆ. ಅವರು ಏನು ನಿಯಮ ಮಾಡಿದ್ದರೋ ಅದು ಮುಂದುವರೆಯುತ್ತದೆ. ಯಾವುದೇ ಸರ್ಕಾರ ಮಾಡಿದ್ದರೂ ಅದು ಮುಂದುವರೆಯಬಹುದು.

**ಶ್ರೀ ಶರವಣ ಟಿ.ಎ:–** ಮಾನ್ಯ ಸಚಿವರೇ, . . .

**ಶ್ರೀ ಆರ್.ಅಶೋಕ್:–** ಮಾನ್ಯ ಸದಸ್ಯರೇ ಗೊತ್ತಿಲ್ಲ. ಇದು ನನ್ನ ಇಲಾಖೆಗೆ ಬರುವುದಿಲ್ಲ. ನಮ್ಮದೇನಿದ್ದರೂ stamp duty ಅಷ್ಟೆ. ಅದರಿಂದ ಈ ಒಂದು ವಿಧೇಯಕ ಬರುವುದರಿಂದ, ಆ ಒಂದು ವಿಧೇಯಕ ಬಡವರಿಗೆ ಸಹಾಯವಾಗುತ್ತದೆ. ಆ ದೃಷ್ಟಿಯಿಂದ ಈ ವಿಧೇಯಕಕ್ಕೆ ಅನುಮೋದನೆ ಕೊಡಬೇಕು.

**ಸಭಾಪತಿಯವರು:– ಪ್ರಸ್ತಾವ ಏನೆಂದರೆ;**

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022 ನೇ ಸಾಲಿನ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ

ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**9. ನಿಯಮ 330ರ ಮೇರೆಗೆ ಚರ್ಚೆ**

**ವಿಷಯ: ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆವಿಗೂ ಕ್ರಮ ಕೈಗೊಳ್ಳದಿರುವ ಬಗ್ಗೆ ಹಾಗೂ ಹಣ ಹೂಡಿಕೆ ಮಾಡಿ ವಂಚಿತರಾದವರಿಗೆ ಪರಿಹಾರ ಒದಗಿಸದಿರುವ ಕುರಿತು.**

***

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಆಗಿರುವಂತಹ ಅವ್ಯವಹಾರದ ಬಗ್ಗೆ ಸುಮಾರು 16 ತಿಂಗಳುಗಳಿಂದ ಪ್ರತಿ ಅಧಿವೇಶನದಲ್ಲಿಯೂ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ನೆನ್ನೆ ನಮ್ಮ ಸಭಾನಾಯಕರು ಏನು ಮಾರಾಯರೇ, ಪ್ರತಿ ಸಾರಿ ಕೇಳುತ್ತೀರಿ. ತಮ್ಮದೇ ಹಾಕುತ್ತಾರೆ ಎಂದು ಹೇಳಿದರು. ನನಗೆ ಒಂದು ರೀತಿಯಲ್ಲಿ ಬೇಜಾರಾಯಿತು.

ಏಕೆಂದರೆ, ನಾನು ಮೊದಲೇ ಹೇಳಿದ್ದೆ. ನಿಮ್ಮದೇ ನೀವು ಕೇಳುವುದಿಲ್ಲ. ನಮ್ಮದೆಲ್ಲ ಕೇಳುತ್ತೀರಿ ಎಂದು ಹೇಳಿದ್ದೆ. ತಮ್ಮ ಮೇಲೆ ಒಬ್ಬ ಡಿ.ಸಿ.ಪಿ ಏನಾದರೂ ಹಾಕಿದರೆ ಅದನ್ನೇ ತಾವು ಸರ್ಕಾರದ ಹತ್ತಿರ ಪ್ರಶ್ನೆ ಮಾಡುವುದಿಲ್ಲ. ಇನ್ನು ನಮಗೇನು ರಕ್ಷಣೆ ಕೊಡುತ್ತೀರಿ ಎನ್ನುವುದು ಒಂದು ಕಡೆ ನಮಗೆ ಭಯ. ಇರಲಿ ಇದು ತಮ್ಮ ವಿಚಾರ. ತಾವು ಏನಾದರೂ ಮಾಡಿಕೊಳ್ಳಿ. ನಾನು ಪ್ರತಿ ಬಾರಿಯೂ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ವಿಚಾರ ತೆಗೆದಾಗ 3-4 ಬಾರಿಯಿಂದ ಮಾನ್ಯ ಮಂತ್ರಿಗಳು ಅವರದ್ದೇ ದಾಟಿಯಲ್ಲಿ ಅಧಿಕಾರಿಗಳು ಬರೆದುಕೊಟ್ಟಂತಹ ಉತ್ತರವನ್ನು ಪ್ರತಿ ಬಾರಿ ಓದಿದ್ದಾರೆ. ಆದರೆ, ಯಾವುದೇ ತರವಾದಂತಹ ಪ್ರಗತಿ ಇವತ್ತಿನವರೆಗೂ ಆಗಿಲ್ಲ. ನಾನು 7-8 ಅಂಶಗಳನ್ನು ಕೇಳಿಬಿಡುತ್ತೇನೆ. ಇದಕ್ಕೆ ಉತ್ತರ ಹೇಳಿದರೆ ಬೇಗನೆ ಮುಗಿಸಿಬಿಡೋಣ. ಕಳೆದ ಬಾರಿ ಉತ್ತರಿಸುವಂತಹ ಸಮಯದಲ್ಲಿ ತಾವು ಹೇಳಿದ್ದೀರಿ. ಯಾರ್ಯಾರು ವಂಚನೆ ಮಾಡಿದ್ದಾರೆ ಎನ್ನುವ ಆಧಾರದ ಮೇಲೆ ಅವರುಗಳಿಗೆ ಶಿಕ್ಷೆ ವಿಧಿಸುವ ಸಲುವಾಗಿ ಸಿಐಡಿ, ಸಿಬಿಐ, ಇ.ಡಿ.,ಯವರಿಗೆ ಮಾಹಿತಿ ನೀಡಿದ್ದೇನೆ. ಅದರಿಂದ ಎಷ್ಟು ಮೊತ್ತದ ಹಣ ಮೋಸ ಮಾಡಿದ್ದಾರೆಯೋ, ಅವರನ್ನು ಬಂಧಿಸುತ್ತೇವೆ. ಅವರಿಂದ ಎಷ್ಟು ಮೊತ್ತದ ಹಣ ವಶಪಡಿಸಿಕೊಳ್ಳಲಾಗಿದೆ, ಎಷ್ಟು ಆಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಈ ಪ್ರಕರಣವನ್ನು ಸಿಐಡಿಗೆ ಕೊಟ್ಟ ಮೇಲೆ ಎಷ್ಟು ಆಸ್ತಿಯನ್ನು ಜಪ್ತಿ ಮಾಡಿದ್ದೀರಿ, ಎಷ್ಟು ಮಂದಿಯನ್ನು ಅರೆಸ್ಟ್ ಮಾಡಿದ್ದೀರಿ, ಜಪ್ತಿಯಾಗಿರುವ ಆಸ್ತಿಗಳನ್ನೇನಾದರೂ ವಿಲೇವಾರಿ ಮಾಡಿದ್ದೀರಾ, ವಸೂಲಾಗಿರುವ ಆಸ್ತಿಗಳ ಬಗ್ಗೆ ಬ್ಯಾಂಕಿನ ಸದಸ್ಯರುಗಳಿಗೆ ಒಂದು ಮೆಸೇಜ್ ಕೊಡಬೇಕೆಂದು 16 ತಿಂಗಳ ಹಿಂದೆ ನಾನು ಹೇಳಿದ್ದೆ. ಕೊನೆಯ ಪಕ್ಷ 3 ತಿಂಗಳಿಗೆ, 6 ತಿಂಗಳಿಗೆ ಮೆಸೇಜ್ ಕೊಡಬೇಕೆಂದು ಹೇಳಿದ್ದೆ. ಏಕೆಂದರೆ, ಇಲ್ಲಿ ಸುಮಾರು 2000 ಕೋಟಿ ರೂಪಾಯಿಗಳು ನಷ್ಟವಾಗಿದೆ. ಅವರಿಗೆ ಏನಾದರೂ ಮಾಹಿತಿ ಕೊಡಿ ಎಂದು ಹೇಳಿದ್ದೆ. ಅದರ ಬಗ್ಗೆ ನನಗೆ ಮಾಹಿತಿ ಬೇಕು. 24 ಜನರು ಅತ್ಯಂತ ಹೆಚ್ಚು ಸಾಲ ಪಡೆದವರು. ಅವರ ಹೆಸರನ್ನು ಬ್ಯಾಂಕ್‌ನ ನೋಟಿಸ್ ಬೋರ್ಡ್‌ಗೆ ಹಾಕಿ, publish ಮಾಡಿ, ಶ್ರೀ ಗುರು ರಾಘವೇಂದ್ರ ಬ್ಯಾಂಕ್‌ನಲ್ಲಿ ಇಂತಹವರು ಮೋಸ ಮಾಡಿದ್ದಾರೆ ಎಂದು ಹಾಕಿ, ಕನಿಷ್ಠಪಕ್ಷ ಠೇವಣಿದಾರರಿಗೆ ಈ ದುಡ್ಡು ಎಲ್ಲಿ ಹೋಗಿದೆ ಎಂದು ಗೊತ್ತಾಗಲಿ ಎಂದರೆ ಅದನ್ನು ಸಹ ಮಾಡಲಿಲ್ಲ. ಕಳೆದ ಅಧಿವೇಶನದಲ್ಲಿ ಸಿಐಡಿ.,ಯವರಿಗೆ 20 ದಿವಸಗಳ ಹಿಂದೆ ಅಂದರೆ, ಆಗಸ್ಟ್ 22 ರಂದು timebound ನೀಡಿರುವುದಾಗಿ ಮಾನ್ಯ ಸಚಿವರು ಸದನದಲ್ಲಿ ಹೇಳಿದರು. ಈಗ 4 ತಿಂಗಳಾಯಿತು. ಸಿಐಡಿ.,ಯವರು

ಜಪ್ತಿ ಮಾಡಿರುವ ಆಸ್ತಿಗಳ ವಿವರಗಳು ಏಷ್ಟು? ಜಪ್ತಿ ಮಾಡಿರುವುದನ್ನು ಹರಾಜು ಹಾಕಲಾಗಿದೆಯೇ, ಇದರಿಂದ ಬಂದಂತಹ ದುಡ್ಡನ್ನು ಯಾರಾದರೂ ಠೇವಣಿದಾರರಿಗೆ ಕೊಟ್ಟಿದ್ದೀರಾ, ಆಡಿಟ್ ಪೂರ್ಣವಾಗಿದೆ ಎಂದು ತಿಳಿಸಿದ್ದೀರಿ. ಹಾಗಾದರೆ, ಇಲ್ಲಿಯವರೆಗೂ ಈ ಬ್ಯಾಂಕ್‌ನಲ್ಲಿ ಒಟ್ಟಾರೆಯಾಗಿ ಎಷ್ಟು ಹಣ ನಷ್ಟವಾಗಿದೆ? ಸಹಕಾರ ಇಲಾಖೆಯ ಶಿಫಾರಸ್ಸಿನ ಮೇರೆಗೆ ಬ್ಯಾಂಕ್ ಲೆಕ್ಕಪರಿಶೋಧಕರ ವಿರುದ್ಧ ಆರ್‌ಬಿಐ ತೆಗೆದುಕೊಂಡಿರುವ ಕ್ರಮಗಳೇನು? ಇ.ಡಿ.ಯವರಿಗೆ ಮಾಹಿತಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಇ.ಡಿ.ಯವರು ಏನು ಕ್ರಮ ತೆಗೆದುಕೊಂಡಿದ್ದಾರೆ? 24 ಮುಖ್ಯ ಸಾಲಗಾರರಲ್ಲಿ 892.85 ಕೋಟಿ ಸಾಲದ ಬಾಬ್ತಿನಲ್ಲಿ ಎಷ್ಟು ವಸೂಲಾಗಿದೆ, ಜಪ್ತಿ ಎಷ್ಟು ಮಾಡಲಾಗಿದೆ, ಎಷ್ಟು ಮಂದಿಯನ್ನು ಅರೆಸ್ಟ್ ಮಾಡಲಾಗಿದೆ? ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅನ್ನು ಪುನಶ್ಚೇತನ ಮಾಡುತ್ತೇವೆ ಎಂದು ಕಳೆದ ಬಾರಿ ಮಾನ್ಯ ಸಚಿವರು ಹೇಳಿದರು. ಆವತ್ತು ಬಂದು ಎಲ್ಲಿಗೋ ಹೋದರು. ನಾಳೆ ಸಭೆ ಕರೆದು ಮೀಟಿಂಗ್ ಮಾಡುತ್ತೇನೆ ಎಂದು ಹೇಳಿದರು. ಆ ವಿಚಾರದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ? ಇದು ಆರ್.ಬಿ.ಐ.,ಗೆ ಹೋಗಿದೆ. ಇದರಲ್ಲಿ ಏನಾದರೂ expression of interest ಬಂದಿದೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ತಿಳಿಸಬೇಕು. ಮಾನ್ಯ ಸಚಿವರು ಉತ್ತರವನ್ನು ಹೇಳಿದ ಮೇಲೆ ನಾನು ಮಾತನಾಡುತ್ತೇನೆ.

(ಮುಂದು)

(1202)27-12-2022(01-10)bsd-bns

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿ ಲಗತ್ತಿಸಿದೆ)**

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ 1999 ರಲ್ಲಿ ಸ್ಥಾಪನೆಯಾಗಿದೆ. 2019ರಲ್ಲಿ ಹಣ ದುರುಪಯೋಗವಾಗಿದೆ ಎಂದು Reserve Bank of India ನವರು identification ಮಾಡಿದ್ದಾರೆ. Auditor ರವರು final ಮಾಡಿರುವಂತೆ ರೂ.1,294 ಕೋಟಿ fraud ಆಗಿದೆ ಎಂದು audit report ಕೊಟ್ಟಿದ್ದಾರೆ. ಇದೆಲ್ಲವನ್ನೂ ಸಂಬಂದಪಟ್ಟ ಪೋಲೀಸ್ ಠಾಣೆಯಲ್ಲಿ ಅವರ ವಿರುದ್ಧ FIR ಆಗಿದೆ. ಎರಡನೆಯದಾಗಿ CID ತನಿಖೆಗಾಗಿ ವರ್ಗಾವಣೆ ಮಾಡಲಾಗಿದ್ದು, ಅವರೂ ತನಿಖೆ ಮಾಡುತ್ತಿದ್ದಾರೆ. ಜೊತೆಗೆ ರೂ.819 ಕೋಟಿಗಳನ್ನು highest ಸಾಲ ತೆಗೆದುಕೊಂಡಿರುವ ಬಗ್ಗೆ E.D. (Enforcement Directorate) ಗೂ ಸಹ ವಹಿಸಿದ್ದೇವೆ. ಸುಮಾರು ರೂ.1,194 ಕೋಟಿ ಮೊತ್ತದಷ್ಟು E.D. ಮತ್ತು CID ರವರು property seize ಮಾಡಬೇಕೆಂದು ಅಂತಿಮಗೊಳಿಸಿದ್ದಾರೆ. ಇದುವರೆಗೂ ರೂ.712.35 ಕೋಟಿಗಳನ್ನು 22,244 ಜನರಿಗೆ ಕೊಟ್ಟಿದ್ದು, ನಮ್ಮ ಇಲಾಖೆಯವರು administrator ಅನ್ನು ಹಾಕಿದ್ದಾರೆ. ಆದರೆ RBI ನವರು ಹೈಕೋರ್ಟ್‌ಗೆ ಹೋಗಿ ಒಬ್ಬರು ಶ್ರೀ ಅಶೋಕನ್ ಎಂಬುವವರನ್ನು ಹಾಕುವಂತೆ ಆದೇಶ ಮಾಡಿಸಿದ್ದಾರೆ. ಶ್ರೀ ಅಶೋಕನ್ ರವರು recovery ಮಾಡುವುದಕ್ಕೆ interest ತೆಗೆದುಕೊಳ್ಳುತ್ತಿಲ್ಲ. ಎಲ್ಲವನ್ನು RBI ಮೂಲಕವೇ supervise ಮಾಡುತ್ತಿದ್ದಾರೆ. ನಮ್ಮ ಸಹಕಾರ ಇಲಾಖೆಯ administrator ಆಗಿದ್ದರೆ, recovery ಬಗ್ಗೆ ಅವರಿಗೆ idea ಇರುತ್ತದೆ, precautionary measures ತೆಗೆದುಕೊಳ್ಳಬಹುದಾಗಿತ್ತು. ನಮಗೆ ಅಧಿಕಾರ ಇಲ್ಲ. ಎಲ್ಲವೂ RBI, High Court, CID, E.D. ಗಳ ಮೂಲಕ ಆಗುತ್ತಿದೆ. ಆದರೂ ನಮ್ಮಲ್ಲಿನ ಉನ್ನತಾಧಿಕಾರಿಗಳು ಎಲ್ಲವನ್ನೂ E.D. ಗೆ ವಹಿಸುವ ಕೆಲಸ ಮಾಡಿದ್ದಾರೆ. ರೂ.1194 ಕೋಟಿಗಳಷ್ಟು E.D., CID ರವರು ತೆಗೆದುಕೊಂಡು, ಅದನ್ನು auction ಮಾಡುವುದಕ್ಕೆ process ಕೂಡ ಆಗಿದೆ. ಈ ಬ್ಯಾಂಕ್ ಅನ್ನು takeover ಮಾಡಲು ಐವರು ಮುಂದೆ ಬಂದಿದ್ದು, RBI ನವರು ಕೇಳಿರುವ ಅಂಶಗಳೆಲ್ಲವನ್ನೂ fulfil ಮಾಡಿದ್ದೇವೆ. RBI ನವರಿಗೆ ಈ ಐವರ ಬಗ್ಗೆಯೂ ಕೊಟ್ಟಿದ್ದೇವೆ. ಇದರಲ್ಲಿ ಯಾರಾದರೂ ಒಬ್ಬರನ್ನು accept ಮಾಡಿದಾಗ, ಈ ರೂ.1,294 ಕೋಟಿಗಳನ್ನು ತೀರಿಸುತ್ತೇವೆ ಎನ್ನುವ ಬಗ್ಗೆ ಒಪ್ಪಿಗೆಯಾಗಿದೆ. RBI ನವರು scrutiny ಮಾಡುತ್ತಿರಬಹುದೆಂದು ಕಾಣುತ್ತದೆ. ಏಕೆಂದರೆ ನಾವು follow up ಮಾಡಿಕೊಂಡು, ಜಾಸ್ತಿ force ಮಾಡಿದರೆ ಆಗುವುದಿಲ್ಲ. ಅವರು scrutiny ಕೆಲಸ ಮಾಡಬೇಕು, ಈಗಾಗಲೇ ಕೋಟ್ಯಾಂತರ ರೂಪಾಯಿಗಳು loss ಆಗಿದೆ. ಮತ್ತೆ loss ಆಗುತ್ತದೆಂದರೆ ಆಗುವುದಿಲ್ಲ. ಅದಕ್ಕೆ ಕೂಲಂಕಷವಾಗಿ

ಎಲ್ಲಾ details ಮಾಡಿಕೊಂಡು, ಐದರಲ್ಲಿ ಒಂದಕ್ಕೆ permission ಕೊಡುತ್ತೇವೆ ಎನ್ನುವುದನ್ನು ಹೇಳಿದ್ದಾರೆ. Permission ಕೊಟ್ಟು takeover ಆದರೆ ಏನೇನು ಆಗಬೇಕೋ, ಎಲ್ಲವೂ ಆಗುತ್ತದೆ. ಈ depositors ಯಾರ್ಯಾರು ಇರುತ್ತಾರೆ, ಸಾಲ ತೆಗೆದುಕೊಂಡಿರುವವರು ಇರುತ್ತಾರೆ, ಅವರುಗಳು ಸುಮಾರು ರೂ.300 ಕೋಟಿ bank deposit ಇಟ್ಟಿದ್ದು, ಅದೆಲ್ಲವನ್ನೂ freeze ಮಾಡಲಾಗಿದೆ. E.D. ಗೆ ಹೋಗಿರುವುದರಲ್ಲಿ ರೂ.1,194 ಕೋಟಿ property ಯನ್ನು seize ಮಾಡಿದ್ದೇವೆ. Audit ಮಾಡಿರುವವರನ್ನು disqualify ಮಾಡಿದ್ದೇವೆ. ಅವರೆಲ್ಲನ್ನೂ ಪೋಲೀಸ್‌ರಲ್ಲಿ ದಾಖಲಾಗಿದ್ದಾರೆ. Audit report ಕೂಡ final ಆಗಿದೆ. ಈ ವಿಚಾರಗಳನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಾ, RBI ನವರು ಕೊಟ್ಟ ತಕ್ಷಣ ನೂರಕ್ಕೆ ನೂರು ಈ ಸಹಕಾರಿ ಬ್ಯಾಂಕ್‌ನ problem solve ಆಗುತ್ತದೆಂದು ನಮ್ಮ ಉದ್ದೇಶವಾಗಿದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಇನ್ನು ಈ ಪ್ರಶ್ನೆ ಕೇಳುವುದಿಲ್ಲ, ಏಕೆಂದರೆ ಪ್ರತಿಬಾರಿ ಪ್ರಶ್ನೆ ಕೇಳಿದಾಗಲೂ ಮಾನ್ಯ ಸಚಿವರು ಹಾಗೂ ಮಾನ್ಯ ಸಭಾನಾಯಕರು ಬೇಜಾರು ಮಾಡಿಕೊಳ್ಳುತ್ತಾರೆ. ಮಾನ್ಯ ಸಚಿವರು ಶ್ರೀ ಅಶೋಕನ್ ರವರಿಗೆ ಅಷ್ಟು experience ಇಲ್ಲ ಎಂದು ಹೇಳಿದರು. Co-operative filed ಮತ್ತು nationalised banks field ಗಳು ಬೇರೆ ಬೇರೆಯಾಗಿರುತ್ತವೆ. ಇದರಲ್ಲಿ ಠೇವಣಿ ಇಟ್ಟಿರುವ 90% ಜನರು ಆಡಳಿತ ಪಕ್ಷಕ್ಕೆ ಓಟು ಹಾಕಿದವರಾಗಿದ್ದಾರೆ. ಅವರು ಕಣ್ಣು ಮುಚ್ಚಿದರೆ ಕಮಲದ ಕಡೆ ಕೈ ಎಳೆಯುತ್ತದೆ. ಅವರ ಶಾಪ ಇವರಿಗೆ ಒಳ್ಳೆಯದ್ದಲ್ಲ. ನಾನು ಸುಮಾರು 16 ತಿಂಗಳುಗಳಿಂದ ಹೇಳುತ್ತಿದ್ದು, ಇದನ್ನು CBI ಗೆ ಏಕೆ ಕೊಡುವುದಿಲ್ಲ? ಶ್ರೀ ಅಶೋಕನ್ ರವರು ಬಂದ ಮೇಲೆ 2020 ರಲ್ಲಿ ರೂ.8 ಕೋಟಿಗಳ ಖರ್ಚು ಮತ್ತು ದಿನಾಂಕ 31-03-2021ಕ್ಕೆ ರೂ.483 ಕೋಟಿಗಳು ಖರ್ಚಾಗಿದೆ. ಇದನ್ನು maintenance and repair ಗಾಗಿ ಖರ್ಚು ಮಾಡಲಾಗಿದೆ ಎಂದು audit ನಲ್ಲಿ ತೋರಿಸಲಾಗಿದೆ. ಅವರು ರೂ.483 ಕೋಟಿಗಳನ್ನು ಹೇಗೆ ಖರ್ಚು ಮಾಡುತ್ತಾರೆ? ಅಲ್ಲಿ ಸುಮಾರು ರೂ.1200 ಕೋಟಿ ಅವಶ್ಯಕತೆಯಿದ್ದು, ಅದನ್ನು ಸರ್ಕಾರ ಅಥವಾ ಯಾರ ಬಳಿಯಾದರೂ ಷೇರು ತೆಗೆದುಕೊಂಡು ಮಾಡಬಹುದು. ಈ ಬಡವರನ್ನು ಉಳಿಸುವುದಕ್ಕೆ ಏನಾದರೂ ಮಾರ್ಗ ಹುಡುಕಬೇಕು. ಅವರು ಸಹಕಾರಿ ರಂಗದಲ್ಲಿ ಅತೀ ಹೆಚ್ಚು experience ಇರುವವರು ಮತ್ತು ಬುದ್ಧಿವಂತರಾಗಿದ್ದಾರೆ. ನಾವು

ಎಷ್ಟು ಬಾರಿ ಹೇಳುವುದು? ರೂ.12 ಕೋಟಿ ಅವ್ಯವಹಾರವನ್ನು CBI ಗೆ ಕೊಡುತ್ತಾರೆ. ಮೊನ್ನೆ ಸುಮಾರು ರೂ.280 ಕೋಟಿಗಳ ವಶಿಷ್ಠ ಬ್ಯಾಂಕ್ ಅವ್ಯವಹಾರವನ್ನು CBI ಗೆ ಕೊಡುವುದಿಲ್ಲ ಎಂದು ಹೇಳಿದರು. ಇವತ್ತು ರೂ.1294 ಕೋಟಿ ಎಂದು ಹೇಳಿ ಕಳೆದ ಬಾರಿ ನೀಡಿರುವ ಉತ್ತರದಲ್ಲಿ ರೂ.2000 ಕೋಟಿ ಎಂದು ಹೇಳಿದ್ದಾರೆ. ಇದು ಪ್ರತಿ ಬಾರಿ ಹೇಗೆ ಬದಲಾವಣೆಯಾಗುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ. ಒಳ್ಳೆಯದು, ಕಡಿಮೆ loss ಆಗಿದ್ದರೆ ನಮಗೆ happy, ಜಾಸ್ತಿ loss ಆಗಿದ್ದರೆ ಯೋಚನೆ ಮಾಡಬೇಕಾಗಿತ್ತು. ಶ್ರೀ ಅಶೋಕನ್ ರವರಿಗೆ ರೂ.483 ಕೋಟಿಗಳನ್ನು ಖರ್ಚು ಮಾಡಲು ಹೇಗೆ allow ಮಾಡಿದರು? ರೂ.483 ಕೋಟಿಗಳನ್ನು ಯಾರಿಗಾದರೂ ಜನರಿಗೆ ವಾಪಸ್ಸು ಕೊಟ್ಟಿದ್ದರೆ ಸಹಾಯವಾಗುತ್ತಿತ್ತು. ಆದ್ದರಿಂದ ಈ ಅವ್ಯವಹಾರವನ್ನು CBI ಗೆ ಕೊಟ್ಟರೆ ನಾನು question ಕೇಳುವುದನ್ನು ಬಿಟ್ಟುಬಿಡುತ್ತೇನೆ. ಆಮೇಲೆ ನನ್ನ ಹಣೆಬರಹ, ಏನಾಗುತ್ತದೋ ಆಗಲಿ.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಸಭಾಪತಿಯವರೇ, CBI ಗೆ ಕೊಡುವುದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ, ಆದರೆ CBI ಗೆ ಕೊಟ್ಟರೆ ಬಹಳ delay ಆಗುತ್ತದೆ. ನಮ್ಮ ಕರ್ನಾಟಕದ CID officers ಬಹಳ powerful ಆಗಿದ್ದಾರೆ.

**ಶ್ರೀ ಯು.ಬಿ. ವೆಂಕಟೇಶ್:–** ಇದರಲ್ಲಿ ಸರ್ಕಾರ, ಪೋಲೀಸ್ ಅಧಿಕಾರಿಗಳೆಲ್ಲರೂ ಶಾಮೀಲಾಗಿದ್ದಾರೆ. ಇದನ್ನು ನಾನು ಒಪ್ಪುವುದಿಲ್ಲ.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಶಾಮೀಲಾಗಿದ್ದಾರೆ ಎಂದು ಹೇಳುವುದನ್ನು ನಾನೂ ಒಪ್ಪುವುದಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:–** ಹೌದು, ಇಲ್ಲದಿದ್ದರೆ CBI ಗೆ ಕೊಡಿ.

**ಶ್ರೀ ಎಸ್.ಟಿ. ಸೋಮಶೇಖರ್:–** ಅಲ್ಲಿ ಠೇವಣಿ ಇಟ್ಟಿರುವವರು ಬಡವರಾಗಿರುವವರಾಗಿದ್ದಾರೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ರೂ.12 ಕೋಟಿಗಳನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರು ತನಿಖೆ ಮಾಡಿ ಎಂದು ಕೇಳಲಿ.

**ಸಭಾಪತಿಯವರು:-** ನಿಮ್ಮ ಅಭಿಪ್ರಾಯ ನೀವು ಹೇಳಿ, ಸರ್ಕಾರ ಏನು ಹೇಳುತ್ತದೋ ಹೇಳಲಿ.

**ಶ್ರೀ ಯು.ಬಿ. ವೆಂಕಟೇಶ್:-** ರೂ.12 ಕೋಟಿಗಳ ಅವ್ಯವಹಾರವನ್ನು ಕೊಟ್ಟಿದ್ದು, ರೂ.1200 ಕೋಟಿಗಳ ಅವ್ಯವಹಾರವನ್ನು ಕೊಡುವುದಕ್ಕೆ ಆಗುವುದಿಲ್ಲವೇ?

**ಶ್ರೀ ಎಸ್.ಸಿ. ಸೋಮಶೇಖರ್:-** ಬಾಗಲಕೋಟೆ DCC Bank ನ ರೂ.12 ಕೋಟಿಗಳ ಅವ್ಯವಹಾರವನ್ನು ಅಲ್ಲಿನ Board ನ ತೀರ್ಮಾನ ಮಾಡಿರುವಂತೆ ಕೊಟ್ಟಿದ್ದೇವೆ.

**ಶ್ರೀ ಯು.ಬಿ. ವೆಂಕಟೇಶ್:-** ಈಗ ಎಲ್ಲವೂ ಅವರ ಕೈಯಲ್ಲಿದೆ, ಅದನ್ನು supersede ಮಾಡಿದ್ದಾರೆ. ಅಲ್ಲಿರುವವರು ಬಡವರು.

**ಶ್ರೀ ಎಸ್.ಟಿ. ಸೋಮಶೇಖರ್:-** ಬಡವರ ಜೊತೆ ಅಥವಾ ಹಣದಲ್ಲಿ ಯಾರೂ ಆಟ ಆಡುತ್ತಿಲ್ಲ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** 3 ವರ್ಷಗಳಿಂದ ಜನರು ಊಟಕ್ಕಾಗಿ ಆಶ್ರಮವನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ.

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, RBI direction ಮಾಡುತ್ತದೆ. ಆ ರಾಘವೇಂದ್ರ Co-operative Bank ಗೆ ನಾವು administrator ಅನ್ನು ಹಾಕಿ, ನಮ್ಮ department officials ಅನ್ನು ಇಟ್ಟು ನಾವು recovery ಮಾಡುತ್ತಿದ್ದೆವು. RBI ನವರು ಹೈಕೋರ್ಟ್‌ಗೆ ಹೋಗಿ direction ಮಾಡಿಸಿಕೊಂಡು, ಬ್ಯಾಂಕ್‌ನಲ್ಲಿ experience ಇರುವವರನ್ನು administrator ಆಗಿ ಹಾಕಬೇಕೆಂದು, ಶ್ರೀ ಅಶೋಕನ್ ಎನ್ನುವವರನ್ನು ಹಾಕುವಂತೆ ಮಾಡಿದ್ದಾರೆ. ಇಂತಹ ಅಧಿಕಾರಿಯನ್ನೇ administrator ರನ್ನಾಗಿ ಹಾಕಬೇಕೆಂದು RBI and High Court ಆದೇಶದ ಮೇರೆಗೆ ಸಹಕಾರ ಇಲಾಖೆಯಿಂದ ಅವರನ್ನು administrator ರನ್ನಾಗಿ ಮಾಡಿದ್ದೇವೆ. ನಮ್ಮ ಅಧಿಕಾರಿಯನ್ನು ವಾಪಸ್ಸು ಕರೆಸಿಕೊಂಡೆವು. ನಮ್ಮ ಅಧಿಕಾರಿ ಇದ್ದಿದ್ದರೆ entire department ಅನ್ನು ಇದಕ್ಕೆ involve ಮಾಡಿಕೊಂಡು recovery ಮಾಡುತ್ತಿದ್ದೆವು. ಆದರೂ ರೂ.1195 ಕೋಟಿ property ಯನ್ನು E.D. ಮತ್ತು CID ಮೂಲಕ seize ಮಾಡಿಸುವುದಕ್ಕೆ

ಏರ್ಪಾಡು ಮಾಡಿದ್ದೇವೆ. ಉಳಿದ 24 ಜನರು ರೂ.895 ಕೋಟಿಗಳನ್ನು ತೆಗೆದುಕೊಂಡಿರುವವರ property ಇರಬಹುದು, ಬೇರೆ ಬೇರೆ ಇರಬಹುದು, ಅವುಗಳನ್ನು auction ಮಾಡಿದ್ದಾರೆ. CID ಬಹಳ ಸಮರ್ಥರಿದ್ದು, procedure ಪ್ರಕಾರ ಮಾಡುತ್ತಿದ್ದಾರೆ. ಅಲ್ಲಿ ಏನಾಗಿದೆ ಎಂದರೆ ಯಾರದ್ದೋ deposit ಅನ್ನು ಯಾರಿಗೋ ಸಾಲ ಕೊಟ್ಟಿದ್ದಾರೆ. ಕೆಲವರದ್ದು deposit ಇಲ್ಲದಿದ್ದರೂ ಅವರ ಹೆಸರಿನಲ್ಲಿ ಸಾಲ ಕೊಟ್ಟಿದ್ದಾರೆ. ಈ ರೀತಿ 24 ಬೇನಾಮಿ ಹೆಸರಿನಲ್ಲಿ ಸಾಲಗಳನ್ನು ಕೊಟ್ಟಿದ್ದು, ಇದೆಲ್ಲವನ್ನೂ ಹುಡುಕಿ, set right ಮಾಡಿಕೊಂಡು ರೂ.1294 ಕೋಟಿ ಎಂದು auditor ನವರು ಅಂತಿಮಗೊಳಿಸಿದ್ದಾರೆ. ರೂ.1194 ಕೋಟಿಗಳನ್ನು seize ಮಾಡಿ, ರೂ.1294 ಕೋಟಿ auditor ನವರು final ಮಾಡಿದ್ದು, ಇದೆಲ್ಲವನ್ನೂ ED ಮೂಲಕ ಮಾಡಲಿದ್ದು, ED ರವರು ಬಹಳಷ್ಟು measures ತೆಗೆದುಕೊಂಡಿದ್ದಾರೆ. Property ಗಳನ್ನು seize ಮಾಡಿದ್ದಾರೆ. ಇದು ಬಡವರ ದುಡ್ಡು, ನಾವು ಆಟ ಆಡುತ್ತಿಲ್ಲ. ನಮ್ಮ department ಇತಿಮಿತಿಯೊಳಗೆ ಏನು ಕ್ರಮ ತೆಗೆದುಕೊಳ್ಳಬಹುದು, ನಮ್ಮ department ನ ಅಧಿಕಾರಿವರ್ಗದವರನ್ನು ಎಷ್ಟರಮಟ್ಟಿಗೆ involvement ಮಾಡಬಹುದೋ, ಆ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ಇದರಲ್ಲಿ ಯಾರಿಗೂ yield ಆಗುವ ಅಥವಾ support ಮಾಡುವ ಪ್ರಶ್ನೆಯೇ ಇಲ್ಲ.

(ಮುಂದು)

**(1203) 27.12.2022/1.20/ಹೆಚ್‌ವಿ:ಜಿಆರ್**

**ಶ್ರೀ ಎಸ್.ಟಿ.ಸೋಮಶೇಖರ್(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ರಿಕವರಿ ಮಾಡಿಸಿ ಅವರಿಗೆ ಕೊಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಈ ಬ್ಯಾಂಕಿನ ಮಾಜಿ ಅಧ್ಯಕ್ಷರು, ಮಾಜಿ ನಿರ್ದೇಶಕರುಗಳನ್ನು ಒಳಗೊಂಡಂತೆ ಐದು ಜನರ ಮೇಲೆ ವಂಚನೆಯ ಮಾಹಿತಿ ಮತ್ತು ವರದಿಗಳನ್ನು ಸಿ.ಐ.ಡಿ., ಮತ್ತು E.D., ಸಂಸ್ಥೆಗೆ ನೀಡಲಾಗಿದೆ. ರಿಸರ್ವ್ ಬ್ಯಾಂಕ್‌ನವರನ್ನು ನಾವು ಫಾಲೋ ಅಪ್ ಮಾಡುತ್ತಿದ್ದೇವೆ. ಕೇಂದ್ರ ಹಣಕಾಸು ಸಚಿವರಾಗಿರುವ ಶ್ರೀಮತಿ ನಿರ್ಮಲ ಸೀತಾರಾಮನ್ ಅವರಿಗೆ ಇದರ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಯಾರಾದರು ಐದು ಜನರಲ್ಲಿ ಒಬ್ಬರ ಮೇಲೆ ರಿಕವರಿಗೆ ಅನುಮತಿಯನ್ನು ಕೊಟ್ಟರೇ,

ಇಡೀ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಿಂದ ಉದ್ಭವವಾಗಿರುವ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ವಿಚಾರದಲ್ಲಿ ಯಾರನ್ನೂ ರಕ್ಷಣೆ ಮಾಡುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಮ್ಮ ಸರ್ಕಾರ ಬಡವರ ಜೊತೆಗೆ ಚೆಲ್ಲಾಟವಾಡುತ್ತಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ನಿರ್ಮಲ ಸೀತಾರಾಮನ್ ಅವರಿಗೆ ಮಾಹಿತಿ ಕೊಡುವುದು ಒಂದು ಕಡೆ ಇರಲಿ. ಆದರೆ, ಇವರ ಮೇಲೆ ನಮಗೆ ನಂಬಿಕೆ ಇದೆ. ರಾಜ್ಯದಲ್ಲಿ ಇವರದೇ ಸರ್ಕಾರ ಅಧಿಕಾರದಲ್ಲಿದೆ; ಇವರು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಹಕಾರ ಸಚಿವರು, "ರಿಸರ್ವ್ ಬ್ಯಾಂಕ್‌ನವರು ರಾಜ್ಯದ ಹೈಕೋರ್ಟ್‌ನ ಮೂಲಕ ಅಲ್ಲಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ್ದಾರೆ" ಎಂದು ಹೇಳಿದ್ದಾರೆ. ಇದರರ್ಥ ಈ ವಿಚಾರದ ಬಗ್ಗೆ ರಾಜ್ಯ ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲವೆಂದು ಕೋರ್ಟ್ ಮೂಲಕ ರಿಸರ್ವ್ ಬ್ಯಾಂಕ್‌ನವರು ಅಲ್ಲಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸುಮಾರು 842 ಕೋಟಿ ರೂಪಾಯಿಗಳ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಟ್ಟು 24 ಜನರ ಮೇಲೆ ಕ್ರಮ ಜರುಗಿಸಲು ಸಿ.ಐ.ಡಿ.,ಯವರಿಗೆ ವಹಿಸಿಕೊಡಲಾಗಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇಲ್ಲಿಯವರೆಗೆ ಅವರು ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸಿ.ಐ.ಡಿ.,ಯಲ್ಲಿ ಏನೂ ಆಗುವುದಿಲ್ಲ ಎನ್ನುವ ನಂಬಿಕೆ ನಮಗೆ ಬಹಳವಿದೆ. ಏಕೆಂದರೆ, ಮಾನ್ಯ ಸಚಿವರು ಪದೇಪದೇ "ಬಡವರ ದುಡ್ಡು... ಬಡವರ ದುಡ್ಡು" ಎಂದು ಹೇಳುತ್ತಿದ್ದಾರೆ. ಸಿ.ಐ.ಡಿ., ಸರಿಯಾಗಿ ಕೆಲಸ ಮಾಡಿದ್ದರೆ, ರಿಸರ್ವ್ ಬ್ಯಾಂಕ್‌ನವರು ಕೋರ್ಟ್‌ಗೆ ಹೋಗಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಆದ್ದರಿಂದ ಇಲ್ಲಿಯವರೆಗೆ ಎಷ್ಟು ಜನರನ್ನು ಅರೆಸ್ಟ್ ಮಾಡಲಾಗಿದೆ ಎನ್ನುವ ಮಾಹಿತಿಯನ್ನು ಮಾನ್ಯ ಸಚಿವರು ಈ ಸದನಕ್ಕೆ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಸನ್ಮಾನ್ಯ ಸಭಾಪತಿಯವರೇ, ಸುಮಾರು 42 ಜನರನ್ನು ಅರೆಸ್ಟ್ ಮಾಡಲಾಗಿದೆ. ಅವರುಗಳ ಮೇಲೆ ಕೇಸ್ ದಾಖಲು ಮಾಡಲಾಗಿದೆ ಮತ್ತು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಮೊದಲಿಗೆ ರಿಸರ್ವ್ ಬ್ಯಾಂಕ್‌ನವರು, "ನಾವೇ ಆಡಳಿತಾಧಿಕಾರಿಯನ್ನು ನೇಮಕ ಮಾಡಿ ತನಿಖೆ ಮಾಡುತ್ತೇವೆ" ಎನ್ನುವ ಮಾತನ್ನು ಹೇಳಿದ್ದರು. ಅದಕ್ಕೆ ನಾವು ಒಪ್ಪದೇ ಇದ್ದ ಹಿನ್ನೆಲೆಯಲ್ಲಿ ಅವರು ರಾಜ್ಯ ಹೈಕೋರ್ಟ್‌ಗೆ ಹೋಗಿ, ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ನಿರ್ದೇಶನವನ್ನು ತೆಗೆದುಕೊಂಡು ಬಂದಿದ್ದಾರೆ. ರಿಸರ್ವ್ ಬ್ಯಾಂಕ್‌ನವರು ಇಬ್ಬರ ಹೆಸರನ್ನು ಪ್ರಪೋಸಲ್ ಮಾಡಿದ್ದರು. ಆ ಇಬ್ಬರಲ್ಲಿ ಶ್ರೀ ಆರ್.ಅಶೋಕನ್ ಎನ್ನುವವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ಕೋರ್ಟ್ ನಿರ್ದೇಶನವನ್ನು ನೀಡಿತ್ತು. ನಾವು ನಮ್ಮ ಅಡಿಷನಲ್ ರಿಜಿಸ್ಟ್ರಾರ್ ಅವರನ್ನು ಹಾಕಿದ್ದೆವು.

**ಸಭಾಪತಿಯವರು:-** ಕೋರ್ಟ್‌ನ ನಿರ್ದೇಶನದ ಮೇರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆಯೇ?

**ಶ್ರೀ ಎಸ್.ಟಿ.ಸೋಮಶೇಖರ್:-** ಸನ್ಮಾನ್ಯ ಸಭಾಪತಿಯವರೇ, ಕೋರ್ಟ್ ನಿರ್ದೇಶನದ ಮೇರೆಗೆ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ಈಗಲೂ ರಿಸರ್ವ್ ಬ್ಯಾಂಕ್‌ನವರೇ ಅದನ್ನು scrutiny ಮಾಡುತ್ತಿದ್ದಾರೆ. ಶ್ರೀ ಆರ್.ಅಶೋಕನ್ ಎನ್ನುವವರಿಗೆ ಹಣವನ್ನು ರಿಕವರಿ ಮಾಡುವ ಬಗ್ಗೆ ಒತ್ತಡವನ್ನು ಹೇರುತ್ತಿದ್ದೇವೆ. ಇದರ ಬದಲಿಗೆ ನಮ್ಮವರೇ ಆಡಳಿತಾಧಿಕಾರಿಯಾಗಿದ್ದರೆ, ಅವರಿಗೆ ಯಾವ ರೀತಿಯಲ್ಲಿ ರಿಕವರಿ ಮಾಡಬೇಕು, ನೋಟೀಸ್ ಯಾವ ರೀತಿಯಲ್ಲಿ ಕೊಡಬೇಕು; ಆಸ್ತಿಯನ್ನು ಯಾವ ರೀತಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಯಾವ ರೀತಿಯಲ್ಲಿ ಹಾರಾಜು ಮಾಡಬೇಕು ಎನ್ನುವ ಮಾಹಿತಿ ಇರುತ್ತಿತ್ತು. ಅಷ್ಟೊಂದು ಮುತುವರ್ಜಿಯಿಂದ ಶ್ರೀ ಆರ್.ಅಶೋಕನ್‌ರವರು ಕಾರ್ಯನಿರ್ವಹಿಸುತ್ತಿಲ್ಲ. ರಿಸರ್ವ್ ಬ್ಯಾಂಕ್‌ನವರ ಜೊತೆಗೆ ನಾಲ್ಕು ಮೀಟಿಂಗ್‌ಗಳನ್ನು ಮಾಡಿದ್ದೇವೆ. ಆ ನಾಲ್ಕು ಮೀಟಿಂಗ್‌ಗಳಲ್ಲಿ, "ತಾವು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿರುವ ಶ್ರೀ ಆರ್.ಅಶೋಕನ್ ಎನ್ನುವವರು ಪ್ರಾಮಾಣಿಕವಾಗಿ ರಿಕವರಿ ಮಾಡುತ್ತಿಲ್ಲ. ಅವರು ಪ್ರಾಮಾಣಿಕವಾಗಿ ರಿಕವರಿ ಮಾಡಲು ಪ್ರಾರಂಭ ಮಾಡಿದ್ದರೆ ನಮ್ಮ

ಇಲಾಖೆ ತಮಗೆ ಯಾವ ರೀತಿಯ ಸಹಾಯ-ಸಹಕಾರ ನೀಡುವುದಕ್ಕೂ ಸಿದ್ಧವಿದೆ" ಎನ್ನುವ ಮಾತನ್ನು ಹೇಳಿದ್ದೇವೆ. ಸಿ.ಐ.ಡಿ., ಅಧಿಕಾರಿಗಳ ಜೊತೆಗೂ ನಾವು ಸಭೆಯನ್ನು ನಡೆಸುತ್ತಿದ್ದೇವೆ. ಅವರು ಕೂಡ E.D., ಯವರ ಜೊತೆಗೆ ಸೇರಿ 1,194 ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಆ ಆಸ್ತಿಗಳನ್ನು ಹರಾಜು ಮಾಡಿದರೆ, 1,294 ಕೋಟಿ ರೂಪಾಯಿಗಳಷ್ಟು ಸಾಲವನ್ನು ಸಂಪೂರ್ಣವಾಗಿ ತೀರಿಸುವುದಕ್ಕೆ ಸಾಧ್ಯವಾಗುತ್ತದೆ, ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಾನು ನೂರಕ್ಕೆ ನೂರರಷ್ಟು ಭರವಸೆಯನ್ನು ಕೊಡುತ್ತಿದ್ದೇನೆ. ಐದು ಜನ ಹೂಡಿಕೆದಾರರು ಈ ಬ್ಯಾಂಕ್ ಅನ್ನು take over ಮಾಡಿಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆ. ರಿಸರ್ವ್ ಬ್ಯಾಂಕ್‌ನವರು ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ಗೆ ಸಂಬಂಧಪಟ್ಟ ಮಾಹಿತಿಗಳನ್ನು ಕೇಳಿದ್ದರು, ನಾವು ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದೇವೆ. "ಸಾವಿರಾರು ಜನ ಠೇವಣಿದಾರರಿಗೆ ತೊಂದರೆಯಾಗಿದೆ ನೋವಾಗಿದೆ ಆದಷ್ಟು ಬೇಗ ರಿಕವರಿ ಮಾಡಿಕೊಡಿ" ಎಂದು ನಮ್ಮ ಇಲಾಖೆ ಅಧಿಕಾರಿಗಳು ರಿಸರ್ವ್ ಬ್ಯಾಂಕ್‌ನ ಜೊತೆಗೆ ನಡೆಸಿರುವ ಪ್ರತಿ ಸಭೆಗಳಲ್ಲಿ ಪದೇಪದೇ ಹೇಳುತ್ತಿದ್ದಾರೆ. ಅವರು ರಿಕವರಿ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ, ಇಲ್ಲದಿದ್ದರೆ ಮುಟ್ಟುಗೋಲು ಹಾಕಿಕೊಂಡಿರುವ 1194 ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಆಸ್ತಿಯನ್ನು ಹರಾಜು ಮಾಡಿದರೆ, ಸಾಲವನ್ನು ಸಂಪೂರ್ಣವಾಗಿ ತೀರಿಸುವುದಕ್ಕೆ ಸಾಧ್ಯವಾಗುತ್ತದೆ. ಸಿ.ಬಿ.ಐ.,ನವರಿಗೆ ಸದರಿ ಪ್ರಕರಣವನ್ನು ವಹಿಸಿಕೊಟ್ಟರೆ ಬೇಗ ಮುಗಿಸಿಕೊಡಿ ಎಂದು ಅವರ ಮೇಲೆ ನಾವು ಒತ್ತಡವನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಕರಣದ ತನಿಖೆ ಪೂರ್ಣಗೊಳ್ಳುವುದು ತಡವಾಗುತ್ತದೆ ಎನ್ನುವ ಒಂದೇ ಉದ್ದೇಶದ ಹಿನ್ನೆಲೆಯಲ್ಲಿ ಸಿ.ಐ.ಡಿ., ಮತ್ತು E.D., ಅವರಿಗೆ ಸದರಿ ಪ್ರಕರಣವನ್ನು ವಹಿಸಿಕೊಟ್ಟು process ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಿ.ಐ.ಡಿ.,ಯವರು ಬಹಳ ಚೆನ್ನಾಗಿ ತನಿಖೆ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ರಾಜ್ಯದ ಉಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ಶ್ರೀ ಆರ್. ಅಶೋಕನ್ ಎನ್ನುವವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಆಡಳಿತಾಧಿಕಾರಿ ಬಂದ ಮೇಲೆ ಸುಮಾರು 483 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

**ಸಭಾಪತಿಯವರು:–** "ಖರ್ಚು ಮಾಡಿದ್ದಾರೆ" ಎಂದರೆ, ಅದು ಬೇರೆ ಅರ್ಥವನ್ನು ಕೊಡುತ್ತದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಆ ಮಾಹಿತಿಯನ್ನು ನೀಡಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಸನ್ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಹೇಳಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲ, ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾತನಾಡುವಾಗ ಹೇಳಿದ್ದಾರೆ. ಅವರು ಆರ್.ಬಿ.ಐ., ಕಡೆಯವರಾಗಿರಬಹುದು ಅಥವಾ ಯಾರೇ ಆಗಿರಬಹುದು, ಕೇವಲ ಮೂರು ತಿಂಗಳಲ್ಲಿ 483 ಕೋಟಿ ರೂಪಾಯಿಗಳನ್ನು maintenance ಗಾಗಿ ವೆಚ್ಚ ಮಾಡಿದ್ದಾರೆಂದರೆ, ಅಲ್ಲಿ ಏನೋ ಆಗಿದೆ ಎನ್ನುವುದು ಸಾಬೀತಾಗುತ್ತಿದೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಹೇಳಿರುವುದು ಸತ್ಯದ ವಿಚಾರವಾಗಿದ್ದರೆ, ಆ ಆಡಳಿತಾಧಿಕಾರಿಯ ಮೇಲೆ ತನಿಖೆಯನ್ನು ನಡೆಸಬೇಕಾಗುತ್ತದೆ. ಆಡಳಿತಾಧಿಕಾರಿಯಾಗಿರುವ ಶ್ರೀ ಆರ್.ಅಶೋಕನ್ ಎನ್ನುವವರು ರಿಕವರಿ ಮಾಡುವ ಪ್ರಕ್ರಿಯೆಯನ್ನು ವಿಳಂಬ ಮಾಡುತ್ತಿದ್ದಾರೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇದರಲ್ಲಿ ಆರ್.ಬಿ.ಐ., ಅಧಿಕಾರಿ ಮತ್ತು ಕಾಣದ ಕೈ ಶಾಮೀಲಾಗಿದೆಯೆಂದು ಇದರಿಂದ ತಿಳಿದುಬರುತ್ತಿದೆ. ಆರ್.ಬಿ.ಐ., ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರಬಹುದು ಆದರೆ, they are not above suspicion. ಅವರ ಮೇಲೆ ಕ್ರಮ ಜರುಗಿಸಬೇಕಾಗಿದೆ. ಆರ್.ಬಿ.ಐ., ನವರು ನೇಮಿಸಿರುವಂತಹ ಆ ಆಡಳಿತಾಧಿಕಾರಿಯ ಮೇಲೆ ಇಷ್ಟೊಂದು ದೊಡ್ಡ ಪ್ರಮಾಣದ ಹಣ ವೆಚ್ಚ ಮಾಡಿರುವಂತಹ ಆರೋಪವಿದೆ. ಇದರ ಬಗ್ಗೆ ಸರ್ಕಾರ ತನಿಖೆಯನ್ನು ನಡೆಸಬೇಕಾಗಿದೆ ಮತ್ತು ಕೇಂದ್ರ ಸರ್ಕಾರದ ಹಣಕಾಸು ಸಚಿವರಿಗೆ ಈ ಆಡಳಿತಾಧಿಕಾರಿ ನೇಮಕವಾದ ಮೇಲೆ ಇಷ್ಟೊಂದು ಹಣವನ್ನು ವೆಚ್ಚ ಮಾಡಿದ್ದಾರೆಂದು ಮಾಹಿತಿಯನ್ನು ನೀಡಬೇಕಾಗಿದೆ ಮತ್ತು ಅವರ ಮೇಲೆ ಕ್ರಮವನ್ನು ಜರುಗಿಸಬೇಕಾಗಿದೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಸನ್ಮಾನ್ಯ ಸಭಾಪತಿಯವರೇ, ಆರ್.ಬಿ.ಐ., ನವರಿಗೆ ಇದರ ಬಗ್ಗೆ ಸಂಪೂರ್ಣವಾದ ಮಾಹಿತಿ ಇದೆ. ರಿಸರ್ವ್ ಬ್ಯಾಂಕ್‌ನವರು ಪ್ರತಿ ತಿಂಗಳು ಇದನ್ನು ರಿವ್ಯೂ

ಮಾಡುತ್ತಿದ್ದಾರೆ. ರಿಸರ್ವ್ ಬ್ಯಾಂಕ್‌ನವರೇ ನೇರವಾಗಿ involve ಆಗಿರುವುದರಿಂದ ಅವರಲ್ಲಿ ನಾವು ಮನವಿಯನ್ನು ಮಾಡಬಹುದು ಅಷ್ಟೆ. ಈ ಬ್ಯಾಂಕ್‌ನಲ್ಲಿ ಹೆಚ್ಚಿನ ಸಾಲವನ್ನು ಪಡೆದುಕೊಂಡು ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಜಸ್ವಂತ್ ರೆಡ್ಡಿ ಮತ್ತು ರಂಜಿತ್ ರೆಡ್ಡಿರವರ ವಿರುದ್ಧ ರೆಡ್ ಕಾರ್ನರ್ ನೋಟೀಸ್ ಅನ್ನು ಹೊರಡಿಸುವಂತೆ ಸಿ.ಐ.ಡಿ.,ಯವರು ಸಿ.ಬಿ.ಐ.,ಗೆ ಕೋರಿರುತ್ತಾರೆ. ನೋಟೀಸ್ ಅನ್ನು ಇಶ್ಯೂ ಮಾಡಲಾಗಿದೆ. ಸಿ.ಐ.ಡಿ.,ಯವರು ಏನೇನು ಮಾಡಬಹುದು ಅದೆಲ್ಲವನ್ನೂ ಮಾಡುತ್ತಿದ್ದಾರೆ. ಈ ಬ್ಯಾಂಕ್‌ನಲ್ಲಿ ಲಕ್ಷಾಂತರ ಜನ ಬಡವರು ಮತ್ತು ಮಧ್ಯಮ ವರ್ಗದವರು ಠೇವಣಿ ಇಟ್ಟಿದ್ದಾರೆ ಎನ್ನುವುದನ್ನು ಅರ್ಥ ಮಾಡಿಕೊಂಡಿರುವ ಸಿ.ಐ.ಡಿ.,ಯ ಎಸ್.ಪಿ., ಯವರು ಕಳಕಳಿಯಿಂದ ಬಹಳ ವೇಗವಾಗಿ ತನಿಖೆಯನ್ನು ನಡೆಸುತ್ತಿದ್ದಾರೆ. ಇಷ್ಟೇ ತಿಂಗಳಿನಲ್ಲಿ ತನಿಖೆಯನ್ನು ಮುಗಿಸಿ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಯು.ಬಿ.ವೆಂಕಟೇಶ್‌ರವರು ಮೂರು ತಿಂಗಳಲ್ಲಿ ಸುಮಾರು 483 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಅಷ್ಟು ದೊಡ್ಡ ಮೊತ್ತವನ್ನು ವೆಚ್ಚ ಮಾಡುವಂತಹ ಅಧಿಕಾರ ಆಡಳಿತಾಧಿಕಾರಿಯಾಗಿರುವ ಶ್ರೀ ಆರ್.ಅಶೋಕನ್ ಎನ್ನುವವರಿಗಿಲ್ಲ. ಆಡಳಿತಾಧಿಕಾರಿಯಾಗಿರುವವರು ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾದರೂ ರಿಸರ್ವ್ ಬ್ಯಾಂಕ್‌ನವರು ಅನುಮತಿಯನ್ನು ನೀಡಬೇಕಾಗಿದೆ. ಈ ರೀತಿ ಇರುವಾಗ ಅವರು 483 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವ ಮಾಹಿತಿ ನನಗಿಲ್ಲ, ಅದನ್ನು ತಿಳಿದುಕೊಂಡು ಹೇಳುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಕೊಟ್ಟಿರುವ ಮಾಹಿತಿಯ ಪ್ರಕಾರ repair and maintenance ಸಲುವಾಗಿ 483 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವ ದಾಖಲೆಯನ್ನು ಬ್ಯಾಂಕ್‌ನಿಂದ ತೆಗೆದುಕೊಳ್ಳಾಗಿದೆ. ಆ ದಾಖಲೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತಿದ್ದೇನೆ. ಅದರ ಬಗ್ಗೆ ತನಿಖೆ ನಡೆಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಸಂಬಂಧಪಟ್ಟ ದಾಖಲೆಯನ್ನು ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡಲಾಯಿತು)**

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಕಳೆದ 4 ಅಧಿವೇಶನಗಳಿಂದ ಈ ವಿಚಾರ ಚರ್ಚೆಗೆ ಬರುತ್ತಿದೆ. ಮಾನ್ಯ ಸಚಿವರು ಕಳೆದ ಬಾರಿಯ ಅಧಿವೇಶನದಲ್ಲಿ ಏನು ಉತ್ತರವನ್ನು ಹೇಳಿದ್ದರು, ಅದೇ ಉತ್ತರವನ್ನು ಈ ಬಾರಿಯೂ ನೀಡಿದ್ದಾರೆಯೇ ಹೊರತು ಹೊಸ ವಿಷಯವನ್ನು ಹೇಳುತ್ತಿಲ್ಲ. ಮುಂದಿನ ಜನವರಿ 10ನೇ ತಾರೀಖಿಗೆ ಈ ಬ್ಯಾಂಕ್ ಮುಚ್ಚಿ ಮೂರು ವರ್ಷಗಳಾಗುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಠೇವಣಿ ಇಟ್ಟವರ ಠೇವಣಿ ವಾಪಸ್ಸು ಸಿಗಲಿಲ್ಲ. ವೃದ್ಧಾವಸ್ಥೆಗೆ ಬೇಕಾಗುತ್ತದೆಂದು ಠೇವಣಿ ಇಟ್ಟವರು ಇವತ್ತು ಊಟಕ್ಕೂ ಗತಿ ಇಲ್ಲದೇ ಬಸವನಗುಡಿಯಲ್ಲಿರುವ ವಿದ್ಯಾಪೀಠ, ಶ್ರೀ ರಾಘವೇಂದ್ರ ಸ್ವಾಮಿ ಮಠಗಳಲ್ಲಿ ಪ್ರಸಾದಕ್ಕಾಗಿ ಹುಡುಕಿಕೊಂಡು ಹೋಗುತ್ತಿದ್ದಾರೆ. ಮಕ್ಕಳು ದಾಸೋಹಕ್ಕೆ ಹೋಗುವ ರೀತಿಯಲ್ಲಿ ಅವರು ಹೋಗಿ ಊಟ ಮಾಡಿಕೊಂಡು ಬರುತ್ತಿದ್ದಾರೆ. ಔಷಧಿ ತೆಗೆದುಕೊಳ್ಳುವುದಕ್ಕೂ ಅವರ ಬಳಿ ಹಣವಿಲ್ಲದಂತಾಗಿದೆ.

**ಸಭಾಪತಿಯವರು:-** ಈಗ ಸರ್ಕಾರ ಏನು ಮಾಡಬೇಕೆಂದು ಹೇಳಿ.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಈ ಪ್ರಕರಣವನ್ನು ಸಿ.ಬಿ.ಐ.,ಗೆ ವಹಿಸಿಕೊಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಸುಮಾರು 12 ಕೋಟಿ ಅವ್ಯವಹಾರವನ್ನು ಸಿ.ಬಿ.ಐ.,ಗೆ ವಹಿಸಿಕೊಟ್ಟಿರುವಾಗ, 1200 ಕೋಟಿ ರೂಪಾಯಿಗಳ ಅವ್ಯವಹಾರವನ್ನು ಏತಕ್ಕೋಸ್ಕರ ಇವರು ಸಿ.ಬಿ.ಐ.,ಗೆ ವಹಿಸಿಕೊಡುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಪ್ರಕರಣವನ್ನು ಸಿ.ಬಿ.ಐ.,ಗೆ ವಹಿಸಿಕೊಡಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸಿ.ಐ.ಡಿ., ಅಧಿಕಾರಿಗಳು ಈ ಪ್ರಕರಣದ ಬಗ್ಗೆ ತನಿಖೆ ನಡೆಸುವುದಕ್ಕೆ ಸಮರ್ಥರಿದ್ದಾರೆ. ಅವರು ತನಿಖೆ ನಡೆಸುತ್ತಿದ್ದಾರೆ. ಸಿ.ಬಿ.ಐ.,ಗೆ ಸದರಿ ಪ್ರಕರಣವನ್ನು ವಹಿಸಿಕೊಟ್ಟರೇ ತನಿಖೆ ಪೂರ್ಣಗೊಳ್ಳುವುದು ಇನ್ನೂ ತಡವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಅದಕ್ಕೆ ವಹಿಸಿಕೊಟ್ಟಿಲ್ಲ. ಇದರ ಜೊತೆಗೆ ಇ.ಡಿ.ಯವರು ಸಹ ಕಾರ್ಯನಿರ್ವಹಿಸುತ್ತಿದ್ದಾರೆ. ಇ.ಡಿ.ಯವರು ಸುಮಾರು 1194 ಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

**ಸಭಾಪತಿಯವರು:–** ಬೇಗಬೇಗನೆ ತನಿಖೆಯನ್ನು ಪೂರ್ಣಗೊಳಿಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಆಡಳಿತಾಧಿಕಾರಿಗಳ ಮೇಲೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ನಾವು ಸದನದ ಬಾವಿಗಿಳಿದು ಧರಣಿ ನಡೆಸಬೇಕಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಪಿ.ಆರ್.ರಮೇಶ್ ಅವರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಎಲ್ಲ ಸದಸ್ಯರುಗಳು ಸದನದ ಬಾವಿಗಿಳಿದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಈಗ ಗಮನ ಸೆಳೆಯುವ ಸೂಚನೆ. ಮೊದಲಿಗೆ ಶ್ರೀ ಡಿ.ಎಸ್.ಅರುಣ್‌ರವರು ಪ್ರಸ್ತಾಪಿಸಲಿರುವ ವಿಷಯವನ್ನು ತೆಗೆದುಕೊಳ್ಳೋಣ.

**( ಗೊಂದಲ )**

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಈ ಬ್ಯಾಂಕ್‌ನಲ್ಲಿ ಠೇವಣಿಯಾಗಿ ಇಟ್ಟಿರುವ ಸಾರ್ವಜನಿಕರ ಹಣ ಪೋಲಾಗಿದೆ.

**ಸಭಾಪತಿಯವರು:–** ಮಾನ್ಯ ಪಿ.ಆರ್.ರಮೇಶ್‌ರವರೇ, ತಾವು ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದೀರಿ. ಸರ್ಕಾರ ಅದನ್ನು ಒಪ್ಪಿಕೊಂಡಿಲ್ಲ. ಸರ್ಕಾರ ತನ್ನದೇ ಆಗಿರುವ ರೀತಿಯಲ್ಲಿ ತನಿಖೆ ಮಾಡುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಚರ್ಚೆಯಲ್ಲ, ಬಹಳಷ್ಟು ಚರ್ಚೆಯಾಗಿದೆ. ದಯವಿಟ್ಟು ಸರ್ಕಾರ ಈ ಪ್ರಕರಣವನ್ನು ಸಿ.ಬಿ.ಐ., ತನಿಖೆಗೆ ವಹಿಸಿಕೊಡುವುದು

ಒಳ್ಳೆಯದು ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಸಿ.ಓ.ಡಿ.,ಯವರು ಏನೂ ಮಾಡುವುದಿಲ್ಲ. ಹೋಗಿ ಸೆಲ್ಯೂಟ್ ಹೊಡೆಯುತ್ತಾರೆ ಅಷ್ಟೆ.

**(ಗೊಂದಲ)**

**ಶ್ರೀ ಪಿ.ಆರ್.ರಮೇಶ್:-** ಸನ್ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿರುವ ಬಿ.ಜೆ.ಪಿ., ಸರ್ಕಾರದ ಮತ್ತು ರಾಜ್ಯದಲ್ಲಿರುವ ಬಿ.ಜೆ.ಪಿ., ನಾಯಕರ ಒತ್ತಡವಿರುವಾಗ, ಸಾರ್ವಜನಿಕರ ಹಣಕ್ಕೆ ಯಾರು ಜವಾಬ್ದಾರರು?

(ಗೊಂದಲ)

(ಮುಂದುವರಿದಿದೆ)

(1204) 27.12.2022 1.30 ಪಿಕೆ:ಜಿಆರ್

**ಸಭಾಪತಿಯವರು:-** ಒಬ್ಬರು ಮಾತನಾಡಿ. ಈ ರೀತಿ ಎಲ್ಲರೂ ಮಾತನಾಡುವುದಕ್ಕೆ ಹೋಗಬೇಡಿ.

(ಗೊಂದಲ)

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, 31.3.2001ರಂತೆ ಸಾಲ ಕೊಟ್ಟಿರುವಂಥದ್ದು ರೂ. 1408.05 ಕೋಟಿಗಳ ಪೈಕಿ ರೂ.1210.25 ಕೋಟಿ ನಕಲಿ ಸಾಲ ಖಾತೆಗಳು. ಇನ್ನು ಉಳಿದ ಸುಮಾರು ರೂ. 197.78 ಕೋಟಿಗಳ ವ್ಯವಹಾರ ಕಂಡುಬಂದಿರುತ್ತದೆ, ವ್ಯವಹಾರ ಆಗಿದೆ. ಅದನ್ನು ಜಿನ್ಯುಯೆನ್ ಎಂದು ಒಪ್ಪಿಕೊಂಡಿದ್ದಾರೆ. ಇದು ಎಷ್ಟು ಪರ್ಸೆಂಟೇಜ್ ಆಯಿತು? ಸುಮಾರು 85% ನಕಲಿಯಾಗಿದೆ. ಇದನ್ನು ಸಿಬಿಐಗೆ ಕೊಡುವಂಥದ್ದು ಸೂಕ್ತವಾಗಿದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇಬ್ಬರು ಹೊರದೇಶಕ್ಕೆ ಓಡಿ ಹೋಗಿದ್ದಾರೆ. ಅವರನ್ನು ಎತ್ತಿಹಾಕಿಕೊಂಡು ಬರಬೇಕು. ಆಗ ನೀವು ಸಿ.ಓ.ಡಿಗೆ ಕೊಡದೇ ಸಿಬಿಐಗೆ ಕೊಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ಇದರಲ್ಲೇನಾದರೂ ಕಾಂಗ್ರೆಸ್ ಪಕ್ಷದವರು ಇದ್ದಿದ್ದರೆ ಇಲ್ಲಿಯ ತನಕ ರುಬ್ಬಿಬಿಡುತ್ತಿದ್ದರು. ರುಬ್ಬಿ-ರುಬ್ಬಿ ಚಟ್ನಿ ಮಾಡಿಬಿಡುತ್ತಿದ್ದರು. ಇದರಲ್ಲಿ ಆ ಪ್ರದೇಶದ ಬಿಜೆಪಿ ಎಂಪಿ ಒಬ್ಬರು ಇರುವುದರ ಹಿನ್ನೆಲೆಯಲ್ಲಿ ಸಚಿವರ ಮೇಲೆ ಸಾಕಷ್ಟು ಒತ್ತಡ ಇದೆ. ಆ ಒತ್ತಡದಿಂದ ಇವರು ನಿಧಾನಗತಿಯಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇದು ಬೇಸ್‌ಲೆಸ್ ಅಲಿಗೇಷನ್ ಆಗಿದೆ.

(ಗೊಂದಲ)

**ಶ್ರೀ ಪಿ.ಆರ್.ರಮೇಶ:-** ಹಾಗಾದರೆ, ನನ್ನನ್ನೂ ಸೇರಿದಂತೆ ಎನ್‌ಕ್ವೈರಿ ಮಾಡಿಸಿ. ಇದನ್ನು ಸಿ.ಬಿ.ಐ.ಗೆ ವರ್ಗಾವಣೆ ಮಾಡಿ.

(ಗೊಂದಲ)

**(ಈ ಹಂತದಲ್ಲಿ ಅನೇಕ ಜನ ಸದಸ್ಯರು ತಮ್ಮ ಸ್ಥಳದಲ್ಲೇ ಎದ್ದುನಿಂತು ಮತ್ತು ಬಾವಿಯೊಳಗೆ ಧರಣಿ ನಿರತರಾಗಿದ್ದ ಕೆಲವು ಸದಸ್ಯರು ಒಂದೇ ಸಲ ಮಾತನಾಡುತ್ತಿದ್ದುದರಿಂದ ಅವರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದೆಂದು ಮಾನ್ಯ ಸಭಾಪತಿಯವರು ಸೂಚಿಸಿದರು)**

**ಸಭಾಪತಿಯವರು:-** ನೀವು ಮಾತನಾಡುತ್ತಿರುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇದು ಡೆಪಾಸಿಟ್ ಇಟ್ಟಿರುವವರ ಸಮಸ್ಯೆಯಾಗಿದೆ. ಸುಮ್ಮನೆ ಬೇಸ್‌ಲೆಸ್ ಅಲಿಗೇಷನ್ ಮಾಡಬೇಡಿ. ಇದರಲ್ಲಿ ಕಾಂಗ್ರೆಸ್, ಬಿಜೆಪಿ ಅಥವಾ ಜೆಡಿಎಸ್ ಎಂದೇನೂ ಇಲ್ಲ.

**ಶ್ರೀ ಪಿ.ಆರ್.ರಮೇಶ:-** ಇಲ್ಲಿಂದ ಇಬ್ಬರು ಹೊರದೇಶಕ್ಕೆ ಓಡಿ ಹೋಗಿದ್ದಾರೆ. ಅವರನ್ನು ಕರೆದುಕೊಂಡು ಬರುವ ಕೆಲಸವನ್ನು ಸಿಬಿಐ ಮಾಡುತ್ತದೆಯೇ ಹೊರತು; ಸಿ.ಓ.ಡಿ.ಯವರು ಮಾಡುವುದಕ್ಕಾಗುವುದಿಲ್ಲ. ಸುಮಾರು ರೂ. 1208 ಕೋಟಿಗಳ ಅವ್ಯವಹಾರವಾಗಿದೆ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸಾವಿರಾರು ಜನ ಡೆಪಾಸಿಟ್ ಇಟ್ಟಿದ್ದಾರೆ. ಡೆಪಾಸಿಟ್ ಇಟ್ಟಿರುವುದನ್ನು ವಾಪಸ್ಸು ಕೊಡಿಸಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ

ಒಂದು ತೀರ್ಮಾನ ತೆಗೆದುಕೊಂಡಿದೆ. ಇದನ್ನು ಸಿ.ಬಿ.ಐ.ಗೆ ಕೊಡಬಾರದು ಎನ್ನುವುದು ನಮ್ಮ ಉದ್ದೇಶವಲ್ಲ. ಹಾಗಾಗಿ ನೀವು ರಾಜಕಾರಣ ಮಾಡಬೇಡಿ.

**ಡಾ॥ ತೇಜಸ್ವಿನಿ ಗೌಡ:-** ನಮ್ಮ ರಾಜ್ಯ ಸಂಸ್ಥೆಗಳಗೆಯೇ ಇಂತಹ ಪ್ರಕರಣಗಳನ್ನು ನಿಭಾಯಿಸುವ ಸಾಮರ್ಥ್ಯ ಇದೆ. ನಮ್ಮ ಹಕ್ಕನ್ನು ಏಕೆ ಬಿಟ್ಟು ಕೊಡಬೇಕು?

**ಶ್ರೀ ಯು.ಬಿ.ವೆಂಕಟೇಶ್:-** ನಾವು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ 16 ತಿಂಗಳನಿಂದ ಕೇಳುತ್ತಿದ್ದೇವೆ. ಠೇವಣಿದಾರರ ಹಿತದಲ್ಲಿ ಯಾವ ಕೆಲಸ ಮಾಡಿದ್ದೀರಿ?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಬಿಜೆಪಿಯವಳಾಗಿ ಈ ಸಹಕಾರ ಬ್ಯಾಂಕಿಗೆ ಸಂಬಂಧಪಟ್ಟಂತೆ ಮೊದಲ ಬಾರಿಗೆ ಸದನದಲ್ಲಿ ಬಾರಿಗೆ ಪ್ರಶ್ನೆ ಕೇಳಿದ್ದೆ. ಆ ನಂತರ ಮಾನ್ಯ ವೆಂಕಟೇಶ್‌ನವರು ಪ್ರಸ್ತಾಪ ಮಾಡಿದರು. ಈ ವಿಷಯ ಮೊದಲು ಪ್ರಶ್ನೋತ್ತರದಲ್ಲಿ ಬಂತು; ಗಮನಸೆಳೆಯುವ ಸೂಚನೆ ಅಡಿಯಲ್ಲಿ ಮತ್ತು ಇವತ್ತು ನಿಯಮ 330ರ ಅಡಿಯಲ್ಲಿ ಚರ್ಚೆಗೆ ಬಂದಿದೆ. ಮುಂದೆ ಯಾವ ನಿಯಮದ ಅಡಿ ಬರುತ್ತದೆಯೋ ಗೊತ್ತಿಲ್ಲ. ಮಾನ್ಯ ಸದಸ್ಯರು, ಇದರಲ್ಲಿ ಬಿಜೆಪಿಯವರ ಪಾಲು ಇದೆ, ಕಾಂಗ್ರೆಸ್‌ನವರದ್ದಿಲ್ಲ ಎನ್ನುವ ಮಾತುಗಳನ್ನು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ಈ ರೀತಿ ರಾಜಕೀಯ ಮಾಡುವುದು ತಪ್ಪು. ಆ ಬಡವರಿಗೆ ನ್ಯಾಯ ಒದಗಿಸುವಂಥದ್ದು ನಮ್ಮ ಉದ್ದೇಶವಾಗಿದೆ. ಯಾರು ಬ್ಯಾಂಕ್‌ನಲ್ಲಿ ಡೆಪಾಸಿಟ್ ಇಟ್ಟಿದ್ದಾರೋ ಆ ಕುರಿತು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಪ್ರತಿ ಸಲ ನಾವು, ಈ ಪ್ರಕರಣಕ್ಕೆ ಇವತ್ತು ಪರಿಹಾರ ಸಿಗಬಹುದು, ನಾಳೆ ಪರಿಹಾರ ಸಿಗಬಹುದು ಎಂದು ಕಾಯುತ್ತಾ ಕುಳಿತ್ತಿದ್ದೇವೆ. ಹಾಗಾಗಿ, ಮಾನ್ಯ ಮಂತ್ರಿಗಳು ಏನು ಇವತ್ತು ಉತ್ತರ ಕೊಟ್ಟಿದ್ದಾರೋ ಅದರಿಂದ ನನಗೆ ಸಮಾಧಾನವಾಗಿದೆ. ಈ ಪ್ರಕರಣ ಕೊನೆಯ ಹಂತಕ್ಕೆ ಬರುತ್ತಿದೆ. ಇಂತಹ ಸಂದರ್ಭದಲ್ಲಿ ಇದನ್ನು ಸಿ.ಬಿ.ಐ.ಗೆ ಕೊಟ್ಟು ಇನ್ನೂ 2-3 ವರ್ಷ ವಿಳಂಬವಾಗುವಂಥದ್ದು ಸರಿಯಲ್ಲ. ಮಾನ್ಯ ಮಂತ್ರಿಗಳು ಈ ಪ್ರಕರಣವನ್ನು ಸೂಕ್ತ ರೀತಿಯಲ್ಲಿ ಮುಕ್ತಾಯಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆ ಎನ್ನುವುದನ್ನು ಹೇಳಬೇಕು. ನಿರ್ದಿಷ್ಟ ಸಮಯವನ್ನು ಹೇಳಿದರೆ ಠೇವಣಿದಾರರಿಗೂ ನ್ಯಾಯ ಒದಗಿಸಿ ಕೊಟ್ಟಹಾಗೆ ಆಗುತ್ತದೆ. ಅದುಬಿಟ್ಟು, ಮತ್ತೆ ಹೊಸ ಏಜೆನ್ಸಿಗೆ ಈ ಪ್ರಕರಣವನ್ನು ವಹಿಸಿ ಮತ್ತೆ 2-3 ವರ್ಷ ವಿಳಂಬವಾಗುವಂಥದ್ದು ಸರಿಕಾಣುವುದಿಲ್ಲ. ಈ ಪ್ರಕರಣದ ವಿಚಾರ ಕೊನೆಯ ಹಂತದಲ್ಲಿದೆ ಎಂದು

ಮಂತ್ರಿಗಳು ಹೇಳಿದ್ದಾರೆ. ಅದನ್ನು ಬೇಗ ಮುಗಿಸಿ ಕೊಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ, ಬಿ.ಜೆ.ಪಿಯವರು, ಕಾಂಗ್ರೆಸ್‌ನವರು, ಡಬ್ಬಲ್ ಇಂಜಿನ್ ಸರ್ಕಾರ ಎಂಬುದಾಗಿ ಹೇಳಿ ಕಥೆ ಕಟ್ಟುವುದು ಬೇಡ.

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್(ವಿಧಾನಸಭೆಯಿಂದ ಚುನಾಯಿತರಾದವರು**):**-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನು ಚರ್ಚೆ ಆಗಬೇಕೋ ಅದರ ದಾರಿ ತಪ್ಪಿದೆ. ಇದರಲ್ಲಿ ಯಾರಿಗೆ ನ್ಯಾಯ ಸಿಗಬೇಕೋ ಅಂಥವರಿಗೆ ತಡವಾಗಬಾರದು ಎನ್ನುವ ಭಾವನೆಯನ್ನು ನಾವು ಮೊದಲು ನಮ್ಮ ಮನಸ್ಸಿನಲ್ಲಿ ತಂದುಕೊಳ್ಳಬೇಕು. ಮಾನ್ಯ ಸಭಾಪತಿಯವರೇ, ಬಾವಿಯೊಳಗೆ ನಿಂತು ಸದಸ್ಯರು ಮಾತನಾಡಿದರೆ ಹೇಗೆ? ದಯವಿಟ್ಟು ನಿಯಮಗಳನ್ನು ಪಾಲಿಸಿ, ನಂತರ ಮಾತನಾಡಬೇಕು.

**ಸಭಾಪತಿಯವರು:-** ಬಾವಿಯೊಳಗಿದ್ದು ಮಾತನಾಡುವ ಸದಸ್ಯರ ಮಾತುಗಳು ಯಾವುದೂ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಬಾವಿಯೊಳಗೆ ನಿಂತು ಮಾತನಾಡುವುದು ಒಂದು ರೀತಿಯ ಪ್ರತಿಭಟನೆಯಾಗಿದೆ.

(ಗೊಂದಲ)

**ಸಭಾಪತಿಯವರು:- ಆದರೆ** ಬಾವಿಯೊಳಗೆ ನಿಂತು ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ನಾಯಕ್‌ರವರು ಕೆಟ್ಟ ಕೇಸ್‌ಗೆ ಒಳ್ಳೆಯ ವಕೀಲರಾಗಿದ್ದಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿನಾ ಕಾರಣ ಇಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಠೇವಣಿದಾರರಿಗೆ ನ್ಯಾಯ ಒದಗಿಸುವ ಜವಾಬ್ದಾರಿ ಸರ್ಕಾರಕ್ಕೆ ಮತ್ತು ಪ್ರತಿ ಪಕ್ಷಕ್ಕೆ ಇದೆ. ದಯವಿಟ್ಟು ಧರಣಿ ನಿರತರಾಗಿರುವವರು ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕು. ಈಗೇನು ಸಿ.ಓ.ಡಿ.ಗೆ ವಹಿಸಲಾಗಿದೆಯೋ ಆ ಮೂಲಕ ನ್ಯಾಯ ಒದಗಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ನಿಮ್ಮ ಸರ್ಕಾರಕ್ಕೆ ಬಹಳ ಒಳ್ಳೆಯ ಉದ್ದೇಶ ಇದೆ. ಬಡವರ ಪರವಾಗಿದ್ದೇವೆ ಎಂದು ಹೇಳುವ ನಿಮ್ಮಗೆ ಈ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಿ ಎಂದು ಹೇಳುತ್ತಿದ್ದೇವೆ.

(ಗೊಂದಲ)

**ಶ್ರೀ ಕೆ.ಪ್ರತಾಪ್‌ಸಿಂಹ ನಾಯಕ್:–** ಮಾನ್ಯ ವೆಂಕಟೇಶ್‌ರವರು ಮಾತನಾಡುತ್ತಾ, ಠೇವಣಿದಾರರು ಕಣ್ಣು ಮುಚ್ಚಿಕೊಂಡು ಬಿಜೆಪಿಗೆ ಓಟು ಹಾಕುವವರು ಎಂಬ ಮಾತನ್ನು ಹೇಳಿದರು. ಹಾಗಿರುವಾಗ ನಮಗೂ ಈ ಕುರಿತು ಸಾಕಷ್ಟು ಕಳಕಳಿ ಇದೆ ಎಂದು ಹೇಳಬೇಕಾಗುತ್ತದೆ. ಒಂದು ವೇಳೆ ಪ್ರತಿಪಕ್ಷದವರ ಹಠದ ಕಾರಣಕ್ಕೆ ಬೇರೆ ಏಜೆನ್ಸಿಗೆ ಕೊಟ್ಟು, ಆ ಕಾರಣದಿಂದ ನ್ಯಾಯ ಸಿಗುವುದು 2 ವರ್ಷ ವಿಳಂಬವಾದರೆ ಪುನಃ ಠೇವಣಿದಾರರು ಬೇರೆ ಬೇರೆ ಛತ್ರಗಳಿಗೆ ಊಟಕ್ಕೆಂದು ಹೋಗಬೇಕೇ? ಮುಂದೆ ಚುನಾವಣೆ ಬರುತ್ತಿರುವುದರಿಂದ ಇದರಲ್ಲಿ ನಿಮ್ಮದು ರಾಜಕೀಯ ದುರುದ್ದೇಶ ಇದೆ ಎಂದು ಹೇಳಬೇಕಾಗುತ್ತದೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈ ಕುರಿತು ಸಾಕಷ್ಟು ಚರ್ಚೆಗಳಾಗಿವೆ. ಮಾನ್ಯ ಸಚಿವರು ಸಹಕಾರಿ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ, ಅವರಿಗೆ ಸಹಕಾರ ಕ್ಷೇತ್ರ ಹೊಸದಲ್ಲ. ಸಹಕಾರ ಬ್ಯಾಂಕ್ ಎಂದರೆ, ಪ್ರತಿ 6 ತಿಂಗಳಿಗೊಮ್ಮೆ ನಿಮ್ಮ ಇಲಾಖೆಯ ವತಿಯಿಂದ ಆಡಿಟ್ ಆಗುತ್ತದೆ. ಅದೇರೀತಿ ಆರ್‌ಬಿಐನವರು ಸಹ ಆಡಿಟ್ ಮಾಡುತ್ತಾರೆ. ಅದರಲ್ಲಿ ಕೆಲವು ಪ್ಯಾರಾ ಮೀಟರ್ಸ್ ಇರುತ್ತದೆ. ಅಂದರೆ ಸಿ.ಆರ್.ಆರ್. ರೇಷ್ಯೂ ಎಷ್ಟಿರಬೇಕು, ಡೆಪಾಸಿಟ್ ಎಷ್ಟು ಇರಬೇಕು, ಎಷ್ಟು ಸಾಲ ಕೊಡಬೇಕು ಎಂಬುದನ್ನು ನಿಗದಿ ಮಾಡಿರುತ್ತಾರೆ. ಒಂದುವೇಳೆ ಇದರಲ್ಲಿ ಏರುಪೇರು

ಆಗಿದ್ದರೆ ತಕ್ಷಣ ಅದನ್ನು ರಿಪೋರ್ಟ್ ಮಾಡುತ್ತಾರೆ. ನಿಮ್ಮ ಸಿ.ಆರ್.ಆರ್.ರೇಷ್ಯೋ (Cash reserve ratio) ಕಡಿಮೆಯಾಗಿದೆ, ಇನ್ನು ಮುಂದೆ ನೀವು ಲೋನ್ ಕೊಡುವುದಕ್ಕೆ ಬರುವುದಿಲ್ಲ, ನೀವು ಇಷ್ಟು ಮಾತ್ರ ಲೋನ್ ಕೊಡುವುದಕ್ಕಾಗುತ್ತದೆ ಎನ್ನುವ ಮಾರ್ಗಸೂಚಿಯನ್ನು ಇಲಾಖೆಯವರು ಕೊಡುತ್ತಾರೆ. ಈ ರೀತಿ ಮಾರ್ಗಸೂಚಿಗಳನ್ನು ಕೊಟ್ಟರೂ ಮತ್ತೆ ಸಾಲ ಕೊಡುವುದರ ಉದ್ದೇಶವೇನು? ಇಂತಹ ಅಂಶಗಳನ್ನು ಗಮನಿಸಿ ಆರ್‌ಬಿಐನವರು ಮೊದಲು ನೋಟಿಸ್ ಕಳುಹಿಸುತ್ತಾರೆ. ಮತ್ತೆ ಕೋಆಪರೇಟಿವ್ ಬ್ಯಾಂಕ್ ಫೆಡರೇಷನ್ ಏನಿದೆ, ಅಲ್ಲಿಂದ ಕೂಡ ನೋಟಿಸ್ ಕೊಡುತ್ತಾರೆ.

(ಮುಂದು . . .)

(1205) 27-12-2022 1.40 ಡಿಎಸ್-ಎಂಡಿ

**ಶ್ರೀ ನಸೀರ್ ಅಹ್ಮದ್(ಮುಂದು):-**

ತಪ್ಪು ಮಾಡಿದ್ದೀರಿ, ಇದನ್ನು ಮಾಡಬಾರದು, ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಮಾರ್ಗಸೂಚಿ ಕೂಡ ಬರುತ್ತದೆ. ಇಷ್ಟೆಲ್ಲಾ ಬಂದ ಮೇಲೂ ಇದೆಲ್ಲಾ ನಡೆಯುತ್ತಿದ್ದರೆ, ಇದು intentionally ಮಾಡಿರತಕ್ಕಂಥದ್ದು. ಅದರ ಜೊತೆಗೆ ಯಾರಿಗೆ ಎಷ್ಟು ಲೋನ್ ಕೊಟ್ಟಿದ್ದಾರೆ, ಅದು ಕರೆದುಕೊಂಡು ಹೋಗಿ ಮನೆಯಲ್ಲಿ ಚೀಲದಲ್ಲಿ ಹಾಕಿ ಕಾರಿನಲ್ಲಿ ಕಳುಹಿಸುವ ಹಣವಲ್ಲ. It is 100 percent white money, 100 percent right transaction. ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಹೋಗಬೇಕಾಗಿರುವಂತಹದ್ದು. ಈ ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕ್‌ಗೆ ಹೋಗುತ್ತದೆ. It is easily traceable. ಆದರೆ traceable ಇಲ್ಲದಿರುವಂಥದ್ದೇನು ಇಲ್ಲ. ಈ ಖಾತೆಯಿಂದ ಯಾವ ಖಾತೆಗೆ ಹೋಗಿದೆ, ಯಾವಾಗ ಅಲ್ಲಿ ಡೆಪಾಸಿಟ್ ಬಂದಿದೆ, ಈಗ ಏನು ಮಾಡುತ್ತಾರೆಂದರೆ, ಹೆಚ್ಚಿನ ರೀತಿಯಲ್ಲಿ ಡೆಪಾಸಿಟ್ ಮಾಡಿದರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಶೇಕಡ 6.5, ಶೇಕಡ 7 ರಷ್ಟು ಇದ್ದರೆ, ಸಹಕಾರ ಸಂಘದವರು ಏನು ಮಾಡುತ್ತಾರೆಂದರೆ, ನಾವು ಶೇಕಡ 8 ರಷ್ಟು ಕೊಡುತ್ತೇವೆ ಎಂದಾಗ ಅಲ್ಲಿ ಜನರು ಹೆಚ್ಚಿನ ರೀತಿಯಲ್ಲಿ ಡೆಪಾಸಿಟ್ ಮಾಡುತ್ತಾರೆ. ಡೆಪಾಸಿಟ್ ಮಾಡಿರುವಂತಹ ಹಣ ಬ್ಯಾಂಕ್‌ನವರು ಕೂಡ ಸದುದ್ದೇಶದಿಂದ ಲೋನ್ ಕೊಟ್ಟಿರಬಹುದು. ಕೊನೆಗೆ ಅದು NPA (Non-Performing Asset) ಆಗುತ್ತದೆ. ಅದರಲ್ಲಿ ಏನು collateral security

ಕೊಟ್ಟಿದ್ದಾರೆ. Collateral security ಮಾಡಿದ್ದರೆ ಆ ಹಣ ವಾಪಸ್ ಬರುತ್ತದೆಯೇ, ಇದನ್ನು ಯೋಚನೆ ಮಾಡಿ ಬ್ಯಾಂಕ್‌ನವರು ಕೊಡುವಂಥದ್ದು. ಆದರೆ ಈ ರಾಘವೇಂದ್ರ ಬ್ಯಾಂಕ್‌ನಲ್ಲಿ ಸರ್ಕಾರದ ಸಚಿವರು ಎಲ್ಲಾ ವರದಿಯನ್ನು ಆರ್.ಬಿ.ಐ. ನಿಂದ ನಿರ್ದೇಶಕರನ್ನು, ಸಿ.ಇ.ಓ. ಅಧ್ಯಕ್ಷರನ್ನಾದರೂ ನೇಮಕ ಮಾಡಲಿ, Chairman ಆದರೂ ನೇಮಕ ಮಾಡಲಿ. You can get all the information. ಅವರೇನು ಭದ್ರತೆಯನ್ನು ಕೊಟ್ಟಿದ್ದಾರೆ. Collateral security ಏನಿದೆ, ಅದನ್ನೇನಾದರೂ ಮಾರಿದರೆ ಆ ಹಣ ವಾಪಸ್ ಬರಬಹುದೇ? ಇವೆಲ್ಲಾ ತಿಳುವಳಿಕೆ ಕೊಡುವುದಕ್ಕೆ ಅವಕಾಶವಿದೆ. ಯಾರ್ಯಾರು ಲೋನ್ ತೆಗೆದುಕೊಂಡು ಹೋಗಿದ್ದಾರೆಯೋ ಅವರು ವಿದೇಶಕ್ಕೆ ಹೋಗಿಬಿಟ್ಟಿದ್ದರೆ ಸಿಐಡಿ ಯಿಂದ ಅವರನ್ನು ಕರೆಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನೇ ಮಾನ್ಯ ಯು.ಬಿ.ವೆಂಕಟೇಶ್‌ರವರು, ಮಾನ್ಯ ಪಿ.ಆರ್.ರಮೇಶ್‌ರವರು ಹೇಳುತ್ತಿರುವಂಥದ್ದು. ಲೋನ್ ಪಡೆದಿರುವಂತಹ ಕೆಲವು ಫಲಾನುಭವಿಗಳು ವಿದೇಶಕ್ಕೆ ಹೋಗಿಬಿಟ್ಟಿದ್ದಾರೆ, ಅವರನ್ನು ಕರೆದುಕೊಂಡು ಬರುವುದಕ್ಕೆ ಅವಕಾಶವಿಲ್ಲ, ಹಾಗಾಗಿ ಅದನ್ನು ಸಿಬಿಐ ಗೆ ಕೊಟ್ಟರೆ, possibly ಸಿಬಿಐ ಅದನ್ನು ED (Enforcement Directorate) ಗೆ convert ಮಾಡಿದರು ಮಾಡಬಹುದು. Money laundering ಬಂದರೂ ಬರಬಹುದು. ಈ ರೀತಿಯೆಲ್ಲಾ situation create ಆಗಬಹುದು. ಹಾಗಾಗಿ ನಮ್ಮ ಮನವಿ ಏನೆಂದರೆ, ಮಾನ್ಯ ಸಚಿವರ ಬಗ್ಗೆ ಯಾವುದೇ ರೀತಿಯ ಅಪಾದನೆ ಮಾಡುತ್ತಿಲ್ಲ. ಮಾನ್ಯ ಸಚಿವರು, ಸರ್ಕಾರ, ಇಲಾಖೆಯವರು ಬಹಳ ಚೆನ್ನಾಗಿ ನಿಭಾಯಿಸುತ್ತಿದ್ದಾರೆ. ಮಾನ್ಯ ಸಚಿವರಿಗೆ ನಿಜವಾಗಿಯೂ ನಾವು appreciate ಮಾಡುತ್ತೇವೆ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದರು. ಅದರಿಂದ ಶೇಕಡ 99 ರಷ್ಟು receipt ಆಗುತ್ತಿದೆ. ಅದರಿಂದ you got a good name also. ಸಿಬಿಐ ಗೆ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಲಿ. ಸರ್ಕಾರದಿಂದ ಸಾಕಷ್ಟು ಇಂಥದ್ದಾದರೆ, ಕರ್ನಾಟಕದಲ್ಲಿ ಬಹಳಷ್ಟು institution ಗಳಿವೆ. ಅವರಿಗೆಲ್ಲಾ ಭಯ-ಭಕ್ತಿ ಬರುತ್ತದೆ. ನಮ್ಮ ಸಚಿವರು ಬಹಳ strict ಆಗಿದ್ದಾರೆ, ಇಂಥದ್ದೆಲ್ಲಾ tolerate ಮಾಡುವುದಿಲ್ಲ. He will go to any extent ಎಂದು ಸಂದೇಶವನ್ನು ಕೊಡಿ. ಅದಕ್ಕಾಗಿ ನಾನು ಸಿಐಡಿ ತನಿಖೆ ಬಿಟ್ಟು ಸಿಬಿಐ ತನಿಖೆಗೆ ವಹಿಸಿ ಎಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ನಾವು ಚರ್ಚೆ ಮಾಡುತ್ತಿದ್ದೇವೆ. ಇತ್ತೀಚೆಗೆ Reserve Bank of India, Credit Cooperative Society or Banks ಗಳ ಮೇಲೆ ಸಾಕಷ್ಟು ಹತೋಟಿಯನ್ನು ಮಾಡಿದೆ. ತಮ್ಮ ಕೊಠಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು, ಸಭಾನಾಯಕರನ್ನು, ಸಹಕಾರ ಸಚಿವರನ್ನು, ಯು.ಬಿ.ವೆಂಕಟೇಶ್‌ರವರನ್ನು ಹಾಗು ಮುನಿರಾಜು ಗೌಡರವರನ್ನು ಕರೆಯಿಸಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ. ಮಾನ್ಯ ಯು.ಬಿ.ವೆಂಕಟೇಶ್‌ರವರಿಗೆ ಸಿಐಡಿ ತನಿಖೆಯಲ್ಲಿ ಅನುಮಾನ ಇದೆ. ಏತಕ್ಕೋಸ್ಕರ ಅವರು ಹೇಳುತ್ತಿದ್ದಾರೆ, ಏನು ಮಹತ್ವವಿದೆ ಎಂಬುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕಾಗುತ್ತದೆ. ಇದೇ ರೀತಿ ಹಿಂದೆ ಅಮಾನತ್ ಸಹಕಾರ ಸಂಘ ಇರಬಹುದು, ಸಾಕಷ್ಟು ಸಹಕಾರ ಸಂಘಗಳ ಅವ್ಯವಹಾರ ಬಗ್ಗೆ ತನಿಖೆ ಮಾಡುವುದಕ್ಕೆ ಸಿಬಿಐ ಗೆ ವಹಿಸಲಾಗಿದೆ. ಅಲ್ಲಿ ಬಂದಿರುವಂತಹ ಫಲಿತಾಂಶಗಳ ಬಗ್ಗೆ ಚರ್ಚೆ ಮಾಡಬಹುದು. ತದನಂತರ ಮುಂದುವರೆದು ತಾವು ಮಾನ್ಯ ಯು.ಬಿ.ವೆಂಕಟೇಶ್‌ರವರನ್ನು ಕರೆದು ಸಭೆ ಮಾಡಿ ಎಂದು ಮಾನ್ಯ ಸಚಿವರಿಗೆ ನಿರ್ದೇಶನವನ್ನು ಕೊಡಬಹುದು. ತಾವು ಮಾನ್ಯ ಯು.ಬಿ.ವೆಂಕಟೇಶ್‌ರವರಿಗೆ ತಮ್ಮ ಸ್ಥಾನಕ್ಕೆ ವಾಪಸ್ ಬರುವುದಕ್ಕೆ ಮನವಿಯನ್ನು ಮಾಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಭೋಜನದ ಸಮಯದಲ್ಲಿ ತಮ್ಮ ಕೊಠಡಿಯಲ್ಲಿ ಸಭೆ ಕರೆಯಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಡ ಠೇವಣಿದಾರರು ಕೂಲಿನಾಲಿ ಮಾಡಿ ಉಳಿತಾಯ ಖಾತೆಗೆ ಕಟ್ಟಿರುವಂತಹ ಕೋಟ್ಯಂತರ ರೂಪಾಯಿಗಳನ್ನು ಕೆಲವೇ ವ್ಯಕ್ತಿಗಳು ಎಲ್ಲಾ ಬ್ಯಾಂಕ್ ನಿಯಮಗಳನ್ನು ಗಾಳಿಗೆ ತೂರಿ ಲಪಟಾಯಿಸಿರುವಂಥದ್ದು. ಇದು ಆರ್.ಬಿ.ಐ. ನಿಯಮಗಳನ್ನೇ ಉಲ್ಲಂಘನೆ ಮಾಡಿರುವಂಥದ್ದು. ಈಗಾಗಲೇ ಆರ್.ಬಿ.ಐ. ನಿರ್ದೇಶನದಂತೆ ಅಲ್ಲಿ ಒಬ್ಬರು ಆಡಳಿತಾಧಿಕಾರಿ ಇದ್ದಾರೆ ಎಂದು ಮಾನ್ಯ ಸಚಿವರು ಹೇಳಿದರು. ಅವರು ಬಂದು 480 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದರ ಬಗ್ಗೆ ಅವರಿಂದ ವಿವರಣೆಯನ್ನು ಕೇಳುವುದಕ್ಕಾಗುತ್ತಿಲ್ಲ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಮಾನ್ಯ ಸಚಿವರೇ ಹೇಳಿದರು. ಮಾನ್ಯ ಸಚಿವರ ಎಲ್ಲಾ ಹೇಳಿಕೆಗಳನ್ನು ನಾನು ಕೇಳಿದ್ದೇನೆ. ಆರ್.ಬಿ.ಐ. ಕೂಡ

ಈ ಬ್ಯಾಂಕ್ ತಮ್ಮ ನಿಯಮಗಳನ್ನು ಉಲ್ಲಂಘನೆ ಮಾಡಿದೆ ಎನ್ನುವುದರ ಬಗ್ಗೆ ಈಗಾಗಲೇ ಅದು ಕೂಡ ಗಮನ ಸೆಳೆದಿದೆ. ಈಗಾಗಲೇ ಕೆಲವರು ಸಾಲ ಪಡೆದಿರತಕ್ಕಂಥವರು ನಕಲಿ ದಾಖಲೆ ಕೊಟ್ಟು ವಿದೇಶಕ್ಕೆ ಹೊರಟು ಹೋಗಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರೇ ಹೇಳಿದ್ದಾರೆ. ಇಂತಹ ಪ್ರಕರಣದಲ್ಲಿ ತಮ್ಮದೇನು ಇದರಲ್ಲಿ ಇಲ್ಲ, ತಾವೇನು ಅಲ್ಲಿ ಸದಸ್ಯರಲ್ಲ, ಖಾತೆದಾರರಲ್ಲ, ನಾವ್ಯಾರು ಅಲ್ಲಿ ಸದಸ್ಯರಲ್ಲ. ಈ ನಾಡಿನಲ್ಲಿ ಸಾರ್ವಜನಿಕರ, ಬಡವರ ಹಣವನ್ನು ಕದ್ದು ಹೊತ್ತಿಕೊಂಡು ಹೋಗಿ, ಇಷ್ಟೆಲ್ಲಾ ಸಂಕಷ್ಟಕ್ಕೆ ದೂಡಿರುವಂತಹ ಒಂದು ಬ್ಯಾಂಕ್‌ನ ಬಗ್ಗೆ ಸಮಗ್ರವಾದ, ಉತ್ತಮವಾದ ತನಿಖೆಯಾಗಬೇಕು. ನಾನು ಕೂಡ ಸಹಕಾರ ಕ್ಷೇತ್ರದಲ್ಲಿ ೩೦ ವರ್ಷ ಇದ್ದವನು. ಇದು ಬಹಳ ಅವ್ಯಾಹತವಾಗಿ ನಡೆಯುತ್ತಿದೆ. ಇವತ್ತು ರಾಘವೇಂದ್ರ ಬ್ಯಾಂಕ್ ಬಗ್ಗೆ ಹೊರಗಡೆ ಬಂದಿದೆ. ಇಂತಹ ಪ್ರಕರಣಗಳು ಕರ್ನಾಟಕ ರಾಜ್ಯದಲ್ಲಿ, ಬೆಂಗಳೂರು ನಗರದಲ್ಲೇ ಇನ್ನು ಬಹಳಷ್ಟು ಇವೆ. ಈಗ ಇದು ಬೆಳಕಿಗೆ ಬಂದಿರುವುದರಿಂದ ನಾವು ಸಾರ್ವಜನಿಕವಾಗಿ ಇವತ್ತು ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನೆಲ್ಲಾ ನಾನು ಒಪ್ಪುತ್ತೇನೆ. ಮಾನ್ಯ ಸಚಿವರ ಮೇಲೆ ನಮ್ಮದು ಯಾರದ್ದು ಆರೋಪವಿಲ್ಲ. ದಯಮಾಡಿ ಇದನ್ನು ಸಿಬಿಐ ಗೆ ಒಪ್ಪಿಸಿ. ಏಕೆಂದರೆ ಆರ್‌ಬಿಐ ಅಧಿಕಾರಿಗಳನ್ನು ಪ್ರಶ್ನೆ ಮಾಡುವಂತಹ ಅಧಿಕಾರ ನಮ್ಮ ಸಿಐಡಿ ಯವರಿಗೆ ಇರುವುದಿಲ್ಲ. ಈ ಪ್ರಕರಣದಲ್ಲಿ ಕೆಲವು ಸಂದರ್ಭದಲ್ಲಿ ಆರ್‌ಬಿಐ ಅಧಿಕಾರಿಗಳ ಹೇಳಿಕೆಯನ್ನು ಪಡೆಯಬೇಕಾಗುತ್ತದೆ. ಈಗಿರತಕ್ಕಂಥ ಆಡಳಿತಾಧಿಕಾರಿಯೂ ಸಹ ಏನೇ ಕೇಳಿದರೂ ಸರಿಯಾದ ಮಾಹಿತಿಯನ್ನು ಕೊಡುವುದಿಲ್ಲವೆನ್ನುವುದನ್ನು ಹೇಳುತ್ತಿದ್ದೀರಿ. ಆದರೆ ನಮ್ಮ ಸಿಬಿಐ ಅಧಿಕಾರಿಗಳು ಆರ್‌ಬಿಐ ಅಧಿಕಾರಿಗಳ ಹತ್ತಿರ ಮಾಹಿತಿಯನ್ನು ತೆಗೆದುಕೊಳ್ಳುವುದು ಕೆಲವು ಸಂದರ್ಭದಲ್ಲಿ ಕಾನೂನಿನಲ್ಲಿ ತೊಡಕಾಗಬಹುದು. ಆದ್ದರಿಂದ ದಯಮಾಡಿ ಈ ಪ್ರಕರಣವನ್ನು ಸಿಬಿಐ ಗೆ ಒಪ್ಪಿಸಿ. ನಮ್ಮ ನಾಡಿನ ಜನರೆಲ್ಲರಿಗೂ ಕೂಡ ಬಡವರಿಗೆ, ಹಣ ಕಳೆದುಕೊಂಡಿರುವವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಏನಾದರೂ ಒಂದು ಪರಿಹಾರ ಆಗುತ್ತದೆ. ಏಕೆಂದರೆ ಭಾರತ ದೇಶದಲ್ಲಿ ಸಿಬಿಐ ಯನ್ನು ನಾವು ಪರಮೋಚ್ಛ ಎಂದು ಒಪ್ಪಿಕೊಂಡಿದ್ದೇವೆ. ಸಿಬಿಐ ತನಿಖೆಯಿಂದ ಈ ನಾಡಿಯಲ್ಲಿ ನಿಮ್ಮ ಅವಧಿಯಲ್ಲಿ ನೀವು ಸಹಕಾರಿ ಸಚಿವರಾಗಿರುವಾಗ ಇದೊಂದು ಐತಿಹಾಸಿಕವಾದ ನ್ಯಾಯ ಈ ಬಡ ಜನರಿಗೆ ದೊರೆಯಲಿ. ಈಗ ಹಾಲಿ ಯಾರ್ಯಾರು ಕಳ್ಳತನವನ್ನು ಮಾಡುತ್ತಿದ್ದಾರೆ ಅವರೆಲ್ಲರಿಗೂ ನೀವು ಒಂದು

ಎಚ್ಚರಿಕೆ ಗಂಟೆಯನ್ನು ನೀವು ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಸಿಬಿಐಗೆ ಒಪ್ಪಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಯು.ಬಿ.ವೆಂಕಟೇಶ್‌ರವರು ಹಾಗೂ ಕೆಲವು ಸದಸ್ಯರು ಇದು ಸಿಬಿಐ ಮುಖಾಂತರ ತನಿಖೆಯಾಗಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ರಮೇಶ್‌ರವರು ರುಬ್ಬುವುದು ಎಂದು ಹೇಳಿದರು. ನನಗೆ ಅಷ್ಟ ಅರ್ಥವಾಗಲಿಲ್ಲ. ಕಾಂಗ್ರೆಸ್ ಪಕ್ಷದವರಿದ್ದರೆ ಸಿಬಿಐ, ಇಡಿ, ಐಟಿ ಮುಂತಾದವು ಬಂದುಬಿಡುತ್ತಿತ್ತು. ಎಲ್ಲೋ ಒಂದು ಕಡೆ ನಮಗೆ ಯಾವುದೋ ಒಂದು ಪಕ್ಷಕ್ಕೆ ಸೇರಿದ ಒಬ್ಬ ಪ್ರಭಾವಿ ವ್ಯಕ್ತಿ ಅದರಲ್ಲಿರಬೇಕು, ಅದಕ್ಕೆ ಸಿಬಿಐ ತನಿಖೆ ಆಗುತ್ತಿಲ್ಲ. ನೇರವಾಗಿ ಹೇಳಬೇಕೆಂದರೆ ನನ್ನ ಕೈಯಲ್ಲಿ ಹೇಳುವುದಕ್ಕೆ ಸಾಧ್ಯವಿದೆ. ಆದ್ದರಿಂದ ಇದನ್ನ ದಯವಿಟ್ಟು ಸಿಬಿಐ ಗೆ ವಹಿಸಿ ಜನಸಾಮಾನ್ಯ ಮನಸ್ಸಿನಲ್ಲಿರತಕ್ಕಂಥ ಅಪನಂಬಿಕೆಯನ್ನು ದೂರ ಮಾಡಬೇಕೆಂದು ತಮ್ಮ ಮೂಲಕ ಸಚಿವರಿಗೆ ಹೇಳಲು ಬಯಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ನನ್ನ ಜೊತೆಯಲ್ಲಿ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ಶ್ರೀ ಮುನಿರಾಜುಗೌಡ ಹಾಗೂ ಇನ್ನು ಅನೇಕರು ಕೈಜೋಡಿಸಿದ್ದಾರೆ. ಅದಕ್ಕೆ ನಾನು ನಾಯಕರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಇದನ್ನು ಸಿಬಿಐ ಗೆ ಒಪ್ಪಿಸಬೇಕೆಂದು ಏಕೆ ನಮ್ಮ ಕಳಕಳಿ ಇದೆ ಎಂದರೆ, ಈ ಬ್ಯಾಂಕ್ 2019 ರವರೆಗೆ ಸುಮಾರು 12 ರಿಂದ 20 ಪರ್ಸೆಂಟ್ dividend ಕೊಟ್ಟುಬಿಟ್ಟಿದೆ. ಎಲ್ಲರಿಗಿಂತ ಒಂದು ಪರ್ಸೆಂಟ್ ಬಡ್ಡಿ ಜಾಸ್ತಿ ಇರುವುದರಿಂದ ಎಲ್ಲರಿಗೂ ಆಸೆ. ಆ ಬಡ್ಡಿ ಆಸೆಗೆ, dividend ಆಸೆಗೆ ಜನ ಅವರ ಜೀವನದ ಪೂರ್ತಿ ಸಂಪಾದನೆಯನ್ನು ಈ ಬ್ಯಾಂಕಿನಲ್ಲಿಟ್ಟಿದ್ದರು.

(ಮುಂದು)

(1206) 27/12/2022/1:50/ಎಸ್‌ಪಿಆರ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ.ವೆಂಕಟೇಶ್(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 2018-19 ನೇ ಸಾಲಿನ ಬ್ಯಾಲೆನ್ಸ್ ಶೀಟ್‌ವರೆವಿಗೂ ಪ್ರತಿ ವರ್ಷ ಭಾರತೀಯ ರಿಸರ್ವ್ ಬ್ಯಾಂಕ್‌ನವರು ಸದರಿ

ಬ್ಯಾಂಕ್ "ಉತ್ತಮ, ಅತ್ಯುತ್ತಮ, ಪ್ರಶಸ್ತಿಗಾರರು" ಎಂಬುದಾಗಿ ಹೇಳಿ ಸರ್ಟಿಫಿಕೇಟ್‌ಗಳನ್ನು ನೀಡಿ, ಸನ್ಮಾನಿಸಿದ್ದರ ಬಗ್ಗೆ ಈ ಮೊದಲೇ ನಾನು ಮಾತನಾಡಿದ್ದೇನೆ. "ಭಾರತೀಯ ರಿಸರ್ವ್ ಬ್ಯಾಂಕ್‌ನವರು ಶ್ರೀ ಅಶೋಕನ್ ಎಂಬುವವರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಿಸಿದ್ದಾರೆ; ಹೀಗಾಗಿ ಇಲ್ಲಿ ನಮ್ಮ ನಿಯಂತ್ರಣವಿಲ್ಲ" ಎಂಬುದಾಗಿ ಮಾನ್ಯ ಮಂತ್ರಿಗಳು ಮಾತನಾಡುವಾಗ ತಿಳಿಸಿದರು. ಯಾವಾಗ ಭಾರತೀಯ ರಿಸರ್ವ್ ಬ್ಯಾಂಕ್‌ನವರೇ ತಪ್ಪು ಮಾಡಿದ್ದಾರೆ; ಯಾವಾಗ ನಿಮ್ಮ ನಿಯಂತ್ರಣವಿಲ್ಲ ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವು ಇದನ್ನು ತನಿಖೆಗಾಗಿ ಸಿ.ಬಿ.ಐ. ಸಂಸ್ಥೆಗೆ ವಹಿಸುವುದಕ್ಕೆ ಏಕೆ ಹಿಂಜರಿಯುತ್ತಿದೆ? ಅಧಿಕಾರದಲ್ಲಿ ಯಾರೇ ಇರಲಿ, ಅಲ್ಲಿ ನಮಗೆ ಕಷ್ಟವಿದೆ. ನಮ್ಮ ಠೇವಣಿ ಮೊತ್ತಕ್ಕೆ ಒಂದು ರೂಪಾಯಿ ದೊರೆಯದೇ, ಮುಂಬರುವ ಜನವರಿ ತಿಂಗಳಿನ 10 ನೇ ತಾರೀಖಿಗೆ ಮೂರು ವರ್ಷಗಳಾಗುತ್ತವೆ; ಇಂತಹ ಪರಿಸ್ಥಿತಿಯಲ್ಲಿ ನಾವೇನು ಮಾಡಬೇಕೆಂದು ನಾನು ಪ್ರಶ್ನಿಸಬಯಸುತ್ತೇನೆ. ನಾವುಗಳು ಬೀದಿಗೆ ಬಂದಿದ್ದೇವೆ ಎನ್ನುವ ಕಾರಣಕ್ಕಾಗಿ ಕಳಕಳಿಯಿಂದ ನಾನು ಕಳೆದ 16 ತಿಂಗಳಿನಿಂದ 5ನೇ ಬಾರಿಗೆ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಇದೇ ಕಡೆಯ ಬಾರಿಯೂ ಸಹ ಆಗಿದೆ. ನಾನು ಇನ್ನು ಈ ಬಗ್ಗೆ ಕೇಳವುದೇ ಇಲ್ಲ. ನಾವು ಕೇಳುವುದರಿಂದ ಸಚಿವರಿಗೆ ಬೇಜಾರಾಗಿದೆ. ಸರ್ಕಾರವು ಕೊಟ್ಟರೆ ಕೊಡಲಿ; ಇಲ್ಲವೆಂದಾದರೆ, ಇವರು ಹೇಳಿದನ್ನು ನಾವುಗಳು ಕೇಳಿಕೊಂಡು ಹೋಗುತ್ತೇವೆ ಅಷ್ಟೇ.

**ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಸದಸ್ಯರು ಈ ಬಗ್ಗೆ ಇನ್ನೂ 10 ಬಾರಿ ಕೇಳಿದರೂ ಸಹ ನಮಗೆ ಯಾವುದೇ ಬೇಜಾರಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿನ ಸಭಾನಾಯಕರು ಇನ್ನೊಂದು ಬಾರಿ ಕೇಳಬಾರದೆಂದು ಹೇಳಿದ್ದಾರೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನಾದರೂ ಹೇಳಬಿಟ್ಟರೆ ಹೇಗೆ? ಅವರು ಏನಾದರೂ ಹೇಳಬಾರದು. ನಾನು ನಿನ್ನೆಯ ದಿನ ಪದೇ ಪದೇ ಸದಸ್ಯರು ಈ ಬಗ್ಗೆ ಕೇಳುತ್ತಿದ್ದಾರೆ; ಇದರ ಬಗ್ಗೆ ನಾನು ಉತ್ತರಿಸುತ್ತಿದ್ದೇನೆ. ಸಂಬಂಧಪಟ್ಟ ಮಂತ್ರಿಗಳೇ ಬರಬೇಕೆಂದು ಸದಸ್ಯರು ಹೇಳಿದ್ದರು; ಆಗ ನಾನು ಮಂತ್ರಿಗಳಿಂದ ನಾಳೆಯ ದಿನ ಉತ್ತರವನ್ನು ಕೊಡಿಸುತ್ತೇನೆ ಎಂಬುದಾಗಿ ಹೇಳಿದೆನು. ಹೀಗಾಗಿ ಇವತ್ತಿನ ದಿವಸ ಮಂತ್ರಿಗಳಿಂದಲೇ ಉತ್ತರವನ್ನು ಕೊಡಿಸುತ್ತಿದ್ದೇನೆ. ಸದಸ್ಯರು ತಮ್ಮ ಮನಸ್ಸಿಗೆ ಬಂದ ಹಾಗೆ ಹೇಳಿ, ಅದು ದಾಖಲೆಗೆ ಹೋದರೆ, ತಪ್ಪಾಗುತ್ತದೆ. ತಪ್ಪು ಮಾಡುವುದು ಮತ್ತು ನಂತರದಲ್ಲಿ ಅದನ್ನು ತೆಗೆದು ಹಾಕುವುದು – ಇದು ಯಾವ ನ್ಯಾಯ ಸಭಾಪತಿಗಳೇ?

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದೆ. ಒಬ್ಬ ಠೇವಣಿದಾರರಿಗೆ ಸುಮಾರು 5 ಲಕ್ಷ ರೂಪಾಯಿಗಳಂತೆ, ಒಟ್ಟು 22,244 ಠೇವಣಿದಾರರಿಗೆ 712.35 ಕೋಟಿ ರೂಪಾಯಿಗಳಷ್ಟು ಹಣವನ್ನು ಅವರ ಖಾತೆಗೆ ಹಿಂದಿರುಗಿಸಿದ್ದೇವೆ. ಒಬ್ಬ ಠೇವಣಿದಾರರಿಗೆ 1-2 ಲಕ್ಷ ರೂಪಾಯಿಗಳಂತೆ, ಒಟ್ಟು 233 ಕೋಟಿ ರೂಪಾಯಿಗಳನ್ನು ನಾವು ಹಿಂದಿರುಗಿಸಿದ್ದೇವೆ. ಇದುವರೆವಿಗೂ 192 ಕೋಟಿ ರೂಪಾಯಿಗಳಷ್ಟು ಹಣವನ್ನು ಮರಳಿ ಪಡೆದುಕೊಳ್ಳಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ, ನೇಮಕಗೊಂಡ ಆಡಳಿತಾಧಿಕಾರಿಯನ್ನು ನಮ್ಮ ಇಲಾಖೆಯು ಹಿಂಪಡೆದಿದೆ. ಈ ಬಗ್ಗೆ ಜಾರಿ ನಿರ್ದೇಶನಾಲಯ, ಸಿ.ಐ.ಡಿ. ಮತ್ತು ಪೊಲೀಸ್ ಠಾಣೆಗಳಲ್ಲಿ ಎಲ್ಲಾ ರೀತಿಯ ಪ್ರಕರಣಗಳು ದಾಖಲಾದ ಮೇಲೆ ಈಗ ಅಂತಿಮವಾಗಿ ಒಂದು ಹಂತಕ್ಕೆ ಬಂದಿದೆ. ಅಲ್ಲಿನ ಎಲ್ಲಾ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಂಡು, ಅವುಗಳನ್ನು ಹರಾಜು ಹಾಕುವುದಕ್ಕೆ ಪ್ರಸ್ತುತ ಒಂದು ಹಂತಕ್ಕೆ ಇದು ಬಂದಿದೆ. ಮುಂದಿನ 3-4 ತಿಂಗಳಿನಲ್ಲಿ ಇದನ್ನು ಹರಾಜು ಹಾಕಿ ಬಾಕಿ ಇರುವ 1,294 ಕೋಟಿ ರೂಪಾಯಿಗಳನ್ನು ಅವರಿಗೆ ಹಿಂದಿರುಗಿಸಿದರೆ, ಆಗ ಇದು ಒಂದು ಹಂತಕ್ಕೆ ಬರುತ್ತದೆ ಎನ್ನುವುದು ನನ್ನ ವೈಯಕ್ತಿಕ ಹಾಗೂ ಇಲಾಖೆಯ ಭಾವನೆಯಾಗಿದೆ. ಸಿ.ಬಿ.ಐ. ಸಂಸ್ಥೆಗೆ ತನಿಖೆಗೆ ವಹಿಸುವುದಕ್ಕೆ ನಮ್ಮದು ಯಾವುದೇ ರೀತಿಯ ಅಭ್ಯಂತರವಿಲ್ಲ. ಇದರಲ್ಲಿ ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಹಾಗಿದ್ದರೆ ಇದನ್ನು ಸಿ.ಬಿ.ಐ. ಸಂಸ್ಥೆಗೆ ಸರ್ಕಾರವು ವಹಿಸಿ ಬಿಡಲಿ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಇದನ್ನು ಸಿ.ಬಿ.ಐ. ಸಂಸ್ಥೆಗೆ ವಹಿಸಿದರೆ, ಇನ್ನೂ 2 ವರ್ಷಗಳಿಗೆ ಮುಂದಕ್ಕೆ ಹೋದರೆ, 1–2 ಲಕ್ಷ ರೂಪಾಯಿಗಳನ್ನು ನೀಡಿದ ಠೇವಣಿದಾರರಿಗೆ ನಾವು ಉತ್ತರಿಸುವುದಕ್ಕಾಗುತ್ತಿಲ್ಲ. ಸಹಕಾರ ಸಚಿವರು ಹಾಗೂ ಸಂಬಂಧಪಟ್ಟವರಿಗೆ ಇರಬಹುದು, ಪ್ರತಿ ದಿನ ಠೇವಣಿದಾರರ ನರಕಯಾತನೆ ನಮಗೂ ಸಹ ನೋಡುವುದಕ್ಕಾಗುತ್ತಿಲ್ಲ. ಈ ಕಾರಣಕ್ಕಾಗಿ ಅಧಿಕಾರಿಗಳ ಸಭೆಯನ್ನೊಳಗೊಂಡಂತೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡು, ಆದಷ್ಟು ಬೇಗನೇ ಸ್ವತ್ತುಗಳನ್ನು ಹರಾಜು ಹಾಕುವ ಹಾಗೂ ಮಾರಾಟ ಮಾಡುವ ಕ್ರಮಗಳನ್ನು ತೆಗೆದುಕೊಂಡು, ಠೇವಣಿದಾರರ ಹಿತದೃಷ್ಟಿಯಿಂದ ಅವರಿಗೆ ಸಹಾಯ ಮಾಡಬೇಕೆನ್ನುವುದು ಸರ್ಕಾರಕ್ಕಿದೆ. ಸದ್ಯದಲ್ಲಿಯೇ ಅವಶ್ಯವಿದ್ದಲ್ಲಿ ಈ ಬಗ್ಗೆ ಸಭೆಯನ್ನು ಮಾಡೋಣ. ಈ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು, ಸದಸ್ಯರನ್ನು ಕರೆಯುತ್ತೇವೆ. ಸಿ.ಐ.ಡಿ. ಸಂಸ್ಥೆಯವರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಎಷ್ಟು ಮೊತ್ತವನ್ನು ರಿಕವರಿ ಮಾಡುತ್ತಿದ್ದಾರೆ..... ಭಾರತೀಯ ರಿಸರ್ವ್ ಬ್ಯಾಂಕ್‌ನವರು ದಿನವೊಂದಕ್ಕೆ ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಅಧಿಕಾರವು ಅಲ್ಲಿನ ಆಡಳಿತಾಧಿಕಾರಿಗೆ ನೀಡಿದ್ದಾರೆ. ಇವರಿಗೆ ಪ್ರತಿ ತಿಂಗಳಿಗೆ 20 ಲಕ್ಷ ರೂಪಾಯಿಗಳಷ್ಟು ವೇತನವನ್ನು ನೀಡಲಾಗುತ್ತಿದೆ. ಆಡಳಿತಾಧಿಕಾರಿಯು ಪ್ರತಿದಿನ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಬೇಕಾದರೆ, ಭಾರತೀಯ ರಿಸರ್ವ್ ಬ್ಯಾಂಕ್‌ನ ಅನುಮತಿಯನ್ನು ಪಡೆದುಕೊಳ್ಳಬೇಕು. ಈ ಮಟ್ಟಕ್ಕೆ ಅಲ್ಲಿನ ವ್ಯವಸ್ಥೆಯು ಇದೆ. ಶೇಕಡಾ 90 ರಷ್ಟು ಅಂತಿಮ ಹಂತಕ್ಕೆ ಇದು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕಿನವರು ಅಕಸ್ಮಾತ್ತಾಗಿ, 5 ಜನರ ಪೈಕಿ ಯಾರಾದರೂ ಒಬ್ಬರಿಗೆ ಅನುಮತಿ ನೀಡಿದರೆ, ಅವರು ಸದರಿ ಬ್ಯಾಂಕ್‌ನ್ನು take over ಮಾಡಿಕೊಂಡು 1,294 ಕೋಟಿ ರೂಪಾಯಿಗಳನ್ನು ಬಗೆಹರಿಸುತ್ತಾರೆ. ಆಗ ಯಾವುದೇ ಠೇವಣಿದಾರರ ಸಮಸ್ಯೆಗಳಿರುವುದಿಲ್ಲ. ಹೀಗಾಗಿ ಈ ಬಗ್ಗೆ ಚಿಂತನೆ ಹಾಗೂ ಯೋಚನೆಗಳನ್ನು ನಾವು ಮಾಡುತ್ತಿದ್ದೇವೆ. ಈ ಸಮಸ್ಯೆಯು ನೂರಕ್ಕೆ ನೂರರಷ್ಟು ಬಗೆಹರಿಯಬೇಕು. ಪ್ರಸ್ತುತ ನಮ್ಮ ರಾಜ್ಯದಲ್ಲಿ 264 ನಗರ ಸಹಕಾರಿ ಬ್ಯಾಂಕುಗಳಿವೆ. ಆ ಪೈಕಿ ಇದು ವಂಚನೆಯ ಮೊದಲ ಸ್ಥಾನದಲ್ಲಿದೆ. ಇದರಲ್ಲಿ ಬೇಕಂತಲೇ ವಂಚನೆ

ಮಾಡಿದ್ದಾರೆ. ಎಲ್ಲವನ್ನೂ ಕ್ರೋಢೀಕರಿಸಿ, ಲೆಕ್ಕ ಪರಿಶೋಧನೆಯನ್ನು ಮಾಡಲಾಗಿದ್ದು, ಒಂದು ಹಂತಕ್ಕೆ ಇದು ಈಗ ಬಂದಿದೆ. ಹೀಗಾಗಿ ದಯಮಾಡಿ ಸಿ.ಬಿ.ಐ. ಸಂಸ್ಥೆಗೆ ಇದನ್ನು ತನಿಖೆಗೆ ವಹಿಸುವುದನ್ನು ಹೊರತುಪಡಿಸಿ..., ಸಿ.ಐ.ಡಿ. ಸಂಸ್ಥೆಯ ಮೇಲೆ ಆದಷ್ಟು ಹೆಚ್ಚಿನ ಒತ್ತಡವನ್ನು ಹಾಕುವ ಹಾಗೂ ಅಮಾನತ್ತುಪಡಿಸಿಕೊಂಡಿರುವ ಸ್ವತ್ತನ್ನು ಹರಾಜು ಹಾಕಿ ಠೇವಣಿದಾರರಿಗೆ ಹಣವನ್ನು ಕೊಡಿಸುವ ಕೆಲಸವನ್ನು ನಾವುಗಳೆಲ್ಲರೂ ಸೇರಿಕೊಂಡು ಮಾಡೋಣ. ಸದ್ಯದಲ್ಲಿಯೇ ಬೆಂಗಳೂರು ನಗರದಲ್ಲಿ ಎಲ್ಲರನ್ನೂ ಒಳಗೊಂಡ ಸಭೆಯನ್ನು ಮಾಡುತ್ತೇನೆ. ಆ ಸಭೆಗೆ, ಸಿ.ಐ.ಡಿ. ಸಂಸ್ಥೆಯ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳನ್ನು ಕರೆಸುತ್ತೇನೆ. ಹೀಗಾಗಿ ಸದರಿ ಸಭೆಯಲ್ಲಿ ತಾವು ತೀರ್ಮಾನವನ್ನು ತೆಗೆದುಕೊಳ್ಳಿ. ಒಂದು ವೇಳೆ ಇವರಿಂದ ಇದು ಆಗುವುದಿಲ್ಲ ಎಂಬ ಅಭಿಪ್ರಾಯಕ್ಕೆ ತಾವು ಬಂದರೆ, ಮುಖ್ಯಮಂತ್ರಿಗಳ ಜೊತೆ ಈ ಬಗ್ಗೆ ಚರ್ಚಿಸಿ, ಮುಂದಿನ ನಿರ್ಧಾರವನ್ನು ತೆಗೆದುಕೊಳ್ಳುವ ಬಗ್ಗೆ ನಾನು ನಿಮ್ಮ ಪರವಾಗಿರುತ್ತೇನೆ.

**ಸಭಾಪತಿಯವರು:-** ಸಚಿವರೇ ತಾವು ಹೇಳಿದಂತೆ, ಅವರುಗಳನ್ನೆಲ್ಲಾ ಕರೆದು ತಕ್ಷಣವೇ ಸಭೆಯನ್ನು ಮಾಡಿ, ಒಂದು ತೀರ್ಮಾನಕ್ಕೆ ಬನ್ನಿ.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮುಂದಿನ 3-4 ನೇ ತಾರೀಖಿನಂದು ನಾನು ಸಭೆಯನ್ನು ಮಾಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿರವರು ತಿಳಿಸಿದಂತೆ, ಇದನ್ನು ಬೇಗನೇ ಬಗೆಹರಿಸಿ. ಇನ್ನು ಮೂರು ತಿಂಗಳಿನಲ್ಲಿ ನೀವು ಇದನ್ನು ಮುಕ್ತಾಯಗೊಳಿಸುತ್ತೀರಾ? ಈ ಬಗ್ಗೆ ಒಂದು ಸಮಯವನ್ನು ನಿಗದಿಪಡಿಸಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಮುಂದಿನ ತಿಂಗಳ 3/4/5 ನೇ ತಾರೀಖುಗಳ ಪೈಕಿ ಒಂದು ದಿನ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಿ.ಓ.ಡಿ. ಸಂಸ್ಥೆಯ ಅಧಿಕಾರಿಗಳನ್ನು ಹಾಗೂ ತಮ್ಮನ್ನು ಕರೆಸಿ, ಸಭೆ ಮಾಡುತ್ತೇನೆ; ಆಗ ನಿರ್ಧರಿಸೋಣ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮೂರು ತಿಂಗಳನೊಳಗೆ ಸಚಿವರು ಠೇವಣಿದಾರರ ಹಣವನ್ನು ವಾಪಸ್ಸು ಕೊಡಿಸುತ್ತೀರಾ ಎಂದು ನಾನು ಪ್ರಶ್ನಿಸಬಯಸುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಸಭೆಯಲ್ಲಿ ತೀರ್ಮಾನಿಸೋಣ; ಏಕೆಂದರೆ, ಅಲ್ಲಿ ರಿಸರ್ವ್ ಬ್ಯಾಂಕ್ ಮತ್ತು ಸಿ.ಐ.ಡಿ. ಸಂಸ್ಥೆಯ ಅಧಿಕಾರಿಗಳಿರುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಸಚಿವರು ಹೇಳಿದಂತೆ, ಈ ಸಭೆಯೇ ಆಗುವುದೇ ಇಲ್ಲ. ಏಕೆಂದರೆ, ಇಲ್ಲಿಯವರೆಗೆ ಕೇವಲ ಒಂದೇ ಒಂದು ಸಭೆಯನ್ನು ಮಾಡಿಲ್ಲ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಈ ಸದನಕ್ಕೆ ನಾನು ಹೇಳುವುದೇನೆಂದರೆ, ಮುಂದಿನ ತಿಂಗಳ 3/4/5 ನೇ ತಾರಿಖುಗಳ ಪೈಕಿ ಒಂದು ದಿವಸದಲ್ಲಿ ರಿಸರ್ವ್ ಬ್ಯಾಂಕ್, ಸಿ.ಐ.ಡಿ. ಸಂಸ್ಥೆ, ಸಂಬಂಧಪಟ್ಟ ಪೋಲೀಸ್ ಮತ್ತು ನಮ್ಮ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಂಬಂಧಪಟ್ಟ ಚುನಾಯಿತ ಪ್ರತಿನಿಧಿಗಳಾದ ಸಂಸದರು ಮತ್ತು ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಸೇರಿಸಿ ಸಭೆಯನ್ನು ಮಾಡುತ್ತೇನೆ. ಏನೆಲ್ಲಾ ತೀರ್ಮಾನಗಳನ್ನು ಮಾಡಬೇಕೆಂದರೆ, ಆ ಸಭೆಯಲ್ಲಿ ಮಾಡೋಣ. ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳುವುದರ ಬಗ್ಗೆ ನಾನು ಸದಸ್ಯರೊಂದಿಗೆ ಇರುತ್ತೇನೆ.

**ಸಭಾಪತಿಯವರು:–** ಸದನವನ್ನು 3 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಭೋಜನಕ್ಕಾಗಿ ಅಪರಾಹ್ನ 1 ಗಂಟೆ 56 ನಿಮಿಷಕ್ಕೆ ಮುಂದೂಡಲ್ಪಟ್ಟು,**
**ಪುನಃ ಮಧ್ಯಾಹ್ನ 3 : 00 ಗಂಟೆಗೆ ಸೇರಲು ನಿಶ್ಚಯಿಸಿತು)**

**(1207) 27.12.2022 03.10 ಎಸ್‌ವಿ-ಎಕೆ** (ಸಭಾಪತಿಯವರ ಉಪಸ್ಥಿತಿ)

**(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 03 ಗಂಟೆ 15 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**10. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ವಿಷಯ:- ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದವನ್ನು ಶಾಶ್ವತವಾಗಿ ಪರಿಹರಿಸಲು ಸರ್ಕಾರವು ವಿಫಲವಾಗಿರುವ ಕುರಿತು**

***

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಚರ್ಚೆಯನ್ನು ಪ್ರಾರಂಭಿಸಿ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ವಿರೋಧ ಪಕ್ಷದ ಮುಖ್ಯಸಚೇತಕರನ್ನು ಹೊರತು ಪಡಿಸಿ ಕಾಂಗ್ರೆಸ್ ಪಕ್ಷದ ಇನ್ನುಳಿದ ಎಲ್ಲಾ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಅಧಿಕಾರಿಗಳನ್ನು, ರಿಸರ್ವ್ ಬ್ಯಾಂಕ್‌ನವರನ್ನು ಕರೆದು ಸಭೆ ಮಾಡುತ್ತೇವೆಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರು ಸಭೆಯನ್ನು ಕರೆಯುತ್ತೇನೆ ಎಂದು ಹೇಳಿದಾಗ ನೀವೆಲ್ಲಾ ಒಪ್ಪಿರುವಿರಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ನನ್ನದೊಂದು ವಿನಂತಿ. ಇವರನ್ನು ಕರೆದು, ಸಭಾನಾಯಕರನ್ನು ಕರೆದು....

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಇಲ್ಲಿ ಕೇಳಿ. ಮಾನ್ಯ ಸಭಾನಾಯಕರು, ನೀವು, ಮಂತ್ರಿಗಳು, ಸಂಬಂಧಪಟ್ಟ 2–3 ಇಲಾಖೆಯವರು ಎಲ್ಲರನ್ನೂ ಕರೆದು 3, 4 ಅಥವಾ 5ನೇ ತಾರೀಖಿನಂದು ಸಭೆಯನ್ನು ಮಾಡುತ್ತೇನೆಂದು ಒಪ್ಪಿದ್ದಾರೆ. ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ನಾನು ಸ್ಟ್ರಿಕ್ಟ್ ಆಗಿ ಅವರಿಗೆ ತಮ್ಮನ್ನು ಕರೆಯಲಿಕ್ಕೆ ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್ ಅವರು ಸಹ ಒಂದು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿರುವವರು. ಬಸವನಗುಡಿ ಕ್ಷೇತ್ರದ ಬಡವರ ಗೋಳು ನೋಡಲಿಕ್ಕಾಗುವುದಿಲ್ಲ. ಪರಿಹಾರವನ್ನೇನೂ ಕೊಡುತ್ತಿಲ್ಲ.

**ಸಭಾಪತಿಯವರು:–** ನನಗೆ ಎಲ್ಲಾ ಗೊತ್ತಿದೆ. ಇಷ್ಟೆಲ್ಲಾ ಹೋರಾಟ ಮಾಡಿದ್ದಕ್ಕೆ ಅಷ್ಟು ಪರಿಹಾರ ಬಂದಿದೆ. ನನ್ನ ಜವಾಬ್ದಾರಿ; ಸಭೆಯನ್ನು ಮಾಡುತ್ತಾರೆ. ಬೇಕಾದರೆ ಸಭಾನಾಯಕರು ಇಂದೇ ಅವರಿಗೆ ಒಂದು ಪತ್ರವನ್ನು ಬರೆಯಿರಿ. ನನಗೆ ಕಳುಹಿಸಿ ಎಂದರೆ ನಾನೇ ಕಳುಹಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. 3, 4 ಅಥವಾ 5ನೇ ತಾರೀಖಿನಂದು ಸಭೆ ಮಾಡುತ್ತೇನೆಂದು ಹೇಳಿದ್ದಾರೆ.

**ಸಭಾಪತಿಯವರು:–** 3, 4 ಅಥವಾ 5ನೇ ತಾರೀಖುಗಳಲ್ಲಿ ಒಂದು ದಿನ ವಿರೋಧ ಪಕ್ಷದ ನಾಯಕರು, ಸಭಾನಾಯಕರು, ಮುಖ್ಯ ಸಚೇತಕರು, ಸಂಬಂಧಪಟ್ಟಂತಹ ಇಲಾಖೆ ಅಧಿಕಾರಿಗಳು ಎಲ್ಲರನ್ನೂ ಕರೆದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ. ನಡಾವಳಿಗಳು ಇದೆ. ಈಗ ಚರ್ಚೆಯನ್ನು ಪ್ರಾರಂಭಿಸಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈ ಬೆಳಗಾವಿ ಅಧಿವೇಶನ ಪ್ರಾರಂಭವಾಗುವ ಮೊದಲು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಮಹಾರಾಷ್ಟ್ರ ಸರ್ಕಾರದ ಕುಮ್ಮಕ್ಕಿನಿಂದ "ಮಹಾಮೇಳಾವ"ವನ್ನು ಆಯೋಜಿಸಿ ಜನಸಾಮಾನ್ಯರ ಮಧ್ಯೆ ವೈಮನಸ್ಯ ಮೂಡಿಸುವಂತಹ, ಶಾಂತಿಯನ್ನು ಕದಡುವಂತಹ ಕೆಲಸವನ್ನು ನಿರಂತರವಾಗಿ ನಡೆಸಿಕೊಂಡು ಬಂದಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಆದ್ದರಿಂದ ಇತ್ತೀಚೆಗೆ ಯಾವತ್ತೂ ಕಾಣದಿರುವಂತಹ ಘಟನೆಗಳು ಅದರಲ್ಲಿಯೂ ಸಹ ಗಡಿ ಭಾಗದಲ್ಲಿ

ವಾಸಿಸತಕ್ಕಂತಹ ಕನ್ನಡಿಗರಲ್ಲಿಯೂ ಮತ್ತು ಕರ್ನಾಟಕ ರಾಜ್ಯದಲ್ಲಿ ವಾಸ ಮಾಡತಕ್ಕಂತಹ ಮರಾಠಿಗರಲ್ಲಿಯೂ ಸಹ ಒಂದು ಭಯದ ವಾತಾವರಣ ಸೃಷ್ಟಿಯಾಗಿರುವುದನ್ನು ನಾವು ನೋಡಿದ್ದೇವೆ. 1947ನೇ ಇಸವಿಯಲ್ಲಿ ಸ್ವತಂತ್ರ ಬಂದ ನಂತರ ಈ ರಾಷ್ಟ್ರದಲ್ಲಿ 17 ಪ್ರಾಂತ್ಯಗಳು, 562 ರಾಜ–ಮಹಾರಾಜರ ಸಂಸ್ಥಾನಗಳು ಇದ್ದವು. 17 ಪ್ರಾಂತ್ಯಗಳು ಎಲ್ಲಿಯವರೆವಿಗೂ ಹೋಗಿತ್ತೆಂದರೆ ಒಂದು ಕಡೆ ಆಫ್ಘಾನಿಸ್ತಾನದವರೆಗೆ ಇತ್ತು, ಮತ್ತೊಂದೆಡೆ ಬರ್ಮಾವರೆಗೆ ಇತ್ತು.

**(ಮುಂದು)**

(1208) 27–12–2022, 3.20 ಕೆಜಿ.ಆರ್ ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು.,):–**

17 ಪ್ರಾಂತ್ಯಗಳು, 562 ರಾಜಮಹಾರಾಜರ ಸಂಸ್ಥಾನಗಳು ಇದ್ದವು. ರಾಜಪ್ರಭುತ್ವದಲ್ಲಿ ಇದ್ದಂತಹ ರಾಷ್ಟ್ರವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡುವಂತಹ ಸಂದರ್ಭದಲ್ಲಿ ಇರತಕ್ಕಂತಹ ರಾಜ ಮಹಾರಾಜ ಎಲ್ಲರೂ ಸಹ Instrument of Accession, ಅಂದರೆ, ನಾವೆಲ್ಲರೂ ಒಕ್ಕೂಟ ರಾಷ್ಟ್ರದಲ್ಲಿ ಸದಸ್ಯರಾಗಿ ಇರುತ್ತೇವೆಂದು ಹೇಳಿ ಎಲ್ಲರೂ ಸಹ ಸಹಿ ಮಾಡಿದರು. ಅದಕ್ಕೆ ಮೊಟ್ಟ ಮೊದಲನೆಯದಾಗಿ ಮೈಸೂರಿನ ಮಹಾರಾಜರು ಸಹಿ ಮಾಡಿದರು. ಆ ಸಂದರ್ಭದಲ್ಲಿ 5 ರಾಜ್ಯದವರು ಅಂದರೆ, ಕಾಶ್ಮೀರ್, Junagarh, Bhupal and Malda ದಲ್ಲಿ ಇದ್ದಂತಹ ರಾಜ ಮಹಾರಾಜರು Instrument of Accession ಗೆ ನಾವು ಸಹಿ ಮಾಡುವುದಿಲ್ಲ, ನಾವು ಸ್ವತಂತ್ರ ರಾಜ್ಯವಾಗಿ ಇರುತ್ತೇವೆಂದು ಹೇಳುವಂತಹ ಸಂದರ್ಭದಲ್ಲಿ, ಆಗಿನ ಸ್ವಾತಂತ್ರ್ಯ ಹೋರಾಟದಲ್ಲಿ ಇದ್ದಂತಹ ಮಹಾನುಭಾವರೆಲ್ಲರೂ ಸಹ ಪ್ರಯತ್ನ ಮಾಡಿ ಅದರಲ್ಲಿ Nizam's State ಸಹ ಇತ್ತು. ಆ ಸಂದರ್ಭದಲ್ಲಿ ಎಲ್ಲರೂ ಸಹ, ಪ್ರಯತ್ನ ಮಾಡಿ ಅದರಲ್ಲಿ ಪಂಡಿತ್ ಶ್ರೀ ಜವಾಹರಲಾಲ್ ನೆಹರು ಮತ್ತು ಶ್ರೀ ಸರ್ದಾರ್ ವಲ್ಲಭ್‌ಬಾಯಿ ಪಟೇಲ್‌ರವರು ಸೇರಿ ಈ ಒಕ್ಕೂಟದಲ್ಲಿ ಎಲ್ಲರೂ ಸದಸ್ಯರಾಗಬೇಕೆಂದು ಹೇಳಿ ಬಹಳ ಪ್ರಮುಖವಾದಂತಹ ಪಾತ್ರವನ್ನು ತೆಗೆದುಕೊಂಡಿದ್ದರು. ಇವತ್ತು ಕೆಲವು ರಾಜ್ಯಗಳು ಏನಿವೆ, ಅದು ಆಂಧ್ರ ಪ್ರದೇಶ ರಾಜ್ಯ ಇರಬಹುದು, ಈ ರಾಜ್ಯಕ್ಕೆ 15ನೇ ಆಗಸ್ಟ್ 1947 ರಲ್ಲಿ ಸ್ವಾತಂತ್ರ್ಯ ಸಿಗಲಿಲ್ಲ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಶಶೀಲ್ ಜಿ.ನಮೋಶಿಯವರು ಪೀಠವನ್ನು ಅಲಂಕರಿಸಿದರು)**

**ವೈಸ್ ಛೇರ್ಮನ್‌ರವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸೆಪ್ಟೆಂಬರ್ 17, 1948 ರಂದು ಆಂಧ್ರ ಪ್ರದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತ್ತು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ವರ್ಷದ ನಂತರ ಅವರಿಗೆ ಸ್ವಾತಂತ್ರ ಸಿಕ್ಕಿರುವಂಥದ್ದನ್ನು ಇತ್ತಿಹಾಸದಲ್ಲಿ ನೋಡಿದ್ದೇವೆ. ಕಾಶ್ಮೀರ್‌ನಲ್ಲಿಯೂ ಸಮಸ್ಯೆಯಾದಾಗ ನಾವು ನಿಮ್ಮನ್ನು ಸರಿಸಮಾನವಾಗಿ ಕಾಣುತ್ತೇವೆ, ನಿಮಗೆ ಯಾವುದೇ ರೀತಿ ಗೊಂದಲ ಬೇಡವೆಂದು ಒಂದು agreement ಅನ್ನು ಮಾಡಿಕೊಂಡರು. ಅದು Article.370 ಎಂದು ಕೊಟ್ಟು ಅವರನ್ನು ಸಹ ನಮ್ಮ ಜೊತೆಗೆ ತೆಗೆದುಕೊಂಡು ಹೋಗಿರುವಂಥಹದ್ದು ಇತಿಹಾಸ. ಈಗ Article.370 ಅನ್ನು ತೆಗೆದಿದ್ದಾರೆ. ಅದು ಬೇರೆ ಪ್ರಶ್ನೆ. Junagarh ಮಹಾರಾಜರು ಬರುವುದಿಲ್ಲವೆಂದು ಎಂದು ಹೇಳಿದಾಗ, ಅಲ್ಲಿ Hindu Majority ಇದ್ದಿದರಿಂದ, ಅವರು ಅಲ್ಲಿಂದ ಪಲಾಯಾನ ಮಾಡಿ (ಕಾಚಿಗೆ) Karachi ಗೆ ಹೋಗುತ್ತಾರೆ. ಬೋಪಾಲ್ ಮಹಾರಾಜರ ಮೇಲೆ ಒತ್ತಡ ತಂದಾಗ, ಅವರು ಒಪ್ಪಿಕೊಂಡು Instrument of Accession ಗೆ ಸಹಿ ಮಾಡುತ್ತಾರೆ. ನನಗೆ Instrument of Accession ಎಂಬ ಪದಕ್ಕೆ ಕನ್ನಡದಲ್ಲಿ ಏನು ಹೇಳುತ್ತಾರೆಂದು ಗೊತ್ತಿಲ್ಲ. ಆನಂತರ Malda ಮಹಾರಾಜರು West Bengal ನಲ್ಲಿ, ತಮಗೆ ತಿಳಿದಿರುವಂತೆ ನಿಜಾಮ್ ರಾಜ್ಯದಲ್ಲಿದ್ದವರು ಸೆಪ್ಟಂಬರ್ ಒಂದು ವರ್ಷವಾದ ಮೇಲೆ ಬಂದಾಗ, ಇದಕ್ಕೆಲ್ಲಾ ಸಮಸ್ಯೆಗಳು ಬಹಳ ಇದ್ದವು. 1956 ಅಥವಾ ಅದಕ್ಕೂ ಮೊದಲು ರಾಜ್ಯಗಳು ವಿಂಗಡಣೆಯಾದಾಗ ಹಲವಾರು ಸಮಸ್ಯೆಗಳು ನಮ್ಮ ಮುಂದೆ ಬಂದವು. 562 ರಾಜ್ಯಗಳ ಮಹಾರಾಜರುಗಳನ್ನು ರಾಷ್ಟ್ರದ ಒಕ್ಕೂಟಕ್ಕೆ ಅವರನ್ನು ಒಪ್ಪಿಸುವಂತಹ ಕೆಲಸ. ತದನಂತರ ರಾಜ್ಯಗಳು ವಿಂಗಡಣೆಯಾದ ಮೇಲೆ ಈ ರಾಜ್ಯಗಳನ್ನು ತಾವುಗಳು ಒಪ್ಪಿಕೊಳ್ಳಿ ಎಂದು ಒಪ್ಪಿಸುವಂತಹ ಕೆಲಸ. ಆ ಸಂದರ್ಭದಲ್ಲಿ ಈ ಕೆಲಸ ಅಷ್ಟು ಸುಲಭವಾಗಿರಲಿಲ್ಲ. ಇವರೆಲ್ಲರಿಗೂ ಸ್ವಾತಂತ್ರ್ಯ ಹೋರಾಟದಲ್ಲಿ ಬಹಳಷ್ಟು ನೋವು ಗೊತ್ತಿತ್ತು. ಅದರಿಂದ ಬಹಳಷ್ಟು ರಾಜಿ politics ಎಂದರೆ, game of politics ಎಂದು ಹೇಳಿ ಬಹಳಷ್ಟು ಚರ್ಚೆಗಳ ಮುಖಾಂತರ ಎಲ್ಲಾ ರಾಜ್ಯಗಳು, ಆಗ 28 ರಾಜ್ಯಗಳು ಇದ್ದವು. ಈಗ ಬಹಳಷ್ಟು ರಾಜ್ಯಗಳು ಆಗಿವೆ.

**ವೈಸ್ ಛೇರ್ಮನ್‌ರವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಶ್ರೀ ಸರ್ದಾರ್ ವಲ್ಲಭ್‌ಬಾಯಿ ಪಟೇಲ್‌ರವರ ಪಾತ್ರ ಬಹಳ ದೊಡ್ಡದು ಇತ್ತು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಶ್ರೀ ಪಂಡಿತ್ ಜವಹಾರಲಾಲ್ ನೆಹರು ಮತ್ತು ಶ್ರೀ ಸರ್ದಾರ್ ವಲ್ಲಭ್‌ಬಾಯಿ ಪಟೇಲ್‌ರವರ ಇವರಿಬ್ಬರ ಹೆಸರನ್ನು ಹೇಳುತ್ತಿದ್ದೇನೆ. ನಾನು ಒಬ್ಬರ ಹೆಸರನ್ನು ಮಾತ್ರ ಹೇಳುತ್ತಿಲ್ಲ.

**ವೈಸ್ ಛೇರ್ಮನ್‌ರವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸರಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅಷ್ಟೊಂದು ಜವಾಬ್ದಾರಿ ನನ್ನ ನಾಯಕರಾದ ಶ್ರೀ ಸರ್ಧಾರ್ ವಲ್ಲಭಾಯಿ ಪಟೇಲ್‌ರವರ ಮೇಲೆ ನನಗೆ ಅಷ್ಟೇ ಗೌರವ ಇದೆ. ಅಷ್ಟೇ ಗೌರವವನ್ನು ಪಂಡಿತ್ ಜವಹಾರಲಾಲ್ ನೆಹರುರವರ ಮೇಲೆಯೂ ಇಟ್ಟಿದ್ದೇನೆ. ನಾನು ಅಂಧ ಭಕ್ತನು ಅಲ್ಲ. ಈ ರಾಷ್ಟ್ರದ ಬಗ್ಗೆ ಅಪಾರವಾದಂತಹ ಗೌರವವನ್ನು ಇಟ್ಟುಕೊಂಡಿರುವಂತಹದ್ದು, ಈ ರಾಷ್ಟ್ರದಲ್ಲಿ ಏನು ಆಗು–ಹೋಗುಗಳು ಆಗಿದೆ, ಅದ್ದರಿಂದ, ನಾನು ಇಲ್ಲಿ ಬಂದು ನಿಲ್ಲುವಂತಹ ಅವಕಾಶ ಇದೆ. ತಮಗೆಲ್ಲ ಹಾಗೆಯೇ ಸಿಗುತ್ತದೆ. ಏಕೆಂದರೆ, ತಾವೆಲ್ಲರೂ ಗೌಡರು. ಅದಕ್ಕೆ ತಮಗೆ ಅವಕಾಶ ಸಿಕ್ಕೇ ಸಿಗುತ್ತದೆ. ನಮಗೆಲ್ಲ ಅವಕಾಶ ಸಿಗುವಂತಹ ಅವಕಾಶಗಳೇ ಇರಲಿಲ್ಲ. ಸಂವಿಧಾನ, ಸಂವಿಧಾನದ ನಂತರ ಈ ರಾಷ್ಟ್ರವನ್ನು ನಡೆಸಿಕೊಂಡು ಹೋಗಬೇಕು ಎನ್ನುವಾಗ ಇದೆಲ್ಲವೂ ಬಂತು. ಆಗ ಭಾಷಾವಾರು ಪ್ರದೇಶವಾದಾಗ ಕರ್ನಾಟಕದಲ್ಲಿ ಕನ್ನಡ ಮಾತನಾಡುವವೆಲ್ಲರೂ ಬರಬೇಕು, ಮರಾಠಿ ಭಾಷೆಯನ್ನು ಮಾತನಾಡುವವರು ಎಲ್ಲರೂ ಬರಬೇಕು. ಈಗ ಈ ರಾಷ್ಟ್ರದಲ್ಲಿ 23 ಭಾಷೆಗಳಿಗೆ ಅಧಿಕೃತ ಸ್ಥಾನಮಾನಗಳು ಸಿಕ್ಕಿವೆ. ಈ ರಾಷ್ಟ್ರದಲ್ಲಿ 23 ಭಾಷೆಗಳಿಗೆ ಅಧಿಕೃತ ಭಾಷೆಗಳೆಂದು ಸಿಕ್ಕಿದೆ. ಇನ್ನು 26 ಭಾಷೆಗಳು ಕ್ಯೂನಲ್ಲಿ ನಿಂತಿವೆ. ನಮಗೂ ಸಹ ಅಧಿಕೃತ ಭಾಷೆಗಳ ಸ್ಥಾನ ಮಾನಗಳನ್ನು ಕೊಡಿ ಎಂದು ನಿಂತಿರುವಂತಹದ್ದು ನಮ್ಮ ಮುಂದೆ ಇದೆ. ನಾನು ಸಹ Parliament ನಲ್ಲಿ ಇದ್ದಾಗ, ತುಳು ಮತ್ತು ಕೊಡವರವರಿಗೂ ಸಹ ಅಧಿಕೃತ ಭಾಷೆ ದರ್ಜೆಯನ್ನು ಕೊಡಿ ಎಂದು ಚರ್ಚೆ ಮಾಡಿರುವುದನ್ನು ನಮ್ಮ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ. ಈ ಭಾಷಾವಾರು ಪ್ರಾಂತ್ಯಗಳಾದಾಗ ಕೆಲವು ಜಾಗಗಳು ಏಕೆಂದರೆ, ನಿನ್ನೇ ದಿವಸ ಗಡಿಭಾಗದ ಬಿಲ್ಲಿನ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಆ ವಿಚಾರದಲ್ಲಿ ಹೇಳಿದ್ದೇನೆ. ಆಗ ಯಾರು ಪ್ರಬಲರಾಗಿದ್ದರು ಅವರು ಅವರಿಗೆ ಬೇಕಾದ ರೀತಿಯಲ್ಲಿ ರಾಜ್ಯಗಳನ್ನು ಮತ್ತು ಜಿಲ್ಲೆಗಳನ್ನು ಮಾಡಿಕೊಂಡರು. ಸ್ವಾತಂತ್ರ್ಯ ಬಂದಂತಹ ಸಂದರ್ಭದಲ್ಲಿ ಕಷ್ಟಪಟ್ಟು ಪಡೆದಂತಹ ಸ್ವಾತಂತ್ರ್ಯವನ್ನು ಯಾರು ಸಹ ಕಳೆದುಕೊಳ್ಳುವುದಕ್ಕೆ ತಯಾರು ಇರಲಿಲ್ಲ. ಬಹಳಷ್ಟು give and take policy ನಲ್ಲಿ ಕೆಲವು ಜಾಗಗಳು ಮಹಾರಾಷ್ಟ್ರಕ್ಕೆ ಹೋಗಿದ್ದವು. ಕೆಲವು ಜಾಗಗಳು ಕರ್ನಾಟಕಕ್ಕೆ ಬಂದವು. ಕೆಲವು ಕರ್ನಾಟಕಕ್ಕೆ ಹೋಗಿದ್ದರೆ, ತಮಿಳನಾಡು ಮತ್ತು ಕೇರಳ ಇವೆಲ್ಲವು ಬಂದವು. ಆದ್ದರಿಂದ, ಈ ಒಂದು ಜಟಿಲವಾದ ಪರಿಸ್ಥಿತಿಯಲ್ಲಿಯೂ ಸಹ, ಒಂದು ಒಳ್ಳೆಯ ಸ್ಥಿತಿ ಅಂದರೆ, Kashmir to Kanyakumari ಎಂದು ನಾವು ಯಾವಾಗಲೂ ಸಹ ಹೇಳುತ್ತಿರುತ್ತೇವೆ ಮತ್ತು Kohima to Kamakya ಎಂದು ಏನು ಹೇಳುತ್ತೇವೆ, Kutch to Kamakya ಎಂದು ಏನು ಹೇಳುತ್ತೇವೆ, ಇದು ನಮ್ಮ ರಾಷ್ಟ್ರದ ಒಂದು ಭೂಪಟವೆಂದು ನಾವು ನೋಡುವುದಕ್ಕೆ ಅವಕಾಶ ಆಯಿತು. ನಾವು ನಮ್ಮ ರಾಷ್ಟ್ರದಲ್ಲಿ ನಮ್ಮ ರಾಜ್ಯ ಎಂದು ನೋಡುವಾಗ ಭಾಷಾವಾರು ರಾಜ್ಯವನ್ನು

ನೋಡಿದ್ದೇವೆ. ಭಾಷೆಗಳು ಎಂದು ನೋಡಿದಾಗ ಸುಮಾರು 19 ಸಾವಿರ ಭಾಷೆಗಳಿವೆ. ನಮ್ಮ ಬೆಂಗಳೂರು ನಗರ ಒಂದರಲ್ಲಿಯೇ 108 ಭಾಷೆಗಳನ್ನು ಮಾತನಾಡುತ್ತಾರೆ. ಇದನ್ನು ಬಿಟ್ಟರೆ, ಪುನಾದಲ್ಲಿ 98 ಭಾಷೆಗಳನ್ನು ಮಾತನಾಡುತ್ತಾರೆ. ಇಂತಹ ಅದ್ಭುತವಾದಂತಹ ರಾಷ್ಟ್ರ ಇಡೀ ಪ್ರಪಂಚಲ್ಲಿಯೇ ಎಲ್ಲಿಯೂ ಸಿಗುವುದಿಲ್ಲ. ನಮ್ಮ ರಾಷ್ಟದಲ್ಲಿ ವಿಭಿನ್ನವಾದ ಧರ್ಮಗಳು, ವಿಭಿನ್ನವಾದ ಸಂಸ್ಕೃತಿ ಸಂಸ್ಕಾರಗಳನ್ನು ಸೇರಿಸಿಕೊಂಡು ಒಂದು ರಾಷ್ಟ್ರವನ್ನಾಗಿ ಮಾಡಿಕೊಂಡು ಮುಂದೆ ಹೋಗುವಾಗ, ಭಾಷೆಯ ವಿಚಾರದಲ್ಲಿ ಕೆಲವು ರಾಜ್ಯಗಳು ಖ್ಯಾತೆಯನ್ನು ಎತ್ತಿರುವುದನ್ನು ನೋಡಿದಾಗ, ಇವರು ಯಾವುದೋ ಒಂದು ಗುಪ್ತ ಕಾರ್ಯಸೂಚಿಯನ್ನು ಇಟ್ಟುಕೊಂಡು ಮಾಡುತ್ತಿದ್ದಾರೆ. ಮಹಾರಾಷ್ಟ್ರದ್ದು ಹೊಸದು ಅಲ್ಲ. ಮಾನ್ಯ ಆಯನೂರು ಮಂಜುನಾಥ್‌ರವರು ಮತ್ತು ನಾವೆಲ್ಲರೂ ವಿದ್ಯಾರ್ಥಿಗಳಾಗಿದ್ದಂತಹ ಸಂದರ್ಭದಲ್ಲಿ ಗಡಿ ಹೋರಾಟದಲ್ಲಿ ಶ್ರೀ ವಟಾಳ್‌ನಾಗರಾಜುರವರು ಹೆಚ್ಚಿನ ಚರ್ಚೆ ಮಾಡುತ್ತಿದ್ದರು. ಅವರು ಎಲ್ಲಿ ಭಾಷಣ ಮಾಡಿದರೂ ಸಹ, ಕನ್ನಡ ಪರ ಮಾತನಾಡಿದ್ದಕ್ಕೆ ಪೋಲೀಸರು ಬೂಟ್ ಕಾಲಿನಲ್ಲಿ ಒದ್ದಿದ್ದಾರೆ ಎಂದು ಹೇಳುತ್ತಿದ್ದರು. ಆ ಸಂದರ್ಭದಲ್ಲಿ ಬೇರೆ ಯಾರು ಸಹ ಅದರ ಬಗ್ಗೆ ಅಷ್ಟು ಗಮನ ಕೊಡುತ್ತಿರಲಿಲ್ಲ. ಈಗ ಪ್ರತಿಯೊಬ್ಬರು ಸಹ, ಅದರ ಬಗ್ಗೆ ಗಮನ ಕೊಡುವಂತಹ ಪರಿಸ್ಥಿತಿ ಬಂದಿದೆ. ಗಡಿ ಭಾಗದಲ್ಲಿ ಆಗುತ್ತಿರುವಂತಹ ಪುಂಡಾಟಿಕೆ. ನಾನು ಮರಾಠ ಭಾಷೆ ಅಥವಾ ಕನ್ನಡ ಭಾಷೆ ಮಾತನಾಡುವವರು ಪುಂಡಾಟಿಕೆ ಮಾಡುತ್ತಾರೆಂದು ಹೇಳುವುದಿಲ್ಲ. ಕೆಲವು ಪಟ್ಟಾಭದ್ರಾ ಹಿತಾಸಕ್ತಿಗಳು ಅವರ ಸ್ವಾರ್ಥಕ್ಕಾಗಿ ಭಾಷೆಯನ್ನು ಉಪಯೋಗಿಸಿಕೊಂಡು ಸಮಾಜದಲ್ಲಿ ಬಿರುಕು ಮೂಡಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕೆ ಈಗ ನಾವು ಸರಿಯಾದಂತಹ ಒಂದು ಹೆಜ್ಜೆಯನ್ನು ಇಡಲಿಲ್ಲವೆಂದರೆ, ಮುಂದೊಂದು ದಿವಸ ಬಹಳ ಕೆಟ್ಟ ಪರಿಣಾಮ ತರಬಹುದು ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಮೊದಲು ಗಡಿವಿವಾದ ಬಂದಾಗ. ಮೊದಲು 1953 ರಲ್ಲಿ Fazal Ali Commission ರವರು ಮಾನ್ಯ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಿದ್ದರು. ಅವರು ವರದಿಯನ್ನು ಕೊಟ್ಟಾಗ ಆ ವರದಿಯನ್ನು ಮುಂಬೈ ಪ್ರಾಂತ್ಯದಲ್ಲಿದ್ದ ಬೆಳಗಾವಿಯೂ ಸೇರಿದಂತೆ 865 ಗ್ರಾಮಗಳು ಆಗಿನ ಮೈಸೂರು ರಾಜ್ಯಕ್ಕೆ ಸೇರಿವೆ ಎಂದು ಮಹಾರಾಷ್ಟ್ರ ಆಕ್ಷೇಪಣೆ ಮಾಡಿತ್ತು. ತದನಂತರ ಮಹಾರಾಷ್ಟ್ರದಲ್ಲಿ ಶ್ರೀ ವಿ.ಪಿ.ನಾಯಕ್‌ರವರು ಮುಖ್ಯಮಂತ್ರಿಯಾಗಿದ್ದರು. Mehr Singh Mahajan ಅವರ ನೇತೃತ್ವದಲ್ಲಿ ಒಂದು ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಒಂದು Mahajan Commission ಅನ್ನು ಮಾಡಿದ್ದರು. ಅದು ಬಹಳ ಪ್ರಸಿದ್ಧವಾಗಿತ್ತು. ಅದನ್ನು ನಾವೆಲ್ಲರೆಲ್ಲೂ ನೋಡಿದ್ದೇವೆ. ಆಗ ಮೈಸೂರು ಪ್ರಾಂತ್ಯದಲ್ಲಿ ಇದ್ದಂತಹವರು Mahajan ವರದಿ ಏನು ಬರುತ್ತದೆಯೋ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆಂದು ಹೇಳಿದರು. ಆಗ ಮಹಾರಾಷ್ಟ್ರದ

ಮುಖ್ಯಮಂತ್ರಿಯಾಗಿದ್ದ ಶ್ರೀ ವಿ.ಪಿ.ನಾಯಕ್‌ರವರು ಸಹ Mahajan Report ನಮಗೆ ಅಂತಿಮ ಎಂದು ಒಪ್ಪಿಕೊಂಡರು. 1966 ರಲ್ಲಿ Mahajan ಸಮಿತಿ ರಚನೆಯಾಗುತ್ತದೆ. ಒಂದು ವರ್ಷದಲ್ಲಿ ಅವರು ಅವರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತಾರೆ. ಆದರೆ, ಸಾರಸಗಟಾಗಿ ಮಹಾರಾಷ್ಟ್ರ ಸರ್ಕಾರದವರು ಒಪ್ಪಿಕೊಂಡು, ನಂತರ ಅದನ್ನು ಒಪ್ಪುವುದಿಲ್ಲವೆಂದು ಹೇಳಿ ಅದನ್ನು ಒಪ್ಪುವುದಿಲ್ಲ. ಆದರೆ, ಅವರ ಪ್ರಕಾರ ಬೆಳಗಾವಿ, ನಿಪ್ಪಾಣಿ. ಕಾರವಾರ ಅದರ ಜೊತೆಗೆ ಇತರ ಹಲವಾರು ಗ್ರಾಮಗಳು ಸೇರಿಸಿ ಮಹಾರಾಷ್ಟ್ರಕ್ಕೆ ಕೊಡಬೇಕು. ಅಲ್ಲಿ ಮರಾಠಿ ಮಾತನಾಡುವವರು ಜಾಸ್ತಿ ಇದ್ದಾರೆ ಎಂದು ಹೇಳಿ. ಆ ರೀತಿ ನೋಡುವುದಾದರೆ, ಕರ್ನಾಟಕ ಮಹಾಜನ್ ವರದಿಯಲ್ಲಿ ಏನಾಗಿತ್ತು ಎಂದರೆ, ದಕ್ಷಿಣ ಸೋಲ್ಲಾಪುರದಲ್ಲಿ ಸುಮಾರು 65 ಹಳ್ಳಿಗಳು, ಸೋಲ್ಲಾಪುರ ಸಹ ನಮಗೆ ಸೇರಬೇಕೆಂದು ಬರುತ್ತದೆ. ಸಂಪೂರ್ಣ ಅಕಲ್‌ಕೋಟೆ ತಾಲ್ಲೂಕ್ ಇದು ಸಹ ಕರ್ನಾಟಕಕ್ಕೆ ಸೇರಬೇಕೆಂದು ಬರುತ್ತದೆ. ಜತ್ತ ತಾಲ್ಲೂಕಿನ 44 ಹಳ್ಳಿಗಳು, ಗಡಹಿಂಗಲಜಿ ತಾಲ್ಲೂಕಿನ 15 ಹಳ್ಳಿಗಳು ಮತ್ತು ಕೇರಳದ ಚಂದ್ರಗಿರಿಯ ನದಿಯ ಉತ್ತರ ಭಾಗ, ಕಾಸರಗೋಡು ಇವೆಲ್ಲವೂ ಸಹ ಕರ್ನಾಟಕಕ್ಕೆ ಸೇರಬೇಕೆಂದು ಮಹಾಜನ್ ವರದಿಯಲ್ಲಿ ಹೇಳುತ್ತದೆ. ಆದರೆ, ಮಹಾಜನ್ ವರದಿಯಲ್ಲಿ ಏನು ಹೇಳಿದ್ದಾರೆ, ಅದನ್ನು ನಾವು ಒಪ್ಪಿಕೊಂಡಿದ್ದೇವೆಂದು ನಾವು ಎಲ್ಲಿಯೂ ಸಹ ಕಾಸರಗೋಡು ನಮಗೆ ಸೇರಬೇಕು ಮತ್ತು ಅಕಲ್‌ಕೋಟೆ ನಮಗೆ ಸೇರಬೇಕೆಂದು ನಾವು ಎಲ್ಲಿಯೂ ದಾಂಧಲೆಗಳನ್ನು ಮಾಡಿಲ್ಲ ಹಾಗೂ ಗೊಂದಲಗಳನ್ನು ಸೃಷ್ಟಿ ಮಾಡಿಲ್ಲ. ಅದು ಸರ್ಕಾರಕ್ಕೆ ಬಿಟ್ಟದ್ದು ಎಂದು ಸುಮ್ಮನೆ ಇದ್ದೇವೆ.

**(ಮುಂದು., )**

**(1209) 27-12-2022 (3.30) ಎಂವಿ-ಆರ್‌ಎನ್** (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು..):-**

ಆದರೆ, ಮಹಾರಾಷ್ಟ್ರದಲ್ಲಿ ಭಾಷೆಯ ಮೇಲೆ ಬೆಳೆದಿರುವಂತಹ ಕೆಲವು ಸಂಘಟನೆಗಳು, ಅದರಲ್ಲೂ ಸಹ ಎಂ.ಇ.ಎಸ್. ಸಂಘಟನೆ, ಅವರ ರಾಜಕೀಯ ಲಾಭಕ್ಕೋಸ್ಕರ, ಬೆಳಗಾವಿಯಲ್ಲಿ ಸದನ ನಡೆಯುವಂತಹ ಸಂದರ್ಭದಲ್ಲಿ, ಹದಿನೈದು ದಿವಸಗಳ ಹಿಂದಿನಿಂದ ಗಲಾಟೆ ಶುರು ಮಾಡುತ್ತಾರೆ. ಆ ರೀತಿ ಗಲಾಟೆ ಶುರು ಮಾಡಿ, ಎಲ್ಲರಿಗೂ ಸಹ ಒಂದು ರೀತಿಯ ಭಯದ ವಾತಾವರಣವನ್ನು ಸೃಷ್ಟಿ ಮಾಡುತ್ತಾರೆ. ಗಡಿ ಭಾಗದಲ್ಲಿರುವಂತಹ ಕನ್ನಡಿಗರಿಗೂ ಸಹ ಒಂದು ಭಯದ ವಾತಾವರಣ. ಕರ್ನಾಟಕ ರಾಜ್ಯದಾದ್ಯಂತ ಇರತಕ್ಕಂಥ ಮರಾಠಿಗರಿಗೂ ಸಹ ತಮ್ಮ ಜಾಗದಲ್ಲಿ ಏನಾಗುತ್ತದೆ ಎಂದು ಗೊತ್ತಾಗುವುದಿಲ್ಲ. ಆದುದರಿಂದ, ಇದಕ್ಕೆ ಎಲ್ಲಿಯಾದರೂ ಸಹ ಒಂದು ತೆರೆಯನ್ನು

ಎಳೆಯಬೇಕಾಗುತ್ತದೆ. ಈಗ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂತಹ ಮಹಾರಾಷ್ಟ್ರದ ಮಂತ್ರಿಗಳು ಯಾವ್ಯಾವ ರೀತಿಯಲ್ಲಿ ಭಾಷಣಗಳನ್ನು ಮಾಡುತ್ತಿದ್ದಾರೆಂದು ನೋಡಿದರೆ, ಅವರು ಕರ್ನಾಟಕ ರಾಜ್ಯದವರಿಗೆ ಶಕ್ತಿ ಇಲ್ಲವೆಂದು ತಪ್ಪು ತಿಳಿದುಕೊಂಡಿದ್ದಾರೆ. ಆದರೆ, ನಾವು ಈ ಸಂದರ್ಭದಲ್ಲಿ ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅವರು ಸುಪ್ರೀಂ ಕೋರ್ಟ್‌ಗೆ ಸಹ ಹೋಗಿದ್ದಾರೆ. ಈ ಒಂದು ಸಂದರ್ಭದಲ್ಲಿ ಮಾಡಬೇಕಾಗಿರುವುದು ಏನೆಂದರೆ, 2004ರಲ್ಲಿ ಮಹಾರಾಷ್ಟ್ರದವರು ಸುಪ್ರೀಂ ಕೋರ್ಟ್‌ಗೆ ಹೋದಾಗ ನಮ್ಮ ರಾಜ್ಯದ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರು ಸಹ ಮಾನ್ಯ ದಾತರ್‌ರವರ ನೇತೃತ್ವದಲ್ಲಿ ಒಂದು ಕಾನೂನಿನ ತಂಡವನ್ನು ರಚನೆ ಮಾಡಿ, ಅದರ ಬಗ್ಗೆ ವಾದ ಮಾಡುವುದಕ್ಕೆ ಅವರನ್ನು ನೇಮಕ ಮಾಡುತ್ತಾರೆ. ಅವರು ತೀರಿ ಹೋದ ನಂತರ, ಮಾನ್ಯ ಮಳೀಮಠರವರು ಇರುತ್ತಾರೆ. ಆ ಸಂದರ್ಭದಲ್ಲಿ ಮಾನ್ಯ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಆರ್.ಎಂ.ಲೋಧಾರ್‌ರವರು ಕರ್ನಾಟಕ–ಮಹಾರಾಷ್ಟ್ರದ ಗಡಿ ವಿವಾದಕ್ಕೆ ಸಂಬಂಧಪಟ್ಟಂತೆ ಗಡಿ ಪ್ರದೇಶದಲ್ಲಿರತಕ್ಕಂಥ ಜನರ ಅಭಿಪ್ರಾಯವನ್ನು ಪಡೆದು ವರದಿ ನೀಡಬೇಕೆಂದು ನ್ಯಾಯಮೂರ್ತಿ ಶ್ರೀ ಮನಮೋಹನ್ ಸರಿನ್‌ರವರ ನೇತೃತ್ವದಲ್ಲಿ ಒಂದು ಆಯೋಗವನ್ನು ರಚನೆ ಮಾಡುತ್ತಾರೆ. ಆ ಆಯೋಗದವರು ಗಡಿ ಭಾಗದಲ್ಲಿರತಕ್ಕಂತಹ ರಾಜ್ಯಗಳಿಗೆ ಭೇಟಿ ನೀಡಿ, ಅಲ್ಲಿನ ಜನರ ಅಹವಾಲುಗಳನ್ನು ಕೇಳಿ, ತದನಂತರ ತೀರ್ಮಾನಕ್ಕೆ ಬರಬೇಕೆಂದು ಹೇಳಿದಾಗ, ಆ ಒಂದು ಸಂದರ್ಭದಲ್ಲಿ ಅದನ್ನು ಒಪ್ಪುವುದಕ್ಕೆ ತಯಾರು ಇರಲಿಲ್ಲ. ಈ ಒಂದು ಸಂದರ್ಭದಲ್ಲಿ ಈಗ ನಡೆದಿರುವಂತಹ ಘಟನೆ ನೋಡಿದಾಗ, ಕರ್ನಾಟಕದಿಂದ ಹೋಗುವಂತಹ ಬಸ್‌ಗಳಿಗೆ ಅವರು ಮಸಿ ಬಳಿಯುವುದು. ಮಹಾರಾಷ್ಟ್ರದಿಂದ ಬರುವಂತಹ, ಅದು ಒಂದು ರೀತಿ bottleneck ಇದ್ದ ಹಾಗೆ. ಈಗ ದೇಶದ ಉತ್ತರ ಭಾರತ ಮತ್ತು ಉತ್ತರ ಪಶ್ಚಿಮ ಭಾರತದಿಂದ ಬರುವಂತಹ ಎಲ್ಲಾ ಲಾರಿಗಳು ಸಹ ಪೂನಾ ಮತ್ತು ನಿಪ್ಪಾಣಿಯ ಮಾರ್ಗವಾಗಿ ಬರಬೇಕು. ಅಲ್ಲಿ ಮೈಲಿಗಟ್ಟಲೆ ಟ್ರಕ್‌ಗಳು ಮತ್ತು ಬಸ್‌ಗಳು ನಿಂತುಕೊಂಡಿವೆ. ಈ ಕಡೆಯಿಂದ ಜನ ಆ ಕಡೆಗೆ ಹೋಗುವಂತಿಲ್ಲ. ಆ ಕಡೆಯಿಂದ ಜನ ಈ ಕಡೆಗೆ ಬರುವಂತಿಲ್ಲ. ಈ ಗಡಿ ಸಮಸ್ಯೆ ಇದು ಯಾರ ಸ್ವತ್ತು ಅಲ್ಲ. ಇದು ಪ್ರತಿಯೊಬ್ಬ ಆರು ಕೋಟಿ ಕನ್ನಡಿಗರ ಸ್ವತ್ತು. ಆದರೆ, ಸರ್ಕಾರದ ಜವಾಬ್ದಾರಿ ಏನೆಂದರೆ, ಎಲ್ಲಾ ರಾಜಕೀಯ ಪಕ್ಷಗಳ ಸರ್ವಪಕ್ಷಗಳ ಸಭೆ ಕರೆದು, ಇದಕ್ಕೆ ಏನು ಮಾಡಬೇಕೆಂದು ಚರ್ಚೆ ಮಾಡಬೇಕಾಗಿತ್ತು. ಆದರೆ, ಸರ್ಕಾರದವರು ಅದರ ಬಗ್ಗೆ ಚರ್ಚೆ ಮಾಡುವಂತಹ ಗೋಜಿಗೆ

ಹೋಗಲಿಲ್ಲ. ಆ ಒಂದು ಸಂದರ್ಭದಲ್ಲಿ ಅಕಸ್ಮಾತ್ ಸರ್ವಪಕ್ಷ ನಿಯೋಗ ಹೋಗಿ ಕೇಂದ್ರ ಸರ್ಕಾರದವರನ್ನು ಭೇಟಿ ಮಾಡಬೇಕು ಎಂದು, ಸದನದಲ್ಲಿ ಜನತಾದಳ ಪಕ್ಷದವರು ಮತ್ತು ನಾವುಗಳು ಇದ್ದೇವೆ. ನಮ್ಮನ್ನು ಮಾನ್ಯ ಪ್ರಧಾನ ಮಂತ್ರಿಗಳ ಬಳಿಗೆ ಕರೆದುಕೊಂಡು ಹೋಗಬಹುದಾಗಿತ್ತು. ಆದರೆ, ಕೇವಲ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು ಮತ್ತು ಕರ್ನಾಟಕದ ಗೃಹ ಸಚಿವರನ್ನು ಭೇಟಿ ಮಾಡಿದರೆ, ಈ ಸಮಸ್ಯೆ ಬಗೆಹರಿಯುತ್ತದೆ ಎಂದರೆ ಆಗುವುದಿಲ್ಲ. ನಾವು ಅದನ್ನು ಒಪ್ಪುವುದಕ್ಕೆ ತಯಾರು ಇಲ್ಲ. ಅಂದರೆ ಕರ್ನಾಟಕ ರಾಜ್ಯ ಇವರೊಬ್ಬರದು ಅಲ್ಲ, ಇದರಲ್ಲಿ ನಮ್ಮದೂ ಸಹ ಪಾಲು ಇದೆ. ಅದಕ್ಕೆ ನಮ್ಮ ಮಾತನ್ನು ಸಹ ಕೇಳಬೇಕು ಎಂಬುದು ನನ್ನ ಅನಿಸಿಕೆ. ಆದರೆ, ಅದು ಆಗಲಿಲ್ಲ. ಮುಂದೆ ಈ ರೀತಿ ಆಗಬಾರದು. ಆದುದರಿಂದ, ಈಗ ಮಹಾರಾಷ್ಟ್ರದವರು ಬೆಳಗಾವಿ, ನಿಪ್ಪಾಣಿ ಮತ್ತು ಕೆಲವು ಭಾಗಗಳನ್ನು ಕೇಂದ್ರಾಡಳಿತ ಪ್ರದೇಶಗಳೆಂದು ಘೋಷಣೆ ಮಾಡಿ ಎಂದು ಮಹಾರಾಷ್ಟ್ರದಲ್ಲಿ ಕೇಳಿಕೊಳ್ಳುತ್ತಿದ್ದಾರೆ. ಬಹುಶಃ ಅವರಿಗೆ ಗೊತ್ತಿಲ್ಲ. ಈ ಒಕ್ಕೂಟ ವ್ಯವಸ್ಥೆಯಲ್ಲಿ ಕೆಲವು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪಾಂಡಿಚೇರಿ ಒಂದು ಸಣ್ಣ ಊರು. ಮಾನ್ಯ ಮಾಧುಸ್ವಾಮಿಯವರೆ, ಒಂದು constituency ಯಲ್ಲಿ ನಲವತ್ತು ಸಾವಿರ ಜನರಿದ್ದಾರೆ. ನೀವು ಪಾಂಡಿಚೇರಿಗೆ ಹೋದಮೇಲೆ ಅಲ್ಲಿಂದ 300-400 ಕಿಲೋಮೀಟರ್ ವ್ಯಾಪ್ತಿಯಲ್ಲಿ ತಿರುನೆಳ್ಳಾರ್‌ನಲ್ಲಿ ಶನಿದೇವರ ದೇವಸ್ಥಾನವಿದೆ. ಮಾನ್ಯ ಸದಸ್ಯರಾದ ಟಿ.ಎ.ಶರವಣರವರು ಶನಿವಾರದಂದು ಅಲ್ಲಿಗೆ ಹೋಗುತ್ತಾರೆ. ಅದೇರೀತಿ ಯಾನಂ ಎಂದು ಆಂಧ್ರಪ್ರದೇಶದಿಂದ ಒಂದು ಸಾವಿರ ಕಿಲೋಮೀಟರ್ ದೂರದಲ್ಲಿದೆ. ಮತ್ತೆ ಮಾಹೆ ಎಂದು ಕೇರಳ ರಾಜ್ಯದಲ್ಲಿದೆ ಅದು ಕೂಡ ಪಾಂಡಿಚೇರಿಯಿಂದ 500 ಕಿಲೋಮೀಟರ್ ದೂರದಲ್ಲಿದೆ. ಅವುಗಳು ಇನ್ನೂ ದೂರವಿದೆ, ಹತ್ತಿರವಿದೆ ಎಂದು ಹೇಳುವುದಿಲ್ಲ. ಆಂಧ್ರಪ್ರದೇಶದಲ್ಲಿ ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಮಾಹೆಯಲ್ಲಿ ಮಲೆಯಾಳಂ ಭಾಷೆಯನ್ನು ಮಾತನಾಡುತ್ತಾರೆ. ಅದೇರೀತಿ ತಿರುನಳ್ಳಾರ್ ಮತ್ತು ಪಾಂಡಿಚೇರಿಯಲ್ಲಿ ತಮಿಳು ಭಾಷೆ ಮಾತನಾಡುತ್ತಾರೆ. ಆದರೆ, ಪಾಂಡಿಚೇರಿಯಲ್ಲಿ ಇವತ್ತಿಗೂ ಸಹ ಅಲ್ಲಿ ಫ್ರೆಂಚ್ ಕಲ್ಚರ್ ಇರುವುದರಿಂದ ಅಲ್ಲಿನ ಸುಮಾರು ಹತ್ತರಿಂದ ಹನ್ನೆರಡು ಸಾವಿರ ಜನರಿಗೆ ಫ್ರೆಂಚ್‌ಯಿಂದ ಪಿಂಚಣಿ ಸಿಗುತ್ತಿದೆ. ಈ ಒಂದು ಪರಿಸ್ಥಿತಿಯಲ್ಲಿ ಅನ್ಯೋನ್ಯವಾಗಿ ಬಾಳುವಂತಹ ಜನ. ಈಗ ಗೋವಾ ರಾಜ್ಯಕ್ಕೆ ಹೋದರೆ, ಪೋರ್ಚುಗೀಸರು ಬಹಳಷ್ಟು ಜನರು ಇದ್ದಾರೆ. ಇಂತಹ ಒಂದು ರಾಷ್ಟ್ರದಲ್ಲಿ, ಇಂತಹ ಒಂದು ಸಂಕುಚಿತ ಭಾವನೆ ಇಟ್ಟುಕೊಂಡು, ಕೇಂದ್ರಾಡಳಿತ ಪ್ರದೇಶ ಮಾಡಬೇಕು ಮತ್ತು ಇದು

ಅವರಿಗೆ ಸೇರಬೇಕೆಂದರೆ ನಾವುಗಳು ಏನು ಕೈಕಟ್ಟಿಕೊಂಡು ಕುಳಿತ್ತಿದ್ದೇವೆ ಎಂಬುದು ಪ್ರಶ್ನೆಯಾಗಿದೆ. ಆ ರೀತಿ ಏನಾದರೂ, ಇಡೀ ರಾಷ್ಟ್ರದಲ್ಲಿ ಯಾವುದಾದರೂ ಕೇಂದ್ರಾಡಳಿತ ಪ್ರದೇಶವಾಗಬೇಕು ಎಂದು ಹೇಳಿದರೆ, "the most cosmopolitan city in the World" ಎಂದು ಹೇಳಬಹುದು. In the Country ಎಂದು ಹೇಳಿದರೆ ಅದು ಮುಂಬೈ. ಅಲ್ಲಿ ಎಲ್ಲಾ ರೀತಿಯ ಜನ, ಭಾಷೆ, ಸಂಸ್ಕೃತಿ ಮತ್ತು ಸಂಸ್ಕಾರ ಹಾಗೂ ಇತಿಹಾಸ ಇರುವಂತಹ ಮುಂಬೈ ಪ್ರದೇಶವನ್ನು ಕೇಂದ್ರಾಡಳಿತ ಪ್ರದೇಶವಾಗಿ ಮಾಡಬೇಕೆಂದು ನಾವು ಸಹ ಬೇಡಿಕೆ ಇಡಬೇಕು. ಏಕೆಂದರೆ, ಅವರು ಬೆಳಗಾವಿ, ನಿಪ್ಪಾಣಿ ಮತ್ತು ಕಾರವಾರ ಇವುಗಳನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಿ ಎಂದು ಹೇಳಿದರೆ, ಈಗ ನಾವೆಲ್ಲರೂ ಸಹ ರಾಜಕೀಯಕ್ಕೆ ಬರಬೇಕಾದರೆ ಮುಂಬೈ ಕಾರಣ. 1968 ಮತ್ತು 1969ರಲ್ಲಿ ಶಿವಸೇನಾದವರು ದಕ್ಷಣ ಕನ್ನಡದ ಮತ್ತು ದಕ್ಷಿಣ ಭಾರತದ ಎಲ್ಲಾ ಹೋಟೆಲ್‌ನವರನ್ನು 'Aamchi Mumbai' ಎಂದು ಎಲ್ಲರನ್ನು ಸಹ ಓಡಿಸಿದರು. ಈಗ 'Aamchi Mumbai' ಎಂದು ಯಾರು ಮರಾಠಿ ಮಾಡುತ್ತಾರೋ ಅವರು ಮಾತ್ರ ಮುಂಬೈಯಲ್ಲಿ ಇರಬೇಕೆಂದು ಹೇಳಿ, ಓಡಿಸಿದಾಗ ಕೆಲವರು ಪಾಪ ಊರು ಬಿಟ್ಟು ಬಂದರು. ಆ ಸಮಯದಲ್ಲಿ ನಾವೆಲ್ಲರೂ ಸಹ ವಿದ್ಯಾರ್ಥಿ ನಾಯಕರು. ಬೆಲೆ ಏರಿಕೆಯಾದಾಗ, ಮಸಾಲೆ ದೋಸೆ ಹತ್ತು ರೂಪಾಯಿ ಇತ್ತು, ಅವರು ಹದಿನೈದು ಪೈಸೆ ಮಾಡಿದರೆ, ನಾವು ಹದಿನೈದು ಪೈಸೆ ಕೊಡುತ್ತಿರಲಿಲ್ಲ. ನಾವು ಕೇವಲ ಹತ್ತು ಪೈಸೆ ಕೊಟ್ಟು ಓಡಿ ಬರುತ್ತಿದ್ದೆವು. ಆಗ ಹೋಟೆಲ್ ಮಾಲೀಕ ಬಂದು ನಾನು ಮಂಗಳೂರಿನವರು ಎಂದು ಹೇಳುತ್ತಾ, ನಮಗೆ ಅಲ್ಲಿ ತೊಂದರೆ ಕೊಟ್ಟಿದ್ದಾರೆ, ಇಲ್ಲಿ ನೀವು ನಮಗೆ ತೊಂದರೆ ಕೊಡುತ್ತಿರಲ್ಲ ಎನ್ನುತ್ತಿದ್ದ. ಅದಕ್ಕೆ ನಾವು ಅಲ್ಲಿಂದ ಏಕೆ ಓಡಿ ಬಂದಿದ್ದೀರಿ ಎಂದರೆ, ನಾವು ಮರಾಠಿ ಮಾತನಾಡುವುದಿಲ್ಲವೆಂದು ಆ ಶಿವಸೇನೆಯ ಗೂಂಡಾಗಳು ನಮ್ಮನ್ನು ಓಡಿಸಿಬಿಟ್ಟರು ಎಂದರು. ಆಗ ನಾವು ಹೇಳಿದ್ದೆವು, ನೀವು ಭಾರತೀಯರು ಅಲ್ಲವೇ ಅಲ್ಲಿಯೇ ಇರಬಹುದು ಅಲ್ಲವೇ ಎಂದರೆ, ಆಗ ಅವರು ನಮ್ಮನ್ನು ಓಡಿಸಿಬಿಟ್ಟರು, ನಾವು ಜೀವನ ಮಾಡಬೇಕಲ್ಲವೆ ಅದಕ್ಕೆ ಇಲ್ಲಿಗೆ ಬಂದಿದ್ದೇವೆ ಎಂದು ಹೇಳಿದರು. ಮುಂಬೈಯಿಂದ ಬಂದಂತಹ ಬಹಳಷ್ಟು ಕರ್ನಾಟಕದ ಜನರು ಶಿವಸೇನೆಯ ಗಲಾಟೆಯಿಂದ ಬಂದಂತಹವರು. ಕರ್ನಾಟಕದಲ್ಲಿ ಮರಾಠಿ ಮಾತನಾಡುವಂತಹವರಿಗೆ ಕರ್ನಾಟಕ ಬಿಟ್ಟು ಹೋಗಿ ಎಂದು ಹೇಳಲಿಲ್ಲ. ಆ ಸಂದರ್ಭದಲ್ಲಿ ನಾವು ಈ ಪಕ್ಷಕ್ಕೆ ಬೆಂಬಲ ಕೊಡಬೇಕು ಎಂದು ಆಗ ಬಿಜೆಪಿಯವರು ಅವರ ಬೆಂಬಲದಲ್ಲಿ ಇದ್ದರು. ನಾವು ಇವರಿಗೆ ವಿರೋಧ ಮಾಡಬೇಕೆಂದು ರಾಜಕೀಯಕ್ಕೆ ಬಂದಂತಹವರು. ಇದು ಬಹಳ ಸ್ಪಷ್ಟ. ಆ ಒಂದು

ಸ್ಥಿತಿ ಇರುವಂತಹ ಕರ್ನಾಟಕ ರಾಜ್ಯದಲ್ಲಿ, ಇವರು ಏನಾದರೂ ಕೇಂದ್ರಾಡಳಿತ ಪ್ರದೇಶವೆಂದು ಬೆಳಗಾವಿ, ಕಾರವಾರ ಮತ್ತು ನಿಪ್ಪಾಣಿಗಳನ್ನು ಕೇಳಿದರೆ, ನಾವು ಮುಂಬೈ it belongs to everybody, ಅದನ್ನು ನಾವು ಏನು ಎಕನಾಮಿಕ್ ಕ್ಯಾಪಿಟಲ್ ಎಂದು ಕರೆಯುತ್ತೇವೆ. ಅದನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಣೆ ಮಾಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಾಗುತ್ತದೆ. ಆದುದರಿಂದ ಜವಾಬ್ದಾರಿ ಇರುವಂತಹ ಮೇಲ್ಮನೆಯ ಸದಸ್ಯರೆಲ್ಲರೂ ಮತ್ತು ನಾನು ಸಹ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಸರ್ಕಾರ ಒಟ್ಟಾರೆಯಾಗಿ ಇದಕ್ಕೆ ಒಂದು resolution ಮಾಡಿ, ಕರ್ನಾಟಕ ಯಾವುದೇ ಭಾಗ 1956ರ ನಂತರ ಮೈಸೂರು ಪ್ರಾಂತ್ಯದ ನಂತರದ ಕರ್ನಾಟಕ ರಾಜ್ಯದ ಒಂದೇ ಒಂದು ಇಂಚು ಜಾಗವನ್ನು ಸಹ ಬೇರೆ ಯಾರು ಮುಟ್ಟುವುದಕ್ಕೆ ಮತ್ತು ಅದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ನಮ್ಮ ರಾಜ್ಯ. ಈಗ ಬೆಳಗಾವಿ, ನಿಪ್ಪಾಣಿ ಮತ್ತು ಕಾರವಾರ ಈ ಎಲ್ಲವೂ ಸಹ ಬೆಳಗಾವಿಯ ಅಂಗವೆಂದು ನಾವು ಘೋಷಣೆ ಮಾಡಬೇಕಾಗುತ್ತದೆ. ಮತ್ತೆ ಯಾವುದೇ ಪುಂಡರು ಇರಬಹುದು, ನಾವು ಭಾರತ ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಇರತಕ್ಕಂತಹವರು. ಈಗ ಶಾಂತಿಯನ್ನು ಕದಡುವಂತಹ ಯಾರೇ ಇರಬಹುದು ಮತ್ತು ಯಾವುದೇ ಭಾಷೆಯವರು ಇರಬಹುದು. ಅದಕ್ಕೆ ನಾವು ಹೋರಾಟ ಮಾಡೋಣ. ಮಸಿ ಬಳಿಯುವ ಮತ್ತು ಭಾಷೆಯ ಅಂತರವನ್ನು ಸೃಷ್ಟಿ ಮಾಡುವಂತಹ ಕೆಲಸ ಆಗಬಾರದು. ಕನ್ನಡದಲ್ಲೂ ಸಹ ಜ್ಞಾನಪೀಠ ಪ್ರಶಸ್ತಿ ಬಂದಿರುವಂತಹ ಮಹಾನ್ ಸಾಹಿತಿಗಳಿದ್ದಾರೆ. ಅದೇ ರೀತಿ ಮಹಾರಾಷ್ಟ್ರದಲ್ಲೂ ಸಹ ಮರಾಠಿ ಭಾಷೆಯಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದಿರುವಂತಹ ಮಹಾನ್ ಸಾಹಿತಿಗಳು ಇದ್ದಾರೆ. ಇದಕ್ಕೆ ಒಂದು ಒಳ್ಳೆಯ ಸಮಿತಿಯನ್ನು ರಚನೆ ಮಾಡಿ, ಶಾಂತಿ ನೆಲೆಸುವುದಕ್ಕೆ ನಾವು ಏನನ್ನು ಮಾಡಬೇಕು? ಏಕೆಂದರೆ, ಮಹಾರಾಷ್ಟ್ರದವರು ಸಹ ತಯಾರು ಮಾಡಿಕೊಂಡಿರುತ್ತಾರೆ ಇವತ್ತು ಪುಂಡರು ಮಾಡುತ್ತಾರೆಂದರೆ, ಎಲ್ಲಾ ಮರಾಠಿಗರು ಆ ರೀತಿ ಇರುವುದಿಲ್ಲ. ಮತ್ತೆ ಕನ್ನಡದವರು ಗಲಾಟೆ ಮಾಡುತ್ತಾರೆಂದರೆ, ಎಲ್ಲ ಕನ್ನಡಿಗರು ಗಲಾಟೆ ಮಾಡುವುದಿಲ್ಲ. ನಮಗೆ ಶಾಂತಿಯಿಂದ ಈ ಒಂದು ಸಮಸ್ಯೆ ಬಗೆಹರಿಯಬೇಕು. ಕರ್ನಾಟಕ ರಾಜ್ಯದ ಒಂದು ಇಂಚು ಜಾಗ ಅದು ಬೇರೆ ಯಾರಿಗೂ ಸಹ ಸೇರಿದ್ದಲ್ಲ. ಅದು ರಾಜ್ಯದ ಕನ್ನಡಿಗರಿಗೆ ಸೇರಿದೆ. ಆದುದರಿಂದ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಏನು ಮನವಿ ಮಾಡುತ್ತೇನೆಂದರೆ, ಇದಕ್ಕೆ ಒಂದು resolution ಮಾಡಿ, ನಾವು ಕೇಂದ್ರ ಸರ್ಕಾರಕ್ಕೆ

ಬಹಳ ಸ್ಪಷ್ಟವಾಗಿ ಅವರಿಗೆ ಒಂದು ಸಂದೇಶ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಇಷ್ಟು ಸಮಯ ತೆಗೆದುಕೊಂಡು ತಮ್ಮ ಮುಂದೆ ಮಾತನಾಡುವುದಕ್ಕೆ ಅವಕಾಶ ನೀಡಿದ್ದಕ್ಕೆ ತಮಗೆ ಧನ್ಯವಾದಗಳು.

**(ಮುಂದು...)**

(1210) 27.12.2022 03.40 LL-VK (ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು...)**

ಎಂ.ಇ.ಎಸ್. ಮತ್ತು ಶಿವಸೇನೆಯವರದ್ದು ಇಷ್ಟೊಂದು ಕ್ಯಾತೆ ಇರುವಾಗ, ನಾವು ಸಹ ಕೆಲವು ವಿಚಾರಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಶಿವಸೇನೆಯವರದ್ದು ಅಥವಾ ಎಂ.ಇ.ಎಸ್.ನವರ ಕ್ಯಾತೆಗಳು ನಮಗೆ ಹೊಸದೇನಲ್ಲ. ಇದನ್ನು ರಾಜಕೀಯವಾಗಿಯೇ ಎದುರಿಸಬೇಕು ಮತ್ತು ಕಾನೂನಾತ್ಮಕವಾಗಿ ಯಾವ ರೀತಿ ಎದುರಿಸಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಸರ್ಕಾರ ಆದಷ್ಟು ಬೇಗನೇ ಅಥವಾ ಈಗಲೇ ಈ ಬಗ್ಗೆ ಒಂದು ನಿರ್ಣಯವನ್ನು ತಂದರೆ, ನಾವೆಲ್ಲರೂ ಸಹ ಒಮ್ಮತದಿಂದ ಅದನ್ನು ಪಾಸ್ ಮಾಡಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಬಹುದೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಗಡಿ ಭಾಗದಲ್ಲಿ ಆಗುವಂತಹ ಸನ್ನಿವೇಶಗಳನ್ನು ನಾವು ನೋಡಿದ್ದೇವೆ ಮತ್ತು ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರ ಗಡಿ ವಿಚಾರದಲ್ಲಿ ವಿಶೇಷವಾಗಿ ಗೊಂದಲ ಸೃಷ್ಟಿ ಮಾಡುವುದನ್ನು ಸಹ ನಾವು ನೋಡುತ್ತಿದ್ದೇವೆ. ಈ ಗಡಿ ವಿವಾದ ಇವತ್ತು ನಿನ್ನೆಯದಲ್ಲ. ಈ ಗಡಿ ವಿವಾದ ಏನಿದೆ ಅದು, 1881ರಿಂದಲೇ ಪ್ರಾರಂಭವಾಗುತ್ತದೆ. ಆವೊತ್ತಿನ ಜನಸಂಖ್ಯೆ ಆಧಾರದಲ್ಲಿ 64.39 ಪ್ರತಿಶತ ಬೆಳಗಾವಿಯ ಸುತ್ತಮುತ್ತಲೂ ಕನ್ನಡ ಭಾಷೆ ಮಾತನಾಡುವವರು ಕನ್ನಡಿಗರು ಇದ್ದಾರೆಂದು 1881ರಲ್ಲಿ ದಾಖಲೆಯಾಗುತ್ತದೆ. ಮರಾಠಿ ಭಾಷೆ ಮಾತನಾಡುವವರು ಎಷ್ಟು ಜನಸಂಖ್ಯೆ ಇದ್ದಾರೆಂದರೆ, 26.04 ಪ್ರತಿಶತ ಇದ್ದಾರೆಂದು ದಾಖಲೆಯಾಗುತ್ತದೆ. ಸ್ವಾತಂತ್ರ್ಯ ಬಂದ ನಂತರ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಒಂದು ಭಾಷಾವಾರು ರಾಜ್ಯಗಳ ವಿಂಗಡನೆ ಆದ ಮೇಲೆ, ಕರ್ನಾಟಕ ರಾಜ್ಯಕ್ಕೆ ಸೇರಬೇಕಾದಂತಹ ಬೆಳಗಾವಿ ಮತ್ತು ಸುತ್ತಮುತ್ತಲ

ಪ್ರದೇಶಗಳಲ್ಲಿ ವಿವಾದ ಆದಾಗ, ಅವೊತ್ತಿನ ಕೇಂದ್ರ ಸರ್ಕಾರ ಮಹಾಜನ್ ಆಯೋಗವನ್ನು ರಚನೆ ಮಾಡಿತ್ತು. ಆಗಿನ ಮಹಾರಾಷ್ಟ್ರದ ನಾಯಕ್ ಸೇನಾಪತಿ ಬಾಪಟ್ ಎನ್ನುವವರು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಆ ಸಮಯದಲ್ಲಿ ಕೇಂದ್ರ ಸರ್ಕಾರ ದಿನಾಂಕ:25.10.1966 ರಲ್ಲಿ ಮಹಾಜನ್ ಆಯೋಗವನ್ನು ರಚಿಸಿದ್ದರು.

ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದಂತೆ, "ದಿನಾಂಕ: 09.11.1967ರಂದು ಮಹಾಜನ್ ಆಯೋಗ ಏನು ವರದಿ ಕೊಟ್ಟಿದೆ, ಅದಕ್ಕೆ ಬದ್ಧವಾಗಿದ್ದೇವೆ" ಎಂದು ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿಯವರಾದಂತಹ ಶ್ರೀ ವಿ.ಪಿ. ನಾಯಕ್‌ರವರು ಹೇಳಿಕೆ ನೀಡಿರುತ್ತಾರೆ. ಆದರೆ, ಇವೊತ್ತಿನ ದಿವಸ ಆಗುತ್ತಿರುವಂತಹ ಸೃಷ್ಟಿಗಳು ಮಹಾರಾಷ್ಟ್ರ ಸರ್ಕಾರ ನಮ್ಮನ್ನು ಕೆರಳಿಸುವುದಕ್ಕೆ ಮತ್ತು ಅವರ ವೈಫಲ್ಯಗಳನ್ನು ಮುಚ್ಚಿ ಹಾಕುವುದಕ್ಕೆ ಹಾಗೂ ರಾಜಕೀಯ ಮಾಡುವುದಕ್ಕೆ ನಮ್ಮ ಮೇಲೆ ಅಂದರೆ, ಕನ್ನಡಿಗರ ಮೇಲೆ ಇವತ್ತು ಮಾತ್ರವಲ್ಲದೇ ಬಹಳ ಹಿಂದಿನಿಂದಲೂ ವಾದ-ವಿವಾದಗಳನ್ನು ಹಲವಾರು ಬಾರಿ ಮಾಡುತ್ತಲೇ ಬಂದಿದ್ದಾರೆ. ಸದರಿ ವಾದ ಪ್ರಾರಂಭವಾದ ಸಮಯದಲ್ಲಿ ಮಹಾರಾಷ್ಟ್ರದವರು ಎಂ.ಇ.ಎಸ್. (ಮಹಾರಾಷ್ಟ್ರ ಏಕೀಕರಣ ಸಮಿತಿ) ಎಂಬ ಸಂಘಟನೆಯನ್ನು ರಚನೆ ಮಾಡಿದರು. ಅದರ ಉದ್ದೇಶ ಏನೆಂದರೆ, ಬೆಳಗಾವಿ ಜಿಲ್ಲೆ ಮಹಾರಾಷ್ಟ್ರ ಸರ್ಕಾರಕ್ಕೆ ಸೇರಬೇಕೆಂದು ಸಂಘಟನೆ ಪ್ರಾರಂಭವಾಯಿತು. ತದನಂತರ, ಸದರಿ ಸಂಘಟನೆಯವರು ಬೆಳಗಾವಿ ಮಹಾನಗರ ಪಾಲಿಕೆಯ ಸಾಕಷ್ಟು ಚುನಾವಣೆಗಳಲ್ಲಿ ಗೆದ್ದು, ಆಡಳಿತ ಮಾಡಿದರು.

ಇದರ ಜೊತೆಗೆ, 2004ರಲ್ಲಿ ಮಹಾರಾಷ್ಟ್ರ ಸರ್ಕಾರದವರು ಮಾನ್ಯ ಸುಪ್ರೀಂ ಕೋರ್ಟ್‌ನ ಮುಂದೆ ಒಂದು ಮನವಿ ಮಾಡಿರುತ್ತಾರೆ. ಅದಕ್ಕೆ ಮೊದಲು ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಸುಮಾರು ಎರಡು ದಶಕಗಳ ಕಾಲ ಮಾನ್ಯ ಸುಪ್ರೀಂ ಕೋರ್ಟ್‌ನ ಮುಂದೆ ಏನು ಮನವಿ ಮಾಡಿರುತ್ತದೆ ಎಂದರೆ, Article 3 of the Indian Constitution ಏನು ಹೇಳುತ್ತದೆಯೆಂದರೆ, *"Article 3 of the Constitution to argue that the Supreme Court does not have jurisdiction to decide the borders of states, and only Parliament has the power to do so."* ಎಂದು ಹೇಳುತ್ತದೆ. ಭಾರತ ಸಂವಿಧಾನದ ಆರ್ಟಿಕಲ್ 3 ರ ಪ್ರಕಾರ ಗಡಿ ವಿವಾದದ ಬಗ್ಗೆ ತೀರ್ಮಾನ ಮಾಡಲು ಮಾನ್ಯ ಸುಪ್ರೀಂ ಕೋರ್ಟ್‌ಗೆ ಯಾವುದೇ ಆಧಾರ

ಇರುವುದಿಲ್ಲ. ಕೇವಲ ಪಾರ್ಲಿಮೆಂಟ್‌ಗೆ ಮಾತ್ರ ಆಧಾರ ಇರುತ್ತದೆ. ಆದರೆ, ಮಹಾರಾಷ್ಟ್ರ ಸರ್ಕಾರ ಭಾರತ ಸಂವಿಧಾನದ ಆರ್ಟಿಕಲ್ 131ನೇ ಪ್ರಕಾರ ಮಾನ್ಯ ಸುಪ್ರೀಂ ಕೋರ್ಟ್‌ನ ಮುಂದೆ ಮನವಿ ಮಾಡಿರುತ್ತದೆ. ಅದರಲ್ಲಿ ಏನು ಹೇಳುತ್ತದೆ ಎಂದರೆ, "The Supreme Court has *exclusive and original jurisdiction over legal issues originating between states or between States and the Union Government."* ಈ ವಿವಾದ ಯೂನಿಯನ್ ಗವರ್ನಮೆಂಟ್ ಹತ್ತಿರ ಇಲ್ಲವೇ ಇಲ್ಲ. The dispute is, ನಮ್ಮ border issues ಎಂದು ಇದೆ. Article 3 of the Indian Constitution specific ನಲ್ಲಿ, ಮಾನ್ಯ ಸುಪ್ರೀಂ ಕೋರ್ಟ್ ಇದರ ಬಗ್ಗೆ ಯಾವುದೇ ರೀತಿಯಾದ ತೀರ್ಮಾನ ನೀಡುವುದಕ್ಕೆ ಆಗುವುದಿಲ್ಲ ಎಂದು ನಿರ್ದಿಷ್ಟವಾಗಿ ಹೇಳುತ್ತದೆ. ಹಾಗಾಗಿ, ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ ಸದರಿ ಪ್ರಕರಣ ವಿಚಾರಣೆಗೆ ಏನು ಬಾಕಿ ಇದೆ, ಅದನ್ನು ಭಾರತ ಸಂವಿಧಾನದ ಆರ್ಟಿಕಲ್ 3 ರ ಪ್ರಕಾರ ಮುಕ್ತಾಯಗೊಳಿಸಬೇಕೆಂದು ಒತ್ತಾಯ ಮಾಡಬೇಕು. ಏಕೆಂದರೆ, ಭಾರತ ಸಂವಿಧಾನದ ಆರ್ಟಿಕಲ್ 3 ಪ್ರಕಾರ ಮಾನ್ಯ ಸುಪ್ರೀಂ ಕೋರ್ಟ್ ಯಾವುದೇ ರೀತಿಯ interference ಮಾಡುವುದಕ್ಕೆ ಅಧಿಕಾರ ಇರುವುದಿಲ್ಲ. ಅಲ್ಲದೇ, ನಮ್ಮ ರಾಜ್ಯ ಸರ್ಕಾರದ ವಕೀಲರು ಸಹ ಚೆನ್ನಾಗಿ ವಾದ ಮಂಡನೆ ಮಾಡುತ್ತಾರೆ. ಅದರಂತೆ, ಮಹಾರಾಷ್ಟ್ರ ಸರ್ಕಾರದ ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀ ವಿ.ಪಿ. ನಾಯಕ್‌ರವರು, "ಮಹಾಜನ್ ವರದಿ ಅಂತಿಮವಾಗಿದೆ" ಎಂದು ಹೇಳಿದ ಮೇಲೆ ಇದರಲ್ಲಿ ಯಾವುದೇ ವಾದ ಇರುವುದಿಲ್ಲ. ಕರ್ನಾಟಕದ ಅವಿಭಾಜ್ಯ ಅಂಗ ಬೆಳಗಾವಿ. ಅದು ಕರ್ನಾಟಕದಲ್ಲಿಯೇ ಇರುವುದು. ಈ ರೀತಿಯ ಗೊಂದಲ ಸೃಷ್ಟಿ ಮಾಡುವುದಕ್ಕೋಸ್ಕರ ಮಹಾರಾಷ್ಟ್ರ ಸರ್ಕಾರ ಈ ರೀತಿ ನಡೆದುಕೊಳ್ಳುತ್ತಿದೆ.

ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಇತ್ತೀಚಿನ ದಿನಗಳಲ್ಲಿ ಬೆಳಗಾವಿಯಲ್ಲಿ ಎಂ.ಇ.ಎಸ್.ನ ಕಾರ್ಯವೈಖರಿ ಏನು ನಡೆಯುತ್ತಿದೆ, ಅದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಎಂ.ಇ.ಎಸ್. ಅನ್ನು ಮೊಟ್ಟಮೊದಲನೆಯದಾಗಿ ಬ್ಯಾನ್ ಮಾಡಬೇಕು. ಏಕೆಂದರೆ, ಈ ಗೊಂದಲ ಸೃಷ್ಟಿ ಮಾಡುತ್ತಿರುವುದು ಎಂ.ಇ.ಎಸ್.ನವರು. ಅವರ ಉದ್ದೇಶ ಏನೆಂದರೆ, ಬೆಳಗಾವಿ ಕರ್ನಾಟಕ ರಾಜ್ಯದಲ್ಲ, ಅದು ನಮ್ಮ ಮಹಾರಾಷ್ಟ್ರ ಸರ್ಕಾರಕ್ಕೆ ಸೇರಿದ್ದು ಎನ್ನುವುದಾಗಿದೆ. ಹಾಗಾಗಿ, ಈ ವಿಚಾರದಲ್ಲಿ ಒಂದು ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲವಾದರೆ, ಎಂ.ಇ.ಎಸ್.ನವರು ಇದೇ ರೀತಿ ವಾದಗಳನ್ನು

ಮಂಡಿಸುತ್ತಾ, ಗೊಂದಲಗಳನ್ನು ಸೃಷ್ಟಿ ಮಾಡುತ್ತಾ, ಈ ಭಾಗದ ಜನರ ಶಾಂತಿಯನ್ನು ಭಂಗ ಮಾಡುವಂತಹ ಕಾರ್ಯಕ್ರಮಗಳನ್ನು ನಡೆಸುತ್ತಲೇ ಇರುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ತಮಗೆ ಇನ್ನು ಎಷ್ಟು ಸಮಯ ಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ಈಗಾಗಲೇ ಹೆಸರು ಕೊಟ್ಟಿರುವಂತಹ ನಾಲ್ಕು ಜನ ಸದಸ್ಯರು ಮಾತನಾಡುತ್ತಾರೆ. ಅದರ ಜೊತೆಗೆ, ಬಹುಶಃ ಬೇರೆಯವರು ಸಹ ಮಾತನಾಡಬಹುದು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಆಯಿತು. ನಾನು ಆದಷ್ಟು ಬೇಗ ಮುಕ್ತಾಯ ಮಾಡುತ್ತೇನೆ. ಎಂ.ಇ.ಎಸ್.ನವರು ಏನು ಮಾಡುತ್ತಿದ್ದಾರೆಂದರೆ, ಡಿಸೆಂಬರ್ ತಿಂಗಳಿನಲ್ಲಿ black day observe ಮಾಡುತ್ತಾರೆ. ಅದೇನೆಂದರೆ, ನಮ್ಮ ಕರ್ನಾಟಕ ಸಂಘಟನೆಗಳ ಮೇಲೆ ಎಂ.ಇ.ಎಸ್.ನವರು ಏನು ಗೊಂದಲ ಸೃಷ್ಟಿ ಮಾಡುತ್ತಾರೆ, ಆಗ "ಬ್ಲಾಕ್ ಡೇ" ಎಂದು ಘೋಷಣೆ ಮಾಡುತ್ತಾರೆ. ಈ ರೀತಿಯ ನಿರ್ಣಯಗಳನ್ನು ಅವರು ತೆಗೆದುಕೊಳ್ಳುತ್ತಾರೆ. ಜೊತೆಗೆ, ಈ ಭಾಗದಲ್ಲಿ ಪ್ರಸಿದ್ಧವಾಗಿರುವಂತಹ ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಬಸವಣ್ಣನವರ ಪುತ್ಥಳಿಗಳನ್ನು ಧ್ವಂಸ ಮಾಡುತ್ತಾರೆ ಹಾಗೂ ಕರ್ನಾಟಕದ ಬಾವುಟವನ್ನು ಸುಟ್ಟು ಹಾಕುವಂತಹ ಕೆಲಸವನ್ನು ಎಂ.ಇ.ಎಸ್. ನವರು ನಿರಂತರವಾಗಿ ಮಾಡುತ್ತಿದ್ದಾರೆ. ಅದಕ್ಕಾಗಿ, ಇವೊತ್ತಿನ ದಿವಸ ಎಂ.ಇ.ಎಸ್. ಅನ್ನು ಬ್ಯಾನ್ ಮಾಡದೇ ಇದ್ದರೆ, ಮುಂದೆ ನಮಗೆ ಸಾಕಷ್ಟು ಗೊಂದಲವಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಏನಾಗುತ್ತಿದೆಯೆಂದರೆ, ಮಹಾರಾಷ್ಟ್ರದ ಮಂತ್ರಿಗಳು ಬೆಳಗಾವಿಗೆ ಬರುತ್ತೇವೆಂದು ಘೋಷಣೆ ಮಾಡುತ್ತಾರೆ. ಜೊತೆಗೆ, ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳು ನಮ್ಮ ರಾಜ್ಯದ ವಿರುದ್ಧ ಸಾಕಷ್ಟು ಹೇಳಿಕೆಗಳನ್ನು ಕೊಡುತ್ತಾರೆ. ಇದರ ನಡುವೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಗೃಹ ಮಂತ್ರಿಗಳನ್ನು ಭೇಟಿ ಮಾಡಿ ಬರುತ್ತಾರೆ. ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

ಎರಡೂ ರಾಜ್ಯಗಳು ಸಹ ಎಲ್ಲಾ ಕಡೆಯಲ್ಲಿಯೂ ಸಹ ಶಾಂತಿ ಕಾಪಾಡಬೇಕೆಂದು ನಿರ್ಣಯ ಮಾಡಿದೆ ಎಂದು ಹೇಳಿದ್ದರೂ ಸಹ, ಇವೊತ್ತಿನ ದಿವಸ ಬಹಳ ದುಃಖಕರ ವಿಷಯವೇನೆಂದರೆ, ಮಹಾರಾಷ್ಟ್ರ ರಾಜ್ಯದವರು ಅವರ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಪಾಸ್ ಮಾಡುತ್ತಿದ್ದಾರೆ. ಅದೇನೆಂದರೆ, *"Former Maharashtra Chief Minister Uddhav Thackeray on Monday spoke about the Maharashtra–Karnataka border dispute and said the 'Karnataka–occupied Maharashtra' should be declared as Union Territory"* ಎಂದು ಅವರು ಬೇಡಿಕೆ ಹಾಕುತ್ತಿದ್ದಾರೆ.

(ಮುಂದು...)

(1211) 27.12.2022 3.50 YL–VK (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ.ರಾಥೋಡ್** (ಮುಂದು):–

ಇವತ್ತು ಅವರು ನಿರ್ಣಯವನ್ನು ಪಾಸ್ ಮಾಡುತ್ತಿದ್ದಾರೆ ಎಂದರೆ, "ಮಹಾರಾಷ್ಟ್ರದ ಒಂದು ಭಾಗವಾಗಿದ್ದು, ಎಲ್ಲರನ್ನೂ ತಾವು Union Territory ಎಂದು ಘೋಷಣೆ ಮಾಡಿ" ಎಂದು ಹೇಳಿ, ಇವತ್ತು ಅವರು ಸದನದಲ್ಲಿ ನಿರ್ಣಯವನ್ನು ಮಂಡಿಸುತ್ತಿದ್ದಾರೆ. ಇದನ್ನು ನಾವೆಲ್ಲರೂ ಖಂಡಿಸಬೇಕಾದಂಥ ಅಗತ್ಯ ಇದೆ. ಏಕೆಂದರೆ, ಮಹಾರಾಷ್ಟ್ರ ಸರ್ಕಾರ aggressive ಆಗಿ ನಮ್ಮ ಮೇಲೆ ಮಾಡುತ್ತಿದೆ, ಅದಕ್ಕೆ ನಮ್ಮ ಕಡೆಯಿಂದ ತಕ್ಕ ಉತ್ತರವನ್ನು ನೀಡಬೇಕು. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಾವು ಕೂಡಾ ಸರ್ವಾನುಮತದಿಂದ ಬೆಳಗಾವಿಯೂ ಒಳಗೊಂಡಂತೆ ಕರ್ನಾಟಕದ ಯಾವುದೇ ಗ್ರಾಮಗಳಾಗಲಿ ನಾವು ಮಹಾರಾಷ್ಟ್ರಕ್ಕೆ ಬಿಟ್ಟುಕೊಡುವುದಿಲ್ಲ ಎಂದು ಸರ್ಕಾರಕ್ಕೆ ಒತ್ತಾಯ ಮಾಡೋಣ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ನಮ್ಮ ವಾದವೇನೆಂದರೆ, ಅಕ್ಕಲಕೋಟ್, ಸೊಲ್ಲಾಪುರ, ಪಂಡರಾಪುರ ಹಲವಾರು ಗ್ರಾಮಗಳು ಏನಿವೆ, ಅದು ಕರ್ನಾಟಕಕ್ಕೆ ಸೇರಬೇಕೆಂಬುದಾಗಿದೆ. ಆದರೂ ಸಹ ಮಹಾಜನ್ ವರದಿ ಬಂದ ಮೇಲೆ ನಾವೆಲ್ಲರೂ ಶಾಂತಿಯುತವಾಗಿ ಬಾಳಬೇಕು. ಅದಕ್ಕಾಗಿ ಮಹಾರಾಷ್ಟ್ರ ಸರ್ಕಾರ ಮಾಡುತ್ತಿರುವಂಥ

ವಾದವೇನಿದೆ, ಅದರ ವಿರುದ್ಧ ನಾವು ಕೂಡಾ ಜೋರಾಗಿ, aggressive ನಿರ್ಣಯವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇದರ ಮಧ್ಯದಲ್ಲಿ ಏನು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ, ಮುಂದಿನ ದಿನಗಳಲ್ಲಿ ಏನಾದರೂ ಈ ರೀತಿ ಹೇಳಿಕೆ ನೀಡಿದರೆ, ಬಹಳಷ್ಟು ಗೊಂದಲ ಮತ್ತೆ ಸೃಷ್ಟಿಯಾಗುತ್ತದೆ. ಮಹಾರಾಷ್ಟ್ರದ ಭಾಷೆಯನ್ನು ಮಾತನಾಡುವಂಥ ಮರಾಠಿಯವರು ಕರ್ನಾಟಕದಲ್ಲಿದ್ದಾರೆ ಹಾಗೂ ಮಹಾರಾಷ್ಟ್ರದಲ್ಲಿರುವಂಥ ಕನ್ನಡಿಗರೇನಿದ್ದಾರೆ ಅವರೆಲ್ಲರೂ ಶಾಂತಿಯಿಂದ ಬಾಳ ಜೀವನವನ್ನು ಸಾಗಿಸಬೇಕು. ಇದಕ್ಕೆ ಮಹಾರಾಷ್ಟ್ರ ಸರ್ಕಾರ ಪದೇ ಪದೇ ಅಡ್ಡಿ ಬರುತ್ತಿದೆ.

ಹಾಗೆಯೇ ಮಹಾರಾಷ್ಟ್ರ ಸರ್ಕಾರ ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಇವತ್ತು ಜಾರಿಯಲ್ಲಿರುವಂಥ ಹಲವಾರು ಯೋಜನೆಗಳಾದ ಮುಖ್ಯಮಂತ್ರಿ ಪರಿಹಾರ ನಿಧಿ ಮತ್ತು ಆರೋಗ್ಯ ಕ್ಷೇತ್ರದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಬೆಳಗಾವಿಯ ಜನರಿಗೆ ನೀಡುತ್ತಿರುವುದರಿಂದ ಮಹಾರಾಷ್ಟ್ರ ಸರ್ಕಾರ ನಿಲ್ಲಿಸುತ್ತಿದೆ. ಪದೇ ಪದೇ ಮಹಾರಾಷ್ಟ್ರ ಸರ್ಕಾರವು ಕರ್ನಾಟಕದಲ್ಲಿರುವವರಿಗೆ ಕೊಡುತ್ತಿರುವ ಸವಲತ್ತನ್ನು ನಿಲ್ಲಿಸುತ್ತಿದ್ದಾರೆ. ಇದರ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು. ಜೊತೆಗೆ ಅವರು ನಮ್ಮ ವಾಹನಗಳ ಮೇಲೆ ಕಪ್ಪು ಮಸಿ ಬಳಿಯುವಂಥ ಕೆಲಸವನ್ನು ಏನು ಮಾಡುತ್ತಿದ್ದಾರೆ, ಅದಕ್ಕೆ ಕಡಿವಾಣ ಹಾಕಬೇಕು. ಇಂತಹ ಉದ್ವಿಗ್ನ ಸ್ಥಿತಿ ತರಬಾರದು. ಅಲ್ಲಿನವರು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ, ಕರ್ನಾಟಕದ ಭಾವುಟವನ್ನು ನೆಟ್ಟಂತಹ ವಿದ್ಯಾರ್ಥಿಗಳ ಮೇಲೆ ಮಹಾರಾಷ್ಟ್ರದ ಹಲವಾರು ಸಂಘಟನೆಗಳು ಅವರನ್ನು ಹೊಡೆಯುವ, ಬಡಿಯುವ, ಅತ್ಯಾಚಾರ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಈ ಹಿಂದೆ ಮಹಾರಾಷ್ಟ್ರದ ವಿಕಾಸ ಅಗಡಿಯವರ ಸರ್ಕಾರ ಏನಿತ್ತು, ಅವರು ಸಹ ಕನ್ನಡಿಗರ ವಿರುದ್ಧ ನಿಲುವನ್ನು ತೆಗೆದುಕೊಂಡಿದ್ದಾರೆ.

Maharashtra Deputy Chief Minister Devendra Fadnavis ರವರು "We will not let any villages of Maharashtra go to Karnataka." He further stated that "the State Government will fight strongly in the Supreme Court to get marathi speaking villages to Maharashtra." ಎಂದು ಹೇಳಿದ್ದಾರೆ. ಅದೇ ರೀತಿ ರಾಜ್ಯಸಭೆ ಸದಸ್ಯರಾದ ಶ್ರೀ ಶರದ್ ಪವಾರ್‌ರವರು "Maharashtra has taken a patient approach and if the conflict continues their people may take a

different approach and Karnataka Chief Minister shall be responsible for this." ಎಂದು ಹೇಳಿದ್ದಾರೆ. ಈ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿಯವರ ಬಗ್ಗೆ ಮಾತನಾಡುವುದಕ್ಕೆ ಅವರು ಯಾರು? ಇದನ್ನು ನಾವೆಲ್ಲರೂ ಖಂಡಿಸಬೇಕಲ್ಲವೇ? ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರಾಗಿರುವವರು ಮತ್ತು ಮಹಾರಾಷ್ಟ್ರದ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ದೇವೇಂದ್ರ ಫಡ್ನವಿಸ್‌ರವರು ಇಂತಹ ಹೇಳಿಕೆಯನ್ನು ಕೊಡುತ್ತಾರೆ. ಅದೇ ರೀತಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸಹ "Mahajan Commission had long ago settled the dispute" ಎಂದು ಹೇಳಿದ್ದಾರೆ. ಹಾಗೆಯೇ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕೆಳಮನೆಯಲ್ಲಿ "ಮಹಾರಾಷ್ಟ್ರದ ಗಡಿ ವಿವಾದ ಏನಿದೆ, ಅದು ಮಹಾಜನ್ ವರದಿಯ ಅಂತಿಮ ವರದಿ" ಎಂದು ಅವರು ಸಹ ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳು, ಕೆ.ಪಿ.ಸಿ.ಸಿ. ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್‌ರವರು ಮತ್ತು ಭಾರತೀಯ ಜನತಾ ಪಾರ್ಟಿಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಸಹ ಹೇಳಿದ್ದಾರೆ. ನಾನು ಹೇಳುವುದಕ್ಕೆ ಇಚ್ಛಿಸುವುದೇನೆಂದರೆ, ಗಡಿ ವಿವಾದ ಬಂದಾಗ ನಾವೆಲ್ಲರೂ ಒಂದಾಗಿ ಮಹಾರಾಷ್ಟ್ರಕ್ಕೆ ತಕ್ಕ ಉತ್ತರ ನೀಡಬೇಕು. ಕರ್ನಾಟಕದ ಯಾವುದೇ ಗ್ರಾಮಗಳು ಮಹಾರಾಷ್ಟ್ರಕ್ಕೆ ಬಿಟ್ಟು ಕೊಡುವಂಥ ಪ್ರಸಂಗ ಬರುವುದಿಲ್ಲ. ಅವರ ಬೇಡಿಕೆ ಏನಿದೆ, ಅದು ಅಸಂವಿಧಾನಿಕವಾಗಿದ್ದು, ಆರ್ಟಿಕಲ್ ೩ ರ ವಿರುದ್ಧ ಇದೆ. ಜೊತೆಗೆ ಸರ್ವೋಚ್ಛ ನ್ಯಾಯಾಲಯದಲ್ಲಿ ಸಹ ಅವರ ಪರವಾಗಿ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ನನ್ನ ಮನವಿಯೇನೆಂದರೆ, ಕೇಂದ್ರ, ರಾಜ್ಯ ಮತ್ತು ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ. ಸರ್ಕಾರವೇ ಅಧಿಕಾರದಲ್ಲಿದೆ. ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಮಧ್ಯೆ ಪ್ರವೇಶಿಸಿ ಇದನ್ನು ಇತ್ಯರ್ಥಗೊಳಸಬೇಕು. ಮಹಾರಾಷ್ಟ್ರಕ್ಕೆ ಕಡಿವಾಣ ಹಾಕಬೇಕು. ನಮ್ಮ ನ್ಯಾಯಯುತ ಬೇಡಿಕೆ ಆರ್ಟಿಕಲ್ ೩ರ ಪ್ರಕಾರ ಇದೆ. ಇದನ್ನು ಮತ್ತೆ ವಿಳಂಬ ಮಾಡಲು ಆಗುವುದಿಲ್ಲ. ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಕೇಂದ್ರ ಸರ್ಕಾರಕ್ಕೆ; ಏಕೆಂದರೆ, ಪಾರ್ಲಿಮೆಂಟ್‌ನಲ್ಲಿ ಇದರ ಬಗ್ಗೆ ನಿರ್ಣಯ ಕೈಗೊಳ್ಳಲು ಸಾಧ್ಯ. Only the Parliament has the power to take a decision. ಮಹಾಜನ್ ವರದಿಯನ್ನು ಒಪ್ಪಿಕೊಳ್ಳಬೇಕು, ಅದನ್ನು ಅಂತಿಮ ಎಂದು ಹೇಳಬೇಕು. ಇನ್ನು ಮುಂದೆ ಮಹಾರಾಷ್ಟ್ರ ಸರ್ಕಾರದವರು ನಾವು ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಿ ವಾದ ಮಾಡುತ್ತೇವೆ ಎಂದರೆ, ಆ ವಾದ ನಡೆಯುವುದಿಲ್ಲ.

ಏಕೆಂದರೆ, ಆರ್ಟಿಕಲ್ 3ರ ಪ್ರಕಾರ Supreme Court cannot intervene and only the Parliament can intervene. ನಮ್ಮ ದೇಶದ ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಸರ್ಕಾರ ಆಡಳಿತದಲ್ಲಿದ್ದು, ಈ ಸರ್ಕಾರ ಮುಂದೆ ಬರಬೇಕು. ಗಡಿ ವಿವಾದದಲ್ಲಿ ಏನಾಗುತ್ತಿದೆ ಅದನ್ನು ಇತ್ಯರ್ಥಗೊಳಸಬೇಕು. ರಾಜ್ಯದಲ್ಲಿ, ಕೇಂದ್ರದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ. ಸರ್ಕಾರವೇ ಅಸ್ತಿತ್ವದಲ್ಲಿದ್ದು, ಎಲ್ಲರೂ ಸೇರಿ ಇದನ್ನು ಇತ್ಯರ್ಥಗೊಳಸಬೇಕೆಂದು ಒತ್ತಾಯ ಮಾಡುವಂಥ ಪ್ರಸಂಗ ಬರುತ್ತಿದೆ.

ನಮ್ಮ ರಾಜ್ಯ ಸರ್ಕಾರ ಎಲ್ಲಾ ಪಕ್ಷಗಳಗೆ ಸಮಾಲೋಚನೆ ಮಾಡಿ, ಇದರ ಬಗ್ಗೆ ಒಗ್ಗಟ್ಟಿನ ನಿರ್ಧಾರ ತೆಗೆದುಕೊಳ್ಳಬೇಕು. ಏಕೆಂದರೆ, ನಮ್ಮ ಕರ್ನಾಟಕದಲ್ಲಿರುವಂಥ ಯಾವುದೇ ಒಂದು ಗ್ರಾಮವನ್ನು ಮಹಾರಾಷ್ಟ್ರಕ್ಕೆ ಬಿಟ್ಟುಕೊಡಲು ತಯಾರಿಲ್ಲ. ಮತ್ತೊಮ್ಮೆ ಹೇಳುವುದೇನೆಂದರೆ, ಮಹಾಜನ್ ವರದಿ ಅಂತಿಮ ಇದೆ. ಮಹಾರಾಷ್ಟ್ರ ಸರ್ಕಾರ ಆರ್ಟಿಕಲ್ 131 ರಡಿಯಲ್ಲಿ border dispute ಎಂದು ಹೇಳುತ್ತದೆ, ಅದು border dispute ಆಗಿಲ್ಲ. ಇದು Interstate ವಿವಾದ ಏನಿದೆ, ಅದನ್ನು ಬಗೆಹರಿಸುವುದಕ್ಕೆ ಕೇವಲ ಪಾರ್ಲಿಮೆಂಟ್‌ಗೆ ಮಾತ್ರ ಅಧಿಕಾರ ಇದೆ. ಸರ್ವೋಚ್ಚ ನ್ಯಾಯಾಲಯಕ್ಕಾಗಲಿ, ಯಾರಿಗೂ ಅಧಿಕಾರ ಇಲ್ಲವೆಂದು ಹೇಳುತ್ತಾ, ಕೂಡಲೇ ಅದಕ್ಕೆ ಒಂದು ನಿರ್ಣಯ ಮಾಡಲು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ತಿಳಸಿದ್ದಾರೆ. ನಾವೆಲ್ಲರೂ ಸೇರಿ ಅದಕ್ಕೆ ಒಂದು ನಿರ್ಣಯವನ್ನು ಕೈಗೊಳ್ಳಬೇಕೆಂದು ಹೇಳ, ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**11. ಪ್ರಕಟಣೆ**

**ವಿಷಯ:- ಕರ್ನಾಟಕ ವಿಧಾನಸಭೆಯು ದಿನಾಂಕ: 27.12.2022 ರಂದು 2022ನೇ ಸಾಲಿನ ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಿದ್ದು, ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆನ್ನುವ ಬಗ್ಗೆ.**

****

**ಸಭಾಪತಿಯವರು:-**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ: 27.12.2022 ರಂದು "2022ನೇ ಸಾಲಿನ ಬೆಂಗಳೂರು ಮಹಾನಗರ ಭೂ ಸಾರಿಗೆ ಪ್ರಾಧಿಕಾರ ವಿಧೇಯಕ" ವನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**12. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ:- ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದವನ್ನು ಶಾಶ್ವತವಾಗಿ ಪರಿಹರಿಸುವಲ್ಲಿ ಸರ್ಕಾರವು ವಿಫಲವಾಗಿರುವ ಬಗ್ಗೆ.**

*****

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇಂದಿನ ಬಾಂಬೆ ಪ್ರಸಿಡೆನ್ಸಿಯಲ್ಲಿ ಇವತ್ತಿನ ಕರ್ನಾಟಕದ ಅವಿಭಾಜ್ಯ ಅಂಗಗಳಾದ ಸದಾಶಿವಗಡ ಅಂದರೆ, ಇಂದಿನ ಕಾರವಾರ, ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಮಹಾರಾಷ್ಟ್ರದಲ್ಲಿರುವಂಥ ಕೊಲ್ಲಾಪುರ, ಸೋಲಾಪುರ, ಮೀರಜ್ ಸೇರಿದಂತೆ ಪ್ರಾಂತ್ಯಗಳಾಗಿದ್ದವು. ರಾಜ್ಯ ಪುನರ್ ವಿಂಗಡನೆಯಾಗಿ State Reorganisation Act ನ್ನು ದಿನಾಂಕ: 01ನೇ ನವೆಂಬರ್, 1956ರಲ್ಲಿ ಜಾರಿಗೆ ತಂದ ಮೇಲೆ ಕಾರವಾರ, ಬಿಜಾಪುರ, ಧಾರವಾಡ, ಬೆಳಗಾವಿಯೂ ಒಳಗೊಂಡಂತೆ ವಿಶಾಲ ಕರ್ನಾಟಕದ ಭಾಗಗಳಾದವು.

(ಮುಂದು)

(1212) 27.12.2022/4.00/ಎಸ್‌ಕೆ-ಬಿಎನ್‌ಎಸ್ (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ಮುಂದು):-**

ತದನಂತರ 1973ರಲ್ಲಿ ಮುಖ್ಯಮಂತ್ರಿಗಳಾದಂತಹ ಶ್ರೀ ದೇವರಾಜ ಅರಸುರವರ ಕಾಲದಲ್ಲಿ "ಕರ್ನಾಟಕ" ಎಂದು ನಾಮಾಂಕಿತವನ್ನು ಮಾಡಿದ್ದರು. ಇಷ್ಟೆಲ್ಲವಾದರೂ ಕೂಡ ದಿನಾಂಕ 05.06.1960 ರಲ್ಲಿ ಮಹಾರಾಷ್ಟ್ರ ಸರ್ಕಾರವು ಭಾರತ ಸರ್ಕಾರದ ಮೇಲೆ ಒತ್ತಡ ಹೇರಿ, ಅದರ ಪರಿಣಾಮವಾಗಿ ಮಹಾಜನ್ ಸಮಿತಿ ಮೊಟ್ಟಮೊದಲನೆಯದಾಗಿ ರಚನೆಯಾಯಿತು. ಮಹಾಜನ್ ವರದಿಯಲ್ಲಿ ಕರ್ನಾಟಕದಿಂದ ಎರಡು ಜನ ಪ್ರತಿನಿಧಿಗಳು ಮತ್ತು ಮಹಾರಾಷ್ಟ್ರದಿಂದ ಎರಡು ಜನ ಪ್ರತಿನಿಧಿಗಳು ಸೇರಿ, ಈ ಸಮಿತಿಯಲ್ಲಿ ಕಾರ್ಯ ನಿರ್ವಹಿಸಬೇಕೆಂದಾಗುತ್ತದೆ. ಆದರೆ ಒಂದು ಗ್ರಾಮವೇ ಒಂದು ತಳಪಾಯ ಮತ್ತು relative majority ಇರಬೇಕು. ಜನತೆ ಅಭಿಪ್ರಾಯವನ್ನು

ಪಡೆಯಬೇಕು ಎನ್ನುವ ದೃಷ್ಟಿಯಲ್ಲಿ ಹೋದಾಗ, ಅದು practically ಆಗಿ ಕೆಲಸವಾಗದೇ ಇರುವ ದೃಷ್ಟಿಯಲ್ಲಿ ಈ ಸಮಿತಿ ಬಿದ್ದು ಹೋಗುತ್ತದೆ. ತದನಂತರವಾಗಿ ಸೇನಾಪತಿ ಬಾಪಟ್‌ರವರು ಮಹಾರಾಷ್ಟ್ರದಲ್ಲಿ ಪ್ರಮುಖವಾದಂತಹ ವ್ಯಕ್ತಿ ಮತ್ತು ಹೋರಾಟಗಾರರು. ಅವರು ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಿದಾಗ, ಅವರ ಈ ಉಪವಾಸ ಸತ್ಯಾಗ್ರಹಕ್ಕೆ ಮಣಿದು, ಅಂದಿನ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮೂರನೇ ನಿವೃತ್ತ ಮುಖ್ಯ ನ್ಯಾಯಧೀಶರಾದ ಶ್ರೀ ಮೆಹರ್ ಚಂದ್ ಮಹಾಜನ್‌ರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಿ ಮಹಾರಾಷ್ಟ್ರ, ಕರ್ನಾಟಕ, ಕೇರಳದ ಗಡಿ ವಿವಾದಗಳ ಬಗೆಹರಿಸುವುದಕ್ಕೆ ನೇಮಕ ಮಾಡುತ್ತಾರೆ. ಶ್ರೀ ಮೆಹರ್ ಚಂದ್ ಮಹಾಜನ್‌ರವರು ಪಂಜಾಬ್ ರಾಜ್ಯದವರು. ತಮ್ಮದೇ ಆದ ವ್ಯಕ್ತಿತ್ವವುಳ್ಳ ವ್ಯಕ್ತಿಯಾಗಿದ್ದರು. ದಿನಾಂಕ 25.10.1966 ರಲ್ಲಿ ಆಯೋಗ ರಚನೆಯಾಗುತ್ತದೆ. ಈ ಆಯೋಗ ರಚನೆಯಾದಂತಹ ಸಂತೋಷದಲ್ಲಿ ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ವಿ.ಪಿ. ನಾಯಕ್‌ರವರು "we will adhere to the Mahajan Commission's report" ಎಂದು ಒಂದು ಹೇಳಿಕೆಯನ್ನು ಕೊಡುತ್ತಾರೆ. ನಾವು ಯಾವುದೇ ಕಾರಣಕ್ಕೂ ಕೂಡ ಮಹಾಜನ್ ಆಯೋಗ ಸಮಿತಿಯು ನೀಡಿರುವ ವರದಿಯನ್ನು ತಿರಸ್ಕಾರ ಮಾಡಲ್ಲ. ಈ ಆಯೋಗದಲ್ಲಿ ಏನೇ ವರದಿ ಬಂದರೂ ಕೂಡ ಅದನ್ನು ನಾವು ಸ್ವೀಕಾರ ಮಾಡುತ್ತೇವೆ ಮತ್ತು ಅದರಂತೆ ನಡೆದುಕೊಳ್ಳುತ್ತೇವೆಂದು ಸದನದ ಹೊರಗೆ ಮತ್ತು ಒಳಗೆ ಕೂಡ ಹೇಳುತ್ತಾರೆ. ಮಹಾಜನ್ ಸಮಿತಿ, ಆಯೋಗದ ಮುಂದೆ ಮಹಾರಾಷ್ಟ್ರ ಬೆಳಗಾವಿ ಸೇರಿದಂತೆ ಸುಮಾರು 814 ಹಳ್ಳಿಗಳು ನಮಗೆ ಬರಬೇಕೆಂದು ತಮ್ಮ ಹಕ್ಕನ್ನು ಇಡುತ್ತಾರೆ. ಅದೇ ರೀತಿ ಕರ್ನಾಟಕವೂ ಸಹ ಸೊಲ್ಲಾಪುರ ಸೇರಿದಂತೆ ಸುಮಾರು 516 ಗ್ರಾಮಗಳು ನಮಗೆ ಬರಬೇಕು ಎಂಬ ಹಕ್ಕನ್ನು ಪ್ರತಿಪಾದನೆ ಮಾಡುತ್ತಾರೆ. ಅಂತಿಮವಾಗಿ ಮಹಾಜನ್ ವರದಿ ಹೊರ ಬಂದಾಗ ಬೆಳಗಾವಿ ಕರ್ನಾಟಕದ ಮುಂದುವರೆದ ಭಾಗವಾಗುತ್ತದೆ. ಅದೊಂದು ಅವಿಭಾಜ್ಯ ಅಂಗ. ಅದು ಕರ್ನಾಟಕದಲ್ಲಿ ಉಳಿಯಬೇಕೆಂಬ ಬಗ್ಗೆ ವರದಿಯಲ್ಲಿ ನಿರೂಪಣೆಯಾಗುತ್ತದೆ. ಸುಮಾರು 247 ಗ್ರಾಮಗಳನ್ನು ನಂದಗಡ, ನಿಪ್ಪಾಣಿ, ಖಾನಾಪುರ ಕೆಲವು ಭಾಗಗಳನ್ನು ಕೂಡ ಮಹಾರಾಷ್ಟ್ರಕ್ಕೆ ಹೋಗಬೇಕೆಂಬುದರ ಬಗ್ಗೆ ವರದಿಯಲ್ಲಿ ಉಲ್ಲೇಖವಾಗುತ್ತದೆ. ಕೇರಳ ರಾಜ್ಯದ ಕಾಸರಗೋಡು ತಾಲ್ಲೂಕು ಕೂಡ ಕರ್ನಾಟಕಕ್ಕೆ ಬರಬೇಕೆಂದು ವರದಿಯಲ್ಲಿ ಉಲ್ಲೇಖವಾಗುತ್ತದೆ. ಈ ವರದಿಯನ್ನು ಯಥಾವತ್ತಾಗಿ, ತಾತ್ವಿಕವಾಗಿ ನಮ್ಮ ಅಂದಿನ ರಾಜ್ಯ ಸರ್ಕಾರ ಒಪ್ಪಿಕೊಳ್ಳುತ್ತದೆ. ಮಾನ್ಯ ನ್ಯಾಯಮೂರ್ತಿಗಳು

ಕೊಟ್ಟಿರುವಂತಹ ವರದಿ ಏನಿದೆ, ಅದಕ್ಕೆ ಬದ್ಧರಾಗಿರುತ್ತೇವೆ. ಇದನ್ನು ಅನುಷ್ಠಾನ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ, ಸದನದ ಒಳಗೆ ಮತ್ತು ಹೊರಗಡೆ ಅಂದಿನ ಮುಖ್ಯಮಂತ್ರಿಗಳು ತಾತ್ವಿಕವಾಗಿ ಇದನ್ನು ಒಪ್ಪಿದ್ದೇವೆ ಎಂಬ ಎಂಬ ಹೇಳಿಕೆಯನ್ನು ಕೊಡುತ್ತಾರೆ.

ಮಾನ್ಯ ಸಭಾಪತಿಯವರೇ, ಈ ವಿಷಯ ಹಾಗೇ ಇರುತ್ತದೆ. ಯಾವಾಗ ಪ್ರಚೋದನೆ ಆಗುತ್ತದೆ ಎಂದು ಹೇಳಿದರೆ, "ಮಹಾರಾಷ್ಟ್ರ ಏಕೀಕರಣ ಸಮಿತಿ" ಎಂದು ಹೇಳಿ, ಸಮಿತಿಯನ್ನು ಹುಟ್ಟಾಕುತ್ತಾರೆ. ಈ ಗೊಂದಲವನ್ನು ಸೃಷ್ಟಿ ಮಾಡುವುದಕ್ಕಾಗಿ 1980 ರಲ್ಲಿ ಹುಟ್ಟಿ ಹಾಕಿದಂತಹ ಈ ಸಮಿತಿ ಗಡಿ ಭಾಗದಲ್ಲಿರತಕ್ಕಂತಹ ಎಲ್ಲಿ ಕನ್ನಡಿಗರು ಮಾತನಾಡುತ್ತಾರೆ. ಯಾವುದನ್ನು ಅವರು ನಮ್ಮ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳಿ claim ಮಾಡಿದ್ದರು, ಅಲ್ಲಿ ಹೋಗಿ ನಿರಂತರವಾಗಿ ಇಲ್ಲದ ಚಟುವಟಿಕೆಗಳನ್ನು ಪ್ರಾರಂಭ ಮಾಡಿ. ಜನರನ್ನು ಎತ್ತಿ ಕಟ್ಟುವಂತಹ ಕೆಲಸವನ್ನು ಮಾಡುತ್ತಾರೆ. ಜನರನ್ನು ಹೆದರಿಸುವಂತಹ ಮತ್ತು ಬೆದರಿಸುವಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಅವೋತ್ತು ಬಹುಶಃ ಈ ಭಾಗದಲ್ಲಿ ರಾಜ್ಯ ಸರ್ಕಾರಗಳು ಎಚ್ಚರ ವಹಿಸಲಿಲ್ಲ ಮತ್ತು ಇಲ್ಲಿ ಇರತಕ್ಕಂಥ ಪ್ರತಿನಿಧಿಗಳು ಸಾಕಷ್ಟು ರೀತಿಯಲ್ಲಿ ವಿರೋಧ ಕೂಡ ಮಾಡಲಿಲ್ಲ. ವಿರೋಧ ಮಾಡಿದ್ದರೆ, ಬಹುಶಃ ಇಷ್ಟರ ಮಟ್ಟಿಗೆ ಹೋಗುತ್ತಿರಲಿಲ್ಲವೇನೋ ಎಂಬುದು ನನ್ನ ವೈಯಕ್ತಿಕ ಭಾವನೆಯಾಗಿದೆ. ಜನರಲ್ಲಿ ಭಾಷೆ, ನೆಲ-ಜಲದ ಬಗ್ಗೆ ಅಷ್ಟೊಂದು ಕಾಳಜಿ ಇರಲಿಲ್ಲ ಎಂಬುದು ನನ್ನ ಭಾವನೆ ಇರುವಂತಹದ್ದು. ಕೃಷ್ಣಾ ನದಿ ನೀರು ಯಾವಾಗ ಹಂಚಿಕೆಯಾಯಿತು. ಅವೊತ್ತಿನ ದಿನ ಜನರಲ್ಲಿ ನೆಲ-ಜಲ, ಭಾಷೆ ಬಗ್ಗೆ ಎಚ್ಚರವಾಗಿರಬೇಕೆಂಬ ಭಾವನೆ ಬಂತು. ಈ ಮೂರು ಇರುವಿಕೆ ಇರುವುದು ಎಂಬುದು ನಮ್ಮ ಜನರ ಮನಸ್ಸಿನಲ್ಲಿ ಬಂತು. ಈ MES ಅವರ ಉದ್ಧಟತನದಿಂದಾಗಿ, 1983ರಲ್ಲಿ ಬೆಳಗಾವಿ ಸಿಟಿ ಕಾರ್ಪೋರೇಷನ್ ನಿರ್ಣಯ ಅಂಗೀಕರಿಸುತ್ತದೆ. ಇಲ್ಲ ನಾವು ಮಹಾರಾಷ್ಟ್ರದಲ್ಲಿ ಇರುತ್ತೇವೆ. ಅದೇ ರೀತಿಯಲ್ಲಿ ಗಡಿ ಭಾಗದಲ್ಲಿರುವಂತಹ ತಾಲ್ಲೂಕು ಪಂಚಾಯಿತಿಗಳು ಮತ್ತು ಗ್ರಾಮ ಪಂಚಾಯಿತಿಗಳು ಕೂಡ ಅಲ್ಲಲ್ಲಿ ನಾವು ಸೇರಬೇಕೆನ್ನುವ ಬಗ್ಗೆ ಕೂಡ ನಿರ್ಣಯ ಮಾಡುತ್ತದೆ. ಇದು ಜನರ ಹಿಂದೆ ಆಗಿರುವಂತಹದ್ದು. ಕೆಲವೇ ಒಂದು ವರ್ಗದ ಜನರು ಚಿತಾವಣೆ, ಕಿತಾಪತಿಯಿಂದಾಗಿ ಈ ರೀತಿ ಮಾಡಿರುವ ದೃಷ್ಟಿಯಲ್ಲಿ ಉಂಟಾಗಿರುವಂತಹದ್ದು. ಆದರೆ 2008ರಲ್ಲಿ ಬೆಳಗಾವಿಯಲ್ಲಿ ಸುವರ್ಣಸೌಧಕ್ಕೆ ಅಡಿಪಾಯ ಹಾಕಿರುವಂತಹ ನಮ್ಮ ನೆಚ್ಚಿನ ನಾಯಕರಾದಂತಹ ಮಾನ್ಯ ಹೆಚ್.ಡಿ.

ಕುಮಾರಸ್ವಾಮಿಯವರು. ಆನಂತರವಾಗಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಧೈರ್ಯ ಮತ್ತು ಸಾಹಸದಿಂದ ಬೆಳಗಾವಿಯಲ್ಲಿ ಸುವರ್ಣ ಸೌಧವನ್ನು ಕಟ್ಟುತ್ತೇವೆ. ಬೆಳಗಾವಿಯನ್ನು ಯಾವಾಗ ಕರ್ನಾಟಕದ ಎರಡನೇ ರಾಜಧಾನಿ ಎಂದು ಘೋಷಣೆಯಾಗುತ್ತದೆ. ಇಲ್ಲಿ ನಡೆಯುವಂತಹ ಚಟುವಟಿಕೆಗಳಾದ ಮೇಲೆ ನಂತರ ಇದು ನಮ್ಮ ನಾಡು, ನೆಲ–ಜಲ, ಭಾಷೆ ಎಂಬ ಬಗ್ಗೆ ಜನರಿಗೆ ಅರ್ಥವಾಗುತ್ತದೆ. ಇದೇ ರೀತಿಯಾಗಿ ನಾವೆಲ್ಲರೂ ಇನ್ನು ಹೆಚ್ಚು ಎಚ್ಚೆತ್ತುಕೊಂಡು ಗಡಿನಾಡಿನ ಪ್ರದೇಶಗಳಲ್ಲಿ ಸಾಕಷ್ಟು ಗಡಿನಾಡು ಅಭಿವೃದ್ಧಿ ಪ್ರಾಧಿಕಾರ, ಗಡಿನಾಡು ಕಾವಲು ಪಡೆ ಇದೆ. ಅವುಗಳನ್ನು ಯಾವ ರೀತಿ ಬೆಂಬಲಿಸಬೇಕು? ಯಾವ ರೀತಿ ಅನುದಾನ ಕೊಡಬೇಕು? ಗಡಿ ಭಾಗದಲ್ಲಿರುವ ನಮ್ಮ ಜನರು ಗಡಿ ಭಾಗವನ್ನು ಬಿಟ್ಟು, ಆ ಕಡೆ ಇರತಕ್ಕಂಥ ಕನ್ನಡಿಗರಿಗೆ ಯಾವ ರೀತಿ ಹಿತರಕ್ಷಣೆ ಮಾಡಬೇಕು. ಅವರ ಧ್ಯೇಯೋದ್ಧೇಶಕ್ಕಾಗಿ ಏನು ಕೊಡಬೇಕು? ಅಲ್ಲಿರುವಂತಹ ಸಂಘ ಸಂಸ್ಥೆಗಳಿಗೆ, ಮಕ್ಕಳಿಗೆ ಮತ್ತು ಹೊರನಾಡ ಕನ್ನಡಿಗರು ಈ ಭಾಗಕ್ಕೆ ಬಂದು ಮೆಡಿಕಲ್, ಇಂಜಿನೀಯರಿಂಗ್, ಎಂ.ಬಿ.ಎ., ಓದುತ್ತೇವೆಂದು ಹೇಳಿದರೆ, ಎಲ್ಲಾ ರೀತಿಯ ಸವಲತ್ತು ಕೊಡುವಂತಹದ್ದಕ್ಕೆ ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಇದಕ್ಕಿಂತ ಹೆಚ್ಚಾಗಿ ಮಹಾರಾಷ್ಟ್ರ ಸರ್ಕಾರದವರ ಚಿತಾವಣೆ ಸಾಕಷ್ಟು ಇದೆ. ಅಲ್ಲಿ ಪಕ್ಷಾತೀತವಾಗಿ ಎನ್.ಸಿ.ಪಿ., ಕಾಂಗ್ರೆಸ್, ಬಿ.ಜೆ.ಪಿ., ಶಿವಸೇನೆ ಇರಬಹುದು. ಇವೆಲ್ಲವೂ ಒಕ್ಕೊರಲಿನಿಂದ ಅವರಿಗೆ ಏನಾಗಿದೆ ಎಂದರೆ ಬೆಳಗಾವಿ ಬೇಕು ಅಷ್ಟೆ. ಮಹಾರಾಷ್ಟ್ರದ ಗಡಿಭಾಗದಲ್ಲಿರುವಂತಹ ಗ್ರಾಮಗಳಿಗಿಂತ ಹೆಚ್ಚಿನದಾಗಿ ಬೆಳಗಾವಿ ನಗರ ಬೇಕಾಗಿದೆ. ಈ ದೃಷ್ಟಿಯಲ್ಲಿ ಸಾಕಷ್ಟು ರೀತಿಯಲ್ಲಿ ಚಿತಾವಣೆ ಮಾಡುವಂತಹ ಹೇಳಿಕೆಗಳು ಬರುತ್ತಿವೆ. ಇದು ಎಷ್ಟರ ಮಟ್ಟಿಗೆ ಹೋಗಿದೆ ಎಂದು ನೋಡುವುದಕ್ಕಾಗಿ ಇಬ್ಬರು ಕ್ಯಾಬಿನೆಟ್ ಸಚಿವರನ್ನು ನೇಮಕ ಮಾಡಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರ ಇನ್ನೂ ಕಾವಲು ಪಡೆ ಸಮಿತಿಯನ್ನು ರಚನೆ ಮಾಡಲಿಲ್ಲ. ಅದಕ್ಕೆ ಮುಖ್ಯಸ್ಥರನ್ನು ನೇಮಿಸಲಿಲ್ಲ. ಗಡಿನಾಡ ಅಭಿವೃದ್ಧಿಗೆ ಸಾಕಷ್ಟು ಅನುದಾನ ಕೊಡುತ್ತಿಲ್ಲ. ಇದೊಂದೇ ಸರ್ಕಾರ ಎಂದು ನಾನು ಹೇಳುತ್ತಿಲ್ಲ. ಹಿಂದಿನ ಸರ್ಕಾರದಿಂದಲೂ ಕೂಡ ಅದೇ ರೀತಿಯಾಗಿ ಬಂದಿದೆ. ಈ ದೃಷ್ಟಿಯಲ್ಲಿ ನಾವು ಎಚ್ಚೆತ್ತುಕೊಂಡು ಕಣ್ಣು ತೆರೆಯಬೇಕಾಗಿದೆ. ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರಬಯಸುವುದೇನೆಂದರೆ, 3ನೇ ಮೇ 2016ರಲ್ಲಿ

ಲೋಕಸಭೆಯಲ್ಲಿ ಮಾನ್ಯ ಕೇಂದ್ರ ಗೃಹ ಸಚಿವರಿಗೆ ಪ್ರಶ್ನೆ ಸಂಖ್ಯೆ 1581 ಶ್ರೀ ಅಶೋಕ್ ಮಹದೇವರಾವ್ ನೇಟೆರವರು ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಭಾಗದ ಬಗ್ಗೆ ಪ್ರಶ್ನೆಯನ್ನು ಎತ್ತಿರುತ್ತಾರೆ. ಅದರ ಬಗ್ಗೆ ಹೇಳುತ್ತಾರೆ.

(ಮುಂದು)

(1213) 27.12.2022, 4.10,TCH-BNS (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

"… With a view to settle the boundary dispute between Maharashtra and Karnataka, the Central Government constituted the one-man Mahajan Commission, which submitted its report in August 1967. The Government of Karnataka insists on the implementation of the recommendations of the Mahajan Commission in toto, while the government of Maharashtra does not accept the Commission's recommendations. The Government of Maharashtra has filed a suit in the Hon'ble Supreme Court of India, which is pending in the Apex Court."

ಮಾನ್ಯ ಸಭಾಪತಿಯವರೇ, ಎರಡು ರಾಷ್ಟ್ರಗಳ ಮತ್ತು ಎರಡು ರಾಜ್ಯಗಳ ನಡುವೆ ಯಾವಾಗಲೂ ಸಂಬಂಧಗಳು ಉತ್ತಮವಾಗಿರಬೇಕು. ಇದು good fences make good neighbours ಎನ್ನುವ ದೃಷ್ಟಿ ಅಲ್ಲ. ನಾವೆಲ್ಲರೂ ಕೂಡ ಒಟ್ಟಿಗೆ ಬಾಳಬೇಕು. ಎರಡೂ ಕಡೆಯಿಂದ ಯಾವುದೇ ರೀತಿಯಾದ ಪ್ರಚೋದನೆಯಾದಂತಹ ಹೇಳಿಕೆಗಳು ಬರಬಾರದು. ಅದು ರಾಜಕೀಯ ಪ್ರಮುಖರಾಗಿರಬಹುದು, ಕ್ಯಾಬಿನೆಟ್ ಸಚಿವರಾಗಿರಬಹುದು, ಸನ್ಮಾನ್ಯ ಮುಖ್ಯಮಂತ್ರಿಗಳಾಗಿರಬಹುದು ಯಾರೇ ಆದರೂ ಕೂಡ ಜವಾಬ್ದಾರಿಯುತವಾದ ಹೇಳಿಕೆಗಳನ್ನು ಕೊಡಬೇಕು. ಅದರಲ್ಲೂ ಕೂಡ ಸಂಘ-ಸಂಸ್ಥೆಗಳು ಸಣ್ಣ-ಪುಟ್ಟ ವಿಚಾರದಲ್ಲಿ ಪ್ರತಿಮೆಗಳಿಗೆ ಅವಮಾನ ಮಾಡುವುದು, ಬಾವುಟಗಳಿಗೆ

ಅವಮಾನ ಮಾಡಿ ಮಸಿ ಬಳಿಯುವುದು, ಬಸ್‌ಗಳಿಗೆ ಮಸಿ ಬಳಿಯುವುದು, ಸಾರ್ವಜನಿಕರಿಗೆ ತೊಂದರೆ ಕೊಡತಕ್ಕಂಥದ್ದು ಯಾವುದೇ ರೀತಿ ಮಾಡಬಾರದು. ಅಂತಿಮ ನಿರ್ಣಯ ಮಹಾಜನ್ ಕಮೀಷನ್ ಅಥವಾ State reorganisation ಮಾಡಿರುವುದು ಬದ್ಧವಾಗಿರತಕ್ಕಂಥದ್ದು. ಏನಾದರೂ ಸಣ್ಣ–ಪುಟ್ಟ ವಿಷಯಗಳಿದ್ದರೆ ರಾಜಕೀಯವಾಗಿ ತೆಗೆದುಕೊಳ್ಳಬಾರದು. ಗೌರವಾನ್ವಿತ ಸುಪ್ರೀಂ ಕೋರ್ಟ್ ಕೂಡ ನಿಮಗೆ ಏನಾದರೂ ಸಮಸ್ಯೆಗಳಿದ್ದರೆ, ಎರಡೂ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಕೂತು ಚರ್ಚೆ ಮಾಡಿ ಬಗೆಹರಿಸಿಕೊಳ್ಳ ಗೊಂದಲಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಹೇಳಿದೆ. ಇತ್ತೀಚೆಗೆ ಕೇಂದ್ರದ ಗೃಹ ಸಚಿವರಾದ ಸನ್ಮಾನ್ಯ ಅಮಿತ್‌ಶಾ ರವರು ಕೂಡ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡಿದ್ದಾರೆ. ನೀವು ಪ್ರಚೋದನಕಾರಿ ಹೇಳಿಕೆಗಳನ್ನು ಕೊಡುವುದು ಬೇಡ ತಮ್ಮ ತಮ್ಮ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು maintain ಮಾಡಿಕೊಂಡು ಹೋಗುವಂತೆ ಹೇಳಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿರುವ ಕೇಸ್ ಏನಾಗುತ್ತದೆ ನೋಡೋಣ. ಸುಪ್ರೀಂ ಕೋರ್ಟ್‌ನಲ್ಲಿರುವ ಕೇಸ್‌ನ ಬಗ್ಗೆ ನಾವು ತುಂಬಾ ಎಚ್ಚರ ವಹಿಸಬೇಕಾಗುತ್ತದೆ. ಏಕೆಂದರೆ, ನಮಗೆ ಬಂದಿರುವ ಸುದ್ದಿ ಪ್ರಕಾರ ಮಹಾರಾಷ್ಟ್ರ ಸರ್ಕಾರವು ಮಹಾರಾಷ್ಟ್ರ ಏಕೀಕರಣ ಸಮಿತಿ ಮುಖೇನ ಹಲವಾರು ಜನಾಭಿಪ್ರಾಯಗಳನ್ನು ಸಂಗ್ರಹಣೆ ಮಾಡಿ, ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆ ಮಾಡುತ್ತಿವೆ. ನಮ್ಮ ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ ಅಫಿಡವಿಟ್ ಮುಖೇನ ಮಾಡುತ್ತಿದೆ ಎನ್ನುತಕ್ಕಂಥ ಒಂದು ಮಾಹಿತಿ ತಿಳಿದುಬಂದಿದೆ. ಅವರು ನಮ್ಮ ಜನತೆಯ ದೃಷ್ಟಿಗೆ ಎದುರಾಗಿ ಹೋಗಬಾರದು ನಮಗೆ ನ್ಯಾಯ ಕೊಡಿಸಲು ಒಂದು ಒಳ್ಳೆಯ ಉತ್ತಮವಾಗಿರತಕ್ಕಂಥ ವಕೀಲರ ತಂಡವನ್ನು ನೇಮಕ ಮಾಡಿ ರಾಜ್ಯದ ಹಿತ ಕಾಪಾಡುವುದಕ್ಕೆ ಮುಂದಾಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಹಿರಿಯ ಸದಸ್ಯರಾದ ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರು ಮಾತನಾಡಿದ್ದಾರೆ. ನಾಡು–ನುಡಿ ವಿಚಾರದಲ್ಲಿ ಪ್ರಸ್ತಾವನೆ ಮಾಡುವುದಕ್ಕೆ ನಾವೆಲ್ಲರೂ ಕೂಡ ಪಕ್ಷಾತೀತವಾಗಿ ಒಂದಾಗಬೇಕು. ಇವತ್ತಿನ ದಿವಸ ಕಾಂಗ್ರೆಸ್ ಪಕ್ಷ, ಬಿಜೆಪಿ ಮತ್ತು ಜನತಾದಳ

(ಜಾತ್ಯಾತೀತ) ಪಕ್ಷ ಎನ್ನುವುದಲ್ಲ. ನಾವು ಸುಮಾರು ಆರೂವರೆ ಕೋಟಿ ಕನ್ನಡಿಗರ ರಕ್ಷಣೆ ಮಾಡುವ ಹಾದಿಯಲ್ಲಿ ನಾವೆಲ್ಲರೂ ಕೂಡ ಕೆಲಸ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಮಹಾಜನ್ ವರದಿ ಬಂದಿರತಕ್ಕಂಥದ್ದೇ ಮಹಾರಾಷ್ಟ್ರದ ಒಂದು ವಿಚಾರದಲ್ಲಿ. ಅದನ್ನು ಅವರೇ ಪ್ರಾರಂಭ ಮಾಡಿದ್ದಾರೆ. ಕಲಂ 131 ನ್ನು ಜಾರಿಗೆ ತರಬೇಕೆಂದು ಮಹಾರಾಷ್ಟ್ರದ ಸರ್ಕಾರದವರು ಖಡಾಖಂಡಿತವಾಗಿ ಹೇಳಿದ್ದಾರೆ. ಆದರೆ ಇವತ್ತಿನ ದಿವಸ ಮಹಾರಾಷ್ಟ್ರದಲ್ಲಿರತಕ್ಕಂಥ ಕನ್ನಡಿಗರಿಗೆ ಯಾವುದೇ ರೀತಿಯ ರಕ್ಷಣೆ ಇಲ್ಲ. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಪ್ರಕಾಶ್ ಕೆ.ರಾಥೋಡ್ ರವರು ಹೇಳಿದಂತೆ, ಮಾಹಾರಾಷ್ಟ್ರದಿಂದ ಕನ್ನಡಿಗರು ಇಲ್ಲಿಗೆ ಬರಬೇಕು ಮತ್ತು ಇಲ್ಲಿಂದ ಅಲ್ಲಿಗೆ ಹೋಗಬೇಕಾದರೆ ಎಂಇಎಸ್ ಸಂಘಟನೆ ಪುಂಡಾಟಿಕೆ ಮಾಡುತ್ತಿದೆ. ಅದನ್ನು ಮೊದಲು ಸರ್ಕಾರ ಯಾವುದೇ ಮುಲಾಜಿಲ್ಲದೇ ನಿಷೇಧ ಮಾಡಬೇಕು.  ಏಕೆಂದರೆ, ಇವತ್ತಿನ ದಿವಸ ಕನ್ನಡಿಗರೆಲ್ಲರೂ ಕೂಡ ಸ್ವಾಭಿಮಾನಿಗಳು.  ಎಲ್ಲಾ ರೀತಿಯಿಂದಲೂ ಕೂಡ ನಾವು ಹೋರಾಟಗಳನ್ನು ಮಾಡಲು ಸಿದ್ಧರಿದ್ದೇವೆ. ಇವತ್ತಿನ ದಿವಸ ಸುಪ್ರೀಂ ಕೋರ್ಟ್‌ನಿಂದ ನ್ಯಾಯ ಸಿಗುತ್ತದೆಂದು ಕೇಂದ್ರ ಗೃಹ ಸಚಿವರಾದ ಸನ್ಮಾನ್ಯ ಅಮಿತ್‌ಶಾರವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ಕರೆಸಿ ಮಾತನಾಡಿದ್ದಾರೆ. ನಾನು ಸರ್ಕಾರಕ್ಕೆ ಹೇಳುವುದು ಇಷ್ಟೇ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ. ಮಹಾರಾಷ್ಟ್ರದಲ್ಲೂ ಬಿಜೆಪಿ ಸರ್ಕಾರ ಅಧಿಕಾರದಲ್ಲಿದೆ.  ಕೇಂದ್ರದಲ್ಲೂ ಕೂಡ ನಿಮ್ಮದೇ ಆದ ಬಿಜೆಪಿ ಸರ್ಕಾರ ಇದೆ. ಅಂದರೆ ಇವತ್ತಿನ ದಿವಸ ತ್ರಿಬಲ್ ಇಂಜಿನ್ ಸರ್ಕಾರವಿದೆ.  ಡಬಲ್ ಇಂಜಿನ್ ಸರ್ಕಾರ ಇದ್ದರೆ ಅದು ಒಂದು ರೀತಿ ಆಗಿರುವುದು. ಆದರೆ, ಇವತ್ತಿನ ದಿವಸ ತ್ರಿಬಲ್ ಇಂಜಿನ್ ಸರ್ಕಾರವಿದೆ. ಆದ್ದರಿಂದ ಇಂತಹ ಒಂದು ದೊಡ್ಡ ವಿಚಾರವನ್ನು ನೀವು ಇತ್ಯರ್ಥಪಡಿಸಲು ತಾವು ಸರಿಯಾದ ರೀತಿಯಲ್ಲಿ ಪಕ್ಷಾತೀತವಾಗಿ ಅವಶ್ಯಕತೆ ಇದ್ದರೆ ಸರ್ವಪಕ್ಷ ನಿಯೋಗವನ್ನು ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗಿ ಒತ್ತಡ ಹಾಕಬೇಕು. ಮತ್ತೆ ಯಾವುದೇ ಕಾರಣಕ್ಕೂ ಕೂಡ ನಮ್ಮ ರಾಜ್ಯದ ಒಂದು ಇಂಚು ಭೂಮಿಯನ್ನೂ ಕೂಡ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಆ ಹಾದಿಯಲ್ಲಿ ಹೋರಾಟ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದರ ಜೊತೆಗೆ ಗಡಿ ವಿಚಾರ ತಮಗೂ ಗೊತ್ತಿದೆ.  ಅದು ಕೇರಳ ಇರಬಹುದು, ಮಹಾರಾಷ್ಟ್ರ ಇರಬಹುದು, ತಮಿಳುನಾಡು ಇರಬಹುದು, ತೆಲಂಗಾಣ ಮತ್ತು ಪಾಂಡಿಚೇರಿ ಯಾವುದೇ ಬರಲಿ. ನಾವೆಲ್ಲರೂ ಕೂಡ ಒಂದಾಗಿ ಹೋರಾಟ ಮಾಡಬೇಕಿದೆ. ಇವತ್ತಿನ ದಿವಸ ಒಂದು ಕಡೆ ಭಾಷೆ

ವಿಚಾರ. ಇನ್ನೊಂದು ಕಡೆ ನೆಲ-ಜಲದ ವಿಚಾರ ಬಂದಾಗ ನಾವೆಲ್ಲರೂ ಕೂಡ ಒಗ್ಗಟ್ಟು ಪ್ರದರ್ಶನ ಮಾಡಿ ಎಲ್ಲಾ ರೀತಿಯಲ್ಲೂ ಹೋರಾಟವನ್ನು ಮಾಡಿದ್ದೇವೆ. ಈ ಹಿಂದೆ ಕಾವೇರಿ ವಿಚಾರ ಬಂದಾಗಲೂ ಕೂಡ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ದೇವೇಗೌಡ ರವರು ಯಾವ ರೀತಿ ಹೋರಾಟ ಮಾಡಿದರೆಂದು ತಮಗೆಲ್ಲಾ ಗೊತ್ತಿದೆ. ಈ ಕೇಸ್ ಸುಪ್ರೀಂ ಕೋರ್ಟ್‌ನಲ್ಲಿದ್ದಾಗಲೂ ಕೂಡ ಅವರು ನ್ಯಾಯ ಕೊಡಿಸಬೇಕೆಂದು ಸದನದಲ್ಲಿ ಒಂದು ನಿರ್ಣಯ ತೆಗೆದುಕೊಂಡು ನಾವೆಲ್ಲಾ ಯಾವ ರೀತಿ ಒಗ್ಗಟ್ಟನ್ನು ಪ್ರದರ್ಶನ ಮಾಡಿದ್ದೇವೋ, ಅದೇ ರೀತಿ ಇವತ್ತಿನ ದಿವಸ ನಾವು ಕೂಡ ಎಲ್ಲಾ ರೀತಿಯಲ್ಲೂ ಸಜ್ಜಾಗಬೇಕಾಗಿದೆ. ಆ ಹಾದಿಯಲ್ಲಿ ನಾವೆಲ್ಲರೂ ಕೆಲಸ ಮಾಡೋಣ. ಗಡಿ ವಿಚಾರದಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ಕೆಲಸ ಮಾಡೋಣ. ಯಾವುದೇ ರೀತಿಯಿಂದ ಕನ್ನಡಿಗರಿಗೆ ತೊಂದರೆ ಕೊಡುವಂತಹ ಮತ್ತು ದೌರ್ಜನ್ಯ ಮಾಡುವಂತಹ ಸಾಹಸವನ್ನು ನಾವ್ಯಾರು ಕೂಡ ಸಹಿಸಿಕೊಳ್ಳಬಾರದೆಂದು ಮತ್ತೊಮ್ಮೆ ನಾನು ತಮ್ಮ ಮೂಲಕ ಈ ಒಂದು ವಿಚಾರದಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಡಾ.ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವಂತಹ ಈ ಮಹತ್ವದ ಅಧಿವೇಶನದಲ್ಲಿ ತುಂಬಾ ವರ್ಷಗಳ ಕಾಲ ಸುಧೀರ್ಘವಾಗಿ ನೆನೆಗುದಿಗೆ ಬಿದ್ದಿರತಕ್ಕಂಥ ಗಡಿ ವಿವಾದದಂತಹ ಮಹತ್ವದ ವಿಷಯದ ಕುರಿತು ನಾವು ಚರ್ಚೆ ಮಾಡುತ್ತಿದ್ದೇವೆ. ನಾವೆಲ್ಲರೂ ಖುಷಿಪಡಬೇಕಾದ ಸಂಗತಿಯೆಂದರೆ, ನೆಲ, ಜಲ, ಗಡಿ, ಭಾಷೆ ಎನ್ನತಕ್ಕಂಥ ವಿಚಾರಗಳಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ಕರ್ನಾಟಕದ ಹಿತವನ್ನು ಕಾಪಾಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಸರ್ಕಾರಕ್ಕೆ ಮತ್ತು ಆಯಾ ಕಾಲದ ಮುಖ್ಯಮಂತ್ರಿಗಳಿಗೆ ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದೇವೆಂದು ನಾವೆಲ್ಲರೂ ಹೆಮ್ಮೆ ಪಡುವಂತಹ ವಿಚಾರವಾಗಿದೆ. ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಉಲ್ಲೇಖ ಮಾಡುವಾಗ, ಈ ಹಿಂದೆ ಲಲಿತಾದಿತ್ಯರ ಕಾಲದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೆ ಚೀನಾದ ಬಾರ್ಡರ್‌ವರೆಗೆ ಈ ಭವ್ಯ ಪ್ರಾಚೀನ ಭಾರತ ಇತ್ತು. ಸುಮಾರು 565 ಸಂಸ್ಥಾನಗಳು ಆಳ್ವಿಕೆ ಮಾಡುವ ಮೂಲಕ ಅನೇಕ

ರೀತಿಯ ಸಂಸ್ಕೃತಿ, ಇತಿಹಾಸ, ಗತವೈಭವವನ್ನು ಶೌರ್ಯವನ್ನು ನಮಗೆ ಕೊಟ್ಟುಹೋಗಿದ್ದಾರೆ. ಅಲ್ಲಿಂದ ಅನೇಕ ಜನ ಗೆದ್ದು ಬಂದಿದ್ದಾರೆ. ಹೊಯ್ಸಳರ ರಾಜಧಾನಿ ಇರಬಹುದು ಅಥವಾ ಈ ಭಾಗದ ನಂದಿ ಇರಬಹುದು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು ಪ್ರತಿಯೊಬ್ಬರೂ ಕೂಡ ತಮ್ಮ ಕೊಡುಗೆಯನ್ನು ಕೊಟ್ಟಿದ್ದಾರೆ. ರಾಣಿ ಚೆನ್ನಾಮ್ಮಾಜಿಯವರು ಕೂಡ ಯಾವತ್ತೂ ನಮಗೆ ಪ್ರಾತಃಸ್ಮರಣೀಯರು. ಏಕೆಂದರೆ, ಬ್ರಿಟೀಷರ ವಿರುದ್ಧ, ತ್ಯಾಕರೆಯವರ ವಿರುದ್ಧ ನೇರವಾಗಿ ಹೋರಾಟ ಮಾಡಿದ್ದಾರೆ. ಇವತ್ತು ಅನೇಕ ಪುಟಾಣಿ ಮಕ್ಕಳೂ ಕೂಡ ಸದನದ ಗ್ಯಾಲರಿಗೆ ಬಂದಿದ್ದಾರೆ. ಸಿನಿಮಾನಲ್ಲಿ ಕಿತ್ತೂರು ರಾಣಿ ಚೆನ್ನಮ್ಮನವರ ಒಂದು ಡೈಲಾಗ್ ಏನೆಂದರೆ, ಕಪ್ಪ ಕಾಣಿಕೆಯನ್ನು ಕೊಟ್ಟು ಶರಣಾಗಿ ಎಂದು ಬ್ರಿಟೀಷರು ಹೇಳಿದಾಗ, "ನೀವೇನು ನಮ್ಮ ನೆಂಟರಾ, ಇಷ್ಟರಾ, ಬಂಧುವೇ, ಬಳಗವೇ, ನೀವೇನು ಇಲ್ಲಿ ಉತ್ತಿರಾ, ಬಿತ್ತಿರಾ ನಿಮಗೇಕೆ ಕೊಡಬೇಕು ಕಪ್ಪ" ಎಂದು ಖಡ್ಗವನ್ನು ಹಿಡಿದು ಹರಹರ ಮಹಾದೇವ ಎಂದು ಯುದ್ಧವನ್ನು ಆಯ್ಕೆ ಮಾಡಿಕೊಂಡು, ನೆಲ, ಜಲ, ಗಡಿ ಮತ್ತು ಸ್ವಾಭಿಮಾನಕ್ಕಾಗಿ ಹೋರಾಟ ಮಾಡಿ ಅವರು ಇವತ್ತು ಅಮರರಾಗಿದ್ದಾರೆ. ಅಂತಹ ಒಂದು ರಕ್ತವನ್ನು, ಅಂತಹ ಇತಿಹಾಸವನ್ನು ಹೊಂದಿರತಕ್ಕಂಥ ಕರ್ನಾಟಕ ಎಂಥದ್ದೇ ಪರಿಸ್ಥಿತಿಯಲ್ಲಿ ನಮ್ಮ ಗಡಿ ಭಾಗವನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ನಾವು ಭಾರತಕ್ಕೆ ನಿಷ್ಠರಾಗಿದ್ದೇವೆ. ನಾವು ಭಾರತದ ಸಂವಿಧಾನಕ್ಕೆ ನಿಷ್ಠರಾಗಿದ್ದೇವೆ. ಕಾನೂನಿಗೆ ನಿಷ್ಠರಾಗಿದ್ದೇವೆ. ಶಾಂತಿಗೆ ಬದ್ಧರಾಗಿದ್ದೇವೆ. ಸ್ನೇಹಕ್ಕೆ ಬದ್ಧರಾಗಿದ್ದೇವೆ. ನಾವು ಸಮರಕ್ಕೂ ಸಿದ್ಧರಾಗಿದ್ದೇವೆ. ಮಹಾಜನ್ ವರದಿ ಅನುಷ್ಠಾನವಾಗಬೇಕೆಂದು ಕೇಳಿದ್ದು ಮಹಾರಾಷ್ಟ್ರ. ಅವೊತ್ತಿನ ದಿವಸ ಮಹಾಜನ್ ವರದಿ ಕೊಟ್ಟಾಗ ಯಾವುದೇ ರೀತಿಯ ತಾರತಮ್ಯ ಮಾಡದೇ ಅಧ್ಯಯನ ಮಾಡಿ ಸುತ್ತಾಡಿದ್ದಾರೆ. ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರವೇ ಸುಸೂತ್ರವಾಗಿ ಈ ಒಂದು ಸ್ವತಂತ್ರ ಭಾರತದಲ್ಲಿ ಅಣ್ಣ-ತಮ್ಮಂದಿರಂತೆ ಚೆನ್ನಾಗಿ ಬಾಳಬೇಕು ಎನ್ನುವ ಸುದುದ್ದೇಶದಿಂದ ಆ ಆಯೋಗವು ಒಂದು ತೀರ್ಮಾನವನ್ನು ಕೊಟ್ಟಿದೆ. ಮಹಾರಾಷ್ಟ್ರ ಅದನ್ನು ಅಗೌರವಿಸಿರುವುದಕ್ಕೆ ಇಡೀ ಭಾರತದ ಕ್ಷಮೆಯನ್ನು ಕೋರಬೇಕು. ಮಾನ್ಯ ಸಭಾಪತಿಯವರೇ, ನಾವು ಒಂದು ತುಲನೆಯನ್ನು ಮಾಡಬಹುದು.

**(ಮುಂದು...)**

(1214) 27-12-2022 4-20 KH/GR (ಉಪ ಸಭಾಪತಿಯವರ ಉಪಸ್ಥಿತಿ)

**ಡಾ॥ ತೇಜಸ್ವಿನಿ ಗೌಡ (ಮುಂದು):-**

ಇವತ್ತು ಪಾಕಿಸ್ತಾನ ನಮ್ಮ ಅನೇಕ ಪ್ರದೇಶಗಳನ್ನು ಆಕ್ರಮಣ ಮಾಡಿಕೊಂಡಿದೆ. ನಾವು ಇದನ್ನು PoK ಎಂದು ಕರೆಯುತ್ತೇವೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಆ ವಿಚಾರಗಳನ್ನು ಉಲ್ಲೇಖ ಮಾಡಿದರು. ಯಾವುದೇ ಒಂದು ಪ್ರದೇಶವನ್ನು 1971ರ ಯುದ್ಧದಲ್ಲಿ ಪಾಕಿಸ್ತಾನಕ್ಕೆ ಹೋದಂತಹ ಪ್ರದೇಶವನ್ನು ವಿಮೋಚನೆ ಮಾಡಬೇಕೆಂದು ಅಲ್ಲಿನ ಜನ ಹೋರಾಟ ಮಾಡಿದಾಗ ಅವರಿಗೆ ಬೇಕಾದ ಬೆಂಬಲವನ್ನು ಕೊಟ್ಟಿದ್ದು ಭಾರತ. ಇವತ್ತು ಕೂಡ ಎಂ.ಇ.ಎಸ್., ಅಷ್ಟು ಪುಂಡಾಟಿಕೆ ಮಾಡುತ್ತಿದೆ. ಕಾನೂನನ್ನು ಕೈಗೆತ್ತಿಕೊಳ್ಳುತ್ತಿದೆ. ನಮ್ಮ ಸಾರ್ವಜನಿಕ ಆಸ್ತಿ-ಪಾಸ್ತಿಯನ್ನು ಲೂಟಿ ಮಾಡುತ್ತಿದೆ. ಅವರಿಗೆ ಯಾವುದೇ ಆಧಾರದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಹೋರಾಟ ಮಾಡುವುದಕ್ಕೆ, ಕೇಳುವುದಕ್ಕೆ ಅವರಿಗೆ ಹಕ್ಕಿದೆ. ಅವರು ಕೇಳಬಹುದು. ಅದಕ್ಕೆ ಒಂದು ಲಾಜಿಕ್ ಬೇಕು. ಇವರಿಗೆ ಏನು ಹಕ್ಕಿದೆ? ಕರ್ನಾಟಕ ಭಾಗಗಳನ್ನು, ನಮ್ಮ ಬೆಳಗಾವಿಯನ್ನು ಮತ್ತು ಸುತ್ತಮುತ್ತಲ ಪ್ರದೇಶವನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕೆಂದು ಹೇಳುವುದಕ್ಕೆ ಇವರೇನೂ Communist ಗಳ China ದಲ್ಲಿ ಇದ್ದಾರೋ ಅಥವಾ ಅಮೇರಿಕಾ ರೀತಿಯ ಅಧ್ಯಕ್ಷೀಯ ಮಾದರಿಯ ಸರ್ಕಾರದಲ್ಲಿ ಇದ್ದಾರೋ ಎಂದು ನಾನು ಕೇಳಬಯಸುತ್ತೇನೆ. ಇಲ್ಲಿ ಚುನಾಯಿತ ಸರ್ಕಾರ ಇದೆ. ಕರ್ನಾಟಕಕ್ಕೆ ಮಹಾರಾಷ್ಟ್ರಕ್ಕೆ ಎಷ್ಟು ಹಕ್ಕಿದೆಯೋ, ಮಹಾರಾಷ್ಟ್ರಕ್ಕೆ ಯಾವ ರೀತಿಯ ಎಲ್ಲಾ ಸವಲತ್ತುಗಳನ್ನು ಪಡೆಯುವ ಹಕ್ಕಿದೆಯೋ, ಅದೇ ರೀತಿ ಇದು elected Government. ಮೈಸೂರು ರಾಜ್ಯದಿಂದ ಕರ್ನಾಟಕ ರಾಜ್ಯ ಆಗುವವರೆಗೆ ಅನೇಕ ಕಾಲಘಟ್ಟಗಳಲ್ಲಿ ಬೆಳೆದು ಬಂದಿರುವಂತಹ ಕರ್ನಾಟಕಕ್ಕೆ ತನ್ನನ್ನು ತಾನು ಆಳ್ವಿಕೆ ಮಾಡಿಕೊಳ್ಳುವಂತಹ ಭಾರತ ಸಂವಿಧಾನಕ್ಕೆ ಭಾರತ ಸರ್ಕಾರದ ಎದುರು ತನ್ನ ಹಕ್ಕುಗಳಿಗಾಗಿ ಹೋರಾಟ ಮಾಡುವಂತಹ ಇಚ್ಛಾಶಕ್ತಿಯೂ ಇದೆ. ಬದ್ಧತೆಯೂ ಇದೆ. ಈ ಹಿನ್ನೆಲೆಯಲ್ಲಿ ನಾವು ಅವರ ರೀತಿ ಪುಂಡಾಟಿಕೆ ಮಾಡುವುದನ್ನು ನಾವು ಸಮರ್ಥನೆ ಮಾಡುವುದಿಲ್ಲ. ಇವತ್ತು ನಾನು ಕೆಲವೊಂದು ವಿಚಾರಗಳನ್ನು ಹೇಳಬೇಕಾಗುತ್ತದೆ. ಮಹಾರಾಷ್ಟ್ರಕ್ಕೆ ನೆನಪು ಮಾಡಿಕೊಡುತ್ತೇನೆ. ಭಾರತ ದೇಶದ ಮೇಲೆ ಮೊಘಲರು ಅನೇಕ ಶತಮಾನಗಳ ಕಾಲ ಧಾಳಿ ಮಾಡಿದಾಗ ಔರಂಗಜೇಬ್, ಸಿಕಂದರ್ ನಂತಹ ಮತಾಂಧ ಕ್ರೂರಿಗಳು ಒಂದು ಜನಾಂಗವನ್ನೇ ಹತ ಮಾಡಿರುವ ಜಮ್ಮು ಕಾಶ್ಮೀರದ ವಿಚಾರವನ್ನು ನಾವು

ನೋಡುತ್ತೇವೆ. ಇವತ್ತು ಹಿಂದು ಹೃದಯ ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರನ್ನು ದೇವರ ರೀತಿಯಲ್ಲಿ ಪ್ರತಿಯೊಬ್ಬರು ಈ ಭಾರತವನ್ನು ಪ್ರೀತಿಸುವವರು ನಾವು. ಇದನ್ನು ಗೌರವಿಸುತ್ತೇವೆ. ಪ್ರೀತಿಸುತ್ತೇವೆ. ಅಂತಹ ಶಿವಾಜಿ ಮಹಾರಾಜರನ್ನು ನಿಜವಾಗಿಯೂ ಒಬ್ಬ ಐಕಾನ್ ಎಂದು ಭಾವಿಸುವುದಾದರೆ ಅಂತಹ ಶಿವಾಜಿ ಮಹಾರಾಜರ ಪುತ್ರರಿಗೆ ಮತಾಂತರ ಮಾಡುವಂತೆ ಔರಂಗಜೇಬ್ ಹಿಂಸೆ ಕೊಟ್ಟಾಗ ಆ ರಾಜರಾಯರು ಏನು ಕರ್ನಾಟಕಕ್ಕೆ ಬಂದು ಇಡೀ ಆ ಭಾಗದಲ್ಲಿದಂತಹ ಅನೇಕ ಪುರುಷ ರಾಜರು ಹೆದರುತ್ತಾರೆ. ಆದರೆ, ಕರ್ನಾಟಕದ ಕೆಳದಿಯ ಸಾಮ್ರಾಜ್ಯದ ಕೆಳದಿ ಚೆನ್ನಮ್ಮಾಜಿಯವರು ಅಂತಹ ಸವಾಲನ್ನು ಸ್ವೀಕಾರ ಮಾಡಿ, ಶಿವಾಜಿಯ ಪುತ್ರ ರಾಜರಾಯರಿಗೆ ಆಶ್ರಯವನ್ನು ಕೊಟ್ಟಿದ್ದು ಮಾತ್ರವಲ್ಲ. ಔರಂಗಜೇಬ್ ಮತ್ತು ಹೈದರಾಲಿಯ ಜೊತೆ ಯುದ್ಧಗಳನ್ನು ಮಾಡಿ, 263 ವರ್ಷಗಳ ಸಾಮ್ರಾಜ್ಯವನ್ನು ಅನೇಕ ವೀರಾಮ್ಮಾಜಿ ಮತ್ತು ಕೆಳದಿ ಚೆನ್ನಮ್ಮಾಜಿಯನ್ನು ನಾನು ವಿಶೇಷವಾಗಿ ಉಲ್ಲೇಖ ಮಾಡುತ್ತೇನೆ. ಬೆಳವಡಿ ಮಲ್ಲಮ್ಮನವರು ಇರಬಹುದು. ಇಂತಹ ವೀರಮಾತೆಯರು ಯುದ್ಧ ಮಾಡಿ ಭೂಮಿಯನ್ನು ರಕ್ಷಣೆ ಮಾಡಿದ್ದಾರೆ. ನಾವು ತಮಗೆ ಗೌರವ ಕೊಟ್ಟಿದ್ದೇವೆ. ಆಶ್ರಯ ಕೊಟ್ಟಿದ್ದೇವೆ. ರಕ್ಷಣೆ ಕೊಟ್ಟಿದ್ದೇವೆ. ಆದ್ದರಿಂದ, ಇತಿಹಾಸವನ್ನು ಮರೆಯಬಾರದು. ಈ ಉಲ್ಲೇಖ ಏಕೆ ಮಾಡುತ್ತಿದ್ದೇನೆಂದರೆ, ಇವತ್ತು ಪ್ರೀತಿಯಿಂದ ಗೆಲ್ಲಬೇಕು. ಶಾಂತಿಯಿಂದ ಗೆಲ್ಲಬೇಕು. ನದಿ ನಂದು, ಗಾಳಿ ನಂದು, ಆಕಾಶ ನಂದು, ಭೂಮಿ ನಂದು ಎಂದು ಹೇಳಿದರೆ ಇದಕ್ಕೆ ಯಾವುದೇ ಇತ್ಯರ್ಥ ಸಿಗುವುದಿಲ್ಲ. ನಾವು ಅಂತಿಮವಾಗಿ ನಮಗೇನೂ ಪರಿಹಾರ ಉಳಿದಿದೆ. ಕೋರ್ಟುಗಳು, ಆಯೋಗಗಳು. ತಾವೇ ಕೇಳಿದ್ದೀರಿ. ಈಗಾಗಲೇ ಮಹಾಜನ್ ಆಯೋಗ ಮಾಡಿರುವ ಬಗ್ಗೆ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಉಲ್ಲೇಖ ಮಾಡಿದ್ದಾರೆ. ಆವತ್ತು ಆ ಒಂದು ಆಯೋಗ ರಚನೆಯಾದರೆ ಯಾವುದೇ ತೀರ್ಮಾನ ಬಂದರೂ ನಾವು ಒಪ್ಪಿಕೊಳ್ಳುತ್ತೇವೆ ಎಂದು ಇವತ್ತು ಮಹಾಜನ್ ವರದಿ ಜಾರಿಯಾದರೆ ನಮಗೇನೂ ಪೂರ್ಣ ಸಿಹಿ ಇಲ್ಲ. ಪೂರ್ಣ ಖುಷಿ ಇಲ್ಲ. ಒಂದಷ್ಟು ನಮ್ಮ ಗ್ರಾಮಗಳು ನಮ್ಮ ಜನತೆ ಇರುವಂತಹ ಪ್ರದೇಶಗಳು ಕೂಡ ವ್ಯತಿರಿಕ್ತವಾಗುತ್ತವೆ. ಆ ಕಹಿಯನ್ನು, ಆ ವಿಷವನ್ನು ನಾವು ಇವತ್ತು ಸ್ವೀಕಾರ ಮಾಡುವುದಿಲ್ಲವೇ. ಇವರ ಉದ್ದೇಶ ಸರಿ ಇಲ್ಲ. ಭಾವನಾತ್ಮಕವಾಗಿ ಭಾವೋದ್ವೇಗಕ್ಕೆ ಒಳಗಾದರೆ ಇಲ್ಲಿ ಯಾರು ಅಂಜುವವರು ಇಲ್ಲ. ಅದನ್ನು ಕೇಳಿಸಿಕೊಳ್ಳುವವರು ಇಲ್ಲ. ಯಾವ ಕೇಂದ್ರಾಡಳಿತ ಪ್ರದೇಶ ಮಾಡಬೇಕಾದರೆ ಮತ್ತೆ ರಾಜ್ಯಗಳನ್ನು ಏಕೆ ಪುನರ್ ವಿಂಗಡನೆ ಮಾಡಬೇಕಾಗಿತ್ತು? ಸರ್ದಾರ್ ವಲ್ಲಭಾಯ್ ಪಟೇಲ್ ಜೀ ಅಂತಹವರು

ಕಬ್ಬಿಣದ ಮನುಷ್ಯ ಎಂದು ಅಂತಹ ರಾಜ ಮಹಾರಾಜರುಗಳನ್ನೇ ಬಗ್ಗಿಸಿದ್ದೇವೆ. ಅನೇಕ ಜುನಾಗಡ್ ಕರಾಚಿಗೆ ಹೋದಂತಹ ಪ್ರದೇಶಗಳನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಗೋವಾವನ್ನು ವಿಮೋಚನೆ ಮಾಡಿದ್ದೇವೆ. ಪೋರ್ಚ್‌ಗೀಸ್‌ರನ್ನು ಒಡೆದು ಹೊಡಿಸಿದ್ದೇವೆ. ಅವರ ಕನಸು ಮನಸ್ಸಿನಲ್ಲಿಯೂ ಬೆಳಗಾವಿ ನಮಗೆ ಸಿಗುತ್ತದೆ ಎನ್ನುವುದು ಆಗಿರಲಿ. ಕರ್ನಾಟಕ ತನ್ನ ಹಕ್ಕನ್ನು ಬಿಟ್ಟುಕೊಡುತ್ತದೆ ಎನ್ನುವ ಯಾವುದಾದರೂ ದುಃಸ್ವಪ್ನ ಇದ್ದರೆ ಕೈಬಿಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಮತ್ತೇ ಈ ಸದನದಲ್ಲಿ ಅವರೇನೂ ಕೇಂದ್ರಾಡಳಿತ ಪ್ರದೇಶವಾಗಬೇಕೆಂದು ನಿರ್ಣಯ ಮಾಡುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ವಿರೋಧಿ ನಿರ್ಣಯವಾಗಿದೆ ಮತ್ತು ಈ ಒಂದು ಬಾಂಧವ್ಯ ಏನಿದೆ, ನೆರೆಹೊರೆಯ ರಾಜ್ಯಗಳೊಟ್ಟಿಗೆ ಸಮಾನವಾಗಿ ಬದುಕುವಂತಹ ಒಂದು ಇಷ್ಟಕ್ಕೆ ವಿರೋಧವಾಗಿದೆ. ಸಂವಿಧಾನದ ಆಶಯಕ್ಕೆ ವಿರೋಧವಾಗಿದೆ. ಆದಕಾರಣ ಇಂತಹ ಒಂದು ನಿರ್ಣಯವನ್ನು ಅತ್ಯಂತ ಕಠಿಣವಾದ ಶಬ್ಧಗಳಲ್ಲಿ ನಾನು ಖಂಡಿಸುತ್ತೇನೆ ಮತ್ತು ಆ ನಿರ್ಣಯಕ್ಕೆ ಧಿಕ್ಕಾರವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ಈ ಭಾಗದವರಾಗಿದ್ದಾರೆ. ತುಂಬಾ ಓದಿಕೊಂಡವರಾಗಿದ್ದಾರೆ. ವಿಶೇಷವಾಗಿ ನೀರಾವರಿ ವಿಚಾರದಲ್ಲಿ, ಗಡಿ ವಿಚಾರಗಳಲ್ಲಿ ಅನೇಕ ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳುವಂತಹ ಪ್ರಬುದ್ಧರು ಇದ್ದಾರೆ. ಅವರ ದೊಡ್ಡ ಶಕ್ತಿ ಏನೇಂದರೆ, ಅವರು ಸಿಟ್ಟು ಮಾಡಿಕೊಳ್ಳುವುದಿಲ್ಲ. ರಾಜಕಾರಣದಲ್ಲಿ ಬಹಳ ದೊಡ್ಡ ಅಸ್ತ್ರ ಸಂಯಮ. ಅದು weakness ಅಲ್ಲ. ಅವರು ಎಲ್ಲಿ ಮಾತನಾಡಬೇಕು. ಹೇಗೆ ಮಾತನಾಡಬೇಕು. ಆ ನಿಟ್ಟಿನಲ್ಲಿ ಅವರು ಮಾತನಾಡುತ್ತಿದ್ದಾರೆ. ಹಾಗೆಯೇ ಪ್ರತಿಪಕ್ಷಗಳು ಎಲ್ಲಾ ರೀತಿಯ ಬೆಂಬಲವನ್ನು ಸರ್ಕಾರಕ್ಕೆ, ನಮ್ಮ ಮುಖ್ಯಮಂತ್ರಿಗಳಿಗೆ ಏನು ವ್ಯಕ್ತಪಡಿಸಿದ್ದಾರೆ. ಖಂಡಿತವಾಗಿಯೂ ಯಾವಾಗ ಯಾವಾಗ ಸಾಧ್ಯತೆ ಇದೆ. ಎಲ್ಲೆಲ್ಲಿ ಅವಶ್ಯಕತೆ ಇದೆ. ಪ್ರತಿ ಪಕ್ಷಗಳನ್ನು ನಾವು ಕರೆದುಕೊಂಡು ಹೋಗುವಂತಹದ್ದು. ಅವರ ಬೆಂಬಲವನ್ನು ತೆಗೆದುಕೊಳ್ಳುವಂತಹದನ್ನು ಮಾಡುತ್ತೇವೆ. ಹೌದು. ನಮ್ಮ ಪಾರ್ಟಿಯೂ ಅಲ್ಲಿ ಇದೆ. ಕಾಂಗ್ರೆಸ್ ಪಾರ್ಟಿಯೂ ಅಲ್ಲಿ ಇದೆ. ಈಗ ಶರತ್ ಪವಾರ್ ಜೀ ಎನ್ನುವಂತಹ ಹಿರಿಯರ ಬಗ್ಗೆ ಉಲ್ಲೇಖ ಮಾಡಿದ್ದೇವೆ. ತುಂಬಾ ವಿಷಾದ. ಅಂತಹ ಹಿರಿಯರು ದಾರಿ ತೋರಿಸಬೇಕಾದಂತಹವರು ಕೂಡ ಇವತ್ತು ಓಟಿಗೋಸ್ಕರ, ಓಟಿನ appeasement ಗೋಸ್ಕರ ಇಲ್ಲಿ ಅನೇಕರು ಪ್ರತಿಯೊಂದು ಪಕ್ಷದಲ್ಲಿಯೂ ಕೂಡ ಯಾರು local ನಲ್ಲಿ appease ಮಾಡುತ್ತಾರೆ. ನೆಲ, ಜಲ, ಭಾಷೆಯ ವಿಚಾರಗಳು ಬಂದಾಗ ಅವರಿಗೆ ತಿಳಿ ಹೇಳುವಂತಹ ಅಥವಾ ಆಯಾಯ

ಪಕ್ಷಗಳ ಬದ್ಧತೆಯನ್ನು ಅವರ ಪಕ್ಷದ ವೇದಿಕೆಗಳಲ್ಲಿಯೂ ಕೂಡ ತೋರಿಸುವಂತಹ ಅವಶ್ಯಕತೆ ಖಂಡಿತ ಇದರಿಂದ ಪೂರಕವಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಿ ಎಂದು ಹೇಳುತ್ತಾ, ಈ ಒಂದು ಬೆಳಗಾವಿಯ ಅಧಿವೇಶನದಲ್ಲಿ ನಮ್ಮ ಆಸ್ತಿತ್ವವನ್ನು, ನಮ್ಮ ಆಸ್ಮಿತೆಯನ್ನು ಸಾಬೀತು ಮಾಡುವುದಕ್ಕೋಸ್ಕರ ಈ ಸುವರ್ಣಸೌಧವನ್ನು ಕಟ್ಟಿರುವುದು. ಏಕೆಂದರೆ, ಲಾಭ ನೋಡಅಲ್ಲ. ಲಾಭ ನೋಡಿದಿದ್ದರೆ ಮಧ್ಯ ಕರ್ನಾಟಕದಲ್ಲಿ ಕಟ್ಟಬೇಕಾಗಿತ್ತು. ಇವತ್ತು ದೂರದ ಪ್ರಶ್ನೆ ಅಲ್ಲ. ಭಾವನಾತ್ಮಕವಾಗಿ ಬೆಳಗಾವಿಯ ಜನತೆ ಎಷ್ಟು ಕಷ್ಟದಲ್ಲಿ ಇದ್ದಾರೆ. ಅವರಿಗೆ ತೊಂದರೆ ಕೊಡುವಂತಹದ್ದು. ಶಾಂತಿ ಕದಡುವಂತಹದ್ದು, ಈ business ಗೆ, ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟು ಮಾಡುವಂತಹದ್ದು, ನಾಗರೀಕ ಸಮಾಜ ಒಪ್ಪುವಂತಹ ಮಾತಲ್ಲ. ಇನ್ನೊಮ್ಮೆ ಈ ರೀತಿಯ ಒಂದು ಕಾನೂನನ್ನು ಕೈಗೆತ್ತಿಕೊಂಡರೆ ನಾವು ಭಕ್ತಿಯಿಂದ ಹೇಳುತ್ತೇವೆ. ಬೇಡಪ್ಪಾ, ನಾವೆಲ್ಲಾ ಭಾರತೀಯರು ಚೆನ್ನಾಗಿ ಬದುಕೋಣ. ನಿಮ್ಮ ಅವಶ್ಯಕತೆ ನಮಗಿದೆ. ನಮ್ಮ ಅವಶ್ಯಕತೆ ನಿಮಗಿದೆ. ಆದಾದ ಮೇಲೆ ಶಕ್ತಿಯಿಂದ ಹೇಳುತ್ತೇವೆ. ತಾವು ಕಾನೂನನ್ನು ಕೈಗೆತ್ತಿಕೊಂಡರೆ ನಾವು ತಮ್ಮ ಕೈಯನ್ನು ಹಿಡಿಯುತ್ತೇವೆ. ಹೋರಾಟಗಾರರು ಹಿಡಿಯುತ್ತಾರೆ. ಹಾಗೆಯೇ ಯಾವುದೋ ಒಬ್ಬ ಜನ ಪ್ರತಿನಿಧಿ ಕೂಡ ಯಾವುದೇ ಪಾರ್ಟಿಗೆ ಸೇರಿರಲಿ. ಕರ್ನಾಟಕದ ಪ್ರತಿಯೊಬ್ಬ ಕನ್ನಡಿಗರನ್ನು ಪ್ರತಿನಿಧಿಸುವಂತಹ ಪ್ರತಿಯೊಬ್ಬ ಜನಪ್ರತಿನಿಧಿ ತಮ್ಮ ಕೈಯನ್ನು ಆ ಕಾನೂನನ್ನು ಕೈಗೆತ್ತಿಕೊಳ್ಳುವುದಕ್ಕೆ ತಡೆಯುತ್ತೇವೆ. ಮೂರನೆಯದಾಗಿ ಯುಕ್ತಿಯಿಂದ ಎಂದು ಹೇಳಿದರೆ ಕಾನೂನು ಎಲ್ಲರಿಗಿಂತ ದೊಡ್ಡದು. ಸಂವಿಧಾನ ಎಲ್ಲರಿಗಿಂತ ದೊಡ್ಡದು. ಎಲ್ಲದಕ್ಕೂ ಪರಿಹಾರ ಅಲ್ಲಿಂದಲೇ ಸಿಗಬೇಕು. ನಾವು ಎಷ್ಟೇ ಬೊಬ್ಬೆ ಹೊಡೆದರೂ ಈ ದೇಶದಲ್ಲಿ ಆಯೋಗ ರಚನೆ ಮಾಡಿದ್ದಾರೆ. ಮಹಾಜನ್ ವರದಿ ಪ್ರಕಾರ ತಾವೇ ಮಾಡಿದ್ದೀರಿ. ಮತ್ತೊಮ್ಮೆ ಹೇಳುತ್ತೇವೆ. ದಯಮಾಡಿ, ತಾವು ಆ ಒಂದು ಮಹಾಜನ್ ವರದಿಯ ಅಂತಿಮ ತೀರ್ಪನ್ನು ಒಪ್ಪಿಕೊಂಡು ಸಾಮರಸ್ಯದಿಂದ ಬಗೆಹರಿಸಿಕೊಂಡರೆ ಬಗೆಹರಿಸಿಕೊಳ್ಳಬಹುದು ಅಥವಾ ಇನ್ನು 100 ವರ್ಷ ಹೋರಾಟ ಮಾಡಿದರೂ ಈ ನೆಲದಲ್ಲಿ ಹುಟ್ಟುವ ಪ್ರತಿಯೊಂದು ಮಗುವು ಕೂಡ ಕರ್ನಾಟಕದ ಈ ಒಂದು ಗಡಿಯನ್ನು, ನೆಲವನ್ನು, ಜಲವನ್ನು ರಕ್ಷಣೆ ಮಾಡುವುದಕ್ಕೆ ಬದ್ಧವಾಗಿರುತ್ತಾರೆ. ಆ ಕನಸನ್ನು ದುಃಸ್ವಪ್ನವನ್ನು ಕೈಬಿಡಿ ಎನ್ನುವ ಮಾತನ್ನು ಹೇಳಿ ಮತ್ತೊಮ್ಮೆ ಸಂಧಾನಕ್ಕೆ ಬನ್ನಿ. ಸಂಯಮದಿಂದ ಬನ್ನಿ. ಇದನ್ನು ಬಗೆಹರಿಸಿಕೊಳ್ಳೋಣ. ನಾನು ಕೊನೆಯದಾಗಿ ಹೇಳುವುದು ಇಷ್ಟೆ. ನಮ್ಮ ಸರ್ಕಾರ ಬೆಳಗಾವಿಯ ಸುತ್ತಮುತ್ತ ಏನು ನಮ್ಮ ಗಡಿ ಪ್ರದೇಶಗಳ

ಅಭಿವೃದ್ಧಿ. ಅಲ್ಲಿನ ಜನತೆಗೆ ಆ ಒಂದು feeling ಹೋಗಬೇಕು. ಯಾವುದೇ ಸರ್ಕಾರ ಬರಲಿ. ಇಲ್ಲಿ ಬರುವ ಪ್ರತಿಯೊಂದು ಸರ್ಕಾರ ಆ ಭಾಗಗಳನ್ನು ಸರ್ವತೋಮುಖವಾಗಿ ಅಭಿವೃದ್ಧಿ ಮಾಡಿ. ಆ ಜನತೆಗೆ ಬೇಕಾದಂತಹ ಎಲ್ಲಾ ಕನ್ನಡದ ವಾತಾವರಣವನ್ನು ಕಟ್ಟಿಕೊಡಬೇಕು. ಕನ್ನಡದ ಶಾಲೆಗಳು, ಕನ್ನಡ ಭಾಷೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಈ ಎಲ್ಲಾ ರಂಗಗಳನ್ನು ಸರ್ವತೋಮುಖ ಅಭಿವೃದ್ಧಿ ಮಾಡುವ ಮೂಲಕ ಕನ್ನಡದ ವಾತಾವರಣವನ್ನು ಮೂಡಿಸುವ ಮೂಲಕ, ಗಟ್ಟಿಗೊಳಿಸುವ ಮೂಲಕ ಮತ್ತೊಮ್ಮೆ ಈ ಗಡಿ ಭಾಗದ ಜನತೆ ಏನೇನು ಸಂಕಷ್ಟಕ್ಕೊಳಗಾಗಿದ್ದಾರೆ. ತನ್ನ ತಾಯಿ ನೆಲದ ರಕ್ಷಣೆಗಾಗಿ ಅನೇಕ ಗಡಿ ಭಾಗದ ಜನ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅಲ್ಲೊಂದು strike ಆದರೆ ಅವರಿಗೆ ಆವತ್ತಿನ ದಿನ ಜೀವನ ಇರುವುದಿಲ್ಲ. ಆದರೆ, ಈ ನೋವುಗಳ ನಡುವೆಯೂ ಕೂಡ ನಾಡು-ನುಡಿಗೋಸ್ಕರ ಅವರೇನೂ ತ್ಯಾಗ ಮಾಡುತ್ತಿದ್ದಾರೆ. ಆ ತ್ಯಾಗವನ್ನು ಸ್ಮರಣೆ ಮಾಡುತ್ತಾ ಈ ಸರ್ಕಾರ ಗಡಿಯ ರಕ್ಷಣೆಗೆ ನೂರಕ್ಕೆ ನೂರು ಬದ್ಧವಾಗಿದೆ ಎಂದು ಹೇಳಿ ನಾನು ಈ ಒಂದು debate ನಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದ ಹೇಳಿ ನನ್ನ ಮಾತಿಗೆ ವಿರಾಮ ಹೇಳುತ್ತೇನೆ.

(ಮುಂದು)

(1215)27-12-2022(04-30)bsd-gr

**ಶ್ರೀ ಪ್ರತಾಪ್‌ಸಿಂಹ ನಾಯಕ್ .ಕೆ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

ಈ ಸಾರ್ವಜನಿಕ ಮಹತ್ವವುಳ್ಳ ಚರ್ಚೆ ಪ್ರತಿಪಕ್ಷದ ಕಡೆಯಿಂದ ಪ್ರಾರಂಭವಾಗಿದ್ದರೂ, ಮೂಲಭೂತವಾಗಿ ಇಡೀ ಕರ್ನಾಟಕದ ಆರೂವರೆ ಕೋಟಿ ಜನ ಮತ್ತು ಅವರುಗಳ ಪ್ರತಿನಿಧಿಗಳಾಗಿ ಈ ಸದನಲ್ಲಿರುವ ಪ್ರತಿಯೊಬ್ಬರ ಭಾವನೆ ಮೂಲಭೂತವಾಗಿ ಒಂದೇ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ನಾಡು, ನುಡಿ, ಜಲದ ಬಗ್ಗೆ ಬಂದಾಗ ಸಹಜವಾಗಿ ಅದು ತಕ್ಷಣವಾಗಿ ಭಾವನೆಗಳನ್ನು ಮೂಡಿಸುವಂತಹ ಮತ್ತು ನಮ್ಮ ಇತಿಹಾಸದ ಜೊತೆ ಅಥವಾ ಜನಜೀವನದ ಜೊತೆಗೆ ಬೆಸೆದುಕೊಂಡಿರುವಂತಹ ನಮ್ಮ ಅಸ್ತಿತ್ವದ ಸಂಗತಿ. ಭಾಷಾವಾರು ಪ್ರಾಂತ್ಯದ ರಚನೆಯಾಗಿರುವುದೇ

ಮೂಲಭೂತವಾಗಿ ಈ ಕಾರಣಕ್ಕೋಸ್ಕರ. ನಮ್ಮದೇ ಆದ ಸಂಸ್ಕೃತಿಯ ಹಿನ್ನೆಲೆ, ಐತಿಹಾಸಿಕ ಹಿನ್ನೆಲೆಗಳು ಉಳಿಯಬೇಕು, ಬೆಳೆಯಬೇಕು ಮತ್ತು ಅದರ ಬಗ್ಗೆ ನಮ್ಮಲ್ಲಿರುವ ಅಭಿಮಾನ ಸದಾ ಜಾಗೃತವಾಗಿರಬೇಕು ಎಂದು ಹೇಳುವ ಹಿನ್ನೆಲೆಯಲ್ಲಿ ಈ ಭಾಷಾವಾರು ಪ್ರಾಂತದ ರಚನೆಯಾಗಿದೆ. ಸಂವಿಧಾನದ ಅಡಿಯಲ್ಲಿ ಒಕ್ಕೂಟದ ವ್ಯವಸ್ಥೆಯಲ್ಲಿ ಕೆಲಸ ಮಾಡುವ ನಾವೆಲ್ಲರೂ, ಬಹುಶಃ ಈ ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಪ್ರತಿಯೊಬ್ಬರು ಈ ಸ್ವತಂತ್ರ್ಯ ಭಾರತದ ಕಲ್ಪನೆಯ ಜೊತೆಗೆ "ನಾವೆಲ್ಲರೂ ಒಂದು" ಎಂದು ಹೇಳುವ ಭಾವನೆಯ ಕಾರಣಕ್ಕೋಸ್ಕರ ಈ ದೇಶದ ಸ್ವಾತಂತ್ರ್ಯವನ್ನು ನಮ್ಮ ಹಕ್ಕಾಗಿ ಪಡೆದುಕೊಂಡಿದ್ದೇವೆ. ಅದರ ನಂತರ ಸಂವಿಧಾನವನ್ನು ರಚನೆ ಮಾಡಿ, ಅದರ ಅಡಿಯಲ್ಲಿ ಒಕ್ಕೂಟದ ವ್ಯವಸ್ಥೆ ಸುಲಲಿತವಾಗಿ, ಎಲ್ಲರ ಭಾವನೆಗಳಿಗೆ, ಎಲ್ಲರ ಅಭಿಪ್ರಾಯಗಳಿಗೆ ಮನ್ನಣೆಯನ್ನು ಕೊಡುತ್ತಾ, ಒಂದರ್ಥದಲ್ಲಿ ನಾವೆಲ್ಲ ಒಂದು ಎಂದು ಹೇಳುವ ಭಾವನೆಯ ಸೂತ್ರವೇ ಸಂವಿಧಾನ ಮತ್ತು ಒಕ್ಕೂಟದ ವ್ಯವಸ್ಥೆಯಾಗಿದೆ. ಇಲ್ಲಿ ಚರ್ಚೆ ಮಾಡಿದಾಗ ಎಲ್ಲರ ಬಾಯಲ್ಲಿ ಮಹಾರಾಷ್ಟ್ರ-ಕರ್ನಾಟಕದ ಗಡಿಯ ಪ್ರಶ್ನೆ ಬಂದಾಗ ಸಹಜವಾದ ನಿರ್ಧಾರ ತೆಗೆದುಕೊಳ್ಳುವ ಘಟ್ಟವೇ ಮಹಾಜನ ವರದಿ. ಯಾವುದೇ ಸಮಸ್ಯೆಗಳು ಬಂದಾಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದ ಅಡಿಯಲ್ಲಿ ಎರಡು ರೀತಿಯಲ್ಲಿ ಪರಿಹಾರ ಮಾಡಬಹುದು. ಒಂದು ಕುಳಿತು ಮಾತನಾಡುವುದು ಮತ್ತು ಕೋರ್ಟಿಗೆ ಹೋಗುವುದು. ಆ ಅರ್ಥದಲ್ಲಿ ನಮ್ಮ ಸಂವಿಧಾನದಲ್ಲಿ ಇದನ್ನೆಲ್ಲಾ ಯೋಚನೆ ಮಾಡಿ Article ೩ ಅನ್ನು ಸೇರಿಸಿದ್ದಾರೆ. ಇಂತಹ ಸಮಸ್ಯೆಗಳು ಬಂದಾಗ, ಆ ಸಮಸ್ಯೆಯನ್ನು ಇತ್ಯರ್ಥ್ಯ ಮಾಡುವ ವೇದಿಕೆ ಯಾವುದೆಂದು ನಮ್ಮ ಸಂವಿಧಾನ ಜನಕರು, ಹಿರಿಯರು ಯೋಚನೆ ಮಾಡಿ ವೇದಿಕೆ ಸೃಷ್ಟಿ ಮಾಡಿದ್ದಾರೆ. ಆ ದೃಷ್ಟಿಯಲ್ಲಿ ಈ ಸಮಸ್ಯೆಯನ್ನು ಪರಿಹರಿಸುವ ಹಿನ್ನೆಲೆಯಲ್ಲಿ ಚರ್ಚೆ ಮಾಡಬೇಕು. ವಿಶೇಷವಾಗಿ ಇವತ್ತು ಅದರ ಪ್ರಸ್ತಾವ ಆಯಿತು. ಮಹಾಜನ ಆಯೋಗ ಏಕೆ ಆಯಿತು ಎಂದು ನೋಡಿದಾಗ ನಮಗಿಂತ ಹೆಚ್ಚು ಮಹಾರಾಷ್ಟ್ರದವರು ಒತ್ತಾಯ ಮಾಡಿದವರು. ಮಹಾರಾಷ್ಟ್ರದ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವಿ.ಪಿ. ನಾಯಕ್ ರವರು ಒತ್ತಾಯ ಮಾಡಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಮಹಾಜನ ಆಯೋಗ ಮಾಡಿರುವಂತಹದ್ದಾಗಿದೆ. ಇವತ್ತು ನಮಗೆ ಬೇಕೋ, ಬೇಡವೋ, ನಾವು ಒಪ್ಪುತ್ತೇವೋ, ಒಪ್ಪುವುದಿಲ್ಲವೋ ಎಂಬುದರ ಮೇಲೆ ಆಯೋಗದ ವರದಿ ನಿರ್ಧಾರವಾಗುವುದಿಲ್ಲ. ಎಲ್ಲವೂ ನಮಗೆ ಬೇಕಾದಂತೆ ಮಹಾಜನ ಆಯೋಗದ ವರದಿ ಇದೆ ಎಂದಿಲ್ಲ. ಮೊನ್ನೆ ಪತ್ರಿಕೆಗಳಲ್ಲಿ ಈಗ ಮಹಾರಾಷ್ಟ್ರಕ್ಕೆ

ಸೇರಿರುವ ಗ್ರಾಮ ಪಂಚಾಯಿತಿಗಳಲ್ಲಿ ಕರ್ನಾಟಕದ ಜೊತೆ ಸೇರಬೇಕು ಎಂದು ನಿರ್ಣಯ ಮಾಡಿದ್ದಾರೆ ಎನ್ನುವ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಪ್ರತಿಯೊಂದನ್ನೂ ಆ ರೀತಿಯಲ್ಲಿಯೇ ಯೋಚನೆ ಮಾಡಿದರೆ ಯಾವುದೇ ಸಮಸ್ಯೆಗೆ ಪರಿಹಾರ ಎನ್ನುವುದು ಇಲ್ಲ. ಯಾವುದೇ ಒಂದು ವರದಿ ಅಥವಾ ನಿರ್ಣಯಕ್ಕೆ ಎರಡೂ ಕಡೆಯವರೂ ಒಪ್ಪಿದಾಗ ಮಾತ್ರ ಸಮಸ್ಯೆಗೆ ಪರಿಹಾರ. ಮಹಾರಾಷ್ಟ್ರ-ಕರ್ನಾಟಕ ಎಂದು ಹೇಳಿದಾಗ ದೇಶದ ಹೊರಗೆ ಇರುವ ಭಾಗಗಳಲ್ಲ, ಎಲ್ಲವೂ ದೇಶದ ಒಳಗೆ ಮತ್ತು ಸಂವಿಧಾನದ ಅಡಿಯಲ್ಲಿ ಇರುವ ಒಕ್ಕೂಟದ ವ್ಯವಸ್ಥೆಯಲ್ಲಿರುವ ಭಾಗಗಳಾಗಿವೆ. ಹಾಗಾಗಿ ಆಗಾಗ ಭಾವನೆಗಳನ್ನು ಪ್ರಚೋದಿಸಿ, ಯಾವುದೋ ಸ್ಥಾಪಿತ ಹಿತಾಸಕ್ತಿಗಳಿಗೋಸ್ಕರ, ರಾಜಕೀಯ ಲಾಭಗಳಿಗೋಸ್ಕರ, ಜನರ ಭಾವನೆಗಳ ಜೊತೆ ಚೆಲ್ಲಾಟವಾಡುವುದು ಸುಸಂಸ್ಕೃತ ಸಮಾಜದ ಲಕ್ಷಣವಲ್ಲ. ಭಾವನೆಗಳನ್ನು ಬಹಳಷ್ಟು ಬೇಗ ಮತ್ತು ವೇಗವಾಗಿ ಬಡಿದೆಬ್ಬಿಸಬಹುದು. ಜಾತಿ, ಮತ, ಗಡಿ, ಭಾಷೆಗಳ ಆಧಾರದ ಮೇಲೆ ಭಾವನೆಗಳನ್ನು ಎಬ್ಬಿಸುವುದು ದೊಡ್ಡದಲ್ಲ. ನಿಜವಾದ ಸಾಮರ್ಥ್ಯ ಎಂದರೆ ಅಂತಹ ಸಮಸ್ಯೆಗಳನ್ನು ಪರಿಹರಿಸಲು ನಾವು ಯಾವ ರೀತಿ ನಡೆದುಕೊಳ್ಳುತ್ತೇವೆ ಎಂಬುದಾಗಿದೆ. ಕರ್ನಾಟಕ ಬಹಳ ಸುಸಂಸ್ಕೃತವಾಗಿ, ಸಮಾಧಾನಚಿತ್ತದಿಂದ ಮತ್ತು ಶಾಂತತೆಯಿಂದ ಮಾತನಾಡುತ್ತಿದ್ದೇವೆ ಎಂದರೆ ನಾವು ದುರ್ಬಲರೆಂದು ಅಲ್ಲ. "ಮೃದು ನೀ ಕುಸುಮಾದಪಿ, ವಜ್ರ ನೀ ಕಠೋರ ನೀ" ಎಂದು ಹೇಳುವಂತೆ ಭಾವನೆಗಳನ್ನು ವ್ಯಕ್ತಪಡಿಸುವಾಗ ಸರಳವಾದ ಶಬ್ದಗಳಲ್ಲಿ ಮಾತನಾಡುತ್ತಿದ್ದೇವೆ ಎಂದಾಗ ನಮ್ಮ ಒಳಗಿನ ನಿರ್ಣಯದ ಬಗ್ಗೆ ಯಾರಲ್ಲಿಯೂ ಬೇರೆ ಭಾವನೆಗಳು ಇಲ್ಲ. ಈ ಹಿನ್ನಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ನಮ್ಮ ಸರ್ಕಾರ ಹಲವು ಬಾರಿ ಹೇಳಿದೆ. ಈ ಸಮಸ್ಯೆಯ ಇತಿಹಾಸವನ್ನು ಸ್ವಲ್ಪ ತೆಗೆದಾಗ, ಸಹಜವಾಗಿ ರಾಜಕೀಯ ಭಾಷೆಗಳನ್ನು ಮಾತನಾಡುವಾಗ triple engine ಎಂದು ಹೇಳುವುದು ಬರುತ್ತದೆ. ಈ ಸಮಸ್ಯೆ ಪ್ರಾರಂಭವಾದಾಗ triple engine ಕಾಂಗ್ರೆಸ್ ಪಕ್ಷವಾಗಿತ್ತು. ಆ ಸಮಸ್ಯೆ ಈಗ ಬರುವಾಗ triple engine ಬಿ.ಜೆ.ಪಿ., ಪಕ್ಷದ್ದಾಗಿದೆ. ಹಾಗೆಂದು ಬಿ.ಜೆ.ಪಿ., ಇದೆ, ಅವರದ್ದು ಇದೆ, ಇವರದ್ದು ಇದೆ ಎಂದು ಹೇಳುವಂತಹದ್ದು ನಡೆಯುವಾಗ ಖಂಡಿತ ಪ್ರತಿಪಕ್ಷದವರು ಸೇರಿದಂತೆ ಎಲ್ಲರ ಭಾವನೆ ಒಂದೇ ಆಗಿದೆ. ಮಹಾಜನ ಆಯೋಗದ ವರದಿಯೇ ಅಂತಿಮವಾಗಿದೆ. ಮತ್ತೆ ಪುನಃ ಅದರಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ. ಕರ್ನಾಟಕದ ಯಾವುದೇ ಒಂದು ಭಾಗವನ್ನು ಬಿಟ್ಟುಕೊಡುವ ಪ್ರಶ್ನೆಯೂ ಇಲ್ಲ ಎಂದು ಹೇಳುವುದರ ಬಗ್ಗೆ ಎರಡು ಪ್ರಶ್ನೆಗಳು ನಮ್ಮ ಸದನದಲ್ಲಿ ಇಲ್ಲ. ಎಲ್ಲೋ ಒಂದು ಕಡೆ ಗಲಾಟೆ

ಎಬ್ಬಿಸುವ, ಸಮಾಜದಲ್ಲಿ ಅಶಾಂತಿಯನ್ನು ನಿರ್ಮಿಸುವ..... ಅದೊಂದು minute minority ಆಗಿದ್ದು, ಬಹಳ ಸಣ್ಣದಾಗಿದೆ. ಅವರ ಬಗ್ಗೆ ಸರ್ಕಾರ ಬಹಳ ಎಚ್ಚರಿಕೆಯಿಂದ, ಎಲ್ಲೆಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಬೇಕೋ, ಅಲ್ಲಿ ತೆಗೆದುಕೊಳ್ಳಬೇಕು. ಸರಿಯಾದ ಸಂದೇಶವನ್ನು ಕೊಡಬೇಕು. ಆ ಹಿನ್ನಲೆಯಲ್ಲಿ ನಮ್ಮ ಸರ್ಕಾರ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ, ಎಲ್ಲರ ಅಭಿಪ್ರಾಯದಂತೆ ಬೇಕಾಗುವ ಕ್ರಮಗಳನ್ನು ಕೈಗೊಳ್ಳುತ್ತದೆ. ಅದರ ಜೊತೆಗೆ ಕೇಂದ್ರಕ್ಕೂ ಇಡೀ ಕರ್ನಾಟಕದ ಆರೂವರೆ ಕೋಟಿ ಜನರ ಭಾವನೆ ಒಂದೇ ಇದೆ ಎನ್ನುವ ಸಂದೇಶದ ರೀತಿಯಲ್ಲಿ ಮತ್ತು ಪ್ರತಿಪಕ್ಷದ ನಾಯಕರು ಪ್ರಸ್ತಾಪಿಸಿರುವಂತೆಯೇ ಇರುತ್ತದೆ. ಈಗಾಗಲೇ ಕೆಳಮನೆಯಲ್ಲಿ ನಿರ್ಣಯವನ್ನು ತೆಗೆದುಕೊಂಡು, ಮೇಲ್ಮನೆಯವರಾದ ನಮ್ಮ ನಿರ್ಣಯ ಇನ್ನೂ ಗಟ್ಟಿಯಾಗಿದೆ. ಮೇಲ್ಮನೆ ಸದಸ್ಯರ ಅನುಭವದ ಆಧಾರದ ಭಾವನೆಗಳು ಅದರಲ್ಲಿ ತುಂಬಿದೆ. ಖಂಡಿತವಾಗಿಯೂ ಕೇಂದ್ರ ಸರ್ಕಾರಕ್ಕೆ ಇಡೀ ಆರೂವರೆ ಕೋಟಿ ಕನ್ನಡಿಗರ ಭಾವನೆಯನ್ನು ಕಳುಹಿಸುವ ಈ ಸದನವೂ ಒಕ್ಕೊರಲಿನಿಂದ, ಒಂದೇ ಭಾವನೆಯ ಜೊತೆಗೆ ನಾವೆಲ್ಲರೂ ಒಗ್ಗಟ್ಟಿನಲ್ಲಿದ್ದೇವೆ ಮತ್ತು ನಮ್ಮ ಮನಸ್ಸಿನ ಭಾವನೆಗಳು ಏನು ಎಂದು ಮಹಾರಾಷ್ಟ್ರ ಮತ್ತು ಕೇಂದ್ರ ಸರ್ಕಾರಕ್ಕೂ ತಲುಪಿಸುವ ಹಿನ್ನಲೆಯಲ್ಲಿ ಈ ಭಾವನೆಗಳನ್ನು ಕಳುಹಿಸಬೇಕು ಎಂದು ಹೇಳುತ್ತೇನೆ. ಎಲ್ಲೋ ಒಂದು ಕಡೆ ಈ ರೀತಿಯ ಸಂಕುಚಿತ ಭಾವನೆಗಳು ಯಾವಾಗ ಹೆಚ್ಚು ಜಾಗೃತವಾಗುತ್ತವೆಂದರೆ, ನಮ್ಮೊಳಗೆ ಭಾರತ ನಮ್ಮದು ಎಂದು ಹೇಳುವಂತಹ ಭಾವನೆ ಕಡಿಮೆಯಾದಾಗ ಆಗುತ್ತದೆ. ಈ ರೀತಿಯಲ್ಲಿ ಯಾರೆಲ್ಲ ಸಣ್ಣ ಸಣ್ಣ ವಿಷಯಗಳನ್ನು ಎತ್ತಿಕೊಂಡು ಅವರ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಆ ರೀತಿ ಸ್ವರ ಎಬ್ಬಿಸುತ್ತಾರೆ.

(ಮುಂದು)

**(1216) 27.12.2022/4.40/ಹೆಚ್‌ವಿ:ಎಂಡಿ**

**ಶ್ರೀ ಪ್ರತಾಪ ಸಿಂಹ ನಾಯಕ್.ಕೆ (ಮುಂದು):**

ಸನ್ಮಾನ್ಯ ಸಭಾಪತಿಯವರೇ, ಸಣ್ಣಸಣ್ಣ ವಿಷಯಗಳ ಬಗ್ಗೆ ಕ್ಯಾತೆ ತೆಗೆದು, ತಮ್ಮ ಆಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಗೊಂದಲದ ಸ್ವರವನ್ನು ಎಬ್ಬಿಸುತ್ತಿರುವವರಿಗೆ, ನಾವು ಪ್ರತಿ ಸ್ವರವನ್ನು ಬೆರೆಸಬೇಕಾಗುತ್ತದೆ. ಯಾರು ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಅವರೆಲ್ಲರೂ ಅವರ ಜೊತೆಗಿದ್ದಾರೆ. ಕನ್ನಡ ಮಾತನಾಡುವವರೆಲ್ಲ ನಮ್ಮ ಜೊತೆಗಿದ್ದಾರೆ ಎನ್ನುವ ಭಾವನೆ ನಮಗಿಲ್ಲ. ನಾವು

ಆ ನಿಟ್ಟಿನಲ್ಲಿ ಯೋಚನೆ ಮಾಡುವುದೇ ಇಲ್ಲ. ನಾವೆಲ್ಲರೂ ಒಂದೇ; ನಾವು ಭಾರತೀಯರು ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತೇವೆ. ನಮ್ಮ ರಾಷ್ಟ್ರಕವಿ ಕು.ವೆಂ.ಪು.ರವರು;

**"ಜಯ ಭಾರತ ಜನನಿಯ ತನುಜಾತೆ,**
**ಜಯ ಹೇ ಕರ್ನಾಟಕ ಮಾತೆ!"**

ಎಂದು ಹೇಳಿದ್ದಾರೆ. ಕರ್ನಾಟಕ ಮಾತೆಯನ್ನು ಭಾರತ ಜನನಿಯ ತನುಜಾತೆ ಎಂದು ವರ್ಣಿಸಿದ್ದಾರೆ. ಭಾರತಕ್ಕೂ ಕರ್ನಾಟಕ್ಕೂ ಎರಡಕ್ಕೂ ನಮ್ಮ ಜಯ ಇದ್ದೇ ಇದೆ. ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿಯನ್ನು ಮಾಡಿರುವಂತಹ ಕನ್ನಡ ಕವಿಗಳಲ್ಲಿ ಒಬ್ಬರಾದ ಮಾನ್ಯ ಚಂದ್ರಶೇಖರ್ ಭಂಡಾರಿಯವರು;

**ಧರೆಗವತರಿಸಿದೆ ಸ್ವರ್ಗದ ಸ್ಪರ್ಧಿಯು**
**ಸುಂದರ ತಾಯ್ನೆಲವು ನಮ್ಮೀ ತಾಯ್ನೆಲವು;**
**ದೇವೀ ನಿನ್ನಯ ಸೊಬಗಿನ ಮಹಿಮೆಯ ಬಣ್ಣಿಸಲಸದಳವು ॥**

**ಹಲವು ಭಾಷೆ ನುಡಿ ಲಿಪಿಗಳ ತೋಟ**
**ವಿವಿಧ ಪಂಥ ಮತಗಳ ರಸದೂಟ;**
**ಕಾಣಲು ಕಾಮನಬಿಲ್ಲಿನ ನೋಟ**
**ಬಗೆಬಗೆ ಸಂಕುಲವು ನಮ್ಮೀ ತಾಯ್ನೆಲವು॥**

ಎಂದು ಹೇಳಿದ್ದಾರೆ. ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗುವ, ಎಲ್ಲರ ಜೊತೆಗೆ ಬದುಕಿನ ಸಾಮರಸ್ಯವನ್ನು ಹಂಚಿಕೊಳ್ಳುವಂತಹ ಮಣ್ಣಿನ ಗುಣ ಹೊಂದಿರುವ ಭಾರತೀಯರು ನಾವು. ಆದ್ದರಿಂದ ಸಂಕುಚಿತ ಭಾವನೆಗಳಿಗೆ ಅವಕಾಶವನ್ನು ಕೊಡಬಾರದು ಮತ್ತು ಸಮಸ್ಯೆಗಳನ್ನು ದೊಡ್ಡದು ಮಾಡಬಾರದು. ಅವರುಗಳು ಕರ್ನಾಟಕ-ಮಹಾರಾಷ್ಟ್ರ ಗಡಿಗೆ ಸಂಬಂಧಪಟ್ಟಂತೆ ಯಾವ ಒಂದು ನಿರ್ಣಯವಾಗಿದೆ, ಆ ನಿರ್ಣಯವನ್ನು ಒಪ್ಪುವುದಿಲ್ಲ; ಆಯೋಗಗಳು ನೀಡಿರುವಂತಹ ಶಿಫಾರಸ್ಸುಗಳು ಒಪ್ಪುವುದಿಲ್ಲ ಮತ್ತು ಕೋರ್ಟಿನ ತೀರ್ಪನ್ನು ಸಹ ಒಪ್ಪುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ರಾಜ್ಯದ ಆರೂವರೆ ಕೋಟಿ ಜನರ ಭಾವನೆ ಒಂದೇ; ನಾವೆಲ್ಲರೂ ಒಂದೇ ಎನ್ನುವಂತಹ ನಿರ್ಣಯ ಮತ್ತು ಸಂದೇಶ ಈ ಮನೆಯಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಉಪ ಸಭಾಪತಿಯವರು:–** ಈ ವಿಚಾರದ ಮೇಲಿನ ಚರ್ಚೆ ಮಧ್ಯಾಹ್ನ 3 ಗಂಟೆ 15 ನಿಮಿಷಗಳಿಗೆ ಪ್ರಾರಂಭವಾಗಿದೆ. ಈಗ ಸಮಯ 4 ಗಂಟೆ 40 ನಿಮಿಷಗಳಾಗಿವೆ. ಇನ್ನೂ 6 ಜನ ಸದಸ್ಯರುಗಳು ಮಾತನಾಡಲು ಹೆಸರುಗಳನ್ನು ಕೊಟ್ಟಿದ್ದಾರೆ. ಮುಂದೆ ಮಾತನಾಡುವಂತಹ ಮಾನ್ಯ ಸದಸ್ಯರುಗಳು ಸಮಯವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು.

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಿಯಮ 68ರಡಿಯಲ್ಲಿ ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದಕ್ಕೆ ಶಾಶ್ವತ ಪರಿಹಾರ ಎನ್ನುವುದರ ಬಗ್ಗೆ ಈ ಸದನದಲ್ಲಿ ಮಹತ್ವವಾಗಿರುವ ಚರ್ಚೆ ನಡೆಯುತ್ತಿದೆ ಇದರ ಬಗ್ಗೆ ಮಾತನಾಡಲು ನನಗೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಬೆಳಗಾವಿಯ ಮಣ್ಣಿನಲ್ಲಿ ನಿಂತು ಕರ್ನಾಟಕ ರಾಜ್ಯದ ಬಗ್ಗೆ ಮಾತನಾಡುವುದಕ್ಕೆ ಬಹಳ ಹೆಮ್ಮೆ ಅನಿಸುತ್ತಿದೆ. ನಮ್ಮ ರಾಜ್ಯ ರಚನೆಯಾದ ನಂತರ ನಮ್ಮ ಕರ್ನಾಟಕ "ಸುವರ್ಣ ಕರ್ನಾಟಕ"ವಾಗಿ ಎಲ್ಲ ರಂಗಗಳಲ್ಲಿ ತನ್ನದೇ ಆಗಿರುವ ಯಶೋಗಾಥೆಯನ್ನು ಮಾಡಿರುವ ಹಿನ್ನೆಲೆಯಲ್ಲಿ ಇಂದು ಇಡೀ ವಿಶ್ವದಲ್ಲಿ ಮತ್ತು ಇಡೀ ದೇಶದಲ್ಲಿ ಕರ್ನಾಟಕಕ್ಕೆ ಒಂದು ಮಾನ್ಯತೆ ಮತ್ತು ಗೌರವ ದೊರಕಿದೆ. 1956ನೇ ಇಸವಿಯಲ್ಲಿ State Reorganization Commission ಶಿಫಾರಸ್ಸಿನ ಮೇರೆಗೆ State Reorganization Act ಅನ್ನು ಮಾಡಿ ಈ ಭಾಗವನ್ನು ಕರ್ನಾಟಕದ ಭೂ ಪ್ರದೇಶಕ್ಕೆ ಸೇರಿಸಲಾಯಿತು. ಈ ಭಾಗದ ಎಲ್ಲ ಜನರ ಅಭಿಪ್ರಾಯವನ್ನು ಅವತ್ತಿನ ಆ ಸಮಿತಿ ಪಡೆದುಕೊಂಡಿತ್ತು. ನಂತರ ಮಹಾರಾಷ್ಟ್ರದಲ್ಲಿರುವ ಕೇಲವೇ ಕೆಲವು ರಾಜಕಾರಣಿಗಳ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಗಡಿ ವಿವಾದವನ್ನು ಸೃಷ್ಟಿ ಮಾಡಿ, ಆ ವಿವಾದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ ಒಂದು ಆಯೋಗವನ್ನು ರಚನೆ ಮಾಡುವ ಮೂಲಕ ಗೊಂದಲವನ್ನು ಸೃಷ್ಟಿ ಮಾಡುವಂತಹ ಕೆಲಸವನ್ನು ಮಹಾರಾಷ್ಟ್ರ ಮಾಡಿತ್ತು. ಕರ್ನಾಟಕ ರಾಜ್ಯದಲ್ಲಿ ಯಾವ ರೀತಿಯಲ್ಲಿ ಸಂಗೊಳ್ಳಿ ರಾಯಣ್ಣನಿಗೆ ಗೌರವವನ್ನು ನೀಡುತ್ತೇವೆ, ಅದೇ ರೀತಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜ್‌ಗೂ ಗೌರವವನ್ನು ಕೊಡುತ್ತಿದ್ದೇವೆ. ಹೇಗೆ ತಾಯಿ ಅಹಲ್ಯಬಾಯಿಗೆ ಗೌರವವನ್ನು ಕೊಡುತ್ತೇವೆ; ಅಷ್ಟೇ ಪ್ರಮಾಣದಲ್ಲಿ ಅಥವಾ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಈ ಭಾಗದ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮನಿಗೂ ನೀಡುತ್ತೇವೆ. ಮಹಾ ಪುರುಷರ ವಿಚಾರ ಬಂದಾಗ ಯಾವುದೇ ಗಡಿ, ರಾಜ್ಯ ಜಿಲ್ಲೆಗಳ ವಿಚಾರಗಳು ಬರುತ್ತಿರಲಿಲ್ಲ. ಅಷ್ಟೊಂದು ಅನ್ಯೋನ್ಯವಾಗಿ ಸ್ವಾಭಿಮಾನದಿಂದ ಇದಂತಹ ಈ ದೇಶದ ಜನರಲ್ಲಿ, ಕೇವಲ ರಾಜಕಾರಣದ ಭಾಗವನ್ನಾಗಿ ಗಡಿ ವಿಚಾರವನ್ನು ಸೃಷ್ಟಿ

ಮಾಡಿ ಅದಕ್ಕೆ ನಿರಂತರವಾಗಿ ಪುಷ್ಠಿಯನ್ನು ಕೊಡುತ್ತಾ, ಅದರ ಹೆಸರಿನಲ್ಲಿ ರಾಜಕೀಯ ಸಂಘಟನೆಯನ್ನು ಮಾಡಿ 1970ನೇ ಇಸವಿಯಲ್ಲಿ ರಾಜಕೀಯ ಅಸ್ತಿತ್ವಕ್ಕೋಸ್ಕರ ಎಂ.ಇ.ಎಸ್., ಅನ್ನು ಚುನಾವಣೆಗೆ ತರುವಂತಹ ಕೆಲಸವನ್ನು ಮಾಡಿದರು. ಅದರಿಂದಾಗಿ ಬೆಳಗಾವಿ ಭಾಗದ 5 ವಿಧಾನಸಭಾ ಕ್ಷೇತ್ರದಲ್ಲಿ ಎಂ.ಇ.ಎಸ್.,ನ ಅಭ್ಯರ್ಥಿಗಳು ಆಯ್ಕೆಗೊಂಡರು. ಈ ಸಮಸ್ಯೆಯನ್ನು ಹೇಗಾದರು ಮಾಡಿ ಜೀವಂತವಾಗಿಡಬೇಕು, ಇದನ್ನು ನಿರಂತರವಾಗಿ ರಾಜಕೀಯ ದುರುದ್ದೇಶಕ್ಕಾಗಿ ಮಹಾರಾಷ್ಟ್ರದವರು ಬಳಸಬೇಕೆನ್ನುವ ಪ್ರಯತ್ನವನ್ನು ಮಾಡಿ, ಈ ಸಮಸ್ಯೆಯನ್ನು ಸುಪ್ರೀಂ ಕೋರ್ಟಿನವರೆಗೂ ತೆಗೆದುಕೊಂಡು ಹೋಗಿದ್ದಾರೆ. ನಮ್ಮ ರಾಜ್ಯದ ಗಡಿ ಭಾಗದ ಹಳ್ಳಿಯಲ್ಲಿರುವ ಜನರನ್ನು ಮಾತನಾಡಿಸಿದರೆ, ಅವರೆಲ್ಲರೂ ಪ್ರೀತಿಯಿಂದ "ನಾವು ಕರ್ನಾಟಕದ ಭಾಗವಾಗಿರಬೇಕಾಗಿತ್ತು, ನಾವು ಕರ್ನಾಟಕದಲ್ಲಿರಬೇಕಾಗಿತ್ತು ಮತ್ತು ನಾವು ಕನ್ನಡಿಗರಾಗಿರಬೇಕಾಗಿತ್ತು" ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ, ಅವರುಗಳು ಕರ್ನಾಟಕವನ್ನು ಅಷ್ಟೊಂದು ಪ್ರೀತಿಸುತ್ತಾರೆ. ಈಗಾಗಲೇ ನಾನು ಹೇಳಿದಂತೆ ಇದರಲ್ಲಿ ನಿರಂತರವಾಗಿ ರಾಜಕಾರಣದ ದುರುದ್ದೇಶವನ್ನು ಬಿಟ್ಟರೇ, ಬೇರೆ ಯಾವ ಉದ್ದೇಶವೂ ಇಲ್ಲ. ರಾಜಕಾರಣದ ಆಸ್ತಿತ್ವನ್ನು ಉಳಿಸಿಕೊಳ್ಳಬೇಕು ಮತ್ತು ಗೊಂದಲವನ್ನು ಸೃಷ್ಟಿ ಮಾಡುವುದರ ಮೂಲಕ ಮುಂಬರುವ ಚುನಾವಣೆಗಳಲ್ಲಿ ಅದರ ಲಾಭವನ್ನು ಪಡೆದುಕೊಳ್ಳಬೇಕೆನ್ನುವ ಉದ್ದೇಶವನ್ನು ಬಿಟ್ಟರೇ ಬೇರೆ ಯಾವುದೇ ಹಿನ್ನೆಲೆಯಲ್ಲಿ ಈ ಗಡಿ ವಿವಾದ ಸೃಷ್ಟಿಯಾಗಿಲ್ಲ. ನಾವು ನಿರಂತರವಾಗಿ ಮಹಾರಾಷ್ಟ್ರದ ಗಡಿ ಕ್ಯಾತೆಯ ವಿರುದ್ಧ ವಿವಿಧ ಹಂತಗಳಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದೇವೆ ಮತ್ತು ಎಲ್ಲ ಹೋರಾಟಗಳಲ್ಲಿ ತಕ್ಕ ಉತ್ತರವನ್ನು ಕೊಟ್ಟಿದ್ದೇವೆ.

**ಉಪ ಸಭಾಪತಿಯವರು:-** ಮಾನ್ಯ ನವೀನ್‌ರವರೇ, ಸಮಯದ ಬಗ್ಗೆ ಗಮನವಿರಲಿ. ಬೇಗ ತಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಕೆ.ಎಸ್.ನವೀನ್:-** ಸನ್ಮಾನ್ಯ ಸಭಾಪತಿಯವರೇ, ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಇಲ್ಲಿ ಎರಡು ವಿಚಾರಗಳ ಬಗ್ಗೆ ನಾವು ಉತ್ತರವನ್ನು ಕೊಡಬೇಕಾಗಿದೆ. ಉತ್ತರ ಕೊಡದಿದ್ದರೆ ನಮ್ಮ ಮಾತಿಗೆ ಅರ್ಥವಿರುವುದಿಲ್ಲ. ಒಂದು ಅಂಕಿಅಂಶವನ್ನು ನಾನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಮಹಾರಾಷ್ಟ್ರ ರಾಜ್ಯ ರಚನೆಯಾಗಿ, ಈ ತಗಾದೆ ಪ್ರಾರಂಭವಾದ ನಂತರ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷದ 17 ಜನ ಮುಖ್ಯಮಂತ್ರಿಗಳು ಹಾಗೂ ಕಾಂಗ್ರೆಸ್ ಬೆಂಬಲಿತ ಒಬ್ಬ ಮುಖ್ಯಮಂತ್ರಿ ಹೀಗೆ ಒಟ್ಟು 18 ಜನ ಕಾಂಗ್ರೆಸ್ ಮುಖ್ಯಮಂತ್ರಿಗಳು ಆಡಳಿತವನ್ನು ನಡೆಸಿದ್ದಾರೆ. ಅದೇ

ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ 14 ಜನ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳು ಹಾಗೂ ಇಬ್ಬರು ಕಾಂಗ್ರೆಸ್ ಬೆಂಬಲಿತ ಮುಖ್ಯಮಂತ್ರಿಗಳು ಆಳ್ವಿಕೆಯನ್ನು ನಡೆಸಿದ್ದಾರೆ.

(ಮುಂದುವರಿದಿದೆ)

(1217) 27.12.2022 4.50 ಪಿಕೆ:ಎಂಡಿ

**ಶ್ರೀ ಕೆ.ಎಸ್. ನವೀನ್ (ಮುಂದು):**

ಮಾನ್ಯ ಸಭಾಪತಿಯವರೇ, ಇವತ್ತಿಗೆ ಸರಿಯಾಗಿ 179ನೇ ದಿವಸಗಳ ಹಿಂದೆ ಬಿಜೆಪಿ ಮತ್ತು ಶಿವಸೇನೆಯ ಇನ್ನೊಂದು ಪಕ್ಷದ ಒಂದು ಗುಂಪಿನ ಜೊತೆ ಸೇರಿ ಒಂದು ಸರ್ಕಾರ ರಚನೆ ಆಗಿದೆ. 60 ವರ್ಷಗಳಿಂದ ಇರುವಂತಹ ಸಮಸ್ಯೆಯನ್ನು ಆ 179 ದಿವಸದ ಹಿಂದೆ ರಚನೆಯಾದ ಸರ್ಕಾರ ಬಗೆಹರಿಸಲಿಲ್ಲ; ಡಬ್ಬಲ್ ಇಂಜಿನ್, ತ್ರಿಬ್ಬಲ್ ಇಂಜಿನ್ ಸರ್ಕಾರ ಇದ್ದಾಗಲೂ ಮಾಡುವುದಕ್ಕಾಗಲಿಲ್ಲ ಎಂದು ನಮ್ಮ ಸ್ನೇಹಿತರು ಹೇಳಿದರು. ನಾವು ಇದನ್ನು ಖಂಡಿತವಾಗಿ ಒಪ್ಪುವುದಕ್ಕೆ ಆಗುವುದಿಲ್ಲ. ಆದರೆ, ಪ್ರಯತ್ನವಂತೂ ಖಂಡಿತವಾಗಿ ನಡೆಯುತ್ತಿದೆ. ಈಗಾಗಲೇ ನಮ್ಮ ಕೇಂದ್ರದ ಗೃಹ ಮಂತ್ರಿಗಳು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಸಿ ಅವರಿಗೆ ಇದರ ಬಗ್ಗೆ ಗಟ್ಟಿ ಧ್ವನಿಯಲ್ಲಿ ತಿಳಿಹೇಳುವಂತಹ ಕೆಲಸ ಮಾಡಿದ್ದಾರೆ. ಇನ್ನು ಮುಂದೆ ಸಮಾಜದಲ್ಲಿ ಅಶಾಂತಿಯ ವಾತಾವರಣ ನಿರ್ಮಾಣವಾಗುವಂತಹ ಕೆಲಸ ಮಾಡಬಾರದು ಎಂಬುದಾಗಿ ಹೇಳಿದ್ದಾರೆ. ಯಾರೋ ಒಬ್ಬ ಅಲ್ಲಿನ ಸಂಸದ, ನಾವು ಕರ್ನಾಟಕಕ್ಕೆ ಹರಿದು ಹೋಗುವ ನೀರನ್ನು ತಡೆಯುತ್ತೇವೆ ಎಂದು ಹೇಳಿದ್ದಾರೆ. ಇದನ್ನು ನಾವೆಲ್ಲರೂ ಸರ್ವಾನುಮತದಿಂದ ಖಂಡಿಸಬೇಕಾಗುತ್ತದೆ. ಅವರೇನಾದರೂ ಕೊಯ್ನಾ ಡ್ಯಾಮ್‌ನಿಂದ ನೀರು ಬಿಡುವುದನ್ನು ನಿಲ್ಲಿಸಿದರೆ ಅದರ ಆಘಾತ ಮಹಾರಾಷ್ಟ್ರಕ್ಕೆ ಆಗುತ್ತದೆ. ಇದನ್ನು ಅವರು ಅರಿತುಕೊಂಡು ಮಾತನಾಡುತ್ತಿಲ್ಲ. ಮಹಾರಾಷ್ಟ್ರದ ಕಡೆಯಿಂದ ಯಾರು ಈ ರೀತಿಯಾಗಿ ಹೇಳಿಕೆಯನ್ನು ಕೊಡುತ್ತಿದ್ದಾರೋ ಅದನ್ನು ಖಂಡಿಸುವ ಕೆಲಸ ಮಾಡಬೇಕು. ಈಗಾಗಲೇ ಮುಖ್ಯಮಂತ್ರಿಗಳು ಹೇಳಿದಂತೆ, ನಾವು ನಮ್ಮ ರಾಜ್ಯದ ಒಂದೇ ಒಂದು ಇಂಚು ಜಾಗವನ್ನು ಬೇರೆಯವರಿಗೆ ಕೊಡುವುದಕ್ಕೆ ಸಿದ್ಧವಿಲ್ಲ. 1956ನೇ ಇಸವಿಯಲ್ಲಿ ಏಕೀಕರಣದ ಕಮಿಷನ್ ಏನು ರಚನೆಯಾಯಿತೋ ಅದರ ಆಧಾರದ ಮೇಲೆ ಸಂಪೂರ್ಣವಾಗಿ ಕರ್ನಾಟಕ ಯಥಾವತ್ತಾಗಿ,

ಯಥಾಸ್ಥಿತಿಯಲ್ಲಿ ಇರುತ್ತದೆ. ಇದಕ್ಕೆ ಈ ಒಂದು ಸದನ ಸಂಪೂರ್ಣವಾಗಿ ಒಮ್ಮತದ ನಿರ್ಣಯವನ್ನು ಮಾಡಬೇಕು. ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಸದನದಲ್ಲಿ ಇಲ್ಲ. ಅವರು ಇದ್ದಿದ್ದರೆ ಒಂದು ಹಾಡು ಹಾಡುತ್ತಿದ್ದರು. ಇವತ್ತು ನಾನು 2 ಸಾಲಿನ ಹಾಡನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇದು ಡಾ:ರಾಜ್‌ಕುಮಾರ್‌ರವರು ಹೇಳಿರುವಂತಹ ಹಾಡು ಇದಾಗಿದೆ.

"ನಾವಾಡುವ ನುಡಿಯೇ ಕನ್ನಡ ನುಡಿ, ನಾವಿರುವ ತಾಣವೇ ಗಂಧದ ಗುಡಿ

ಅಂದದ ಗುಡಿ, ಚೆಂದದ ಗುಡಿ, ಚೆಂದದ ಗುಡಿ ಶ್ರೀಗಂಧದ ಗುಡಿ, ಆಹ ಹಾ ಹಾ"

ಬೆಳಗಾವಿ ನಮ್ಮದು, ಬೆಳಗಾವಿ ನಮ್ಮದು, ಬೆಳಗಾವಿ ನಮ್ಮದು. ಧನ್ಯವಾದಗಳು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಒಂದು ಗಡಿ ಭಾಗದಿಂದ ಬಂದಿದ್ದೇನೆ. ನನ್ನ ತಾಲ್ಲೂಕು ಪಕ್ಕದ ತಮಿಳುನಾಡಿನ ಥಳಿ ಪ್ರದೇಶಕ್ಕೆ ಹೊಂದಿಕೊಂಡಿರುವಂಥದ್ದಾಗಿದೆ. ಅಲ್ಲಿ ಬಹುತೇಕ ಕನ್ನಡಿಗರಿದ್ದಾರೆ. ಅವರ ವ್ಯಾಪಾರ ವ್ಯವಹಾರವೆಲ್ಲಾ ಕರ್ನಾಟಕದ ಮೇಲೆಯೇ ಅವಲಂಬಿತವಾಗಿದೆ. ಅಲ್ಲಿನ ಶಾಸಕರೂ ಕೂಡ ಕನ್ನಡಿಗರು. ಹೊಸೂರಿನ ಶಾಸಕರೂ ಕೂಡ ಕನ್ನಡಿಗರೇ ಆಗಿದ್ದಾರೆ. ಆದರೆ ಬೆಳಗಾವಿಯ ಗಡಿ ವಿವಾದ ಮುಗಿದು ಹೋದ ಅಧ್ಯಾಯ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಸ್ವಾತಂತ್ರ್ಯ ಬಂದು ಈಗಾಗಲೇ 75 ವರ್ಷವಾಗಿದೆ. ನಮ್ಮ ರಾಜ್ಯದ ಸುತ್ತ ಇರುವ ರಾಜ್ಯಗಳ ಜೊತೆ ಒಂದಲ್ಲ ಒಂದು ರೀತಿಯ ವಿವಾದಗಳಿವೆ. ಇದು ನಮ್ಮ ದೌರ್ಭಾಗ್ಯ ಎಂದು ಕಾಣುತ್ತದೆ. ಪುಟ್ಟ ರಾಜ್ಯ ಗೋವಾ ಏನಿದೆ, ಅದು ಕುಡಿಯುವ ನೀರಿಗೆ ಸಂಬಂಧಪಟ್ಟ ಮಹದಾಯಿ ಯೋಜನೆಯ ವಿಷಯದಲ್ಲಿ ತಕರಾರು ಮಾಡುತ್ತದೆ. ಆ ಪುಟ್ಟ ರಾಜ್ಯದ ಮನವನ್ನೊಲಿಸಿ 10 ಟಿಎಂಸಿ ನೀರನ್ನು ಪಡೆಯಲು ಸಾಧ್ಯವಾಗದ ಪರಿಸ್ಥಿತಿ ಇದೆ. ಬೆಳಗಾವಿ ವಿಚಾರವಾಗಿ ಮಹಾರಾಷ್ಟ್ರದ ಜೊತೆ ಸತತವಾಗಿ, ನಿರಂತರವಾಗಿ ಸಮಸ್ಯೆ ಇದೆ. ಆಂಧ್ರ ಪ್ರದೇಶದ ಜೊತೆ ಕೃಷ್ಣಾ ನದಿ ನೀರಿನ ಹಂಚಿಕೆ ವಿಚಾರ ಮತ್ತು ತಮಿಳುನಾಡಿಗೆ ಸಂಬಂಧಪಟ್ಟಂತೆ ಕಾವೇರಿ ನದಿಯ ವಿವಾದ ಇದೆ. ಇದು ಆಗುವುದಿಲ್ಲ-ಹೋಗುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮೇಕೆದಾಟು ಕಟ್ಟುವುದಕ್ಕೆ ಅವರು ಅವಕಾಶ ಮಾಡಿಕೊಡುತ್ತಿಲ್ಲ. ಇದು ನಮ್ಮ ದೌರ್ಭಾಗ್ಯವೇ ಸರಿ. ಮೇಕೆದಾಟು ತಮಿಳುನಾಡಿನ ತುದಿಯಲ್ಲಿದೆ. ಅಲ್ಲಿ ನಾವು ಡ್ಯಾಂ ಕಟ್ಟಿದರೂ

ಅದರಿಂದ ನಮ್ಮ ಅಂತರ್ಜಲ ಕೂಡ ಹೆಚ್ಚಾಗುವುದಿಲ್ಲ, ವಿದ್ಯುತ್ ಸಿಗಬಹುದು. ಅಲ್ಲಿ ಡ್ಯಾಮ್ ಕಟ್ಟಿದ್ದರೆ, ಈ ಸಲ ಬಂದ ಮಳೆಯ ನೀರನ್ನು ಸಂಗ್ರಹ ಮಾಡಿ 5 ವರ್ಷದ ತನಕ ಹರಿಸಬಹುದಾಗಿತ್ತು. ನಮ್ಮ ದುಡ್ಡು, ನಮ್ಮ ನೆಲ ಎಲ್ಲವೂ ನಮ್ಮದೇ. ನಿಗದಿತವಾಗಿ, ಹೆಚ್ಚುವರಿಯಾಗಿ ನೀರು ಸಿಗುತ್ತದೆ, ವಿದ್ಯುತ್ ಸಿಗುತ್ತದೆ ಎಂದು ಅವರಿಗೆ ಹೇಳಿದರೂ ನಮ್ಮ ಮಾತನ್ನು ಕೇಳುವುದಿಲ್ಲ. ಇವೆಲ್ಲವೂ ರಾಜಕೀಯ ಕಾರಣಕ್ಕಾಗಿ ನಡೆಯುತ್ತದೆ. ಇದು ಯಾವುದೂ ಕೂಡ ಆಗುವುದಿಲ್ಲ ಎಂದು ಮಹಾರಾಷ್ಟ್ರದ ರಾಜಕಾರಣಿಗಳಿಗೂ ಗೊತ್ತು, ತಮಿಳುನಾಡಿನ ರಾಜಕಾರಣಿಗಳಿಗೂ ಗೊತ್ತು. ಬೆಳಗಾವಿ ಮಹಾನಗರ ಪಾಲಿಕೆಯ ಸದಸ್ಯರು, ನಿಪ್ಪಾಣಿ, ಅಥಣಿ, ಖಾನಾಪುರದಂತಹ ತಾಲ್ಲೂಕು ಪಂಚಾಯಿತಿಯ ನಿರ್ಣಯಗಳು ಮತ್ತು ನಾಲ್ಕೈದು ಜನ ಎಂಇಎಸ್ ಶಾಸಕರಿದ್ದಾಗಲೇ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸುವುದಕ್ಕೆ ಆಗಲಿಲ್ಲ. ಸ್ವಾತಂತ್ರ್ಯ ಬಂದು 75 ವರ್ಷ ಕಳೆದಿರುವುದರಿಂದ ಬೆಳಗಾವಿ ಕೊಡುವ ಪ್ರಶ್ನೆ ಬರುವುದಿಲ್ಲ. ನೀಲಗಿರಿ ಬೆಟ್ಟದಲ್ಲಿರುವ ಊಟಿ ಪ್ರದೇಶ ಏನಿದೆ ಅದು ಕನ್ನಡಮಯವಾಗಿರುವ ಪ್ರದೇಶ. ಸತ್ಯಮಂಗಲ ಇರಬಹುದು, ಮೆಟ್ಟುಪಾಳ್ಯ ಇರಬಹುದು ಅಥವಾ ಕೂನೂರು ಇರುಬಹುದು, ಅಲ್ಲಿ ಒಕ್ಕಲಿಗರು, ಕುರುಬರು ಮತ್ತು ಲಿಂಗಾಯಿತರ ಸಂಖ್ಯೆಯೇ ಜಾಸ್ತಿ ಇದೆ. ನಮ್ಮಲ್ಲಿ ಇವತ್ತಿಗೂ ನೆಂಟಸ್ತನದ ಸಂಬಂಧಗಳನ್ನು ಬೆಳೆಸುತ್ತಾರೆ. ನಮ್ಮ ಮಠಾಧೀಶರ, ಸ್ವಾಮೀಜಿಗಳ ಪ್ರಭಾವ ಅಲ್ಲಿದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ, ಆ ಪಕ್ಷದ ಮುಖ್ಯ ಮಂತ್ರಿಗಳು-ಈ ಪಕ್ಷದ ಮುಖ್ಯಮಂತ್ರಿಗಳು ಇಂತಿಷ್ಟು ವರ್ಷಗಳ ಕಾಲ ಅಧಿಕಾರ ನಡೆಸಿದರು ಎನ್ನುವ ಮಾತನ್ನು ಹೇಳಿದರು. ನಾನು ಆ ರಾಜಕೀಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನೆಲ-ಜಲ-ಭಾಷೆ ಬಗ್ಗೆ ಮೊದಲು ಕನ್ನಡಿಗರಿಗೆ ಸ್ವಲ್ಪ ನಿರಾಭಿಮಾನ ಇತ್ತೋ ಏನೋ ಗೊತ್ತಿಲ್ಲ. ಗೋಕಾಕ ಚಳುವಳಿ ಪ್ರಾರಂಭವಾದ ನಂತರ ಕನ್ನಡಿಗರಲ್ಲಿ ಸುಪ್ತ ಪ್ರಜ್ಞೆ ಜಾಗೃತವಾಗಿದೆ, ಕನ್ನಡಿಗರನ್ನು ಮಣಿಸುವುದು ಅಷ್ಟೊಂದು ಸುಲಭದ ಮಾತಲ್ಲ ಎನ್ನುವ ಸ್ಥಿತಿಗೆ ಬಂದಿದ್ದೇವೆ. ಈ ನಾಡಿನ ಜನ ಎಚ್ಚೆತ್ತುಕೊಂಡಿರುವುದನ್ನು ನೋಡುತ್ತಿದ್ದೇವೆ. ನಮ್ಮಲ್ಲಿ ಬದ್ಧತೆ, ಪ್ರದರ್ಶನ ಸರಿಯಾಗಿ ಆಗುತ್ತಿಲ್ಲ ಎಂದೆನಿಸುತ್ತಿದೆ. ರಾಜ್ಯದ ರಾಜಕಾರಣಿಗಳಲ್ಲಿ, ಅಧಿಕಾರಿಗಳಲ್ಲಿ ಬದ್ಧತೆ ಕಡಿಮೆ ಇದೆಯೇನೋ ಅನಿಸುತ್ತಿದೆ. ಮಾನ್ಯ ಸಭಾಪತಿಯವರೇ, ಹೊಸೂರು ಸಂಪೂರ್ಣವಾಗಿ ಕನ್ನಡ ಮತ್ತು ತೆಲುಗುಮಯವಾಗಿದೆ. ಅಲ್ಲಿನ ಶಾಸಕರಾದ ಪ್ರಕಾಶ್ ಎನ್ನುವವರು ಕನ್ನಡಿಗರೇ ಆಗಿದ್ದಾರೆ, ಡಿಎಂಕೆಯ ಕಾರ್ಯದರ್ಶಿ ಕೂಡ ಆಗಿದ್ದರು. ಹೊಸೂರಿನ ಮೂಲಕ ಬೆಂಗಳೂರಿನ ಸಂಪೂರ್ಣ

ಲಾಭವನ್ನು ತಮಿಳುನಾಡಿನವರು ತೆಗೆದುಕೊಳ್ಳುತ್ತಿದ್ದಾರೆ. ಹೊಸೂರನ್ನು ಕೈಗಾರಿಕಾ ವಲಯ ಎಂದು ಘೋಷಣೆ ಮಾಡಿದ್ದಾರೆ. ಅಲ್ಲಿ ಡ್ಯೂಟಿ ಫ್ರೀ, ರಿಜಿಸ್ಟ್ರೇಷನ್ ಸ್ಟ್ಯಾಂಪ್ ಡ್ಯೂಟಿ ಫ್ರೀ, ಅಲ್ಲಿನ ಅಗ್ಗದ ಪವರ್ ಕನ್ಸಮ್ಷನ್ ರೇಟ್ ಹೀಗೆ ಹತ್ತು-ಹಲವಾರು ಸೌಲಭ್ಯ ಕೊಟ್ಟು, ಬೆಂಗಳೂರಿನ ತಂತ್ರಜ್ಞಾನ, ಬೆಂಗಳೂರಿನ ಇಂಜಿನಿಯರ್ಸ್, ಮೇಧಾವಿಗಳನ್ನು ಬಳಸಿಕೊಳ್ಳುತ್ತಾರೆ. ಅವರು ಹೊಸೂರಿಗೆ ಕೆಲಸಕ್ಕೆ ಹೋಗುತ್ತಾರೆ ಮತ್ತು ಬೆಂಗಳೂರಿನಲ್ಲಿ ಬಂದು ತಂಗುತ್ತಾರೆ. ಅಲ್ಲಿನ ಸಂಪೂರ್ಣ ಲಾಭವನ್ನು ತಮಿಳುನಾಡು ಪಡೆಯುತ್ತಿದೆ. ದೇವನಹಳ್ಳಿ ಏರ್‌ಪೋರ್ಟ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಹೈದರಾಬಾದ್‌ಗೆ ಹೋಗುವ ರಸ್ತೆ ಅಲ್ಲಿ ಇರುವುದರಿಂದ ಈ ಏರ್‌ಪೋರ್ಟ್‌ನ ಲಾಭವನ್ನು ಕರ್ನಾಟಕದ ಜೊತೆಗೆ ಆಂಧ್ರಪ್ರದೇಶದವರು ಪಡೆಯುತ್ತಿದ್ದಾರೆ. ಅಲ್ಲಿನ ಕಿಯಾ ಫ್ಯಾಕ್ಟರಿ ಇರಬಹುದು ಅಥವಾ ಅನಂತಪುರ ಜಿಲ್ಲೆಯನ್ನೇನು ಕೈಗಾರಿಕಾ ವಲಯವೆಂದು ಘೋಷಣೆ ಮಾಡಿದ್ದಾರೋ ಅಲ್ಲಿ ಹತ್ತು-ಹಲವಾರು ಫ್ಯಾಕ್ಟರಿಗಳನ್ನು ತೆರೆದಿದ್ದಾರೆ. ಅನಂತಪುರಕ್ಕೆ ಹೈದರಾಬಾದ್ ಹತ್ತಿರವಲ್ಲ.

**ಉಪ ಸಭಾಪತಿಗಳು:-** ಮಾನ್ಯ ರವಿಯವರೇ ನಿಮ್ಮ ನಿಲುವು ಏನು ಎಂಬುದನ್ನು ಹೇಳಬಿಡಿ

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧ ಕಟ್ಟಿದ್ದು ಒಂದು ದಿಟ್ಟ ಹೆಜ್ಜೆಯಾಗಿದೆ. ಮಾನ್ಯ ಕುಮಾರಸ್ವಾಮಿಯವರು ಅಡಿಗಲ್ಲು ಹಾಕಿದರೂ, ಮಾನ್ಯ ಯಡಿಯೂರಪ್ಪನವರು ಅದನ್ನು ಕಂಪ್ಲೀಟ್ ಮಾಡಿದರು. ಇಂತಹ ನಿರ್ಣಾಯಕ ಅಭಿವೃದ್ಧಿ ಕೆಲಸಗಳು ಈ ಭಾಗದಲ್ಲಿ ಆಗಬೇಕಾಗಿತ್ತು. ಮಾನ್ಯ ತೇಜಸ್ವಿನಿಗೌಡರವರು ಹೇಳಿದ ಹಾಗೆ ಇಷ್ಟೊಂದು ವರ್ಷಗಳ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆಯಬೇಕಿತ್ತು. ಈ ಭಾಗದಲ್ಲಿ ಮರಾಠಿ ಮಾತನಾಡುವವರಿಗೆ ಈ ಇಶ್ಯೂ ಬೇಕಾಗಿಲ್ಲ; ಅದೇರೀತಿ ಕಾರವಾರ, ಬೀದರ್ ಭಾಗಗಳಲ್ಲಿರುವ ಮರಾಠಿಗರಿಗೆ ಈ ಇಶ್ಯೂ ಬೇಕಾಗಿಯೇ ಇಲ್ಲ; ಅವರ ಪಾಡಿಗೆ ಅವರು ನೆಮ್ಮದಿಯಾಗಿ ಇದ್ದಾರೆ. ಆದರೆ ಮಹಾರಾಷ್ಟ್ರದ ರಾಜಕಾರಣಿಗಳು ರಾಜಕೀಯದ ಫಲ ಪಡೆಯಲು ಇಂತಹ ವಿಷಯಗಳನ್ನು ಜೀವಂತವಾಗಿ ಇಟ್ಟುಕೊಳ್ಳುವಂತಹ ಕೆಲಸ ಮಾಡುತ್ತಾರೆ.

(ಮುಂದು . . .)

(1218) 27-12-2022 5.00 ಡಿಎಸ್-ಎಕೆ

**ಶ್ರೀ ಎಸ್.ರವಿ (ಮುಂದು):**

ನಾವು ಬೆಳಗಾವಿಯಲ್ಲಿ ಬೆಂಗಳೂರಿನ ಒತ್ತಡ ತಡೆಯುವುದಿಲ್ಲ, ಬೆಂಗಳೂರು ಈಗಾಗಲೇ ಜನಸಂಖ್ಯೆ ಸ್ಫೋಟದಿಂದ ಯಾವುದೇ ಕೈಗಾರಿಕೆಯಾಗಲಿ, ಕುಡಿಯುವ ನೀರು ಇರಬಹುದು, ಮೂಲಭೂತ ಸೌಕರ್ಯಗಳನ್ನು, ಆ ಟ್ರಾಫಿಕ್ ದಟ್ಟಣೆಯಿಂದ ಬೆಂಗಳೂರಿನಲ್ಲಿ ಮಾಡುವುದಕ್ಕಾಗುವುದಿಲ್ಲ. ಈ ಬೆಳಗಾವಿಯಂತಹ ಪ್ರದೇಶವನ್ನು ನಾವು ಕೇಂದ್ರೀಕೃತ ಮಾಡಿಕೊಂಡು ಅಭಿವೃದ್ಧಿಯನ್ನು ಮಾಡಬೇಕಾಗುತ್ತದೆ. ಯಾವ ರೀತಿ ತಮಿಳುನಾಡು ಹೊಸೂರು ಅನ್ನು ಕೇಂದ್ರೀಕೃತ ಮಾಡಿತೋ ಆ ರೀತಿಯಾಗಿ ಬೆಳಗಾವಿ ಜಿಲ್ಲೆಯ ಗಡಿ ಭಾಗವನ್ನು ನಾವು ಅಭಿವೃದ್ಧಿ ಮಾಡಿದರೆ ನಾವು ತಂದಂತಹ ವಿಚಾರದಲ್ಲಿ ನಿಧಾನಕ್ಕೆ ಕಾಲವೇ ಮರೆಸಿಬಿಡುತ್ತದೆ ಬೆಳಗಾವಿ ಜಿಲ್ಲೆಯ ಗಡಿ ಭಾಗದ ವಿವಾದವನ್ನು ಎಂದು ನಾನು ಹೇಳಬಯಸುತ್ತಿದ್ದೇನೆ. ಅಂತಹ ವಿಚಾರದಲ್ಲಿ ಬರತಕ್ಕಂಥ ಮುಂದಿನ ದಿನಗಳಲ್ಲಿ ದೂರದೃಷ್ಟಿಯನ್ನು ಉಳಿಸಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಏಕೆ ಹೋದರೋ ಏನೋ ಗೊತ್ತಿಲ್ಲ. ಅದು ಮುಗಿದು ಹೋದಂತಹ ಅಧ್ಯಾಯ. ಮಹಾಜನ್ ವರದಿ ಅನುಷ್ಠಾನ ಇನ್ನು ಆಗದಿರುವಂಥದ್ದು. ಅದು ಮುಗಿದು ಹೋದ ಅಧ್ಯಾಯ. ಇನ್ನು ಯಾವ್ಯಾವುದೋ ಹೇಗಿದೆಯೋ ಅದೇ ಯಥಾಸ್ಥಿತಿ ಇರುತ್ತದೆ. ನಮ್ಮ ರಾಜ್ಯಕ್ಕೆ ಯಾವುದಿದೆಯೋ ಅದೇ, ಅವರಿಗೆ ಯಾವುದಿದೆಯೋ ಅದೇ. ಜನ ನೆಮ್ಮದಿಯಾಗಿ ಇರುವುದಕ್ಕೆ ಬಿಡಬೇಕೇ ಹೊರತು, ಮಹಾಜನ್ ವರದಿಗೆ ಬನ್ನಿ, ಸಂಧಾನಕ್ಕೆ ಬನ್ನಿ, ಮಾತುಕತೆಗೆ ಬನ್ನಿ, ಕೇಂದ್ರ ಸರ್ಕಾರದ ಗೃಹ ಮಂತ್ರಿಗಳು ಕರೆದರು, ಮಾತುಕತೆಗೆ ಅವಕಾಶ ಇದೆ ಎನ್ನುವಂಥದ್ದನ್ನು ಮಹಾರಾಷ್ಟ್ರ ರಾಜ್ಯಕ್ಕೆ ಆ ಸಂದೇಶವನ್ನೇ ಕೊಡಬಾರದು. ಇನ್ನೇನು ಮಾತನಾಡುವುದಕ್ಕೆ ಇದೆ ಎಂದು ಹೇಳಬೇಕೇ ಹೊರತು ಮಾತುಕತೆಗೆ ಹೋಗಿ ಕುಳಿತುಕೊಳ್ಳಬಾರದಿತ್ತು ಎಂದು ನನಗನಿಸುತ್ತಿದೆ. ಎಲ್ಲರ ಅಭಿಪ್ರಾಯ ತೆಗೆದುಕೊಂಡು ಹೋಗಬೇಕಾಗಿತ್ತು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೂ ಅವಕಾಶವಿಲ್ಲ. ಸಂಸತ್ತೇ ನಿರ್ಣಾಯಕ ಎನ್ನುವ ಸಂದರ್ಭದಲ್ಲಿ ಇದು ಆಗುವುದಿಲ್ಲ, ಬರುವುದಿಲ್ಲ, ಇನ್ನು ಮಾತುಕತೆಗೆ ಹೋಗಿ ಏನು ಮಾಡಬಹುದಾಗಿತ್ತು? ಈ ವಿಚಾರದಲ್ಲಿ ನಾವೇನು ದಿಟ್ಟವಾದಂತಹ ನಿರ್ಣಯವನ್ನು ಮಂಡಿಸುತ್ತಿದ್ದಾರೆ ಆ ನಿರ್ಣಯಕ್ಕೆ ನಮ್ಮೆದೆಲ್ಲಾ ಬೆಂಬಲ ಇದೆ. ಅದರ ದೂರದೃಷ್ಟಿಯ ಫಲದಿಂದ ಮುಂದಿನ ದಿನಗಳಲ್ಲಿ

ಬೆಳಗಾವಿ ಭಾಗದ ಅಭಿವೃದ್ಧಿಗೆ ಹೆಚ್ಚಾಗಿ ಕನ್ನಡಿಗರು ಇಲ್ಲಿ ಬಂದು ಇರುವುದಕ್ಕೆ, ಸ್ಥಳೀಯ ಜನರು ಮರೆಯಬೇಕಾದಂತಹ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆಂದು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾನು ಒಂದು ವಿಚಾರವನ್ನು ಹೇಳಬಯಸುತ್ತಿದ್ದೇನೆ. ನಾವು ಮೇಲಿಂದ ಮೇಲೆ ಮಹಾಜನ್ ವರದಿಯನ್ನು ಒಪ್ಪಿಕೊಳ್ಳುತ್ತೇವೆಂದು ದಯವಿಟ್ಟು ಹೇಳಬಾರದು. ಮಹಾಜನ್ ವರದಿಯನ್ನು ಈಗಾಗಲೇ ನಾವು ಒಪ್ಪಿಕೊಂಡು ಮುಗಿದಿದೆ. ಆದರೆ ಮಹಾರಾಷ್ಟ್ರದವರು ಒಪ್ಪಿಕೊಳ್ಳಬೇಕಲ್ಲವೆ? ಮೇಲಿಂದ ಮೇಲೆ ನಾವು ಮಹಾಜನ್ ವರದಿಯನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದರೆ ಅದು ನನಗಂತೂ ಸರಿಯಾಗಿ ಕಾಣುತ್ತಿಲ್ಲ. ಮತ್ತೊಂದು ವಿಚಾರವೇನೆಂದರೆ, ಗಡಿ ಭಾಗದಲ್ಲಿ ಸುಮಾರು 38 ವರ್ಷಗಳಿಂದ ನಾನು ಆಯ್ಕೆಯಾಗಿ ಬರುತ್ತಿದ್ದೇನೆ. 1988 ರಿಂದ ಕರ್ನಾಟಕ ಮಹಾರಾಷ್ಟ್ರ ಗಡಿ ಪ್ರದೇಶದಿಂದ ನಾನು ಆಯ್ಕೆಯಾಗಿ ಬರುತ್ತಿದ್ದೇನೆ. ಅಲ್ಲಿ ಕರ್ನಾಟಕದ ಜನರು ನನ್ನ ಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದಾರೆ. ನಿಪ್ಪಾಣಿ, ಸದಲಗ, ಚಿಕ್ಕೋಡಿ, ಕಾಗವಾಡ, ಅಥಣಿಯಲ್ಲಿ ವಾಸ ಮಾಡುತ್ತಿದ್ದಾರೆ. ಈ ಎಲ್ಲಾ ಗಡಿ ಭಾಗದ ಕ್ಷೇತ್ರಗಳಲ್ಲಿ ಕರ್ನಾಟಕದ ಜನ ಮತ್ತು ಮಹಾರಾಷ್ಟ್ರ ಜನ ಎಂದು ನಮ್ಮಲ್ಲಿ ತಾರತಮ್ಯವಿಲ್ಲ. ಚುನಾವಣೆ ಬಂದಾಗ ನಾವೆಲ್ಲರೂ ಒಂದಾಗಿ ಯಾರು ಶಾಸಕರಾಗಿ ಆಯ್ಕೆಯಾಗಬೇಕೋ ಅವರನ್ನು ಆಯ್ಕೆ ಮಾಡಿಕೊಡುತ್ತಾರೆ. ಆ ದೃಷ್ಟಿಯಲ್ಲಿ ನಮ್ಮಲ್ಲಿ ಬೇರೆ ಬೇರೆ ವಿಚಾರಗಳಿಲ್ಲ. ನಮ್ಮ ಭಾಗದಲ್ಲಿ ವಿಶೇಷವಾಗಿ ಕರ್ನಾಟಕ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ಬಂದ ಮೇಲೆ ಗಡಿ ಭಾಗಗಳಲ್ಲಿ ಅಭಿವೃದ್ಧಿ ದೃಷ್ಟಿಯಿಂದ ಸಾಕಷ್ಟು ಶಾಲೆಗಳಿರಬಹುದು, ಹೊಸ ಶಾಲೆಗಳ ಕಟ್ಟಡ ಇರಬಹುದು, ನೀರಾವರಿ ಯೋಜನೆಗಳಿರಬಹುದು, ಈ ರೀತಿ ಸಾಕಷ್ಟು ಯೋಜನೆಗಳನ್ನು ಅವರು ಮಂಜೂರು ಮಾಡಿ ಅಭಿವೃದ್ಧಿಗೋಸ್ಕರ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ವಿಶೇಷವಾಗಿ ಹೇಳುವುದಾದರೆ, ಗಡಿ ಭಾಗಗಳಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಮಹಾರಾಷ್ಟ್ರ ಮತ್ತು ಕರ್ನಾಟಕದ ಎರಡು ಭಾಗಗಳಲ್ಲಿ ಸಕ್ಕರೆ ಕಾರ್ಖಾನೆಗಳಿವೆ. ಮಹಾರಾಷ್ಟ್ರದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳಿಗೆ ನಮ್ಮ ಕರ್ನಾಟಕದ ರೈತರು ಸದಸ್ಯರಾಗಿದ್ದಾರೆ. ಅಂದರೆ, Multi–State Co–operative Societies Act ಕೆಳಗೆ ನಾವು

ಸದಸ್ಯರಾಗಿದ್ದೇವೆ. ನಾವು 7,000 ರೈತರು ಇದ್ದರೆ ಮಹಾರಾಷ್ಟ್ರದಲ್ಲೂ 7,000 ರೈತರು ಇದ್ದಾರೆ. Multi-State Co-operative Societies Act ಕೆಳಗೆ ಸುಮಾರು ದತ್ತ ಕಾರ್ಖಾನೆ ಇರಬಹುದು, ಜವಾರಿ ಕಾರ್ಖಾನೆ ಇರಬಹುದು, ಗುರುದತ್ತ ಕಾರ್ಖಾನೆ ಇರಬಹುದು, ಕಾಗಳ ಸಕ್ಕರೆ ಕಾರ್ಖಾನೆ ಇರಬಹುದು, ನಾವೆಲ್ಲರೂ ಅಣ್ಣ-ತಮ್ಮಂದಿರ ರೀತಿಯಲ್ಲಿ ಅಲ್ಲೂ ಸದಸ್ಯರಾಗಿದ್ದೇವೆ, ಪ್ರತಿ ವರ್ಷ ನಾವು ಕಬ್ಬನ್ನು ಅಲ್ಲಿಗೂ ಕಳುಹಿಸುತ್ತೇವೆ. ಈ ವಿಷಯವನ್ನು ನಮ್ಮ ಗಡಿ ಭಾಗದಲ್ಲಿರುವಂತಹ ಜನರಿಗೆ ಇದ್ಯಾವ ವಿಷಯವೂ ಬೇಕಾಗಿಲ್ಲ. ನಾವು ಇವತ್ತು ಅಣ್ಣ-ತಮ್ಮಂದಿರ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದೇವೆ. ಗಡಿ ಅಭಿವೃದ್ಧಿಯಾಗಿಲ್ಲ ಎಂದು ರಾಜಕೀಯ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದಾರೆ. ಮೇಲಿಂದ ಮೇಲೆ ಗಡಿ ಅಭಿವೃದ್ಧಿಯಾಗಿಲ್ಲ ಎಂದು ಹೇಳಬೇಡಿ. ನಮ್ಮ ಭಾಗದಲ್ಲಿ ಗಡಿ ಅಭಿವೃದ್ಧಿಯಾಗಿದೆ. ನಾವು ಸಾಕಷ್ಟು ಜನ ಕೆಲಸ ಮಾಡಿದ್ದೇವೆ. ಮತ್ತೊಂದು ವಿಚಾರವೇನೆಂದರೆ, ಮಹಾರಾಷ್ಟ್ರದಿಂದ ಬರುವಂತಹ ಬಸ್ಸುಗಳಲ್ಲಿ ಕರ್ನಾಟಕದ ಪ್ರಯಾಣಿಕರು ಬರುತ್ತಾರಲ್ಲಾ, ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಪ್ರಯಾಣ ಮಾಡುತ್ತಾರಲ್ಲಾ ಆಗ ಜನರೇ ಮಾತನಾಡುತ್ತಾರೆ. ನಾವು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದಿದ್ದೇವೆ, ಎಷ್ಟೊಂದು ರಸ್ತೆಗಳು ಸುಧಾರಣೆಗಳಾಗಿವೆ ಎಂದು ಹೇಳುತ್ತಾರೆ. ಇದೇ ಕರ್ನಾಟಕದ ಬಸ್ಸುಗಳು ಮಹಾರಾಷ್ಟ್ರಕ್ಕೆ ಹೋದಾಗ ಪ್ರಯಾಣಿಕರು ಹೇಳುತ್ತಾರೆ, ಏನ್ರೀ ಮಹಾರಾಷ್ಟ್ರದಲ್ಲಿ ರಸ್ತೆಗಳ ಹಾಳಾಗಿವೆ, ಏಕೆ ಮಹಾರಾಷ್ಟ್ರ ಸರ್ಕಾರ ಇದರ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಹೇಳುತ್ತಿರುತ್ತಾರೆ. ಇಂತಹ ಸಾಕಷ್ಟು ವಿಚಾರಗಳನ್ನು ಪ್ರಯಾಣಿಕರು ನಮ್ಮ ಮುಂದೆ ತರುತ್ತಿದ್ದಾರೆ. ಇಂತಹ ಸಾಕಷ್ಟು ವಿಷಯಗಳನ್ನು ನಾವು ಹೇಳಬೇಕೆಂದರೆ ಇನ್ನು ಅರ್ಧ ಗಂಟೆ ಸಮಯ ಕೊಟ್ಟರೆ ಮಾತನಾಡುವುದಕ್ಕೆ ತಯಾರಿದ್ದೇವೆ. ಇದೊಂದು ಮಹತ್ವದ ವಿಷಯವಾಗಿದೆ. ದೂದ್‌ಗಂಗಾ ನದಿಯಿಂದ ಕರ್ನಾಟಕದ ಮಹಾರಾಷ್ಟ್ರದಿಂದ ಹಲವಾರು ವರ್ಷಗಳಿಂದ 4 ಟಿಎಂಸಿ ನೀರಿಗೆ ನಾವು ಒಪ್ಪಂದ ಮಾಡಿಕೊಂಡಿದ್ದೇವೆ. ಒಪ್ಪಂದದ ಪ್ರಕಾರ ಮಹಾರಾಷ್ಟ್ರದವರು ಪ್ರತಿ ವರ್ಷ 4 ಟಿಎಂಸಿ ನೀರನ್ನು ನಮಗೆ ಬಿಡುತ್ತಿದ್ದಾರೆ. ಇವತ್ತು ಕೊಯ್ನಾ ಡ್ಯಾಂ ನಲ್ಲಿ ನೀರನ್ನಿಟ್ಟುಕೊಂಡು ಏನು ಮಾಡುತ್ತಾರೆ? ಅಲ್ಲಿ 110 ಟಿಎಂಸಿ ನೀರನ್ನಿಟ್ಟುಕೊಂಡು ಮಳೆಗಾಲದಲ್ಲಿ ಡ್ಯಾಂ ತುಂಬಿದ ನಂತರ ನೀರನ್ನಿಟ್ಟುಕೊಂಡು ಏನು ಮಾಡುತ್ತಾರೆ? ಏನು ಭೂಕಂಪ ಮಾಡುತ್ತಾರೆಯೇ? ಹೆಚ್ಚಿಗೆ ನೀರನ್ನಿಟ್ಟುಕೊಂಡರೆ ಅಲ್ಲಿ ಭೂಕಂಪವಾಗುತ್ತದೆ. ಈಗಾಗಲೇ ಇಂಜಿನಿಯರ್‌ರವರು ವರದಿಯನ್ನು ಕೊಟ್ಟಿದ್ದಾರೆ. ಅವರು ನೀರನ್ನು ಬಿಡಲೇಬೇಕು, ಕರ್ನಾಟಕಕ್ಕೆ

ನೀರು ಬಂದೇ ಬರುತ್ತದೆ. ಅದನ್ನು ತಡೆಯಲಿಕ್ಕೆ ಯಾರ ಕೈಯಲ್ಲೂ ಸಾಧ್ಯವಿಲ್ಲವೆಂದು ಹೇಳಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಸರ್ಕಾರ ತಂದಿರುವಂಥ ಈ ಅಧಿಕೃತ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಗಡಿ ವಿಚಾರವಾಗಿ ಹೇಳುವುದಾದರೆ, ನಂಬಿ ಕೆಟ್ಟವರಿಲ್ಲ ಎನ್ನುವ ಒಂದು ಮಾತಿದೆ. ನಾವು ಕರ್ನಾಟಕದವರು ನಂಬಿ ಕೆಟ್ಟವರಾಗಿದ್ದೇವೆ. ಒಂದು ಕಡೆ ತಮಿಳುನಾಡಿನವರು ಕಾವೇರಿ ವಿಚಾರವಾಗಿ, ಗೋವಾ ರಾಜ್ಯದವರು ಮಹದಾಯಿ ನದಿ ವಿಚಾರವಾಗಿ, ಮಹಾರಾಷ್ಟ್ರ ರಾಜ್ಯದವರು ಬೆಳಗಾವಿ ವಿಚಾರದಲ್ಲಿ ಕೇವಲ ಗಲಾಟೆಯನ್ನು ಮಾಡುತ್ತಿದ್ದಾರೆ. ನಾವು ಸರ್ಕಾರಕ್ಕೆ ಇಷ್ಟನ್ನು ಮಾತ್ರ ಹೇಳುತ್ತೇವೆ. ಈ ಗಡಿ ಭಾಗದ ಹಳ್ಳಿಗಳಲ್ಲಿ ಸರ್ಕಾರದಿಂದ ಏನೇನು ಸೌಲಭ್ಯ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ, ಏನೇನು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗುತ್ತದೆಯೋ ಅದನ್ನು ಹೆಚ್ಚು ಮಾಡಿದರೆ ಅಲ್ಲಿನ ಜನರಿಗೆ ಶಕ್ತಿ ಬರುತ್ತದೆ. ಅದರ ಜೊತೆಗೆ ನೀವು ಕೈಗಾರಿಕೆಗಳಿರಬಹುದು ಇತ್ಯಾದಿ ಬೇರೆ ಬೇರೆ ಕಡೆ incentives ಕೊಡುತ್ತೀರಿ, ದಯವಿಟ್ಟು ಈ ಭಾಗದಲ್ಲಿ ಮಾಡಿದರೆ ಸ್ವಲ್ಪ ಹೆಚ್ಚಿಗೆ ಕೊಡುತ್ತೇವೆಂದು ಹೇಳಿ. ಜನರಿಗೆ ಶಕ್ತಿ ತುಂಬಿದರೆ ಅಲ್ಲಿನ ಜನ ಇನ್ನು ಸಶಕ್ತರಾಗುತ್ತಾರೆ ಎನ್ನುವುದು ನನ್ನ ಒಂದು ನಂಬಿಕೆಯಾಗಿದೆ. ಏಕೆಂದರೆ ನಾವೆಲ್ಲರೂ ಭಾರತೀಯರು, ನಂತರ ಬೇರೆ ಬೇರೆ ರಾಜ್ಯದವರು. ನಮ್ಮ ನಾಯಕರು ಹೇಳಿದ ಹಾಗೆ ಮೊದಲು ಭಾರತ ಜನನಿಯ ತನುಜಾತೆ, ನಂತರ ಜೈ ಕರ್ನಾಟಕ ಮಾತೆ. ಈ ರೀತಿ ಇರುವಾಗ ನಾವು ಹೊರನಾಡ ಕನ್ನಡಿಗರಿಗೂ ಸ್ವಲ್ಪ ಅಭಯಹಸ್ತ ಕೊಡಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ ಬೆಳಗಾವಿ ಗಡಿ ಭಾಗವನ್ನು ನೋಡಬೇಕು. ನಾವು ಉಡುಪಿಯವರು ಒಂದು ರೀತಿ ಜಿಪ್ಸಿ ಇದ್ದ ಹಾಗೆ. ಜೀವನಕ್ಕೋಸ್ಕರ ಊರಿಂದೂರಿಗೆ ಹೋಗಿ ಕಾಲ ಕಳೆಯುತ್ತೇವೆ. ಇವತ್ತು ಯಾವ ಊರಿನಲ್ಲಿರುತ್ತೇವೋ ಅಥವಾ ನಾಳೆ ಯಾವ ಊರಿನಲ್ಲಿರುತ್ತೇವೆಯೋ ಗೊತ್ತಾಗುವುದಿಲ್ಲ. ಈ ರೀತಿ ಅಲ್ಲಿ ಅವರು ಶಕ್ತರಾಗಿದ್ದಾರೆ. ಏಕೆಂದರೆ Miss World ಅವರೇ underworld ಅವರೇ. ಇದರಿಂದ ಉಳಿದವರಿಗೆ ಕಷ್ಟವಾಗುತ್ತಿದೆ. ಸರ್ಕಾರ ಅವರ ನೆರವಿಗೆ ಬರಬೇಕು. ಸರ್ಕಾರ ಆದಷ್ಟು ಗಡಿ ಭಾಗದಲ್ಲಿರುವ ಹಳ್ಳಿಗಳಿಗೆ ಏನೇನು ಮೂಲಭೂತ ಸೌಕರ್ಯ ಬೇಕೋ ಅದನ್ನೆಲ್ಲಾ ಹೆಚ್ಚಿಗೆ

ಕೊಡಬೇಕು. ಬಾಕಿ ಕಡೆ ಸ್ವಲ್ಪ ಕಡಿಮೆ ಮಾಡಿ. ಕೈಗಾರಿಕೆ ಮುಂತಾದವುಗಳಿಗೆ ಹೆಚ್ಚಿನ ಸಬ್ಸಿಡಿ ಕೊಡುತ್ತೀದ್ದೀರಿ. ಸರ್ಕಾರ ಒಳ್ಳೊಳ್ಳೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ಈ ಭಾಗದಲ್ಲಿ ಮಾಡಿದರೆ ಇನ್ನು ಹೆಚ್ಚಿಗೆ ಕೊಡುತ್ತೇವೆ, ಕನ್ನಡದವರಿಗೆ ಕೆಲಸ ಕೊಡಬೇಕು. ಕನ್ನಡಿಗರಿಗೆ ನೀವು ಶಕ್ತಿಯನ್ನು ತುಂಬಬೇಕೆಂದು ಕೇಳಿಕೊಳ್ಳುತ್ತಾ ನೀವು ತಂದಿರತಕ್ಕಂಥ ಈ ನಿರ್ಣಯಕ್ಕೆ ನಾವು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ವಿರೋಧ ಪಕ್ಷದ ನಾಯಕರು ಸೇರಿದಂತೆ ಸಾಕಷ್ಟು ಜನ ಮಿತ್ರರು ಮಾತನಾಡಿದ್ದಾರೆ. ಇದರ ಬಗ್ಗೆ ಒಂದು ಮಾತು ಹೇಳಲು ಬಯಸುವುದೇನೆಂದರೆ, ಮಹಾರಾಷ್ಟ್ರ ಒಂದು ರೀತಿ ಮೊಂಡುತನವನ್ನು ಮತ್ತು ಭಂಡತನವನ್ನು ಮಾಡುತ್ತಿದೆ. ಮಹಾಜನ್ ಆಯೋಗ 1966ನೇ ಇಸವಿಯಲ್ಲಿ ರಚನೆಯಾಗಿದೆ. ಇಷ್ಟು ವರ್ಷಗಳಾದರೂ ಸಹ ತನ್ನ ವಾದವನ್ನು, ಮೊಂಡುತನವನ್ನು ಬಿಡುತ್ತಿಲ್ಲ ಎಂದರೆ ಇದರಲ್ಲಿ ಒಂದು ರೀತಿ ಗಡಿ ಸಮಸ್ಯೆಯನ್ನು ಹಾಗೆಯೇ ಜೀವಂತವಾಗಿಡಬೇಕು ಎನ್ನುವ ಉದ್ದೇಶ ಮೊದಲಿನಿಂದಲೂ ಇರತಕ್ಕಂಥಾದ್ದು. ಇದು ಯಾರಿಗಾದರೂ ಗೊತ್ತಾಗುತ್ತಿದೆ.

(ಮುಂದು)

(1219) 27/12/2022/5:10/ಎಸ್‌ಪಿಆರ್-ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎನ್.ರವಿಕುಮಾರ್ (ಮುಂದು):**

ಇದರಲ್ಲಿ ಯಾವ ಉದ್ದೇಶವಿದೆ. ತನ್ನ ರಾಜ್ಯದಲ್ಲಿ ಏನೋ ಸಮಸ್ಯೆಯಾದಾಗ, ಕರ್ನಾಟಕಕ್ಕೆ ಬಂದು ಬೆಳಗಾವಿ ನಮಗೆ ಸೇರಿದೆ ಎಂಬುದಾಗಿ ನೆರೆಯ ಮಹಾರಾಷ್ಟ್ರ ರಾಜ್ಯದವರು ಹೇಳುತ್ತಾರೆ. ಇದಕ್ಕೆ ಬೆಳಗಾವಿ ಅಥವಾ ಬೆಳಗಾವಿ ಜಿಲ್ಲೆಯ ಗಡಿಯಲ್ಲಿರುವ ಒಂದು ಇಂಚು ಭೂಮಿಯೂ ಸಹ ಮಹಾರಾಷ್ಟ್ರಕ್ಕೆ ಹೋಗುವ ಪ್ರಶ್ನೆಯೇ ಇಲ್ಲ; ಇದನ್ನು ಕೇಳುವ ಪ್ರಶ್ನೆಯೇ ಇಲ್ಲ; ಮುಂದುವರೆದು ಇದನ್ನು ಬಿಟ್ಟುಕೊಡುವವರು ಯಾರೂ ಸಹ ಇಲ್ಲ. ಈ ವಿಷಯವು ನಮ್ಮೆಲ್ಲರಿಗೂ ಸಹ ತಿಳಿದಿದೆ. ಇವತ್ತಿನ ದಿವಸ ಹಿಂದೆಂದಿಗಿಂತಲೂ ಬಹಳ ದೊಡ್ಡ ಪ್ರಮಾಣದ ಜಾಗೃತಿ ನಮ್ಮ ರಾಜ್ಯದಲ್ಲಿದೆ. ಇದೇ ವಿಚಾರವಾಗಿ ಈಗಾಗಲೇ ಕೆಳಮನೆಯಲ್ಲಿ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರಾದ ಶ್ರೀ

ಸಿದ್ದರಾಮಯ್ಯನವರಾದಿಯಾಗಿ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಇಲ್ಲಿನ ಆಡಳಿತ, ಅಭಿವೃದ್ಧಿಯ ವಿಷಯಗಳಿಗೆ ಸಂಬಂಧಪಟ್ಟಂತೆ, ಗುದ್ದಾಟಗಳು ಬೇಕಾದಷ್ಟು ಇರಬಹುದು. ಆದರೆ, ಗಡಿ, ನೆಲ, ಜಲ ಮತ್ತು ಭಾಷೆಯ ವಿಷಯಗಳು ಬಂದಾಗ ಇದೆಲ್ಲವನ್ನೂ ಮರೆತು ಒಂದಾಗುತ್ತಿರುವುದು ನಮ್ಮೆಲ್ಲರಿಗೂ ತಿಳಿದಿದೆ. ಮಹಾರಾಷ್ಟ್ರ ರಾಜ್ಯದ ವಾದಕ್ಕೆ ಯಾವತ್ತಿಗೂ ಸೋಲಾಗುತ್ತಿದೆ ಎನ್ನುವುದಕ್ಕೆ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂ.ಇ.ಎಸ್.)ಯು ಈ ಮುಂಚೆ 2 ರಿಂದ 5 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುತ್ತಿತ್ತು. ಆದರೆ, ಇವತ್ತಿನ ದಿವಸ ಆ ಪಕ್ಷವು ಸೀಟುಗಳನ್ನು ಗೆಲ್ಲುತ್ತಿಲ್ಲ; ಹಾಗಾಗಿ, ಅವರ ವಾದಕ್ಕೆ ಯಾವುದೇ ಬೆಲೆ ಇಲ್ಲ ಎನ್ನುವುದು ಗೊತ್ತಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ನಮ್ಮ ಸದಸ್ಯರುಗಳೆಲ್ಲರೂ ಏನು ಮಾತನಾಡಿದ್ದಾರೆ, ಅದಕ್ಕೆ ಶಕ್ತಿ ಇದೆ. ಮಹಾಜನ್ ವರದಿಯನ್ನು ಜಾರಿಗೆ ತಂದಿರುವ ಸಂಕೇತವಾಗಿ ಬೆಳಗಾವಿಯ ಸುವರ್ಣ ವಿಧಾನಸೌಧವು ಇದೆ. ಇದು ಕೇವಲ ಬೆಳಗಾವಿ ನಮ್ಮದು ಎನ್ನುವುದರ ಸಂಕೇತವಲ್ಲ; ಇದು ಮಹಾಜನ್ ವರದಿಯು ಜಾರಿಯಾಗಿರುವುದರ ಸಂಕೇತವಾಗಿದೆ. ನಮ್ಮ ಒಂದಿಂಚು ಭೂಮಿಯನ್ನು, ನೆಲ, ಜಲವನ್ನು ಬಿಟ್ಟುಕೊಡುವುದಿಲ್ಲ ಎನ್ನುವುದರ ಸಂಕೇತವೂ ಸಹ ಸುವರ್ಣ ವಿಧಾನಸೌಧವಾಗಿದೆ.

ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸಾಕಷ್ಟು ವಿಷಯಗಳಿವೆ. ಕೆಲವರು ಪತ್ರಿಕೆ, ಟಿ.ವಿ. ಮಾಧ್ಯಮಗಳಲ್ಲಿ ಬರುವುದಕ್ಕೋಸ್ಕರವಾಗಿ ಕಾಲು ಕೆರೆದುಕೊಂಡು ಮಾತನಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಅಲ್ಲಿನ N.C.P. (Nationalist Congress Party) ಅಥವಾ ಶಿವಸೇನೆ ಪಕ್ಷಗಳ ನಾಯಕರುಗಳಿರಬಹುದು; ಅವರುಗಳು ತಾವು ಬೆಳಗಾವಿಗೋಸ್ಕರ ಚೈನಾ ದೇಶದ ಸೈನಿಕರಂತೆ ಬೆಳಗಾವಿಗೆ ನುಗ್ಗುತ್ತೇವೆ ಎಂಬುದಾಗಿ ಹೇಳುತ್ತಾರೆ. ಇದಕ್ಕೆ ಪ್ರತಿಕ್ರಿಯಿಸಿದ ನಮ್ಮ ಮುಖ್ಯಮಂತ್ರಿಗಳು ಸಹ ಬಹಳ ಚೆನ್ನಾಗಿ ಉತ್ತರಿಸಿದ್ದಾರೆ; ಹೀಗಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. "ಮಹಾರಾಷ್ಟ್ರ ರಾಜ್ಯದವರು ಚೈನಾ ದೇಶದ ಸೈನಿಕರಂತೆ ನಮ್ಮ ಬೆಳಗಾವಿಗೆ ಬಂದರೆ, ನಾವು ಭಾರತದ ಸೈನಿಕರಂತೆ ಅವರನ್ನು ಹೊಡೆದುಹಾಕುತ್ತೇವೆ" ಎಂಬುದಾಗಿ ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಬಹಳ ಒಳ್ಳೆಯ ಉತ್ತರವನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಇದು ನೆಲ-ಜಲದ ವಿಷಯವಾಗಿದ್ದು, ಇವೆಲ್ಲವೂ ಸಹ ಆರ್ಟಿಕಲ್ 3 ರ ಅಡಿಯಲ್ಲಿ ಸಂಸತ್ತಿಗೆ ಸೇರಿದ್ದಾಗಿವೆ. ಹೀಗಾಗಿ ಇದು ಸಂಸತ್ತಿನಲ್ಲಿ ಬಗೆಹರಿಸುವ

ವಿಷಯವಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳು ರಣರಂಗದಲ್ಲಿ ಬರುವ ವಿಷಯವು ಅಲ್ಲವೇ ಅಲ್ಲ. ಈ ಬಗ್ಗೆ ಜಾಗೃತಿ, ಅರಿವುಗಳು ಕೇಂದ್ರ ಸರ್ಕಾರಕ್ಕೆ ಇದ್ದೇ ಇದೆ. ಈ ಹಿನ್ನೆಲೆಯಲ್ಲಿ ನಾವು ಇವತ್ತಿನ ದಿವಸ ನಿರ್ಣಯವೊಂದನ್ನು ಸ್ವೀಕರಿಸಿದ್ದೇವೆ; ಇದಕ್ಕೆ ನಮ್ಮ ಬಲ, ಶಕ್ತಿಗಳವೆ; ಒಕ್ಕೊರಲಿನ ಒಗ್ಗಟ್ಟು ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ವಂದನೆಗಳು. ವಿಶೇಷವಾಗಿ ವಿರೋಧ ಪಕ್ಷದ ನಾಯಕರೂ ಸಹ ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅವರಿಗೂ ಸಹ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಶ್ರೀ ಪಿ.ಆರ್.ರಮೇಶ್ ರವರೇ, ನೀವೇ ಹೇಳಿದಂತೆ ಕೇವಲ ಎರಡು ನಿಮಿಷಗಳನ್ನು ಮಾತ್ರವೇ ದಯಮಾಡಿ ಬಳಸಿಕೊಳ್ಳಿ. ಈ ವಿಚಾರದ ಚರ್ಚೆ ಪ್ರಾರಂಭವಾಗಿ ಈಗಾಗಲೇ ಎರಡು ಗಂಟೆಗಳು ದಾಟಿ ಹೋಗಿವೆ. ಸಮಯವನ್ನು ನೋಡಿ, ಎರಡು ನಿಮಿಷದಲ್ಲಿ ನಿಮ್ಮ ಮಾತುಗಳನ್ನು ಮುಗಿಸಿ. ಬೆಲ್‌ನ್ನು ಹೊಡೆಯುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಡಿ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಮ್ಮ ಬಗ್ಗೆ ಕರುಣೆ ಇರಲಿ.

**ಸಭಾಪತಿಯವರು:-** ಕರುಣೆ ಇರುವುದಕ್ಕಾಗಿಯೇ ನಿಮಗೆ ಅವಕಾಶವನ್ನು ನೀಡಿದ್ದೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಕರ್ನಾಟಕದ ವಿಷಯದ ಬಗ್ಗೆ ಮಾತನಾಡುವುದಾದರೆ, 1923 ನೇ ಇಸ್ವಿಯಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ಸಿನ ಅಧಿವೇಶನವು ನಡೆಯುತ್ತದೆ. ಅಂದು ಅಲ್ಲಿ ಮುಂದಿನ ಅಧಿವೇಶನವು ಕರ್ನಾಟಕದಲ್ಲಿಯೇ ನಡೆಯಬೇಕು ಎನ್ನುವ ನಿರ್ಣಯವೊಂದನ್ನು ತೆಗೆದುಕೊಳ್ಳುತ್ತಾರೆ. 1924 ನೇ ಇಸ್ವಿಯಲ್ಲಿನ ಅಧಿವೇಶನವು ಕರ್ನಾಟಕದಲ್ಲಿಯೇ ಆಗಬೇಕೆಂದು ಹೇಳುವಾಗ, ಅಂದು ಕಾರ್ನಾಡ್ ಸದಾಶಿವರವರು ಮಂಗಳೂರಿನಲ್ಲಾಗಬೇಕೆಂದು ಹೇಳುತ್ತಾರೆ. ಆದರೆ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಧಾರವಾಡ,

ಬೆಳಗಾವಿ, ಹಾಗೂ ರಾಜ್ಯದ ಇನ್ನಿತರೆ ಪ್ರದೇಶಗಳಲ್ಲಾಗಬೇಕೆಂದು ಹೇಳುತ್ತಾರೆ. ಆದರೆ, ದೇಶಪಾಂಡೆಯವರು ಬೆಳಗಾವಿಯಲ್ಲಿ ಅಧಿವೇಶನ ಆಗಬೇಕೆಂದು ಹೇಳುತ್ತಾರೆ. ನಾನು ಯಾತಕ್ಕಾಗಿ ಈ ಮಾತನ್ನು ಹೇಳಿದೆ ಎಂದರೆ, ಬೆಳಗಾವಿಯು ಅವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿತ್ತು. ಕರ್ನಾಟಕದಲ್ಲಿ 29ನೇ ಅಧಿವೇಶನವು ನಡೆಯಿತು. ಅವತ್ತಿನ ದಿವಸ 1924 ನೇ ಇಸ್ವಿಯಲ್ಲಿ ಬೆಳಗಾವಿಯಲ್ಲಿ ಇದೇ ದಿನ ಅಧಿವೇಶನವಾಗಿತ್ತು. ಅಂದರೆ, 27 ನೇ ಡಿಸೆಂಬರ್, 1924 ರಂದು ಅಧಿವೇಶನವಾಗಿತ್ತು. ಸದರಿ ಅಧಿವೇಶನವಾಗಿ ಇವತ್ತಿಗೆ 98 ವರ್ಷಗಳಾಗಿ, ನಾಳೆಗೆ 99 ವರ್ಷಗಳಾಗುತ್ತವೆ. ಇದು ಕರ್ನಾಟಕ ಎಂಬುದಾಗಿ ಅವತ್ತಿನ ದಿನವೇ ನಿರ್ಣಯಿಸಲಾಗಿತ್ತು. ಇಂತಹ ಸಂದರ್ಭ ಇರುವಾಗ, ನಾವು ಕರ್ನಾಟಕ ರಾಜ್ಯದ ಈ ಜಾಗಕ್ಕೆ ಇವತ್ತಿನ ದಿವಸ ಹೋರಾಟ ಮಾಡುತ್ತಿದ್ದೇವೆ ಎಂದರೆ, ಇದು ಬಹಳ ದುಃಖದ ಪರಿಸ್ಥಿತಿ ಎಂದು ನನಗನ್ನಿಸುತ್ತದೆ. ನ್ಯಾಯಮೂರ್ತಿ ಫಸಲ್ ಆಲಿ ನೇತೃತ್ವದ ಆಯೋಗವನ್ನು ರಚಿಸಿ 1956 ರಲ್ಲಿ ರಾಜ್ಯಗಳನ್ನು reorganize ಮಾಡುವುದಕ್ಕೆ States Reorganization Act ಎಂದು ಕಾಯ್ದೆಯನ್ನು ಜಾರಿಗೊಳಿಸುತ್ತಾರೆ. ತದ ನಂತರ ಅದರ ಬಗ್ಗೆ ಸಾಕಷ್ಟು ವಿದ್ಯಮಾನಗಳು ನಡೆಯುತ್ತವೆ. 1966 ನೇ ಸಾಲಿನಲ್ಲಿ ಮಹಾಜನ್ ಆಯೋಗದ ವರದಿ ಸಿದ್ಧವಾಗುತ್ತದೆ; ಇದನ್ನು 1970ನೇ ಸಾಲಿನಲ್ಲಿ ಮಂಡಿಸುತ್ತಾರೆ. ಆದರೆ, ಇದರ ಬಗ್ಗೆ ಚರ್ಚೆಗಳಾಗಲಿಲ್ಲ. 1999ನೇ ಇಸ್ವಿಯಲ್ಲಿ ಮಹಾರಾಷ್ಟ್ರ ರಾಜ್ಯದವರು ಬೆಳಗಾವಿ ಅಥವಾ ಮರಾಠಿ ಭಾಷೆಯನ್ನು ಮಾತನಾಡತಕ್ಕ ಕೆಲವು ಪ್ರದೇಶಗಳ ಮೇಲೆ, ಅವರ ದಬ್ಬಾಳಿಕೆಯನ್ನು ನಡೆಸುತ್ತಾರೆ. ಇದು ಕೇವಲ ಎಂ.ಇ.ಎಸ್.ನ್ನು ಬೆಳೆಯುವುದಕ್ಕೆ ಅನುವು ಮಾಡಿಕೊಟ್ಟ ವಿಷಯವಾಗಿದೆ. ಇದರಲ್ಲಿ ಬೇರೆ ಇನ್ನೇನು ಇಲ್ಲ. ರಾಜಕೀಯವಾಗಿ ಇದನ್ನು ಬಳಸಿಕೊಳ್ಳುತ್ತಿದ್ದಾರೆ ವಿನಃ ಇದರ ಹಿನ್ನೆಲೆ ಯಾವುದೂ ಸಹ ಇಲ್ಲ. ಸರ್ಕಾರವು ತೆಗೆದುಕೊಂಡ ಈ ನಿರ್ಣಯವನ್ನು ನಾನು ಬೆಂಬಲಿಸುತ್ತೇನೆ. ಆದರೆ, ಈ ಸಂದರ್ಭದಲ್ಲಿ ನಾನೊಂದು ಮಾತನ್ನು ಹೇಳಬಯಸುತ್ತೇನೆ. ಶ್ರೀಮಾನ್ ದಿವಂಗತ ಕಟ್ಟಿರವರು ಅಂದಿನ ದಿನ ಒಂದು ಮಾತನ್ನು ಹೇಳಿದ್ದರು. 2024ನೇ ಸಾಲಿನ ಸಾರ್ವತ್ರಿಕ ಸಂಸತ್ತು ಚುನಾವಣೆಯಾದ ಮೇಲೆ ನಮ್ಮ ದೇಶದಲ್ಲಿ 50 ರಾಜ್ಯಗಳಾಗುತ್ತವೆ ಎಂಬುದಾಗಿ ಹೇಳಿದ್ದಾರೆ. ಹೀಗಾಗಿ ನಮ್ಮ ಕರ್ನಾಟಕ ರಾಜ್ಯವನ್ನು ಎಲ್ಲಿ ಎರಡು ಭಾಗಗಳಾಗಿ ಮಾಡುತ್ತೀರೋ ಎನ್ನುವ ಭಯ ನಮಗೆ ಉಂಟಾಗಿದೆ. ದಯಮಾಡಿ ಈ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ. ನಮ್ಮ ರಾಜ್ಯದ ಏಕೀಕರಣಕ್ಕಾಗಿ ಎಷ್ಟು ಜನರು ದುಡಿದಿದ್ದಾರೆ; ಮತ್ತೆಷ್ಟೋ ಜನರು ತಮ್ಮ ಪ್ರಾಣಗಳನ್ನು ಅರ್ಪಿಸಿದ್ದಾರೆ,

ಅವರ ಆತ್ಮಕ್ಕೆ ಗೌರವ ನೀಡುವುದಾದರೆ, ನಾವು ಕರ್ನಾಟಕವನ್ನು ಒಂದಾಗಿ ಇಟ್ಟುಕೊಳ್ಳುವ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ನಮ್ಮ ರಾಜ್ಯವನ್ನು ಎರಡು ಭಾಗಗಳನ್ನಾಗಿ ಮಾಡುವ ಕೆಲಸಕ್ಕೆ ಕೈ ಹಾಕಬೇಡಿ. ಈಗಾಗಲೇ ಆಂಧ್ರಪ್ರದೇಶ ರಾಜ್ಯವನ್ನು ವಿಂಗಡಿಸಿ, ಕಾಂಗ್ರೆಸ್‌ನವರು ತಮ್ಮ ಕೈಯನ್ನು ಸುಟ್ಟುಕೊಂಡಿದ್ದಾರೆ. ಹೀಗಾಗಿ ನೀವು ಈ ರೀತಿಯ ಕೆಲಸಗಳನ್ನು ಮಾಡಿ, ನಿಮ್ಮ ಕೈಗಳನ್ನು ಕೆಡಿಸಿಕೊಳ್ಳುವುದು ಬೇಡ. ದಯಮಾಡಿ ನಮ್ಮ ರಾಜ್ಯವನ್ನು ಉಳಿಸುವ ರೀತಿಯಲ್ಲಿ ಕೆಲಸಗಳನ್ನು ಮಾಡಿ. ಇವತ್ತಿನ ದಿವಸ ಮಹಾಜನ್ ವರದಿಯನ್ವಯ, ಸಂವಿಧಾನದ ಅನುಚ್ಛೇದ 131 ರಡಿ ಸರ್ವೋಚ್ಛ ನ್ಯಾಯಾಲಯದಲ್ಲಿ ಹೋರಾಟ ಮಾಡುತ್ತಿದ್ದಾರೆ. ಸಂವಿಧಾನದ ಅನುಚ್ಛೇದ 131 ರನ್ವಯ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಇರುವ ಕೆಲಸಗಳ ಅಥವಾ ಪ್ರಕರಣಗಳ ಬಗ್ಗೆ ಸರ್ವೋಚ್ಛ ನ್ಯಾಯಾಲಯದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಆದರೆ, ಸಂಸತ್ತಿಗೆ ಸಂವಿಧಾನದ ಅನುಚ್ಛೇದ 3 ರ ಪ್ರಕಾರ ಅಧಿಕಾರವಿದೆ. ಅದು ಮುಗಿದುಹೋಗಿದೆ. ವರದಿಯು ಜಾರಿಗೊಂಡು, ಅಗತ್ಯವಾದ ಪ್ರಕ್ರಿಯೆಗಳೆಲ್ಲವೂ ಮುಗಿದುಹೋಗಿವೆ. ಸಂವಿಧಾನದ ಅನುಚ್ಛೇದ 131 ರಡಿಯಲ್ಲಿ ಸರ್ವೋಚ್ಛ ನ್ಯಾಯಾಲಯದಲ್ಲಿ ಅವರು ಸಲ್ಲಿಸಿರುವ ಮೇಲ್ಮನವಿಯು, ನಮ್ಮ ರಾಜ್ಯ ಯಾವ ಆಧಾರದ ಮೇಲೆ, ಯಾವ ರೀತಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಿದೆ ಎನ್ನುವ ಬಗ್ಗೆ ಸರ್ಕಾರವು ಉತ್ತರಿಸುವ ಸಮಯದಲ್ಲಿ ದಯಮಾಡಿ ತಿಳಿಸಬೇಕೆಂದು ನಾನು ವಿನಂತಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಸದಸ್ಯರು ಉಲ್ಲೇಖಿಸಿರುವುದು, 1924 ನೇ ಇಸ್ವಿಯಲ್ಲಿ ಮೈಸೂರು ರಾಜ್ಯವು ಇತ್ತು.

**ಸಭಾಪತಿಯವರು:-** ಆಗ ಕರ್ನಾಟಕ ಎಂದು ನಾಮಕರಣವಾಗಿರಲಿಲ್ಲ. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಇತ್ತೀಚೆಗಷ್ಟೇ ನಾಮಕರಣವಾಗಿದೆ. ಅಂದು ಮೈಸೂರು ರಾಜ್ಯವು ಅಸ್ತಿತ್ವದಲ್ಲಿತ್ತು. ಇರಲಿ; ಇದು ಸಣ್ಣ ತಿದ್ದುಪಡಿಯಷ್ಟೇ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಎಂದರೆ ಕನ್ನಡ ಭಾಷೆಯನ್ನು ಮಾತನಾಡತಕ್ಕ ಪ್ರದೇಶ ಎಂದರ್ಥ ಅಷ್ಟೇ.

**ಶ್ರೀ ಎಂ.ನಾಗರಾಜು(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಬೆಳಗಾವಿ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರವು ಮಂಡಿಸಿರುವ ಅಧಿಕೃತ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಎರಡು ಮಾತಗಳನ್ನಾಡಲು ಇಚ್ಛಿಸುತ್ತೇನೆ.

1956 ನೇ ಇಸ್ವಿಯಲ್ಲಿ ಫಸಲ್ ಅಲಿ ನೇತೃತ್ವದ ಆಯೋಗವು ನೀಡಿದ ವರದಿಯ ಆಧಾರದನ್ವಯ ರಾಜ್ಯಗಳ ರಚನೆಯಾದ ನಂತರ, ಮಹಾರಾಷ್ಟ್ರ ರಾಜ್ಯದವರಿಗೆ ಅದು ಒಪ್ಪಿಗೆಯಾಗದ ಸಂದರ್ಭದಲ್ಲಿ, ಅವರು ಒಂದು ಆಯೋಗವನ್ನು ರಚನೆ ಮಾಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಾರೆ.

(ಮುಂದು)

1220/27-12-2022/5-20/bkp-vk

**ಶ್ರೀ ಎಂ. ನಾಗರಾಜು** (ಮುಂದು..)

ಒಂದು ಕಮಿಷನ್ ರಚನೆ ಮಾಡಬೇಕೆನ್ನುವ ಅವರ ಒತ್ತಡದ ಮೇರೆಗೆ ಮಹಾಜನ್ ಕಮಿಷನ್ ಆಯೋಗವನ್ನು ರಚನೆ ಮಾಡಿರತಕ್ಕಂತಹ ಕೇಂದ್ರ ಸರ್ಕಾರ 1966 ರಲ್ಲಿ ಕೊಟ್ಟಂತಹ ಕಮಿಷನ್ ಮತ್ತು 1977 ರಲ್ಲಿ ಕೊಟ್ಟ ವರದಿ ಪ್ರಕಾರ ನಮ್ಮ ಕರ್ನಾಟಕ ರಾಜ್ಯದ ಗಡಿ ವಿಚಾರದಲ್ಲಿ ಸ್ಪಷ್ಟವಾದ ನಿಲುವುಗಳನ್ನು ಕೊಟ್ಟಿದ್ದಾರೆ, ಅದನ್ನು ನಾವು ಒಪ್ಪಿಕೊಂಡಿದ್ದೇವೆ ಎಂದು ಹಲವಾರು ಬಾರಿ ಅಂದರೆ 5-6 ಬಾರಿಗಿಂತ ಹೆಚ್ಚು ಸಲ ಕರ್ನಾಟಕದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ನಿರ್ಣಯಗಳನ್ನು ಅಂಗೀಕರಿಸಿ ಹೇಳಿದ್ದೇವೆ. ನಮಗೆ ಮಹಾಜನ್ ವರದಿಯೇ ಅಂತಿಮ ಎಂದು ಹೇಳಿದ್ದೇವೆ. ಈ ನಿಟ್ಟಿನಲ್ಲಿ ನಾವು ತಟಸ್ಥ ನಿಲುವನ್ನು ಕಾಯ್ದುಕೊಂಡು ಹೋಗಬೇಕಾಗಿದೆ ಎನ್ನುವುದನ್ನು ನಮ್ಮ ಕರ್ನಾಟಕ ರಾಜ್ಯದ ಆರೂವರೆ ಕೋಟಿ ಕನ್ನಡಿಗರ ನಿಲುವಾಗಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ನಾನು

ಬೆಂಗಳೂರಿನ ಮಗನಾದರೂ ಕೂಡ ಬೆಳಗಾವಿಯ ಅಳಿಯನಾಗಿ ಈ ವಿಚಾರಗಳನ್ನು ತಿಳಿದುಕೊಂಡು ಹೇಳಲಿಕ್ಕೆ ಬಯಸುತ್ತೇನೆ. ಈ ಎರಡು ವಿಚಾರಗಳನ್ನು ತಿಳಿದುಕೊಂಡಿರುವುದರಿಂದ ಬೆಳಗಾವಿಯಲ್ಲಿ ಇರುವಂತಹ ಕನ್ನಡಿಗರು ಮತ್ತು ಮರಾಠಿಗರಲ್ಲಿ ಇಬ್ಬರಿಗೂ ಯಾವುದೇ ಸಮಸ್ಯೆಗಳು ಇಲ್ಲ.. ಆ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿರುವುದು, ಒಕ್ಕೂಟ ವ್ಯವಸ್ಥೆಗಳಿಗೆ ಮಾರಕವಾಗಿರುವಂತಹದ್ದು ಮಹಾರಾಷ್ಟ್ರ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಕರ್ನಾಟಕದಲ್ಲಿ ಇರುವಂತಹ ಮಾರಾಠಿಗರು ಕನ್ನಡಿಗರಾಗಿ ಬದುಕುತ್ತಿದ್ದಾರೆ. ಇಲ್ಲಿ ಇರತಕ್ಕಂತಹ ಕನ್ನಡಿಗರು ಮಾರಾಠಿಗರನ್ನು ಸಹ ಪ್ರೀತಿಯಿಂದ ನೋಡತಕ್ಕಂತಹ ಸಂದರ್ಭದಲ್ಲಿ ಹುಳಿ ಹಿಂಡುವಂತಹ ಕೆಲಸವನ್ನು, ರಾಜಕಾರಣ ಮಾಡುವಂತಹ ಕೆಲಸವನ್ನು ಈ ಸದನವು ಕಠೋರ ಪದಗಳಿಂದ ಖಂಡಿಸಬೇಕೆನ್ನುವ ಮಾತನ್ನು ಹೇಳುತ್ತಿದ್ದೇನೆ. ಏಕೆಂದರೆ, ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಬದುಕುವಂತಹ ಸಂದರ್ಭದಲ್ಲಿ, ಈ ದೇಶದ ಸಂವಿಧಾನವನ್ನು ಒಪ್ಪಿಕೊಂಡಿರುವ ಸಂದರ್ಭದಲ್ಲಿ ಈ ದೇಶದ ಒಕ್ಕೂಟ ವ್ಯವಸ್ಥೆಗೆ ಮಾರಕವಾಗಿ ಕೆಲಸ ಮಾಡುತ್ತಿರುವಂತಹ ಮಹಾರಾಷ್ಟ್ರದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿ ಇದ್ದರೂ ಕೂಡ ಕರ್ನಾಟಕದ ವಿಚಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು, ಕರ್ನಾಟಕದ ಗಡಿ ಭಾಗದಲ್ಲಿ ಇರತಕ್ಕಂತಹ ಅಲ್ಪ ಭಾಷಿಕರಾದ ಮರಾಠಿಗರನ್ನು ಎತ್ತಿಕಟ್ಟುವಂತಹದ್ದು ಮತ್ತು ಇಲ್ಲಿ ಸ್ಥಳೀಯವಾಗಿ ರಾಜಕಾರಣದ ಕಾರಣಕ್ಕೋಸ್ಕರ ಮಹಾರಾಷ್ಟ್ರದಲ್ಲಿ ನಿರ್ಣಯಗಳನ್ನು ಮಾಡುವಂತಹದ್ದು ಬಹಳ ನೋವಿನ ಸಂಗತಿಯ ಮಾತನ್ನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರವನ್ನು ಹೇಳಬೇಕಾದರೆ, ನಿನ್ನೆ ಉಧವ್ ಠಾಕ್ರೆಯವರು ಅವರ floor of the House ಹೌಸ್‌ನಲ್ಲಿ ಹೇಳುತ್ತಾರೆ, ಬೆಳಗಾವಿ, ಕಾರವಾರ ಮತ್ತು ನಿಪ್ಪಾಣಿಯನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಬೇಕೆನ್ನುವ ಉದ್ಧಟತನದ ಮಾತುಗಳನ್ನು ಮಾತನಾಡಿರುವುದನ್ನು ಈ ಸದನ ಖಂಡಿಸಬೇಕೆನ್ನುವ ಮಾತನ್ನು ಹೇಳುತ್ತಿದ್ದೇನೆ. ಅದರ ಜೊತೆಗೆ ಹೇಳಬೇಕೆಂದರೆ, ಈ ಬೆಳಗಾವಿಯನ್ನು ನೀವು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡುವುದಾದರೆ, ಕೇಂದ್ರ ಸರ್ಕಾರ ಸತ್ಯವಾಗಿ ಮಾಡಬೇಕಾದ ಕೆಲಸ ಯಾವುದು ಎಂದರೆ ಕೇಂದ್ರ ಸರ್ಕಾರ ಮುಂಬೈ ಅನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಬೇಕೆನ್ನುವ ವಿಚಾರವನ್ನು ಹೇಳುತ್ತೇನೆ. ಏಕೆಂದರೆ, Mumbai is one

of the Cosmopolitan City. ಅಲ್ಲಿ ಇರತಕ್ಕಂತಹ ಕನ್ನಡಿಗರು ಹೆಚ್ಚು ಕೆಲಸ ಮಾಡುತ್ತಿದ್ದಾರೆ, ಉದ್ಯೋಗಗಳನ್ನು ಸ್ಥಾಪನೆ ಮಾಡಿರುವಂತಹದ್ದು, ಹೋಟೆಲ್‌ಗಳನ್ನು ಸ್ಥಾಪನೆ ಮಾಡಿ ಉದ್ಯೋಗಗಳನ್ನು ಕೊಡುತ್ತಿರುವುದು ನಮ್ಮ ಕನ್ನಡಿಗರು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ನಾವು ಆ ರೀತಿಯ ಉದ್ಧಟತನದ ಮಾತುಗಳನ್ನು ಆಡುತ್ತಿಲ್ಲ. ಒಂದು ವೇಳೆ ಅವರು ಬೆಳಗಾವಿಯನ್ನು ಕೇಳುವುದಾದರೆ, ಮುಂಬೈ ಅನ್ನು ನಾವು ಕೇಳಬೇಕಾಗುತ್ತದೆ ಎನ್ನುವ ನಿರ್ಣಯವನ್ನು ನಾವು ಮಾಡಬೇಕಾಗುತ್ತದೆ. ಇವತ್ತು ಈ ವಿಚಾರದಲ್ಲಿ ಮಾತನಾಡಲು ನಮ್ಮ ಕಾನೂನು ಸಚಿವರು ಬಹಳ ನಿಪುಣರಿದ್ದಾರೆ. ನಿಯಮ 131 ಪ್ರಕಾರ ಅವರು ಸುಪ್ರೀಂ ಕೋರ್ಟ್‌ಗೆ ಅಧಿಕಾರ ಇದೆ ಎಂದು ಹೇಳಬೇಕಾದರೆ ನಾವು ತಿಳಿದುಕೊಳ್ಳಬೇಕಾದ ಹಿನ್ನೆಲೆಯನ್ನು ನೋಡಿದಾಗ ಈಗ ಇರತಕ್ಕಂತಹ ಮುಖ್ಯ ನ್ಯಾಯಾಧೀಶರ ತಂದೆ ಮಹಾರಾಷ್ಟ್ರದಲ್ಲಿ ಈ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನೇ ಕೊಡುತ್ತಾರೆ. ಸುಪ್ರೀಂ ಕೋರ್ಟ್‌ನಲ್ಲಿ ಇದರ ಬಗ್ಗೆ intervene ಆಗಲಿಕ್ಕೆ ಅಧಿಕಾರ ಇದೆ ಎನ್ನುವಂತಹ ವರದಿಯನ್ನು ಮಹಾರಾಷ್ಟ್ರಕ್ಕೆ ಕೊಟ್ಟಿರುತ್ತಾರೆ. ಆ ಒಂದು ವರದಿಯನ್ನು ಇಟ್ಟುಕೊಂಡು ಸುಪ್ರೀಂ ಕೋರ್ಟ್‌ನಲ್ಲಿ 2004 ರಲ್ಲಿ ಅರ್ಜಿಯನ್ನು ಹಾಕಿ ಇಲ್ಲಿಯವರೆಗೂ ಹೋರಾಟ ಮಾಡುತ್ತಿರುವುದು ದುರ್ದೈವ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರವು ದೇಶದ ಬಗ್ಗೆ ಮಾತನಾಡುವಾಗ, ರಾಷ್ಟ್ರಾಭಿಮಾನದ ಬಗ್ಗೆ ಮಾತನಾಡುವಾಗ ಒಕ್ಕೂಟ ವ್ಯವಸ್ಥೆಗೆ ಒಂದು ಗೌರವ ಕೊಡುವಂತಹ ನಿಲುವುಗಳನ್ನು, ಸಲಹೆಗಳ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕೇಂದ್ರ ಸರ್ಕಾರ ಕೊಡಬೇಕು. ದುರಾದೃಷ್ಟ ಏನೆಂದರೆ, ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿಯಾಗಿರತಕ್ಕಂತಹ ಸಿಂಧೆ ರವರು ಈ ವಿಚಾರದಲ್ಲಿ ಅತಿಯಾದ ಕಾಳಜಿ ವಹಿಸಿ, ಅವರು ಸರ್ವ ಪಕ್ಷಗಳ ಸಭೆಯನ್ನು ಕರೆದು , ಕೆಲವು ನಿರ್ಣಯಗಳನ್ನು ತೆಗೆದುಕೊಂಡು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಾರೆ. ಆದರೆ, ನಮ್ಮ ರಾಜ್ಯ ಸರ್ಕಾರ ಅವರು ಸಭೆ ಮಾಡುವವರೆಗೂ ನಿದ್ರಾವಸ್ಥೆಯಲ್ಲಿ ಇರುವುದನ್ನು ನಾನು ಉಗ್ರವಾಗಿ ಖಂಡಿಸುತ್ತೇನೆ. ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಎಚ್ಚೆತ್ತುಕೊಳ್ಳಬೇಕಾಗಿತ್ತು. ಎಂದು ಮನವಿಯನ್ನು ಮಾಡುತ್ತೇನೆ.

**ಉಪ ಸಭಾಪತಿಗಳು:–** ಸಾಕು ಕುಳಿತುಕೊಳ್ಳಿ.

**ಶ್ರೀ ಎಂ ನಾಗರಾಜು:–** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ. ಇನ್ನು ಬಹಳ ವಿಚಾರಗಳಿದ್ದು ಹೇಳಬೇಕಾಗಿದೆ. ಇದು ಕರ್ನಾಟಕದ ವಿಚಾರ. No compromise in this. ಇದು ನನ್ನ ರಾಜ್ಯದ ಪ್ರಶ್ನೆ. ನಾನು ಮಾತನಾಡುವುದಕ್ಕೆ ಸಮಯವನ್ನು ಕೊಡಲೇ ಬೇಕು. How can you curtail me.

**ಉಪ ಸಭಾಪತಿಗಳು:–** ನೀವು ಕೇಳಿದ ಹಾಗೆ ಎರಡು ನಿಮಿಷ ಕೊಟ್ಟಿದ್ದೇನೆ. ನೀವೇ ಹೇಳಿರುವಂತಹ ಮಾತು ಇದಾಗಿದೆ. ನೀವು ಒಂದು ಮಾತನ್ನು ಎರಡೆರಡು ಬಾರಿ ಮಾತನಾಡಬಾರದು. ಕೇಳಬೇಕಾದಾಗ ನೀವು ಏನು ಕೇಳಿದಿರಿ?

**ಶ್ರೀ ಎಂ ನಾಗರಾಜು:–** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕೆಂದು ಪೀಠವನ್ನು ಕೇಳುತ್ತಿದ್ದೇನೆ. ನಾನು ರಾಜ್ಯದ ಬಗ್ಗೆ ಮಾತನಾಡಲಿಕ್ಕೆ ನನಗೆ ದಯವಿಟ್ಟು ಅವಕಾಶವನ್ನು ಕೊಡಬೇಕು.

**ಉಪ ಸಭಾಪತಿಗಳು:–** ನೀವು ಕೇಳಿದ ಹಾಗೆ ಎರಡು ನಿಮಿಷ ಕೊಟ್ಟಿದ್ದೇನೆ. ನೀವೇ ಹೇಳಿರುವಂತಹ ಮಾತು ಇದಾಗಿದೆ. ನೀವು ಈಗ ಅರ್ಧ ಗಂಟೆಯನ್ನು ಕೇಳಿದರೆ ಆಗುವುದಿಲ್ಲ. ವಿರೋಧ ಪಕ್ಷದ ನಾಯಕರು ಅವರಿಗೆ ಈ ವಿಚಾರದಲ್ಲಿ ಸ್ವಲ್ಪ ಹೇಳಿ.

**ಶ್ರೀ ಎಂ ನಾಗರಾಜು:–** ಮಾನ್ಯ ಸಭಾಪತಿಯವರೆ, ಬೆಳಗಾವಿಯಲ್ಲಿ ವಿಧಾನಸೌಧವನ್ನು ಕಟ್ಟಿ ಕರ್ನಾಟಕದ ಬಗ್ಗೆ ಮಾತನಾಡುತ್ತೇನೆಂದರೆ ಸಮಯ ಇಲ್ಲವೆಂದರೆ ಹೇಗೆ? ನನಗೆ ಸಮಯ ಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಹಿತ ಇಡಿ ಸದನ ಒಕ್ಕೊರಲಿನಿಂದ ಗಡಿ ವಿಚಾರದಲ್ಲಿ ಚರ್ಚೆ ಮಾಡಿ ಕರ್ನಾಟಕದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಸುಮ್ಮನೆ, ವಿನಾಃ ಕಾರಣ ರಾಜಕಾರಣದ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ಎಂ ನಾಗರಾಜು:–** ಮಾನ್ಯ ಸಭಾಪತಿಯವರೆ, ನಾನು ರಾಜಕಾರಣದ ವಿಷಯ ಮಾತನಾಡುತ್ತಿಲ್ಲ. I have an objection.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ ವಸ್ತು ನಿಷ್ಟೆ ವಿಷಯದ ಮೇಲೆ ಚರ್ಚೆ ಮಾಡಿ ಎಲ್ಲರೂ ಒಟ್ಟಾಗಿ ನಿರ್ಣಯ ತೆಗೆದುಕೊಳ್ಳೋಣ.

**ಶ್ರೀ ಎಂ ನಾಗರಾಜು:–** ಮಾನ್ಯ ಸಭಾಪತಿಯವರೆ, ನಾನು ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ನೋಡಿ ಸಮಯ ತೆಗೆದುಕೊಂಡ ಮೇಲೆ ಮತ್ತೆ ಪೀಠವು ಸಮಯ ಕೊಡಲು ಬಲತ್ಕಾರ ಮಾಡಲು ನಾನು ಒಪ್ಪುವುದಿಲ್ಲ.

**ಶ್ರೀ ಎಂ ನಾಗರಾಜು:–** ಮಾನ್ಯ ಸಭಾಪತಿಯವರೆ, ಸಂವಿಧಾನ ಒಪ್ಪಿಕೊಂಡಿರತಕ್ಕಂತಹ .. . .

**ಉಪ ಸಭಾಪತಿಯವರು:–** ನೀವು ಕೇಳಿರುವ ಸಮಯದಲ್ಲಿ ತಾವು ಮುಗಿಸಬೇಕು. ನಾನು ಏನು ಸಮಯವನ್ನು ಹೇಳಿದ್ದೇನೆಯೇ?

**ಶ್ರೀ ಎಂ ನಾಗರಾಜು:–** ಮಾನ್ಯ ಸಭಾಪತಿಯವರೆ, ಆಯಿತು. ಸಂವಿಧಾನ ಒಪ್ಪಿಕೊಂಡಿರತಕ್ಕಂತಹ ನಾವೆಲ್ಲರೂ ಒಕ್ಕೂಟ ವ್ಯವಸ್ಥೆಯನ್ನು ಸಹ ನಾವುಗಳು ಗೌರವಿಸಬೇಕು. Law and order of a State is the responsibility of the State. ರಾಜ್ಯದ ಉಸ್ತುವಾರಿ ಅಗಿರುವುದರಿಂದ ಇದರಲ್ಲಿ ಕೇಂದ್ರ ಸರ್ಕಾರ ಹಸ್ತಕ್ಷೇಪ ಮಾಡುವಂತಹದ್ದು ಘೋರ ಅಪರಾಧ ಎಂದು ಹೇಳಲಿಕ್ಕೆ ಬಯಸುತ್ತೇನೆ. ಶ್ರೀ ಅಮಿತ್ ಷಾ ರವರು ಎರಡು ರಾಜ್ಯಗಳ ಸಭೆಯನ್ನು ಕರೆದಿರುವಂತಹದ್ದು unconstitutional ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇದನ್ನು ಖಂಡಿಸುತ್ತಿದ್ದೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮತ್ತೆ ಸರ್ವ ಪಕ್ಷಗಳ ಸಭೆ ಮಾಡದೇ ನಮ್ಮ ಮುಖ್ಯಮಂತ್ರಿಗಳು ಏಕ ಪಕ್ಷೀಯ ನಿರ್ಧಾರವನ್ನು ತೆಗೆದುಕೊಂಡು ಆ

ಸಭೆಯಲ್ಲಿ ಭಾಗವಹಿಸಿರುವಂತಹದ್ದು it is not a good sign of a democracy. ನಾನು ಈ ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿರುವುದರಿಂದ ಹೇಳುತ್ತಿದ್ದೇನೆ. ಆದರೆ, ಈಗ ತಾವು ತೆಗೆದುಕೊಂಡಿರುವ ನಿರ್ಣಯಕ್ಕೆ ನನ್ನ ಬೆಂಬಲ ಇದೆ. ಆದರೆ, ಕನ್ನಡಿಗರು ಮತ್ತು ಮರಾಠಿಗರು ಅನ್ಯೂನ್ಯವಾಗಿ ಬದುಕುತ್ತಿದ್ದಾರೆ. ಆದರೆ, ಇದಕ್ಕೆ ಹುಳ ಹಿಂಡುವಂತಹ ಕೆಲಸವನ್ನು ಮಹಾರಾಷ್ಟ್ರ ಮಾಡುತ್ತಿರಬೇಕಾದರೆ triple engine ಸರ್ಕಾರ ಆಗಿರುವಂತಹವರು ಇದನ್ನು ಬಗೆಹರಿಸಬೇಕಾಗಿರುವುದು ಉತ್ತಮ ದಾರಿಯಾಗಿದೆ. ಇಂತಹ ಸುಮುಧರವಾಗಿರುವಂತಹ ಸಮಯದಲ್ಲಿ ಕೇಂದ್ರ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಿ, ಪಾರ್ಲಿಮೆಂಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಮತ್ತೆ ಮಹಾಜನ್ ವರದಿಯನ್ನು ಅನುಷ್ಠಾನಗೊಳಿಸಬೇಕು. ಕನ್ನಡಿಗರಿಗೆ ನ್ಯಾಯ ಕೊಡಬೇಕೆನ್ನುವ ವಿಚಾರವನ್ನು ಕೇಳುತ್ತಿದ್ದೇನೆ. ಹಾಗಾಗಿ ನಾನು ಹೇಳುತ್ತಿರುವುದೇನೆಂದರೆ, ಬೆಳಗಾವಿಯಲ್ಲಿ ಇರುವಂತಹ ಕನ್ನಡಿಗರ ಮತ್ತು ಮಾರಾಠಿಗರ ಮಧ್ಯೆ ಯಾವುದೇ ಸಮಸ್ಯೆಗಳಿಲ್ಲ. ಆದರೆ, ಇವರ ಮಧ್ಯೆ ಹುಳ ಹಿಂಡುತ್ತಿರುವ ಮಹಾರಾಷ್ಟ್ರಕ್ಕೆ ಬುದ್ಧಿ ಕಲಿಸುವಲ್ಲಿ ನಮ್ಮ ರಾಜ್ಯದಲ್ಲಿರುವ 25 ಜನ ಲೋಕ ಸಭಾ ಸದಸ್ಯರು ಏನಿದ್ದಾರೆ, ಅವರು ಈ ವಿಚಾರದಲ್ಲಿ ಪ್ರಧಾನಿಗಳಿಗೆ ಮನವಿ ಮಾಡಬೇಕು ಮತ್ತು ಈ ವಿಚಾರದಲ್ಲಿ ಒತ್ತಡ ತರಬೇಕು, ಆ ಮೂಲಕ ಮಹಾರಾಷ್ಟ್ರಕ್ಕೆ ಬುದ್ಧಿ ಹೇಳಬೇಕೆಂದು ಹೇಳುತ್ತಾ, ಈ ನಿರ್ಣಯವನ್ನು ಸ್ವಾಗತ ಮಾಡುತ್ತೇನೆ.

**ಡಾ॥ ತಳವಾರ್ ಸಾಬಣ್ಣ ( ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಾನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ನಾನು ಬೆಳಗಾವಿಯಲ್ಲಿ 26 ವರ್ಷಗಳಿಂದ ವಾಸ್ತವ್ಯ ಇದ್ದೇನೆ. ಬೆಳಗಾವಿಯಲ್ಲಿ ಕನ್ನಡಿಗರ ಮತ್ತು ಮಾರಾಠಿಗರ ಮಧ್ಯೆ ಯಾವುದೇ ರೀತಿಯ ಗಲಾಟೆ ಇಲ್ಲ. ಅವರುಗಳು ಅನ್ಯೂನ್ಯವಾಗಿ ಬದುಕುತ್ತಿದ್ದಾರೆ. ಆದರೆ, ಯಾವಾಗ ಇಲ್ಲಿ ಕರ್ನಾಟಕ ರಾಜ್ಯೋತ್ಸವ ಬರುತ್ತದೋ, ಯಾವಾಗ ಕಾರ್ಪೋರೇಷನ್ ಚುನಾವಣೆ ಬರುತ್ತದೋ, ವಿಧಾನಸಭೆ ಚುನಾವಣೆ ಬರುತ್ತದೋ, ಯಾವಾಗ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ ಪ್ರಾರಂಭ ಆಗುತ್ತದೋ ಆಗ ಈ ಮರಾಠಿ ಪುಂಡರು ಇದಕ್ಕೆ ಪ್ರಚೋದನೆ ಮಾಡುತ್ತಾರೆ. ಮಹಾರಾಷ್ಟ್ರದಲ್ಲಿ ಇರುವಂತಹ ರಾಜಕಾರಣಿಗಳು ಎಷ್ಟು ಜವಾಬ್ದಾರಿತನದಲ್ಲಿ

ಇದ್ದಾರೋ ಅಷ್ಟೇ ಬೆಳಗಾವಿ ನಗರ ಮತ್ತು ಸುತ್ತ ಮುತ್ತ ಇರುವಂತಹ, ಮಾರಾಠಿ ಎಂದು ಹೇಳಿಕೊಳ್ಳುವಂತಹ ಈ ಪುಡಾರಿಗಳು ಸಹಿತ ಅದಕ್ಕೆ ಜವಾಬ್ದಾರಿ ಇದ್ದಾರೆ. ನಾವುಗಳು ಹಲವಾರು ಕಡೆ ಹೋಗುತ್ತಾ ಇರುತ್ತೇವೆ. ಬಸ್‌ನಲ್ಲಿ ಕುಳಿತಿರುತ್ತೇವೆ, ಹೋಟೆಲ್‌ನಲ್ಲಿ ಕುಳಿತಿರುತ್ತೇವೆ, ಸಾರ್ವಜನಿಕವಾಗಿ ಮಾತನಾಡಬೇಕಾದಾಗ ಕನ್ನಡದವರು ಕನ್ನಡ ಮಾತನಾಡುತ್ತಿರುತ್ತಾರೆ, ಮಾರಾಠಿಯವರು ಮಾರಾಠಿಯನ್ನು ಮಾತನಾಡುತ್ತಿರುತ್ತಾರೆ. ಅಲ್ಲಿ ನಮಗೆ ಯಾವುದೇ ಗೊಂದಲ ಎನಿಸುವುದಿಲ್ಲ. 25 ವರ್ಷಗಳಿಂದ ಇಲ್ಲಿ ವಾಸವಾಗಿರವ ಮಾರಾಠಿ ಮಾತನಾಡುವುದರಿಂದ ನಮಗೆ ಏನೂ ಅನಿಸುವುದಿಲ್ಲ. ಅವರ ಪಾಡಿಗೆ ಅವರು ಮಾತನಾಡುತ್ತಿರುತ್ತಾರೆ, ಇವರ ಪಾಡಿಗೆ ಇವರು ಮಾತನಾಡುತ್ತಿರುತ್ತಾರೆ. ಆದರೆ, ಕೆಲವು ಪುಡಾರಿಗಳು ಮಾತ್ರ ಇದಕ್ಕೆ ಬೆಂಕಿ ಹಚ್ಚುತ್ತಿದ್ದಾರೆ. ಮತ್ತೆ ವಿಚಾರ ಏನೆಂದರೆ, ಈ linguistic minority ಎನ್ನುವಂತಹ ಹೆಸರಿನಲ್ಲಿ ಕರ್ನಾಟಕ ಸರ್ಕಾರದಿಂದ ಶಿಕ್ಷಣ ಸಂಸ್ಥೆಗಳು ಅನುದಾನ ಪಡೆಯುತ್ತಿವೆ. ಅವರು ಮಾತ್ರ ಇಲ್ಲಿ ಎಂ.ಇ.ಎಸ್. ಲೀಡರ್‌ಗಳಾಗಿ ಕೆಲಸಮಾಡುತ್ತಿದ್ದಾರೆ. ಇದನ್ನು ನಾನು ವಿರೋಧ ಮಾಡುತ್ತೇನೆ ಮತ್ತೆ, ಚಿಕ್ಕ ಚಿಕ್ಕ ಮಕ್ಕಳಲ್ಲಿಯೂ ಸಹಿತ ಕನ್ನಡ- ಮರಾಠಿ ಎನ್ನುವಂತಹ ವಿಷ ಬೀಜವನ್ನು ಬಿತ್ತುತ್ತಿದ್ದಾರೆ. ಇದು ಬಹಳ ತಪ್ಪು. ನಾವು ಇದನ್ನು ಕರ್ನಾಟಕದ ಬೆಳಗಾವಿಯಲ್ಲಿ ನೋಡುತ್ತಿದ್ದೇವೆ. ಅಥವಾ ತಂದೆ ಮಾರಾಠಿ ಭಾಷೆಯನ್ನು ಮಾತನಾಡುತ್ತಿದ್ದರೆ ತಾಯಿ ಕನ್ನಡ ಭಾಷೆಯನ್ನು ಮಾತನಾಡುತ್ತಿರುತ್ತಾರೆ. ಮತ್ತೆ, ಉತ್ತಮವಾದ ವೈವಾಹಿಕ ಸಂಬಂಧವನ್ನು ನಾವು ಇಲ್ಲಿ ಬೆಳಗಾವಿಯಲ್ಲಿ ಕಾಣುತ್ತಿದ್ದೇವೆ. ಹೀಗಾಗಿ, ಈ ಒಂದು ವ್ಯವಸ್ಥೆ ಏನಿದೆ, ಇದನ್ನು ನಾವು ಸಂಪೂರ್ಣವಾಗಿ ಖಂಡನೆ ಮಾಡುತ್ತೇವೆ. ಇವತ್ತು ಕರ್ನಾಟಕಕ್ಕೆ ಉತ್ತರ ಕರ್ನಾಟಕವನ್ನು ತೆಗೆದುಕೊಂಡರೆ ಬೆಳಗಾವಿಯನ್ನು ಬಿಟ್ಟು ಮುಂದಕ್ಕೆ ಹೋದರೆ, ಅದು ಬಿಜಾಪುರ ಆಗಿರಬಹುದು, ಕಲ್ಬುರ್ಗಿ ಆಗಿರಬಹುದು, ಬೀದರ್ ಆಗಿರಬಹುದು. ಅಲ್ಲಿ ಎಲ್ಲಾ ಕಡೆ ಮಹಾರಾಷ್ಟ್ರದ ಗಡಿ ಭಾಗಗಳಿವೆ. ಸೋಲಾಪುರದಲ್ಲಿಯೂ ಸಹಿತ ಕನ್ನಡಿಗರಿದ್ದಾರೆ, Jath ನಲ್ಲಿ ಇದ್ದಾರೆ, Sangli ನಲ್ಲಿ ಇದ್ದಾರೆ, ಕೊಲ್ಹಾಪುರದಲ್ಲಿದ್ದಾರೆ, ಮೀರಜ್‌ನಲ್ಲಿ ಇದ್ದಾರೆ, ಅಲ್ಲಿ ಎಲ್ಲಿಯೂ ತಂಟೆಯಿಲ್ಲ. ಬೆಳಗಾವಿ ಮಾತ್ರ ಯಾವಾಗಲೂ ಈ ರೀತಿ ಆಗುತ್ತಿದೆ. ಇಲ್ಲಿ ಏತಕ್ಕೆ ಆಗುತ್ತಿದೆ ಎಂದರೆ, ಇಲ್ಲಿ ಇರತಕ್ಕಂತಹ ಕೆಲವು ವ್ಯಕ್ತಿಗಳಿಂದ ಆಗುತ್ತಿದೆ. ಅವರುಗಳ

ಮೇಲೆ ನಾವು ಕಟ್ಟು-ನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, ಈ ನಿರ್ಣಯಕ್ಕೆ ನಾನು ಬೆಂಬಲವನ್ನು ಸೂಚಿಸುತ್ತೇನೆಂದು ಹೇಳುತ್ತಾ, ಈ ನಿರ್ಣಯಕ್ಕೆ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದ ಕುರಿತು ಸುಧೀರ್ಘವಾದ ಚರ್ಚೆಯನ್ನು ಹಿರಿಯ ಸದಸ್ಯರು ಮಾಡಿದ್ದಾರೆ. ಹೀಗಾಗಿ ನಾನು ಹೆಚ್ಚು ವಿಷಯಗಳನ್ನು ಮಾತನಾಡುವುದಿಲ್ಲ. ಕರ್ನಾಟಕ ರಾಜ್ಯ ಏಕೀಕರಣವಾದ ಮೇಲೆ ಇಡೀ ಕರ್ನಾಟಕ ರಾಜ್ಯವನ್ನು ಭಾಷಾವಾರು ಪ್ರಾಂತ್ಯವಾರು ರಚನೆಯಾದ ಮೇಲೆ, ಅನೇಕ ಸಂಘ -ಸಂಸ್ಥೆಗಳನ್ನು, ಸಂಸ್ಥಾನಗಳನ್ನು ಒಂದೂಗೂಡಿಸಿದಂತಹ ಈ ಸಂದರ್ಭದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ವಿವಾದ ಆಗಾಗ ಪ್ರಸ್ತಾಪ ಆಗುವಂತಹದ್ದನ್ನು ನಾವೆಲ್ಲರೂ ಗಮನಿಸಿದ್ದೇವೆ. ಈಗಾಗಲೇ ನಾವೆಲ್ಲರೂ ಗಮನಿಸಿದ ಹಾಗೆ ಮಹಾಜನ್ ಅಂತಿಮ ವರದಿ ಬಂದ ಮೇಲೆ ಗಡಿ-ವಿವಾದ ಇಲ್ಲ ಎನ್ನುವುದನ್ನು ನಾವೆಲ್ಲರೂ ಕೂಡ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ವಿಚಾರ ಮುಗಿದ ವಿಷಯ ಎಂದು ನಾವು ಸ್ಪಷ್ಟವಾಗಿ ಮಹಾರಾಷ್ಟ್ರದವರಿಗೆ ಒಂದು ಸಂದೇಶವನ್ನು ಕಳುಹಿಸಬೇಕಾಗುತ್ತದೆ.

**ಮುಂದು.**

**(1221) 27.12.2022 05.30 ಎಸ್‌ವಿ-ವಿಕೆ** (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು):**

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಗಡಿ ವಿಚಾರ ಮುಗಿದ ವಿಷಯ ಎಂದು ಮಹಾರಾಷ್ಟ್ರ ಸರ್ಕಾರಕ್ಕೆ ನಾವು ಸ್ಪಷ್ಟ ಸಂದೇಶವನ್ನು ಕಳುಹಿಸಬೇಕಾಗುತ್ತದೆ. ಗಡಿ ವಿವಾದದ ಮುಖಾಂತರ ಕೇವಲ ರಾಜಕೀಯ ಮಾಡುವ ಕೆಲವೊಬ್ಬರು ಮಾತ್ರ ಆಗಾಗ ಇಂತಹ ವಿಷಯಗಳನ್ನು ಪ್ರಸ್ತಾಪ ಮಾಡುವುದನ್ನು ನಾವು ಗಮನಿಸಿದ್ದೇವೆ. ಗಡಿ ವಿಚಾರವನ್ನು ಕೈಬಿಡಬೇಕು ಎಂಬ ಸ್ಪಷ್ಟವಾದ ವಿಚಾರವನ್ನು ಈ ಸದನದ ಮುಖಾಂತರ ಮಹಾರಾಷ್ಟ್ರ ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ.

"ಬೆಳಗಾಂವ್" ನಮ್ಮದು ಎಂದು ಮಹಾರಾಷ್ಟ್ರದವರು ಹೇಳುವ ಮೂಲಕ ಕನ್ನಡಿಗರ ಸಹನೆಯನ್ನು ಕೆಣಕಬಾರದು ಎಂದು ನಾವು ಮಹಾರಾಷ್ಟ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಅವರು ಬೆಳಗಾವಿ ನಮ್ಮದು ಎಂದರೆ ಕರ್ನಾಟಕದವರು ಶೋಲಾಪುರ ನಮ್ಮದು, ಕೊಲ್ಹಾಪುರ ನಮ್ಮದು, ಮೀರಜ್, ಸಾಂಗ್ಲಿ ಮುಂತಾದ ಅನೇಕ ಭಾಗಗಳು ಕರ್ನಾಟಕಕ್ಕೆ ಸೇರಬೇಕೆಂದು ಹೇಳುತ್ತಾರೆ. ಈ ರೀತಿಯಾಗಿ ಕನ್ನಡಿಗರ ಕೂಗು ಹೋಗುವುದಕ್ಕಿಂತ ಮುಂಚೆ ಗಡಿ ವಿವಾದ ಮುಗಿದ ಅಧ್ಯಾಯ ಎನ್ನುವುದನ್ನು ಸ್ಪಷ್ಟ ಪಡಿಸಬೇಕು. ಗಡಿ ಪ್ರದೇಶದಲ್ಲಿರತಕ್ಕಂತಹ ಶಿಕ್ಷಣ ಸಂಸ್ಥೆಗಳನ್ನು ನಾವು ಅಭಿವೃದ್ಧಿ ಪಡಿಸಬೇಕು. ಸರ್ಕಾರ ಸಾಕಷ್ಟು ಗಮನವನ್ನು ಆ ಕಡೆ ಹರಿಸಿ ಕರ್ನಾಟಕದಲ್ಲಿರುವಂತಹ ಯಾವುದೇ ಒಬ್ಬ ವಿದ್ಯಾರ್ಥಿಯು ಕೂಡ ಮಹಾರಾಷ್ಟ್ರಕ್ಕೆ ಶಿಕ್ಷಣಕ್ಕಾಗಿ ಹೋಗದಿರುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಬೆಳೆಸಬೇಕು. ಅದರ ಜೊತೆಯಲ್ಲಿ ಕೃಷ್ಣಾ ನದಿ ನೀರಿಗಾಗಿ ನಾವು ಪ್ರತಿ ವರ್ಷವೂ ಹೋರಾಟ ಮಾಡುವಂತಹ ಪ್ರಸಂಗ ಬರುತ್ತದೆ. ಪ್ರತಿವರ್ಷವೂ ನಾಲ್ಕು ಟಿ.ಎಂ.ಸಿ.ಯಷ್ಟು ನೀರು ಪಡೆಯಲು ನಾವು ಸಾಕಷ್ಟು ಅಲೆದಾಡುತ್ತಿದ್ದೇವೆ. ಅದಕ್ಕೆ ಒಂದು ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುವಂತಹ ಮಾತನ್ನು ಹೇಳಿ ಈ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತ ಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರು ಮಾತನಾಡಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮೋಹನ್ ಕೊಂಡಜ್ಜಿ ಅವರೊಬ್ಬರು ಮಾತನಾಡಿಲ್ಲ. ಅವರೂ ಮಾತನಾಡಿಬಿಡಲಿ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಿನ್ನೆ ನಾನು ನಮ್ಮ ಕಾಂಗ್ರೆಸ್ ಪಕ್ಷದ ಒಬ್ಬ ದೊಡ್ಡ ನಾಯಕರ ಜೊತೆಯಲ್ಲಿದ್ದೆನು. ಅವರಿಗೆ ಮಹಾರಾಷ್ಟ್ರದೊಂದಿಗೆ ಬಹಳ ಸಂಬಂಧವಿದೆ. ಅವರು ನನಗೆ ಏನು ಹೇಳಿದರೆಂದರೆ ಪ್ರತಿ ಬಾರಿಯೂ ಗ್ರಾಮ ಪಂಚಾಯಿತಿ ಅಥವಾ ಮುನಿಸಿಪಲ್ ಎಲೆಕ್ಷನ್ ಬಂದಾಗ ಮಹಾರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳು Grassroots Politics ನಲ್ಲಿ ಗೆಲ್ಲುವುದಕ್ಕೋಸ್ಕರ ಈ ರಾಜಕಾರಣ ಮಾಡುತ್ತಿದೆ. ನನಗೆ ಮಾಹಿತಿ ಗೊತ್ತಿಲ್ಲ. ಕಳೆದ 25-30 ವರ್ಷದಿಂದಲೂ ಯಾವುದೇ ಗ್ರಾಮ ಪಂಚಾಯಿತಿ, ಸ್ಥಳೀಯ ಸಂಸ್ಥೆಗಳ ಚುನಾವಣೆ ಬರುತ್ತದೆಯೋ ಆಗ ಈ ರೀತಿ ಸೃಷ್ಟಿ ಮಾಡುತ್ತಾರೆ.

ಬೇರೆ ಕಾರಣಕ್ಕೆ ಅಲ್ಲ ಎಂದು ಅವರು ಹೇಳುತ್ತಿದ್ದರು. In fact, ನನಗೆ ಒಬ್ಬ journalist ಫೋನ್ ಮಾಡಿ ಕಾಸರಗೋಡು ಬಗ್ಗೆ ಯಾರೂ ಮಾತನಾಡುವುದಿಲ್ಲ ಎಂದು ಕೇಳಿದರು. ಮೋಹನ್ ಕೊಂಡಜ್ಜಿಯವರು ಹೆಚ್ಚು ಮಾತನಾಡುವುದಿಲ್ಲ ಎಂದು ಹೇಳಿದರು.

**ಉಪ ಸಭಾಪತಿಯವರು:–** ಮಾನ್ಯ ಕಾನೂನು ಸಚಿವರೇ ತಾವು ಮಾತನಾಡಬೇಕೆಂದು ಹೇಳಿದರು.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:–** ಮಾನ್ಯ ಸಭಾಪತಿಯವರೇ, ರಾಜಕೀಯ ಕಾರಣಕ್ಕಾಗಿ ಈ ರೀತಿ ಆಗುತ್ತಿರುತ್ತದೆ. ನನ್ನಂತಹವನಿಗೆ ನಾನು ಒಬ್ಬ ಸಮಾಜವಾದಿ, radical ಎಂದು ಭಾವಿಸಿದ್ದೇನೆ. ಈಗ ಬಿಜೆಪಿಯವರು ಅಧಿಕಾರದಲ್ಲಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಕೊಂಡಜ್ಜಿಯವರೇ, ಮಾನ್ಯ ಕಾನೂನು ಮಂತ್ರಿಗಳು ತಮ್ಮ ಬಳಿ information ಇದೆ ಎಂದೇ ತಮಗೆ ಮಾತನಾಡಲು ಹೇಳಿದ್ದಾರೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:–** ಮಾನ್ಯ ಸಭಾಪತಿಯವರೇ, ನಾವು ಏಕ್ ಭಾರತ್, ಏಕ್ ದೇಶ್ ಎಂದು ಮಾತನಾಡುತ್ತೇವೆ. ಇಂಥದ್ದರಲ್ಲಿಯೂ ಇಂತಹ ಪರಿಸ್ಥಿತಿ ನೋಡಿ ನನಗೆ ಬೇಜಾರಾಗುತ್ತದೆ. ಆದ್ದರಿಂದ ಈ ನಿರ್ಣಯದ ಪರವಾಗಿ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ಮಾತನಾಡಿರುವುದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ Constituent Assembly ಕರಡನ್ನು ಅಂತಿಮಗೊಳಿಸುವಾಗ ಪ್ರಾಂತ್ಯವಾರು ವಿಂಗಡಣೆ ಆಗುವುದು ಸೂಕ್ತ ಎನ್ನುವ ಅಭಿಪ್ರಾಯ ಆಗಲೇ ವ್ಯಕ್ತವಾಯಿತು. ಕಾಲದ constraint ಯಿಂದಾಗಿ ಬಹುಶಃ ಮುಂದೆ ಬರುವ Legislators ಸಮರ್ಪಕವಾಗಿ ಬಗೆಹರಿಸಿಕೊಳ್ಳಬಹುದು ಎನ್ನುವ ಒಂದೇ ಒಂದು ಕಾರಣಕ್ಕೆ ಚರ್ಚೆ ಮಾಡಿ ಮುಂದೂಡಿ ತಕ್ಷಣಕ್ಕೆ ಸಂವಿಧಾನವನ್ನು accept ಮಾಡಿಕೊಳ್ಳುವಂತಹ ಸ್ಥಿತಿ ನಮ್ಮಲ್ಲಿ ಇದ್ದುದರಿಂದ ಅವರು ಇದರ ಬಗ್ಗೆ ಬೆಳಕು ಚೆಲ್ಲುವುದು ಸ್ವಲ್ಪ ಕಷ್ಟವಾಯಿತು ಎಂದು ನಾನು ಓದಿದ್ದೇನೆ.

ಭಾಷಾವಾರು ಪ್ರಾಂತ್ಯಗಳ ವಿಂಗಡಣೆ ಮಾಡಿದ್ದು ಅಷ್ಟೊಂದು ಸುಲಭವಾದ ಪ್ರಕ್ರಿಯೆಯಾಗಿರಲಿಲ್ಲ ಎಂಬುದು ನಮಗೆ ಗೊತ್ತು. ಫಜ಼ಲ್ ಅಲಿ ಆಯೋಗವನ್ನು ರಚನೆ ಮಾಡಿ ಅವರು ಕೊಟ್ಟ ವರದಿಯ ಮೇಲೆ ರಾಜ್ಯಗಳನ್ನು ಮರುವಿಂಗಡಣೆ ಮಾಡಿದರು. ನಮಗೆ ಅವತ್ತೂ ನೋವಿತ್ತು. ಗೋದಾವರಿಯಿಂದ ಕಾವೇರಿಯವರೆಗೆ ಇದ್ದ ಕರ್ನಾಟಕ ನಿಪ್ಪಾಣಿಯಿಂದ ಕಾವೇರಿಯವರೆಗೆ ಮಾತ್ರ ಸೀಮಿತವಾಯಿತು ಎಂದು ನಮಗೆ ನೋವಿತ್ತು. ಆದರೂ ನಾವು ಸ್ವಲ್ಪ ಶಾಂತಿಪ್ರಿಯರು. 1953ಯಲ್ಲಿ ರಚನೆಯಾದ ಫಜಲ್ ಅಲಿ ಆಯೋಗ ವರದಿಯನ್ನು ನಾವು ಒಪ್ಪಿಕೊಂಡು 1956ರಲ್ಲಿ ಹೊಸ ರಾಜ್ಯದ ಉದಯವಾಗಿ, ಆಚರಣೆಯನ್ನು ಪ್ರಾರಂಭಿಸಿದೆವು. ತದನಂತರ ಮಹಾರಾಷ್ಟ್ರದವರು ತೀಟೆ ಶುರು ಮಾಡಿಕೊಂಡು ನಮಗೆ ಇದು ಸಮ್ಮತವಾಗಿಲ್ಲ ಎಂದು ಹೇಳಿ ಒತ್ತಡವನ್ನು ತಂದ ಆಧಾರದ ಮೇಲೆ ಜಸ್ಟೀಸ್ ಮಹಾಜನ ಆಯೋಗವನ್ನು ನೇಮಕ ಮಾಡಿದರು. ಮಹಾಜನ್ ಆಯೋಗ ರಚನೆಯಾದಾಗ ನಾವು ಸ್ಪಷ್ಟವಾಗಿ ನಮ್ಮ ಸಹಮತಿಯನ್ನು ಕೊಟ್ಟಿರಲಿಲ್ಲ. ಆದರೂ ಕೂಡ ನಮ್ಮ ಪ್ರತಿರೋಧ ಅಷ್ಟರಮಟ್ಟಿಗೆ ಇರಲಾರದ್ದಕ್ಕೆ ಆಯೋಗ ನೇಮಕಗೊಂಡಿತು. ವರದಿಯನ್ನೂ ಕೊಟ್ಟರು. ಅವರು ಹೇಳಿದ ಹಾಗೆ ವರದಿ ಮಾತ್ರ receive ಆಯಿತು. ಅದರ ಮೇಲೆ ಚರ್ಚೆಯಾಗಿ ಸರ್ಕಾರ accept ಮಾಡುವುದಾಗಲೀ ಆಗಲಿಲ್ಲ. ಇಂದು Reorganisation of States Act ಏನು ನಮ್ಮ ಗಡಿ ಇದೆ, ಅದೇ ನಮ್ಮ ಗಡಿ ಎನ್ನುವ ವಾದದಲ್ಲಿಯೇ ಇದ್ದೇವೆ. ಇದನ್ನು ದಯಮಾಡಿ ಎಲ್ಲಿಯೂ ನಾವು ಗೊಂದಲ ಮಾಡಿಕೊಳ್ಳುವುದು ಬೇಡ. ನಾವು ಮಾತನಾಡುವಾಗ ಮಹಾಜನ್ ವರದಿಯನ್ನು ಒಪ್ಪುತ್ತೇವೆ ಎಂದು ಹೇಳಿದ್ದೇವೆ. As a State we stick to our own decision. Reorganisation of States Act ಏನಿದೆ ಅದರ ಪರವಾಗಿ ನಾವು ನಿಂತಿದ್ದೇವೆ. ಅದನ್ನು ಸುಪ್ರೀಂ ಕೋರ್ಟ್‌ನ ಮುಂದೆ ಚರ್ಚೆ ಮಾಡುವುದಕ್ಕೆ ಅವರು ಪ್ರಯತ್ನ ಮಾಡಿದರು. Admissibility ಯೇ ಇನ್ನೂ stake ನಲ್ಲಿದೆ. Admissibility, can it be admitted or not ಎನ್ನುವ ವಿಷಯ ಇಂದು ಸುಪ್ರೀಂ ಕೋರ್ಟ್ ಮುಂದೆ arbitration ನಲ್ಲಿರುವ ವಿಷಯ. ಸುಪ್ರೀಂ ಕೋರ್ಟ್ ಕೇಸ್ ಅನ್ನು ತೆಗೆದುಕೊಂಡಿಲ್ಲ. Admissibility ಆಗುತ್ತದೆಯೇ ಇಲ್ಲವೇ ಎನ್ನುವುದರಲ್ಲಿಯೇ ಸುಮಾರು ವರ್ಷಗಳು ಕಳೆದು ಹೋಯಿತು. ಆಗ ನಾವು ಒಂದು ಟೀಮ್ ಮಾಡಿದ್ದೆವು. ಈಗ ಅದರ ಬದಲಿಗೆ ಜಸ್ಟೀಸ್ ಶಿವರಾಜ್ ಪಾಟೀಲ್ ಅಧ್ಯಕ್ಷತೆಯಲ್ಲಿ ಶ್ರೀ ಮುಕುಲ್ ರೋಹಟಗಿಯವರನ್ನು ಮುಖ್ಯ ವಕೀಲರನ್ನಾಗಿ ನೇಮಿಸಿ

ಒಂದು ಟೀಮ್ ಅನ್ನು ಮಾಡಿದ್ದೇವೆ. ಸುಪ್ರೀಂ ಕೋರ್ಟ್‌ನಲ್ಲಿ ಏನು ಕೆಲಸ ಕಾರ್ಯ ಆಗಬೇಕಾಗಿದೆ ಅದನ್ನು ನೋಡಿಕೊಳ್ಳಲಿಕ್ಕೆ ನಮಗೆ ತಿಳಿದ ಮಟ್ಟಿಗೆ ರಾಜ್ಯದಲ್ಲಿ ಇದ್ದಂತಹ ಒಳ್ಳೆಯ ವಕೀಲರನ್ನು ದೆಹಲಿ ಮಟ್ಟದಲ್ಲಿ ನೇಮಿಸಿ ಸುಪ್ರೀಂ ಕೋರ್ಟ್ ಮುಂದೆ ನಿರ್ವಹಿಸುತ್ತಿದ್ದೇವೆ.

ಇನ್ನು ರಾಜಕೀಯವಾಗಿ ಹೇಳುವುದಾದರೆ ಕೇಂದ್ರ ಗೃಹ ಸಚಿವರಾದ ಮಾನ್ಯ ಅಮಿತ್ ಷಾ ಅವರು ಕರೆಯಬಾರದಾಗಿತ್ತು ಎಂದು ಟೀಕೆ ಮಾಡಿದರು. ಮಾನ್ಯ ಅಮಿತ್ ಷಾ ಅವರು ಒಡಂಬಡಿಕೆಯನ್ನು ಮಾಡಿ ರಾಜಿ ಸಂಧಾನಕ್ಕಾಗಿ ಕರೆಯಲಿಲ್ಲ. ನೀವು ಸಂವಿಧಾನಬದ್ಧವಾಗಿ ಏನಾದರೂ ಮಾಡಿಕೊಳ್ಳಿ. ಆ ಕಡೆ ಈ ಕಡೆ ಓಡಾಡುವ ಸಾರ್ವಜನಿಕರಿಗೆ ಯಾರೂ ತೊಂದರೆ ಕೊಡದ ರೀತಿಯಲ್ಲಿ ಶಾಂತಿಯನ್ನು ಕಾಪಾಡಿ ಎನ್ನುವ ಒಂದೇ ಒಂದು ಸಂದೇಶವನ್ನು ಅವರು ಕೊಟ್ಟರು. Let it not be misunderstood. They know, ಅವರಿಗೆ ಇದು ಅಧಿಕಾರ ಇಲ್ಲ ಎಂದು. Only Parliament is enabled ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಆರ್ಟಿಕಲ್ 3 ಅನ್ನು ಯಾರೂ ಕೈಗೆತ್ತಿಕೊಳ್ಳುವುದಕ್ಕಾಗುವುದಿಲ್ಲ. ಅಷ್ಟರ ಮಟ್ಟಿಗೆ ಒಂದು ಸಂದೇಶವನ್ನು ಕೊಟ್ಟ ರಾಷ್ಟ್ರದ ಗೃಹಸಚಿವರ ಬಗ್ಗೆ ನಾವು ತಪ್ಪಾಗಿ ಅರ್ಥೈಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಅದು ಸರಿಯಾದುದು ಎಂದು ನಾವು ಎರಡೂ ರಾಜ್ಯದವರು ಶಾಂತಿ ಮತ್ತು ನೆಮ್ಮದಿಯನ್ನು ಕದಡುವುದಿಲ್ಲ ಎಂದು ಹೇಳಬಂದೆವು.

ನಮ್ಮ ದುರದೃಷ್ಟವಶಾತ್ ಮಹಾರಾಷ್ಟ್ರ ಸರ್ಕಾರ ಈ ಕ್ರಿಯೆ ಮಾಡಿತು ಎಂದು ನಾವು ಅನ್ನಲಿಲ್ಲ. ಕೆಲವು ಬೇರೆ ಪಕ್ಷಗಳ ಮುಖಂಡರು ಅಥವಾ Legislators ಬಹಳ ಅಸಭ್ಯವಾಗಿ ಮಾತನಾಡಿದರು. ಯಾರೋ ಜಯಂತ್ ಪಾಟೀಲ್ ಎನ್ನುವವರು ಬೊಮ್ಮಾಯಿಯವರಿಗೆ ಮಸ್ತಿ ಅಂದರೆ ಕೊಬ್ಬು ಎಂದು ಮಾತನಾಡಿದರು. ಇನ್ನೊಬ್ಬರು ನಾವು ನಿಮಗೆ ಒಂದೇ ಒಂದು ಹನಿ ನೀರನ್ನು ಕೊಯ್ನಾದಿಂದ ಕೊಡುವುದಿಲ್ಲ. ಅದು ಹೇಗೆ ಜೀವನ ಮಾಡುತ್ತೀರೋ ನೋಡುತ್ತೇವೆ ಎಂದು ಹೇಳುತ್ತಾರೆ. ಒಂದು ರಾಜ್ಯದ ಮುಖ್ಯಮಂತ್ರಿಯವರನ್ನು ಇನ್ನೊಬ್ಬರು ಯಾರೋ ಬಾಯಿಗೆ ಬಂದಂತೆ ಮಾತನಾಡುವ ಕೆಟ್ಟ ಸ್ಥಿತಿಗೆ ಒಂದು ಶಾಸನಸಭೆ ಹೋಗುತ್ತದೆ ಎಂದರೆ ಇದಕ್ಕಿಂತ ದುರ್ವ್ಯವಸ್ಥೆ, ದುಸ್ಥಿತಿ ಇನ್ನೊಂದಿಲ್ಲ. ಇದನ್ನು ನಾವು ತೀಕ್ಷ್ಣವಾಗಿ ಖಂಡಿಸುತ್ತೇವೆ. ಇದರಲ್ಲೇನೂ ದಾಕ್ಷಿಣ್ಯ ಇಲ್ಲ. ನಾವು ನಯವಾಗಿರಬೇಕು, ಕೆಟ್ಟ ಮಾತನಾಡಬಾರದು. ನಾವು ಸಜ್ಜನರಾಗಿ ವರ್ತಿಸಬೇಕು ಎಂದರೆ

ಯಾರು ಯಾರೋ ಹೇಗೆ ಹೇಗೋ ಬೈಯುತ್ತಾರೆ. ಅದನ್ನೆಲ್ಲಾ ಅನ್ನಿಸಿಕೊಂಡು ಕರ್ನಾಟಕ ರಾಜ್ಯದ ಆಡಳಿತ ಮಾಡಬೇಕಾದುದು ಇಲ್ಲ. ನಾವು ಇದನ್ನು ಖಡಾಖಂಡಿತವಾಗಿ ಖಂಡಿಸುತ್ತೇವೆ.

ಎರಡನೆಯದಾಗಿ ಮೊನ್ನೆ ಅವರಷ್ಟಕ್ಕೆ ಅವರೇ ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶ ಮಾಡಿ ಇನ್ನೊಂದು ತೀರ್ಮಾನವನ್ನು ಮಾಡಿಕೊಂಡರು.

**(…ಮುಂದು)**

(1222) 27-12-2022, 5.40 ಕೆಜಿ.ವಿಕೆ (ಬಿಎನ್‌ಎಸ್) (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು.,):-**

ಮಾನ್ಯ ವಿರೋಧ ಪಕ್ಷದ ಸದಸ್ಯರಾದ ಹರಿಪ್ರಸಾದ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳದರು. Union Territory ಆಗುವುದಕ್ಕೆ ಏನಾದರೂ ಲಕ್ಷಣಗಳು ಇದ್ದರೆ, ಅದಕ್ಕೆ 2/3 ಸಿಟಿಗಳು ಇವೆ. ಅದು ಬೆಳಗಾವಿಗೆ ಇಲ್ಲ. ಅದರಲ್ಲಿ ಮೊದಲನೇ ಲಕ್ಷಣ ಮುಂಬೈಗೆ ಇದೆ. ಮುಂಬೈ ಸಿಟಿಗೆ ಇದೆ. ಅದು almost Union Territory ಆಗಿ ಇತ್ತು. Presidency ಇದ್ದಾಗ, ಅದು part of Maharashtra ಆಗಿರಲಿಲ್ಲ. ಅದು province ಇತ್ತು. Gujarat bifurcate ಆಗುವವರೆಗೂ Bombay Province. It was not part of Maharashtra. ಮತ್ತೆ, ಅವತ್ತು ಬಾಂಬೆಯಲ್ಲಿ Hindi speaking ಇದ್ದಿದ್ದು ಬಿಟ್ಟರೆ, Marathi speaking ಇರಲಿಲ್ಲ. ಇಡೀ ಬಾಂಬೆ ಹಿಂದಿಯ ಕೇಂದ್ರವಾಗಿತ್ತು. ಅವರಿಗೆ ಏನಾದರೂ ಒಳ್ಳೆಯ ಮನಸ್ಸು ಇದ್ದು, ಈ ದೇಶದ ಬಗ್ಗೆ ಕಾಳಜಿ ಇದ್ದರೆ, ಒಂದು resolution ಮಾಡಲಿ. ಬಾಂಬೆಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿದ್ದೇವೆಂದು ಘೋಷಣೆ ಮಾಡಲಿ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. Almost twenty percent of the Bombay….

**ಶ್ರೀ ಸವದಿ ಲಕ್ಷಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಇದರಲ್ಲಿ ಇನ್ನೊಂದು ವಿಷಯವನ್ನು ಜೋಡಿಸಿಕೊಳ್ಳಬೇಕು. ಮುಂಬೈಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡುವುದಕ್ಕೆ ಅತ್ಯಂತ ಸೂಕ್ತವಾಗಿರುವಂತಹ ಸಲಹೆ ಇದೆ, ಅದರಲ್ಲಿ ನಮ್ಮ ಹಕ್ಕು ಇದೆ. ನಮ್ಮ ಏಕೀಕರಣ ಆಗುವುದಕ್ಕಿಂತ ಮುಂಚೆ ಮುಂಬೈ ಕರ್ನಾಟಕ ಎಂದು ಏನು ಹೆಸರು ಇತ್ತು, ಆಗ ನನ್ನ ಕ್ಷೇತ್ರದ ಅಥಣಿ

ಶಾಸಕರಾಗಿದ್ದವರು ಮುಂಬೈ Assembly ಗೆ ಹೋಗಿದ್ದರು. ಆ ರೀತಿ ಇರುವುದರಿಂದ ಮುಂಬೈ ನಗರದಲ್ಲಿದ್ದರೂ ಅದರಲ್ಲಿ ನಮ್ಮದು ಪಾಲು ಎನ್ನುವುದನ್ನು ಇವತ್ತು ನಾವು ವಾದ ಮಾಡಬೇಕಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮ್ಮದ್ದು ಮಂಗಳೂರವರೆಗೂ ಪಾಲು ಇದೆ.

**ಶ್ರೀ ಸವದಿ ಲಕ್ಷಣ:-** ಮಾನ್ಯ ಸಭಾಪತಿಯವರೇ, ಈ ಭಾಗದಲ್ಲಿದ್ದಂತಹ ಅನೇಕ ಶಾಸಕರು ಮುಂಬೈ ಸರ್ಕಾರದಲ್ಲಿ ಶಾಸಕರಾಗಿದ್ದರು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು):-** ಮಾನ್ಯ ಸಭಾಪತಿಯವರೇ, ಕಾರವಾರ ಇತ್ತು ಅದಕ್ಕೆ ನಾನು ಮಂಗಳೂರವರೆಗೂ ಎಂದು ಹೇಳಿದ್ದು, ಜೊತೆಗೆ ಮುಂಬೈ ಒಂದು cosmopolitan city ಆಗಿರುವುದರಿಂದ hotel management ನಿಂದ ಹಿಡಿದು, bank management ನಿಂದ ಹಿಡಿದು regular labour ವರೆಗೆ ಮುಂಬೈನಲ್ಲಿ ಏನಾದರೊಂದು ತಪಶೀಲು ಮಾಡಿಸಿದರೆ minimum 20 percent ಜನರು ಕನ್ನಡ ಭಾಷೆ ಅಥವಾ ಕೊಂಕಣಿ ಭಾಷೆ ಮಾತನಾಡುವವರು ಇದ್ದಾರೆ. Minimum 20 percent ಜನರು ಇದ್ದಾರೆ, ಅದಕ್ಕೆ ಇರುವ character ಅದು. ಏನಾದರೂ ಕೇಂದ್ರಾಡಳಿತ ಪ್ರದೇಶವೆಂದು ಅನಿಸಿಕೊಳ್ಳಬೇಕಾದರೆ, ಇನ್ನೂ ಅಲ್ಲಿ ಬೇರೆ ಬೇರೆ ಭಾಷೆಗಳನ್ನು ಮಾತನಾಡುವವರು ಎಷ್ಟು ಜನರು ಇದ್ದಾರೆಂದು ನಾನು ಹೇಳುವುದಿಲ್ಲ. ಕನ್ನಡ ಮತ್ತು ಕೊಂಕಣಿ ಭಾಷೆ ಮಾತನಾಡುವವರು ಕನಿಷ್ಠ 20% ಜನರು ಇದ್ದಾರೆ. ಹಾಗಾಗಿ, ಅವರಿಗೆ ಏನಾದರೂ ನಿರ್ಣಯ ಮಾಡಬೇಕೆಂದು ಅನಿಸಿದರೆ, ಮುಂಬೈ ನಗರ ಅವರಿಗೆ ಬೇಡ ಅನಿಸಿದರೆ ಮಾಡಿಕೊಳ್ಳಲಿ. ಅವರು ಯಾರು ಬೆಳಗಾವಿಯ ಬಗ್ಗೆ ಮಾತನಾಡುವುದಕ್ಕೆ? Who are they? ಮತ್ತೆ ನಾನು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಹತ್ತಿರ ವಿವಾದ ಇಲ್ಲ. We don't have any border dispute as far as Karnataka is concerned. It is a closed issue. ಅದು ಮುಗಿದು ಹೋಗಿರುವಂತಹ ಅಧ್ಯಾಯ. ವರದಿ ಕೊಟ್ಟಾಗಿದೆ. ನಾವು ಅದಕ್ಕೆ ಹೌದು ಅಂದಿಲ್ಲ. ಇಲ್ಲವೆಂದು ಹೇಳಿಲ್ಲ. ನಾವು ವ್ಯಾಖ್ಯಾನ ಮಾಡುವಂತಹ ಸಂದರ್ಭದಲ್ಲಿ ತಪ್ಪಾಗಿ ಮಾಡುವುದು ಬೇಡ. ನಾವು ಮಹಾಜನ್ ವರದಿಯನ್ನು ಒಪ್ಪುವ ಪ್ರಶ್ನೆ ಉದ್ಭವವಾಗಿರಲಿಲ್ಲ. It is stabled. ನಾವು ತಕಾರಾರು ಮಾಡಿರಲಿಲ್ಲ. Parliament ನಲ್ಲಿ ಏನಾಗುತ್ತದೆ ನೋಡಬೇಕೆಂದು. ಈಗ ಆ ಪ್ರಶ್ನೆ ಇಲ್ಲ. State Reorganisation Act ನಲ್ಲಿ ಏನು ನಮ್ಮ ಗಡಿಯನ್ನು ಗುರುತಿಸಿದ್ದಾರೆ, ನಾವು ಅದಕ್ಕೆ ಬದ್ಧ. ನಾವು ಅದನ್ನು ಸುಮಾರು 75 ವರ್ಷಗಳಿಂದ

ಅಭಿವೃದ್ಧಿ ಪಡಿಸಿದ್ದೇವೆ. ಅದಕ್ಕೆ ಬೇಕಾದಷ್ಟು ರಕ್ತವನ್ನು ಸುರಿಸಿದ್ದೇವೆ. ಆ ಭಾಗವನ್ನು ಬೇಕಾದಷ್ಟು ಅಭಿವೃದ್ಧಿ ಮಾಡಿದ್ದೇವೆ. ಈಗ ಯಾವ ರಾಜಿ? ಈಗ ಯಾವುದರಲ್ಲಿಯೂ ಹೋದರು ಸಹ occupancy right ಎಂದು ಹೇಳುತ್ತೀರಿ. ನಾವು ಈಗಾಗಲೇ ಅದರ ಮೇಲೆ occupancy right ಅನ್ನು ತೆಗೆದುಕೊಂಡಿದ್ದೇವೆ. ನಮ್ಮ ಮುಂದೆ ಆ ಇತ್ಯಾರ್ಥ ಮಾಡುವಂತಹ ಪ್ರಶ್ನೆ ಉದ್ಭವವಾಗಿಲ್ಲ. Admissibility ಗೋಸ್ಕರ ನಾವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ನಮ್ಮ ಟೀಮ್‌ನ್ನು ಇಟ್ಟು fight ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ರಮೇಶ್‌ರವರು ಮಾತನಾಡಿದ್ದು ಸರಿ ಇದೆ. Even Supreme Court has no jurisdiction. Jurisdiction ಇದೆ ಎಂದು ನಾನು ಒಪ್ಪುವುದಿಲ್ಲ.ಆದರೆ, ಅವರು ಹೋಗಿದ್ದಾರೆ. ಆದರೆ, ಅದನ್ನು admit ಮಾಡಬೇಡಿ ಎಂದು ನಮ್ಮ ತಕರಾರು ಇದೆ. You have no jurisdiction ಎಂದು Constitutional ನಲ್ಲಿ ಏನಾದರೂ ತೀರ್ಮಾನವಾಗುವುದಾದರೆ ನಾವು ಮಾತುಕತೆಗೆ ಹೋಗಬಹುದು ಬಿಟ್ಟರೆ, ನಮ್ಮ ಮುಂದೆ ಬೇರೆ ಯಾವ ಚರ್ಚೆಯೂ ಇಲ್ಲ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ನಮ್ಮ ಪ್ರಯಾಣಿಕರು ಹೋಗುವವರಿಗೆ ಬರುವವರಿಗೆ ಹಿಂಸೆ ಕೊಡುವುದನ್ನು ನಮ್ಮ ರಾಜ್ಯ ಸರ್ಕಾರ ಸಹಿಸುವುದಿಲ್ಲ. ಏಕೆಂದರೆ, ಈ ದೇಶದ ಗೃಹ ಸಚಿವರು ಕರೆಸಿ ನೆಮ್ಮದಿಯನ್ನು ಹಾಳು ಮಾಡಬೇಡಿ ಎಂದು ಹೇಳಿದ್ದಾರೆ, ನಾವು ಸಮಾಧಾನದಿಂದ ಕೇಳಿದ್ದೇವೆ. ಅದು ಬಹಳ ಅತೀರೇಕಕ್ಕೆ ಹೋದರೆ, ಅದನ್ನು ಸಹಿಸಿಕೊಂಡು ಇರಬೇಕು ಎನ್ನುವಂತಹ ಸ್ಥಿತಿಯಲ್ಲಿ ಕರ್ನಾಟಕದವರು ಇಲ್ಲ ಎನ್ನುವುದನ್ನು ಈ ಮೂಲಕ ಅವರಿಗೆ ಮನವರಿಕೆ ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ನಮ್ಮ border ನಲ್ಲಿರುವವರು ಮಾತನಾಡಿದಂತೆ ನಮ್ಮ ಜನರ ಮಧ್ಯೆ ಯಾವುದೇ ಭೇದ ಇಲ್ಲ. ಜನರ ಮಧ್ಯೆ ಯಾವುದೇ ಅವಿಶ್ವಾಸ ಇಲ್ಲ. ಆ ಭಾಗದಲ್ಲಿ ಜಿಲ್ಲಾ ಪಂಚಾಯಿತಿಗೆ ಮತ್ತು ತಾಲ್ಲೂಕ್ ಬೋರ್ಡ್ ಚುನಾವಣೆಯಲ್ಲಿ ಮರಾಠಿಗರ ಮತಗಳನ್ನು ಪಡೆಯಬೇಕೆಂದು, ನಾವೇನಾದರೂ ಪಕ್ಷ ಬೆಳೆಸಬೇಕೆಂದು ಮಾಡುತ್ತಿರುವಂತಹ ಹುನ್ನಾರ ಇದು. ಪ್ರತಿ ಬಾರಿಯೂ ಮಹಾರಾಷ್ಟ್ರದಲ್ಲಿ local body elections ಬಂದಾಗ, ಈ issue raise ಆಗುತ್ತದೆ, ಬೆಳಗಾವಿಯಲ್ಲಿ ನಗರ ಪಾಲಿಕೆ ಚುನಾವಣೆ ಬಂದಗಲೂ ಸಹ, ಈ issue raise ಆಗುತ್ತದೆ. ಇದು ಬೇರೆ ಟೈಮ್‌ನಲ್ಲಿ ಇರುವುದಿಲ್ಲ. ಯಾವಾಗಲೂ ಇದ್ದಂತೆ ಇರುತ್ತಾರೆ. ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಮಾನ್ಯ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು ಹೇಳಿದಂತೆ, ನೆಂಟಸ್ಥನ ಮಾಡುತ್ತಾರೆ. ಬೀಗತನವನ್ನು ಮಾಡುತ್ತಾರೆ, ಬೇರೆ ಏನೇನು ಬೇಕೋ ಅದೆಲ್ಲವನ್ನು ಮಾಡುತ್ತಾರೆ. ಚುನಾವಣೆ ಸಂದರ್ಭದಲ್ಲಿ ಈ ರೀತಿ ಆಗುತ್ತದೆ.

ಮಾನ್ಯ ಸಭಾಪತಿಯವರೇ, ಇದು ಎಷ್ಟು ದಿವಸ ನಡೆಯುತ್ತದೆ? ಒಬ್ಬ ಮನುಷ್ಯ ಜಾತಿ, ಭಾಷೆ, ಪ್ರಾಂತ್ಯಗಳ ಆಧಾರದ ಮೇಲೆ ಬಹಳ ದಿವಸಗಳ ಕಾಲ ರಾಜಕೀಯ ಮಾಡುವುದಕ್ಕೆ ಆಗುವುದಿಲ್ಲ. ಯಾವತ್ತಾದರೂ ನಮ್ಮ ನೈಜತೆ ಆಚೆಗೆ ಬರಲೇಬೇಕಲ್ಲವೇ; ಯಾವತ್ತಾದರೂ ಸತ್ಯ ಹೊರಗಡೆ ಬರಲೇ ಬೇಕಲ್ಲವೇ? ಅದಕ್ಕೆ ಈಗಾಗಲೇ ಜನರು ಬದಲಾವಣೆ ಆಗಿದ್ದಾರೆ. ಅದಕ್ಕೆ ಕಾರಣ MES. ನಾವು ಮೊದಲು ಶಾಸಕರಾದಂತಹ ಸಂದರ್ಭದಲ್ಲಿ ಕನಿಷ್ಟ ಪಕ್ಷ 4 ಜನ MES ಸದಸ್ಯರು Assembly ಇರುತ್ತಿದ್ದರು. ಅವರು ಅಲ್ಲಿಯೇ ಮರಾಠಿ ಭಾಷೆಯಲ್ಲಿ ಮಾತನಾಡಬೇಕೆಂದು ತುತ್ತೂರಿ ಊದುತ್ತಿದ್ದರು. ನಾನು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಕನ್ನಡದಲ್ಲಿ ಊದಿಸಿ ಎಂದು ಹೇಳುತ್ತಿದ್ದೇವು. ಆದರೆ, ಇವತ್ತು ಆ ಪರಿಸ್ಥಿತಿ ಇಲ್ಲ. ಏಕೆಂದರೆ, ಜನರು ಜಾಗೃತರಾಗಿದ್ದಾರೆ. ನಮಗೆ ಈ ಭಾವನೆಗಳಿಂದ ಏನು ಆಗಬೇಕಾಗಿಲ್ಲ. ನಮಗೆ ಅಭಿವೃದ್ಧಿ ಮುಖ್ಯ. ಸರ್ಕಾರ ಎನ್ನುವುದು ಅಭಿವೃದ್ಧಿ ಪರವಾಗಿ ಇರಬೇಕು. ಸರ್ಕಾರವನ್ನು ಕಷ್ಟದಲ್ಲಿ ಇರುವವರ ಪರವಾಗಿ ಇರಬೇಕೆಂದು ಮಾಡಿದರು. ನಾವು ಅದಕ್ಕೆ ತಕ್ಕಂತೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚಾಗಿ ಕೆಲಸವನ್ನು ಮಾಡಿದ್ದೇವೆ. ಅದರಲ್ಲೂ ಬೆಳಗಾವಿ ಜಿಲ್ಲೆಯಲ್ಲಿ ನೀರಾವರಿ ವಿಷಯದಲ್ಲಿ ಅದು major ಇರಬಹುದು ಅಥವಾ minor ಇರಬಹುದು, ರಸ್ತೆ ವಿಷಯದಲ್ಲಿ ಇರಬಹುದು, ಯಾವುದೇ ವಿಷಯದಲ್ಲಿ ಅನ್ಯಾತ ಭಾವನೆ ಇಲ್ಲದಂತೆ ಬೆಂಗಳೂರಿಗಿಂತ ಚೆನ್ನಾಗಿ ಬೆಳಗಾವಿ ಜಿಲ್ಲೆಯನ್ನು ಅಭಿವೃದ್ಧಿ ಮಾಡಿದ್ದೇವೆ. ಹಾಗಾಗಿ, ನಾವು ಜನರಲ್ಲಿ ವಿಶ್ವಾಸವನ್ನು ಹೊಂದಿದ್ದೇವೆ. ಇವತ್ತು ಅದೇ ಕಾರಣ. ಈಗ ಮಹಾರಾಷ್ಟ್ರದಲ್ಲಿ ಇರುವವರು ನಮ್ಮನ್ನು ಕರ್ನಾಟಕಕ್ಕೆ ಸೇರಿಸಿ ಎಂದು resolution ಮಾಡುತ್ತಿದ್ದರೆ, ಅವರು ಕೇಳುತ್ತಿದ್ದರೆ, ನಮ್ಮ ರಾಜ್ಯದಲ್ಲಿ ಆಗಿರುವಂತಹ ಅಭಿವೃದ್ಧಿಯನ್ನು ಮತ್ತು ಆ ರಾಜ್ಯದಲ್ಲಿ ಆಗಿರುವಂತಹ ಅಭಿವೃದ್ಧಿಯನ್ನು ಹೋಲಿಕೆ ಮಾಡುತ್ತಿದ್ದಾರೆ. ಒಂದು sugar cane ಬೆಲೆ ಹೆಚ್ಚಿಗೆ ಕೊಟ್ಟು ನಮ್ಮ ಮಾನ್ಯ ಸದಸ್ಯರಾದ ಪ್ರಕಾಶ್ ಹುಕ್ಕೇರಿಯವರು ತೆಗೆದುಕೊಂಡು ಹೋಗಬಹುದು. ಅದರೆ, ಅಭಿವೃದ್ಧಿ ಏನು ಮಾಡಿದ್ದಾರೆ? ಲೋಡ್ ಆದಂತಹ tractors ಗಳು ಎಲ್ಲಿ ಹೋಗುತ್ತವೆ? ಅಲ್ಲಿ ಎಲ್ಲಿಯಾದರೂ ರಸ್ತೆಗಳು ಚೆನ್ನಾಗಿ ಇವೆಯೇ ಎಂದು ನೋಡಿದರೆ, ಕರ್ನಾಟಕದ ಮುಂದೆ ಅವರು ಯಾವುದರಲ್ಲಿಯೂ ಕರ್ನಾಟಕಕ್ಕೆ ಸಮಾನ ಸ್ಥಿತಿಯಲ್ಲಿ ಇವತ್ತು ರಾಜ್ಯದ ಅಭಿವೃಧ್ಧಿಯನ್ನು ಮಾಡಿಲ್ಲ. ಹಾಗಾಗಿ, ಈ ಗಡಿ ವಿವಾದವನ್ನು ಸುಮ್ಮನೆ, ಕೆಲಸಕ್ಕೆ ಬಾರದ ರಾಜಕೀಯ ಕಾರಣಕ್ಕಾಗಿ ಸೃಷ್ಟಿ ಮಾಡಿಸುತ್ತಿರುವವರ ವಿರುದ್ಧ ನಾನು ಮಹಾರಾಷ್ಟ್ರ ಸರ್ಕಾರ ಮಾಡಿದೆ ಎಂದು ಹೇಳುವುದಕ್ಕೆ

ಆಗುವುದಿಲ್ಲ. ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಬಹಳ ಸೌಮ್ಯತೆಯಿಂದ ವರ್ತಿಸಿದ್ದಾರೆ. ಅವರು ಸಹ ಬಹಳ ಸ್ಪಷ್ಟವಾಗಿ Assembly ನಲ್ಲಿ ಆ ರೀತಿ ವರ್ತಿಸುವುದು ಸರಿಯಲ್ಲವೆಂದು ಹೇಳಿದ್ದಾರೆ. ನಾನು ಅವರನ್ನು ಸುಮ್ಮನೆ ಇಲ್ಲಿ ಎಳೆಯುವುದಕ್ಕೆ ತಯಾರು ಇಲ್ಲ. ಅಲ್ಲಿ ಯಾರೋ 2-3 ಜನರು ಮಾತನಾಡಿದ್ದನ್ನು ನಾವು ಒಟ್ಟಾರೆ ಅದು ಮಹಾರಾಷ್ಟ್ರ ವಿಧಾನ ಸಭೆಯ ಅಭಿಪ್ರಾಯವೆಂದು ಭಾವಿಸುವುದಕ್ಕೆ ಆಗುವುದಿಲ್ಲ, ನಾವು ಅವರ ಮಾತನ್ನು ಖಂಡಿಸಿ ಈಗ ಅವರು ನಮ್ಮ ಮೇಲೆ ಅನಾವಶ್ಯಕವಾಗಿ ಕ್ಯಾತೆ ತೆಗೆದುಕೊಂಡು ಬಂದು ಜಗಳ ಮಾಡುತ್ತಿದ್ದಾರೆ ಅದನ್ನು ಖಂಡಿಸಿ ಸರ್ಕಾರದ ಪರವಾಗಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ವಿಧಾನಸಭೆಯಲ್ಲಿ ತೆಗೆದುಕೊಂಡಿರುವಂತಹ ನಿರ್ಣಯದ ಪ್ರತಿಯನ್ನು ನಾನು ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಮಂಡಿಸುತ್ತಿದ್ದೇನೆ. ನಿರ್ಣಯ ಏನೆಂದರೆ,

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**13. ಅಧಿಕೃತ ನಿರ್ಣಯ**

**ಮಹಾರಾಷ್ಟ್ರದ ಜನತೆಯು ಅನಾವಶ್ಯಕವಾಗಿ ಸೃಷ್ಟಿಸುವ ಗಡಿ ವಿವಾದವನ್ನು ಖಂಡಿಸಿ, ರಾಜ್ಯದ ಹಿತರಕ್ಷಣೆಗೆ ಕಟಿಬದ್ಧರಾಗಿರುವ ಬಗ್ಗೆ.**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ರಾಷ್ಟ್ರದಲ್ಲಿ ಭಾಷಾವಾರು ಪ್ರಾಂತ್ಯಗಳ ಸ್ಥಾಪನೆ ಮಾಡುವ ಸಲುವಾಗಿ ರಾಜ್ಯಗಳ ಮರುವಿಂಗಡಣೆಯ ಆಯೋಗ 1953 ರಲ್ಲಿ ರಚನೆಯಾಗಿತ್ತು. ಈ ಆಯೋಗವು 1955 ರಲ್ಲಿ ತನ್ನ ವರದಿಯನ್ನು ಮಂಡಿಸಿತು. 1955 ರಲ್ಲಿ ಎಲ್ಲ ರಾಜ್ಯಗಳಿಗೆ ಈ ವರದಿಯನ್ನು ಕಳುಹಿಸಿಕೊಟ್ಟು, ಅಭಿಪ್ರಾಯ ಪಡೆದು, 1956 ರಲ್ಲಿ ರಾಜ್ಯ ಮರುವಿಂಗಡಣೆ ಕಾಯ್ದೆ ಜಾರಿಗೆ ಬಂತು. (ಇಲ್ಲಿ ಏನು ಸ್ವಲ್ಪ ತಪ್ಪಾಗಿದೆ) 1956ರ ನವೆಂಬರ್ 1 ರಂದು ಅಂದಿನ ಮೈಸೂರು ರಾಜ್ಯ ಉದಯವಾಯಿತು. ಮಹಾಜನ ಆಯೋಗ 1966 ರ ಅಕ್ಟೋಬರ್‌ನಲ್ಲಿ ಅಸ್ತಿತ್ವಕ್ಕೆ ಬಂತು. 1967 ರಲ್ಲಿ ವರದಿ ನೀಡಿತು. ಮಹಾರಾಷ್ಟ್ರದ ಬೇಡಿಕೆಯ

ಮೇರೆಗೆ ರಚನೆಯಾದಂತಹ ಮಹಾಜನ ಆಯೋಗದ ವರದಿಯನ್ನು ಮಹಾರಾಷ್ಟ್ರವೇ ತಿರಸ್ಕರಿಸಿತು.

ಈಗಾಗಲೇ ಮಹಾಜನ ಆಯೋಗದ ವರದಿ ಮಂಡಿಸಿ 66 ವರ್ಷ ಕಳೆದಿವೆ. ಈ ಸುದೀರ್ಘ ವರ್ಷಗಳಲ್ಲಿ ಎರಡೂ ರಾಜ್ಯಗಳ ಜನರು ಅತ್ಯಂತ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಮಹಾರಾಷ್ಟ್ರ-ಕರ್ನಾಟಕದ ಗಡಿ ವಿಚಾರ ಈಗಾಗಲೇ ಮುಗಿದು ಹೋದ ಅಧ್ಯಾಯ.

ಆದಾಗ್ಯೂ ಮಹಾರಾಷ್ಟ್ರ 2004ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ಗಡಿಯ ಬಗ್ಗೆ ದಾವೆ ಹೂಡಿ ಅಂದಿನಿಂದಲೂ ಎರಡೂ ರಾಜ್ಯಗಳ ಜನರ ನಡುವಿನ ಸಾಮರಸ್ಯ ಕದಡುವ ಪ್ರಯತ್ನ ಮಾಡುತ್ತಿದೆ. ಇದು ಅತ್ಯಂತ ಖಂಡನೀಯ.

2004 ರಿಂದ ಇಲ್ಲಿಯವರೆಗೂ ಸುಪ್ರೀಂ ಕೋರ್ಟಿನಲ್ಲಿ ಮಹಾರಾಷ್ಟ್ರದ ದಾವೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ಏಕೆಂದರೆ, ಸಂವಿಧಾನ 3ನೇ ಪರಿಚ್ಛೇದದ ಪ್ರಕಾರ, ಈ ಮರುಪರಿಶೀಲನೆ ಮಾಡುವ ಪರಮಾಧಿಕಾರ ಈ ದೇಶದ ಪ್ರಜಾಪ್ರಭುತ್ವದ ಉನ್ನತ ಸಂಸ್ಥೆಯಾದ ಸಂಸತ್ತಿಗೆ ಮಾತ್ರ ಇದೆ. ಇದರ ಬಗ್ಗೆ ರಾಜ್ಯ ಸರ್ಕಾರ ಕರ್ನಾಟಕ ಗಡಿ ಮತ್ತು ನದಿಗಳ ರಕ್ಷಣಾ ಆಯೋಗವನ್ನು ರಚಿಸಿದ್ದು, ಈ ಆಯೋಗವು ನಿರಂತರವಾಗಿ ಮಾರ್ಗದರ್ಶನ ಮಾಡುತ್ತಿದೆ. ಅಲ್ಲದೆ, ಇತ್ತೀಚೆಗೆ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿ, ನಮ್ಮ ನಿಲುವನ್ನು ಸಮರ್ಥವಾಗಿ ಪ್ರತಿಪಾದನೆ ಮಾಡಲು ಅವರ ಮಾರ್ಗದರ್ಶನ ಪಡೆಯಲಾಗುತ್ತಿದೆ ಮತ್ತು ಸರ್ವೋಚ್ಛ ನ್ಯಾಯಾಲಯದ ಹಿರಿಯ ನ್ಯಾಯವಾದಿ ಮುಕುಲ್ ರೋಹಟಗಿ ನೇತೃತ್ವದಲ್ಲಿ ಐದು ಜನ ನುರಿತ ವಕೀಲರ ತಂಡ ರಚನೆ ಮಾಡಲಾಗಿದೆ.

ಕರ್ನಾಟಕದ ನೆಲ, ಜಲದ ಹಿತ ಕಾಪಾಡಲು ಮತ್ತು ಕಾನೂನಿನ ಹೋರಾಟದ ಸಮರ್ಥನೆ ಮಾಡಲು ಈ ಮೂಲಕ ರಾಜ್ಯ ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ಇತ್ತೀಚೆಗೆ ಈ ವಿಷಯದ ಬಗ್ಗೆ ಮಹಾರಾಷ್ಟ್ರದ ನಾಯಕರು ಕೊಡುತ್ತಿರುವ ಎಲ್ಲ ಹೇಳಿಕೆಗಳು ಅತ್ಯಂತ ಖಂಡನಿಯ ಮತ್ತು ಮಹಾರಾಷ್ಟ್ರದ ಸಚಿವರು ಕಾನೂನು ಸುವ್ಯವಸ್ಥೆ ಸೂಕ್ಷ್ಮವಿದ್ದಂತಹ

ಸಂದರ್ಭದಲ್ಲಿ ಕರ್ನಾಟಕಕ್ಕೆ ಆಗಮಿಸಿ, ಪ್ರಚೋದಿಸಲು ಯತ್ನಿಸುವ ಕಾರ್ಯವೂ ಖಂಡನೀಯ. ಕೇಂದ್ರದ ಮಾನ್ಯ ಗೃಹ ಸಚಿವರು ಎರಡೂ ರಾಜ್ಯಗಳ ಮಧ್ಯೆ ಶಾಂತಿ ಸುವ್ಯಸ್ಥೆ ಮತ್ತು ಸೌಹಾರ್ದತೆಯನ್ನು ಕಾಪಾಡಿಕೊಳ್ಳಲು ನೀಡಿರುವ ಸೂಚನೆಯನ್ನು ಸಹ ಮಹಾರಾಷ್ಟ್ರ ಉಲ್ಲಂಘಿಸುತ್ತಿದ್ದು, ಎರಡೂ ರಾಜ್ಯಗಳ ಸಂಬಂಧಕ್ಕೆ ಧಕ್ಕೆ ತರುವಂತಾಗಿದೆ. ಅದನ್ನು ನಿಯಂತ್ರಿಸಬೇಕೆಂದು ಮಹಾರಾಷ್ಟ್ರದ ಸರ್ಕಾರಕ್ಕೆ ಸೂಚಿಸುತ್ತಾ, ಈ ವಿಷಯವನ್ನು ಕೇಂದ್ರ ಸರ್ಕಾರದ ಗಮನಕ್ಕೂ ರಾಜ್ಯ ಸರ್ಕಾರ ತರುತ್ತದೆ.

ಕರ್ನಾಟಕದ ನೆಲ, ಜಲ, ಭಾಷೆ ಹಾಗೂ ಕನ್ನಡಿಗರ ಹಿತಾಸಕ್ತಿಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಈ ವಿಷಯದಲ್ಲಿ ಕರ್ನಾಟಕದ ಜನರ ಮತ್ತು ಸದಸ್ಯರೆಲ್ಲರ ಭಾವನೆಯು ಒಂದೇ ಆಗಿದ್ದು ಇದಕ್ಕೆ ಧಕ್ಕೆ ಆದಾಗ ಎಲ್ಲರೂ ಒಗ್ಗಟ್ಟಿನಿಂದ ರಾಜ್ಯದ ಹಿತಾಸಕ್ತಿ ಹಾಗೂ ರಕ್ಷಣೆಗೆ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಕ್ರಮ ಕೈಗೊಳ್ಳಲು ಬದ್ಧರಿದ್ದೇವೆ ಎಂದು ಹಾಗೂ ಮಹಾರಾಷ್ಟ್ರದ ಜನತೆಯು ಅನಾವಶ್ಯಕವಾಗಿ ಸೃಷ್ಟಿಸುವ ಗಡಿ ವಿವಾದವನ್ನು ಖಂಡಿಸಿ, ರಾಜ್ಯದ ಹಿತರಕ್ಷಣೆಗೆ ಕಟಿಬದ್ಧರಾಗಿರುವುದಾಗಿ ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

**(ಮುಂದು., )**

**(1223) 27-12-2022 (5.50) ಎಂವಿ-ಬಿಎನ್‌ಎಸ್** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು...):-**
ದಯಮಾಡಿ ಈ ನಿರ್ಣಯಕ್ಕೆ ಅಂಗೀಕಾರ ನೀಡಬೇಕೆಂದು ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಅದರಲ್ಲಿ ಕೆಲವರು ಎಂದು ಹೇಳೋಣ, ಜನತೆ ಎಂದು ಬೇಡ.

**ಸಭಾಪತಿಯವರು:-** ಕೆಲವು ಜನರು ಎಂದು ಇರಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಸಚಿವರು):–** ಮಾನ್ಯ ಸಭಾಪತಿಯವರೇ, ಹೌದು; "ಕೆಲವು ಜನರು" ಎಂದು ಇರಲಿ, not entire people.

**ಸಭಾಪತಿಯವರು:–** ಸಣ್ಣ ನೀರಾವರಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಸಚಿವರು ಮಂಡಿಸಿದ ಹಾಗೂ ಅಂಗೀಕಾರಕ್ಕಾಗಿ ಕೋರಿರುವ ನಿರ್ಣಯವನ್ನು ಸದನದ ಮತಕ್ಕೆ ಹಾಕುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

***"ಕೇಂದ್ರದ ಮಾನ್ಯ ಗೃಹ ಸಚಿವರು ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡೂ ರಾಜ್ಯಗಳ ಮಧ್ಯೆ ಶಾಂತಿ ಸುವ್ಯವಸ್ಥೆ ಮತ್ತು ಸೌಹಾರ್ದತೆಯನ್ನು ಕಾಪಾಡಿಕೊಳ್ಳಲು ನೀಡಿರುವ ಸೂಚನೆಯನ್ನು ಸಹ ಮಹಾರಾಷ್ಟ್ರ ಉಲ್ಲಂಘಿಸುತ್ತಿದ್ದು, ಎರಡೂ ರಾಜ್ಯಗಳ ಸಂಬಂಧಕ್ಕೆ ಧಕ್ಕೆ ತರುವಂತಾಗಿದೆ. ಕರ್ನಾಟಕದ ನೆಲ, ಜಲ, ಭಾಷೆ ಹಾಗೂ ಕನ್ನಡಿಗರ ಹಿತಾಸಕ್ತಿಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಈ ವಿಷಯದಲ್ಲಿ ಕರ್ನಾಟಕದ ಜನರ ಮತ್ತು ಸದಸ್ಯರೆಲ್ಲರ ಭಾವನೆಯು ಒಂದೇ ಆಗಿದ್ದು, ಇದಕ್ಕೆ ಧಕ್ಕೆ ಆದಾಗ ಎಲ್ಲರೂ ಒಗ್ಗಟ್ಟಿನಿಂದ ರಾಜ್ಯದ ಹಿತಾಸಕ್ತಿ ಹಾಗೂ ರಕ್ಷಣೆಗೆ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಕ್ರಮ ಕೈಗೊಳ್ಳಲು ಬದ್ಧರಿದ್ದೇವೆ ಎಂದು ಹಾಗೂ ಮಹಾರಾಷ್ಟ್ರದ ಕೆಲವು ಜನರು ಅನಾವಶ್ಯಕವಾಗಿ ಸೃಷ್ಟಿಸಿರುವ ಗಡಿ ವಿವಾದವನ್ನು ಖಂಡಿಸಿ, ರಾಜ್ಯದ ಹಿತರಕ್ಷಣೆಗೆ ಕಟಿಬದ್ಧರಾಗಿರುವುದಾಗಿ ಈ ಸದನವು ನಿರ್ಣಯಿಸುತ್ತದೆ."***

**ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಹಾಗೂ ನಿರ್ಣಯಕ್ಕೆ ಸದನದ ಅನುಮೋದನೆ ದೊರೆಯಿತು.**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ದಯಮಾಡಿ ನಿರ್ಣಯದ ಪ್ರತಿಯನ್ನು ಮಾನ್ಯ ಸುಪ್ರೀಂ ಕೋರ್ಟ್‌ಗೆ ಮತ್ತು ಮಾನ್ಯ ಕೇಂದ್ರ ಗೃಹ ಸಚಿವರಿಗೆ ಕಳುಹಿಸಿಕೊಡಲಿ. ಏಕೆಂದರೆ, ಮಾನ್ಯ ಸುಪ್ರೀಂ ಕೋರ್ಟ್‌ಗೆ ಫೈಲ್ ಮಾಡಬಹುದು. ದಯಮಾಡಿ ಫೈಲ್ ಮಾಡಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಅದರ ಒಂದು ಪ್ರತಿಯನ್ನು ಕಳುಹಿಸಿಕೊಡುತ್ತೇವೆ.

## 14. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 2022

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 6 ಜನಾಂಗವಿದ್ದ ಎಸ್.ಸಿ. ಪಟ್ಟಿಗೆ 101 ಜನಾಂಗಗಳು ಸೇರಿಕೊಂಡಿದೆ. ಅದೇರೀತಿ 3-4 ಜನಾಂಗವಿದ್ದ ಎಸ್.ಟಿ. ಪಟ್ಟಿಗೆ 53 ಜನಾಂಗಗಳು ಸೇರಿಕೊಂಡಿವೆ. ಹಾಗಾಗಿ ಎಸ್.ಸಿ. ಮತ್ತು ಎಸ್.ಟಿ. ಮೀಸಲಾತಿಗೆ ರಾಜ್ಯ ಏನು ನಿಗದಿಪಡಿಸಿದ್ದ ಪ್ರಮಾಣ ಇತ್ತು, ಅದಕ್ಕಿಂತ ಬಹಳ ಹೆಚ್ಚು ಜನಸಂಖ್ಯೆ ಸೇರಿಕೊಂಡು, ಅವರಿಗೆ ಮೀಸಲಾತಿ ಪ್ರಮಾಣ ಕಡಿಮೆಯಾಗಿದೆ ಎಂದು ಅನೇಕ ಹೋರಾಟಗಳು ಪ್ರಾರಂಭವಾದವು. ಈ ಮಧ್ಯೆ ಎಸ್.ಟಿ. ಜನಾಂಗಕ್ಕೆ ಸೇರಿದ ನಾಯಕ ಜನಾಂಗದ ಯುವಕರು, ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಒಂದು ದಾವೆಯನ್ನು ಹೂಡಿದರು. ಅಂದರೆ, ನಮಗೆ ಅನ್ಯಾಯವಾಗಿದೆ, ನಮ್ಮನ್ನು ಕೆಟಗರಿ-1ರಿಂದ ತೆಗೆದು ಪ್ರತ್ಯೇಕ ಮಾಡಿದ ಮೇಲೆ, ನಮ್ಮ ಕೋಟ ಕಡಿಮೆಯಾಗಿದೆ. ನಾವು ಕೆಟಗರಿ-1ರಲ್ಲಿಯೇ ಹೆಚ್ಚು ಮೀಸಲಾತಿಯನ್ನು ತೆಗೆದುಕೊಳ್ಳುತ್ತಿದ್ದೆವು. ಆ

ಸಂದರ್ಭದಲ್ಲಿ ಮಾನ್ಯ ಹೈಕೋರ್ಟ್ ಒಂದು ತೀರ್ಮಾನವನ್ನು ತೆಗೆದುಕೊಂಡು, ಇದನ್ನು review ಮಾಡಬೇಕೆಂದು ಸರ್ಕಾರಕ್ಕೆ ಸೂಚನೆ ನೀಡುತ್ತದೆ. ಆ ಮಧ್ಯದಲ್ಲಿ ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕೆಂದು, ಇದಕ್ಕೆ ಒಂದು ಆಯೋಗವನ್ನು ನೇಮಕ ಮಾಡುತ್ತದೆ. ಇದರಲ್ಲಿ ಮೊದಲು ಒಂದು ಆಯೋಗ ಬಂತು. ನಾವು ಅದನ್ನು ಪರಿಶೀಲನೆಗೆ ತೆಗೆದುಕೊಳ್ಳಲಿಲ್ಲ. ಕೊನೆಗೆ ಎಸ್.ಟಿ. ಜನಾಂಗದವರ ಒತ್ತಡ ಜಾಸ್ತಿಯಾದಾಗ, ಜಸ್ಟೀಸ್ ಹೆಚ್.ಎನ್.ನಾಗಮೋಹನ್ ದಾಸ್‌ರವರ ನೇತೃತ್ವದಲ್ಲಿ ಆಯೋಗವನ್ನು ನೇಮಕ ಮಾಡಿದಾಗ, ಅವರು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ, ರಾಜ್ಯದ ಪರಿಶಿಷ್ಟ ಜಾತಿಯವರಿಗೆ ಶೇಕಡಾ 2ರಷ್ಟು ಮೀಸಲಾತಿಯನ್ನು ಜಾಸ್ತಿ ಮಾಡಬೇಕು. ಅದೇರೀತಿ ಪರಿಶಿಷ್ಟ ಪಂಗಡದವರಿಗೆ ಶೇಕಡಾ 4ರಷ್ಟು ಮೀಸಲಾತಿಯನ್ನು ಜಾಸ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದು, ಶೇಕಡಾ 15 ರಿಂದ 17 ಮತ್ತು ಶೇಕಡಾ 3 ರಿಂದ 7ರಷ್ಟು ಮೀಸಲಾತಿ ನೀಡಿ, ಶೇಕಡಾ 24ರಷ್ಟು ಮೀಸಲಾತಿಯನ್ನು ನೀಡಬೇಕೆಂದು ತೀರ್ಮಾನವಾಯಿತು. ಈ ಮಧ್ಯೆ ರಾಜ್ಯ ಸರ್ಕಾರ ಈ ಮೀಸಲಾತಿಯನ್ನು ಬಿಟ್ಟು, ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿ, funds allocation ಮಾಡಬೇಕಾದರೆ, ನಾವು ಶೇಕಡಾ 24.125 ಅನ್ನೇ ಮಾಡಿಕೊಂಡು ಬಂದಿದ್ದೇವೆ. ಸುಮಾರು ವರ್ಷಗಳಿಂದ ನಾವು ಸಹ recognize ಮಾಡಿದ್ದೆವು. ಈ ಜನಾಂಗದವರು ಶೇಕಡಾ 24ಕ್ಕಿಂತ ಹೆಚ್ಚು ಇದ್ದಾರೆಂದು ತಿಳಿದುಕೊಂಡು, ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿ, ನಮ್ಮ ಅಭಿವೃದ್ಧಿಯ ಖರ್ಚಿಗೆ ಏನು ಹಣ ಉಳಿಯುತ್ತಿತ್ತು, ಆ ಹಣದಲ್ಲಿ ಶೇಕಡಾ 24.1ರಷ್ಟು ಹಣವನ್ನು ಎಸ್.ಸಿ. ಮತ್ತು ಎಸ್.ಟಿ.ಯವರ ಮೀಸಲಾತಿಗೆ ಇಟ್ಟುಕೊಂಡು, ಅದನ್ನು ಅವರ ಅಭಿವೃದ್ಧಿಗೆ ಬಳಸಿಕೊಂಡು ಬರುತ್ತಿದ್ದೇವೆ. ಅಂದರೆ, ನಾವು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರು ಶೇಕಡಾ 24ರಷ್ಟು ಇದ್ದಾರೆಂದು ನಾವು ಅದನ್ನು ಒಪ್ಪಿಕೊಂಡುಬಿಟ್ಟಿದ್ದೆವು. ಎರಡು ವರ್ಷವಾದ ಮೇಲೆ 2019ರಲ್ಲಿ ಆಯೋಗದ ವರದಿ ಬಂತು. ಅವರು ಕೊಟ್ಟಂತಹ ವರದಿಯನ್ನು ಪರಿಶೀಲನೆ ಮಾಡಿದಾಗ, ಅದು ಸರ್ಕಾರಕ್ಕೆ ಸರಿ ಎನಿಸಿತು. ಹಾಗಾಗಿ ಸರ್ವಪಕ್ಷಗಳ ಸಭೆ ಕರೆದು, ನಾವು ಎರಡು ಸಭೆಗಳನ್ನು ಮಾಡಿ, ಸದಾಶಿವ ಆಯೋಗದ ವರದಿಯ ಶಿಫಾರಸ್ಸನ್ನು ಸರ್ಕಾರ ಒಪ್ಪಬಹುದೆ, ಬೇಡವೆ ಎಂದು ಚರ್ಚೆ ಮಾಡಿದಾಗ, ಆಗ ಎಲ್ಲಾ ಪಕ್ಷದ ಸದಸ್ಯರು ಒಮ್ಮತದಿಂದ ಸಮ್ಮತಿಯನ್ನು ನೀಡಿ, ಇದನ್ನು ಮಾಡುವುದು ಸರಿಯಿದೆ ಎಂದರು.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅದು ಜಸ್ಟೀಸ್ ಹೆಚ್.ಎನ್.ನಾಗಮೋಹನ್ ದಾಸ್ ಆಯೋಗ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು, ಜಸ್ಟೀಸ್ ಹೆಚ್.ಎನ್.ನಾಗಮೋಹನ್ ದಾಸ್ ಆಯೋಗ.

**ಸಭಾಪತಿಯವರು:–** ಆಯಿತು. ಜಸ್ಟೀಸ್ ಹೆಚ್.ಎನ್.ನಾಗಮೋಹನ್ ದಾಸ್ ಎಂದು rectify ಆಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿದೆ. ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರಿಗೆ ಸಹಜವಾಗಿ ತಲೆಗೆ ಹೋಗಿಬಿಡುತ್ತದೆ. I am sorry, I will not take it as Sadashiva commission. ನಾನು ಅದಕ್ಕೆ ಎರಡು ಆಯೋಗಗಳು ಎಂದು ಜಂಪ್ ಮಾಡಿದೆ. ಆದರೆ, ಕೊನೆಯಲ್ಲಿ ಅದು ತೂರಿ ಬಂದುಬಿಟ್ಟಿತು. ನಾವು ಜಸ್ಟೀಸ್ ಹೆಚ್.ಎನ್.ನಾಗಮೋಹನ್ ದಾಸ್ ವರದಿಯನ್ನು ಒಪ್ಪಿಕೊಂಡು, ಆ ವರದಿಯ ಪ್ರಕಾರ ಇವತ್ತು ನಾವು ಪರಿಶಿಷ್ಟ ಜಾತಿಯವರಿಗೆ ಶೇಕಡಾ 2ರಷ್ಟು ಮೀಸಲಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡಾ 4ರಷ್ಟು ಮೀಸಲಾತಿಯನ್ನು ಜಾಸ್ತಿ ಮಾಡಿ, ಉದ್ಯೋಗದಲ್ಲಿ, ಶಿಕ್ಷಣದಲ್ಲಿ ಮತ್ತೆ ಸರ್ಕಾರದ ಅಧೀನದಲ್ಲಿರುವ ಎಲ್ಲಾ ಸಂಘ–ಸಂಸ್ಥೆಗಳಲ್ಲಿ ಮತ್ತೆ ಬೇರೆ ಬೇರೆ ಸರ್ಕಾರಿ ಹಿಡಿತದಲ್ಲಿ ಮತ್ತು ಆಡಳಿತದ ವ್ಯಾಪ್ತಿಯಲ್ಲಿ ಬರತಕ್ಕಂಥ ಎಲ್ಲಾ ಕಡೆಗಳಲ್ಲಿ ಕಡ್ಡಾಯವಾಗಿ ಈ ಮೀಸಲಾತಿ ನೀಡಬೇಕೆಂದು ನಿರ್ಧಾರ ಮಾಡಿ, ಅದಕ್ಕೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡು, ordinance ಮಾಡಿ, ಸನ್ಮಾನ್ಯ ರಾಜ್ಯಪಾಲರಿಂದ ಅಂಕಿತ ತೆಗೆದುಕೊಂಡು, ಇದನ್ನು ಜಾರಿ ಮಾಡಿದ್ದೇವೆ. ಈಗಾಗಲೇ ನಾವು ಒಂದು ಹೆಜ್ಜೆ ಮುಂದೆ ಸಹ ಹೋಗಿದ್ದೇವೆ. ಈಗ ಮುಂದೆ ಬರುವಂತಹ ಎಲ್ಲಾ ನೇಮಕಾತಿಗಳಲ್ಲಿ ಅದು ಜಾರಿಯಾಗಬೇಕೆಂದು ನಾವು ಸೂಚನೆ ನೀಡಿದ್ದೇವೆ. ಮತ್ತೆ ರೋಸ್ಟರ್ ಅನ್ನು ಸಹ ಬದಲಾಯಿಸಿದ್ದೇವೆ. ಏನು ಶೇಕಡಾ 18ರಷ್ಟು ರೋಸ್ಟರ್ ಪದ್ಧತಿ ಇತ್ತು, ಅದನ್ನು ತೆಗೆದುಹಾಕಿ ಎಲ್ಲಾ ಹುದ್ದೆಗಳಲ್ಲೂ ಶೇಕಡಾ 24ರಷ್ಟಕ್ಕೆ ರೋಸ್ಟರ್ ಮಾಡಿ, ಮತ್ತು ಎಲ್ಲಾ ಹುದ್ದೆಗಳಗೂ ಸಹ ಶೇಕಡಾ 24ರಷ್ಟು ರೋಸ್ಟರ್ ಆಗಬೇಕೆಂದು ತೀರ್ಮಾನ ತೆಗೆದುಕೊಂಡು ಇದನ್ನು ಅನುಷ್ಠಾನ ಮಾಡಿದ್ದೇವೆ. ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ, Ordinance Replacement Bill ಆದಮೇಲೆ, ನಾವು ಮುಂದುವರೆಯಬಹುದು. ಇದಕ್ಕೆ ಬೇಕಾದಷ್ಟು hurdles ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಕೆಲವು ಅಭಿಪ್ರಾಯಗಳು ಬಂದವು. ಇದು ಶೇಕಡಾ 50ರಷ್ಟು ಕ್ರಾಸ್ ಆಗುತ್ತದೆ, ಇದಕ್ಕೆ ಏನು ಮಾಡುತ್ತೀರಿ ಎಂದು. ಇನ್ನು ಕೆಲವು ಅಭಿಪ್ರಾಯಗಳನ್ನು ಬೇರೆ ಬೇರೆ ಪಕ್ಷದವರು ಹೇಳಿದರು, ಅದು

ಏನಾಗುತ್ತದೆ ಆಗಲಿ, ನೀವು ಮಾಡುವುದನ್ನು ಮಾಡಿಬಿಡಿ ಎಂದರು. ಸುಮ್ಮನೆ Legislature ಎಂದು ಕೇವಲ ವಿಧೇಯಕ ಮಾಡಿಕೊಂಡು ಸಮ್ಮತಿ ಕೇಳಿಕೊಂಡು ಕೂರುವುದರ ಬದಲು, ಒಂದು ಬಾರಿ ಕೊಟ್ಟುಬಿಡಿ, ಏನಾಗುತ್ತದೆ ನೋಡೋಣ be dashing ಎನ್ನುವಂತಹ opinion ಸಹ ಬಂತು. Now we have taken the decision, dashing ಆಗೋಣವೆಂದು. ಇದನ್ನು ಷೆಡ್ಯೂಲ್ ೯ರಲ್ಲಿ ಸೇರಿಸಬೇಕೆಂದು ಮೂರನೇ ಅಭಿಪ್ರಾಯ ಬಂತು. ಇದನ್ನು ಷೆಡ್ಯೂಲ್ ೯ಕ್ಕೆ ಸೇರಿಸುವುದರಿಂದ, ಇದಕ್ಕೆ immunity ಬರುತ್ತದೆ. ಅಂದರೆ, ಕೋರ್ಟ್‌ಗಳು ಇದರ ಮೇಲೆ stay ಕೊಡುವುದಕ್ಕೆ ಮತ್ತೊಂದನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. First amendment of the Constitution ಆದಾಗ, Land Reforms Act ಗೆ immunity ಇರಲಿಲ್ಲ. Land Reforms Act ಗೆ ಕೋರ್ಟ್‌ಗಳು stay ಕೊಡುವುದಕ್ಕೆ ಆರಂಭ ಮಾಡಿದ ಮೇಲೆ, ಮೊದಲನೆ amendment ಆದಮೇಲೆ, ನಾವು ೯th Schedule ಅನ್ನು introduce ಮಾಡಿ, Courts are barred in this jurisdiction ಎಂದು ಮಾಡಿದ್ದೆವು. ಅದಾದ ಮೇಲೆ, ತಮಿಳುನಾಡಿನವರು ಏನು ಶೇಕಡಾ ೬೯ರಷ್ಟು ಮೀಸಲಾತಿಯನ್ನು ನೀಡಿದರು, ಅದನ್ನು ಷೆಡ್ಯೂಲ್ ೯ರಲ್ಲಿಯೇ ಸೇರಿಸಿಕೊಟ್ಟರು. ಆದರೂ ಸಹ ತಮಿಳುನಾಡಿನವರದ್ದು ಷೆಡ್ಯೂಲ್ ೯ರಲ್ಲಿ ಇದ್ದರೂ ಕೂಡ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೆ, ಈ ಕೋರ್ಟ್ case ನ್ನು admit ಮಾಡಿಬಿಟ್ಟಿದೆ. ಆದರೆ, ಅವರು dispose ಮಾಡಿಲ್ಲ. Litigation is pending before Court. Admit ಮಾಡಬಾರದಾಗಿತ್ತು ಎಂಬುದು ಒಂದು ವಾದ, ಅವರು ಏಕೆ admit ಮಾಡಿದ್ದೆವು, Constitution ಏನು ಹೇಳುತ್ತದೆ ನಾವು ಅದರಲ್ಲಿ interfere ಆಗಬಾರದು ಎಂದು ಹೇಳಿ ಅದನ್ನು admit ಮಾಡಿದ್ದಾರೆ. ಆದರೆ, ಇದುವರೆಗೂ ಯಾವುದೇ decision ಆಗಿಲ್ಲ. ಅದಾದ ಮೇಲೆ 4–5 ರಾಜ್ಯಗಳಲ್ಲಿ ಮೀಸಲಾತಿಯನ್ನು ಜಾಸ್ತಿ ಮಾಡಿಬಿಟ್ಟಿದ್ದಾರೆ. ಕೇಂದ್ರ ಸರ್ಕಾರದವರು Constitutional amendment ತಂದು, ಅದಕ್ಕೆ ಶೇಕಡಾ ೧೦ರಷ್ಟನ್ನು ಸೇರಿಸಿ, economically weaker section ಗೆ ಕೊಡಬೇಕೆಂದು ಮಾಡಿದ್ದಾರೆ. ಈಗಾಗಲೇ ಈ ದೇಶದಲ್ಲಿ ಶೇಕಡಾ ೫೦ರಷ್ಟನ್ನು cross ಮಾಡಿದ್ದೇವೆ. ಈಗ economically weaker section ಗೆ ಕೊಡಬೇಕಾದರೆ, ಅದಕ್ಕೆ decision ಆಗಿದೆ. ಅದು ಏನು ಅಪರಾಧವಲ್ಲವೆಂಬ ಸ್ಥಿತಿ ರಾಷ್ಟ್ರದಲ್ಲಿ ನಿರ್ಮಾಣವಾಗಿದೆ. ಹಾಗಾಗಿ ನಾವು ನೀಡಿರುವಂತಹ ಶೇಕಡಾ ೬ excess seats ಗೆ ನಾವು ಇದನ್ನು ನೋಡಿಕೊಂಡು ಇದರ ರಕ್ಷಣೆ ಮಾಡಿಕೊಳ್ಳಬಹುದು, ನಾವು ಕೇಂದ್ರ ಸರ್ಕಾರದಲ್ಲಿ ಇದಕ್ಕೆ ಏನಾದರೂ Parliament ನಲ್ಲಿ amendment ತೆಗೆದುಕೊಳ್ಳಬಹುದು ಎಂದು ಭಾವಿಸಿಕೊಂಡು, ಈ ಕಾಯಿದೆಯನ್ನು ಮಾಡಿದ್ದೇವೆ. ಈಗ ಇದನ್ನು ಷೆಡ್ಯೂಲ್ ೯ಕ್ಕೆ ಸೇರಿಸುವುದರಿಂದ ಏನು ಬಹಳ ವ್ಯತ್ಯಾಸವಾಗುವುದಿಲ್ಲವೆಂದು ನಾವು ಈಗಲೇ ಆ ಕ್ರಮಕ್ಕೆ ಹೋಗಿಲ್ಲ. ನಾನು ಅಸೆಂಬ್ಲಿಯಲ್ಲಿ

ಮಾತನಾಡುತ್ತಾ ಹೇಳಿದೆ, if it warrants, ಅನಿವಾರ್ಯವಾಗಿ ಷೆಡ್ಯೂಲ್ ೯ಕ್ಕೆ ಸೇರಿಸಬೇಕು ಎನ್ನುವಂತಹ ಪರಿಸ್ಥಿತಿ ಬಂದರೆ, we will come back to assembly, we will resolve to add it in Schedule ೯ ಎಂದು. ಅದು ಈಗಲೇ ಬೇಡ. We hope, ಇದನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ವಿಶ್ವಾಸವಿದೆ ಎಂದು ನಾವು ಶೇಕಡಾ ೬ರಷ್ಟು ಮೀಸಲಾತಿಯನ್ನು ಜಾಸ್ತಿ ಮಾಡಿದ್ದೇವೆ.

**(ಮುಂದು...)**

(1224) 27.12.2022 06.00 LL-GR(BNS) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಜೆ.ಸಿ. ಮಾಧುಸ್ವಾಮಿ (ಮುಂದು...)**

ಇದನ್ನು ಎಲ್ಲಾ ಪಕ್ಷದವರು ಒಪ್ಪಿ ಮಾಡುವುದರಿಂದ ಈ ಸಭೆ ಪರ್ಯಾಲೋಚನೆ ಮಾಡಬೇಕು ಮತ್ತು ಈಗಾಗಲೇ ಸಂಜೆ 06-00 ಗಂಟೆ ಆಗಿರುತ್ತದೆ. ಹಾಗಾಗಿ, ಇದಕ್ಕೆ ಆದಷ್ಟು ಬೇಗ ಮುಕ್ತಿ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರೇ, ತಾವು ಇಷ್ಟೊಂದು ಕಷ್ಟಪಟ್ಟು ಈ ವಿಧೇಯಕವನ್ನು ತಿದ್ದುಪಡಿಗೆ ತಂದಿದ್ದೀರಿ, ಇದರ ಬಗ್ಗೆ ನಾವು ಚರ್ಚೆ ಮಾಡದೇ ಇದ್ದರೆ ಹೇಗೆ? ಈಗಾಗಲೇ ಸಂಜೆ 06-00 ಗಂಟೆ ಆಗಿದೆ ಎಂದು ಹೇಳಿದರೆ ಹೇಗೆ?

**ಸಭಾಪತಿಯವರು:-** ಆಯಿತು. ವಿಧೇಯಕದ ಮೇಲೆ ಚರ್ಚೆ ಮಾಡಲು ತಮಗೆ ಸಂಪೂರ್ಣ ಸ್ವತಂತ್ರ ಇದೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು, **ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ**ವನ್ನು ತಿದ್ದುಪಡಿಗಾಗಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರು ಹೇಳಿದಂತೆ, ಈಗಾಗಲೇ ಸಮಯ ಜಾಸ್ತಿಯಾಗಿರುತ್ತದೆ. ಹೌದು. ಈ ವಿಷಯದಲ್ಲಿ ಈಗಾಗಲೇ ಸುಮಾರು 5 ಸಾವಿರ ವರ್ಷ ಆಗಿರುತ್ತದೆ.

**(ಗೊಂದಲ)** ಆದುದರಿಂದ, ಇಲ್ಲಿ ಬಹುಸಂಖ್ಯಾತರ ಸಮಸ್ಯೆಗಳು ಇರುವಂಥದ್ದು, ಸಮಯ ಆದರೂ ಸಹ, ನಾಳೆಯ ದಿವಸ ಕೂಡ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು. ಅದಕ್ಕೆ ನಮ್ಮ ಅಭ್ಯಂತರವೇನು ಇಲ್ಲ. ಎಷ್ಟು ಜನ ಸದಸ್ಯರು ಈ ವಿಷಯದಲ್ಲಿ ಮಾತನಾಡುತ್ತಾರೆ. ಅವರೆಲ್ಲರಿಗೂ ಅವಕಾಶ ಕೊಡಬೇಕು. ಏಕೆಂದರೆ, ಈ ವರ್ಗಕ್ಕೆ ಮೀಸಲಾತಿಯನ್ನು ಘೋಷಣೆ ಮಾಡಿದ್ದಾರೆ, ಅವರು ಬಹಳ ವರ್ಷಗಳಿಂದಲೂ ಸಹ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರತಕ್ಕಂತಹವರು ಮತ್ತು ದುರ್ಬಲ ವರ್ಗದವರು. ಸದನದಲ್ಲಿ ಈ ವಿಷಯ ಚರ್ಚೆಯಾಗಿ, ನಾವು ಅವರಿಗೆ ಶಕ್ತಿ ತುಂಬಲಿಲ್ಲವೆಂದರೆ, ನಾವು ಏನೇ ಚರ್ಚೆ ಮಾಡಿ, ಯಾವುದೇ ಕಾನೂನು ಮಾಡಿದರೂ ಪ್ರಯೋಜನವಿಲ್ಲ. ನಾನು ಈ ವಿಷಯದಲ್ಲಿ ಮಾತನಾಡುವುದಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುತ್ತಿರಲಿಲ್ಲ.

ಕೇಂದ್ರ ಸರ್ಕಾರದಲ್ಲಿ ಅಂದರೆ, ಪಾರ್ಲಿಮೆಂಟ್‌ನಲ್ಲಿ ದಿನಾಂಕ:07.12.2022ರಂದು ಅಂದರೆ ಕಳೆದ 20 ದಿವಸಗಳ ಹಿಂದೆ, ಶ್ರೀ ಅಂಬುಮಣಿ ರಾಮದಾಸ್ ಎನ್ನುವ ಪಿ.ಎಂ.ಕೆ. ಪಕ್ಷದ ಸದಸ್ಯರೊಬ್ಬರು ಒಂದು ಪ್ರಶ್ನೆ ಕೇಳುತ್ತಾರೆ. ಅದೇನೆಂದರೆ, *"…. (a) whether the Central Government has any proposal to relax the 50 per cent ceiling-limit on reservations, subsequent to the Hon'ble Supreme Court's judgment in Janhit Abhiyan v Union of India; (b) if so, the details thereof; (c) whether the Central Government will increase the reservation for OBC's beyond 27 percent, proportional to their population, as the Hon'ble Supreme Court has stated that 50 percent ceiling limit on reservations are not rigid and they are flexible; and (d) if so, the details thereof?" Minister of State for Social Justice and Empowerment (Sushri Pratima Bhoumik) "(a) to (d) No sir. There is no proposal to alter the existing reservation scheme."* ಇದು ಕೇಂದ್ರ ಸರ್ಕಾರದ ಮಂತ್ರಿಯೊಬ್ಬರು ಹೇಳಿರುವಂಥದ್ದು. ಈ ವಿಷಯವನ್ನು ಲೋಕಸಭೆಯಲ್ಲಿ ಹೇಳಿರಬಹುದು. ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಅಭಿಪ್ರಾಯ ಇದ್ದಾಗ, ರಾಜ್ಯ ಸರ್ಕಾರ ಶೇಕಡ 54 ರಷ್ಟು ಮೀಸಲಾತಿ ತರುವಾಗ, ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ನಾನು ಲಾಯರ್ ಅಲ್ಲ. ಬದಲಾಗಿ, ನಾನು ಲಾ ಸ್ಟೂಡೆಂಟ್ ಅಷ್ಟೇ. ಮಾನ್ಯ ಮಂತ್ರಿಗಳು ಲಾಯರ್ ಆಗಿದ್ದವರು. Directive principles ನಲ್ಲಿ that is power of State.

ರಾಜ್ಯದಲ್ಲಿರತಕ್ಕಂತಹ ಜನತೆಗೆ ಸಮಾನತೆ ತರುವುದಕ್ಕೋಸ್ಕರ ಯಾವುದೇ ಕಾನೂನು ಮಾಡುವುದಕ್ಕೆ ಎಲ್ಲಾ ರೀತಿಯ ಹಕ್ಕು ರಾಜ್ಯ ಸರ್ಕಾರಕ್ಕಿದೆ. ಅದು ಸಂವಿಧಾನದಲ್ಲಿ, Article 31C of the Constitution reads as follows: "*Saving of laws giving effect to certain directive principles. Notwithstanding anything contained in article 13, no law giving effect to the policy of the State towards securing all or any of the principles laid down in Part IV shall be deemed to be void on the ground that it is inconsistent with, or takes away or abridges any of the rights conferred by article 14 or article 19 and no law containing a declaration that it is for giving effect to such policy shall be called in question in any court on the ground that it does not give effect to such policy.*" ಈ ಬಗ್ಗೆ ಮಾನ್ಯ ಸಚಿವರು ಮೊದಲೇ ಹೇಳಿದ್ದಾರೆ. "*...Provided that where such law is made by the Legislature of a State, the provisions of this article shall not apply thereto unless such law, having been reserved for the consideration of the President, has received his assent.*"

ಈ ಸ್ಥಿತಿ ಇರುವಾಗ ತಾವು ಈ ಸಭೆಯಲ್ಲಿ ಈ ವಿಧೇಯಕವನ್ನು ತಿದ್ದುಪಡಿಗೆ ತರುವಾಗ, directive principles ಅಡಿಯಲ್ಲಿ ತಂದು, ಅದಕ್ಕೆ ಒಂದು ನಿರ್ಣಯ ಮಾಡಿ, ಮುನ್ನೆಚ್ಚರಿಕೆ ವಹಿಸಿ ಷೆಡ್ಯೂಲ್ 9 ರಡಿಯಲ್ಲಿ ತರುವಂಥದ್ದನ್ನು ಮಾಡಿದ್ದರೆ, ಸರ್ಕಾರದ ಹಿತವನ್ನು ಅರಿತುಕೊಂಡು, ನಿಜವಾಗಲೂ ಸಹ ದುರ್ಬಲ ವರ್ಗದವರಿಗೆ ಸಹಾಯ ಮಾಡಬೇಕೆಂಬುದು ಸರ್ಕಾರದ ಮನದಾಳದಲ್ಲಿದೆ ಎಂದು ತಿಳಿದುಕೊಳ್ಳುತ್ತಿದ್ದೆವು.

ಆದರೆ, ಚುನಾವಣೆ ಬಂದಿದೆ ಎಂದು ಮಾನ್ಯ ಸಚಿವರೇ ಹೇಳುತ್ತಾ, 2019ನೇ ಇಸವಿಯಲ್ಲಿ ನಮಗೆ ಆಯೋಗದ ವರದಿ ಬಂದಿದೆ ಎಂದು ಹೇಳಿದರು. ಸದರಿ ವರದಿ ಬಂದು ಎರಡು ವರ್ಷ ಕಳೆದ ನಂತರ, ಅಂದರೆ ಮುಂದಿನ ವಿಧಾನಸಭೆ ಚುನಾವಣೆಗೆ ಇನ್ನು ಕೇವಲ 2 ತಿಂಗಳು ಬಾಕಿ ಇದೆ. ಆದಾಗ್ಯೂ, ನಾವು ಈ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇವೆ. ಆದರೆ, ಸರ್ಕಾರ ಈ ವಿಷಯದಲ್ಲಿ "ಮೂಗಿಗೆ ತುಪ್ಪ ಸವರುವ ರೀತಿ" ಮಾಡುತ್ತಿದೆ ಎಂಬುದು ನಮಗೆ ಕಾಣುತ್ತಿದೆ. **(ಗೊಂದಲ)** ಆದುದರಿಂದ, ಈ ಮೀಸಲಾತಿ ವಿಚಾರ ಬಂದಾಗ, ಮೀಸಲಾತಿ ಹೆಚ್ಚಳ ಮಾಡುವುದೇನು ಹೊಸದಲ್ಲ. ಅದನ್ನು ಈಗಾಗಲೇ ಕೆಲವು ರಾಜ್ಯಗಳಲ್ಲಿ ಮೀಸಲಾತಿ ಹೆಚ್ಚಳ ಮಾಡಿದ್ದಾರೆ. ಅಂದರೆ,

ಶೇಕಡ 50 ಕ್ಕಿಂತಲೂ ಹೆಚ್ಚು ಮೀಸಲಾತಿ ಬಗ್ಗೆ ಈಗಾಗಲೇ ಅವರು ಹೇಳಿದ್ದಾರೆ. 1963ರಲ್ಲಿ ಶ್ರೀ ಬಾಲಾಜಿ ಎನ್ನುವ ಕರ್ನಾಟಕದವರು ಮೀಸಲಾತಿ ವಿಚಾರದಲ್ಲಿ ಮಾನ್ಯ ನ್ಯಾಯಾಲಯದ ಮುಂದೆ ಹೋದಾಗ, ಶೇಕಡ 50ಕ್ಕಿಂತಲೂ ಹೆಚ್ಚು ಮೀಸಲಾತಿ ಕೊಡುವ ಆಗಿಲ್ಲ ಎಂದು ತೀರ್ಪು ನೀಡಿರುತ್ತದೆ. ಅದಕ್ಕೆ ಕಾರಣ ಏನು ಕೊಟ್ಟಿದ್ದಾರೆಂದರೆ, ಅಂದರೆ ಯಾರು backward, ಯಾರು forward, ಯಾರು scheduled caste, scheduled tribe ಎನ್ನುವ complete data ಇಲ್ಲ. ಎಲ್ಲಿಯ ತನಕ ಸಂಪೂರ್ಣವಾದ ಡೇಟಾ ತಮ್ಮಲ್ಲಿ ಇರುವುದಿಲ್ಲ, ಅಲ್ಲಿಯವರೆಗೆ ಮೀಸಲಾತಿ ಪ್ರಮಾಣ ಶೇಕಡ 50ನ್ನು ಮೀರಬಾರದು ಎಂದು ಹೇಳಿರುತ್ತದೆ. ಆದರೆ, ಕೆಲವು ಸಂದರ್ಭದಲ್ಲಿ ಏನಾಗಿದೆಯೆಂದರೆ, ಶೇಕಡ 50ಕ್ಕಿಂತಲೂ ಜಾಸ್ತಿ ಆಗಬಾರದೆಂಬ ಅನಿಸಿಕೆ ಇದೆ. ಅದು ಕಾಕ ಕಾಲೇಲ್ಕರ್ ಕಮೀಷನ್ 1954ರಲ್ಲಿ ಪಂಡಿತ್ ಜವಾಹರಲಾಲ್ ನೆಹರು ಮಾಡಿದಾಗಲೂ ಸಹ ಹಿಂದುಳಿದ ವರ್ಗದವರ ಸೆನ್ಸಸ್ ಆಗದೇ, ಅದು ನೆನೆಗುದಿಗೆ ಬಿದ್ದಿರುತ್ತದೆ.

1979ರಲ್ಲಿ ಮಂಡಲ್ ಕಮಿಷನ್ ಬಂದ ನಂತರ, ಆ ವರದಿಯನ್ನು ಒಪ್ಪಿಕೊಂಡ ನಂತರ, 1993ರಲ್ಲಿ ಮಾನ್ಯ ಸುಪ್ರೀಂ ಕೋರ್ಟ್ Indra Sawhney vs. Union of India ಪ್ರಕರಣದಲ್ಲಿ ಒಂದು ತೀರ್ಪು ನೀಡುತ್ತದೆ. It was nine Judges Bench. ಅದರಲ್ಲಿಯೂ ಸಹ ಮೀಸಲಾತಿ ಪ್ರಮಾಣ ಶೇಕಡ 50ಕ್ಕಿಂತಲೂ ಹೆಚ್ಚು ಹೋಗಬಾರದು ಎಂದು ಹೇಳಿರುತ್ತದೆ. ತದನಂತರ National Commission for Backward Classes ಗೆ statutory powers ಬೇಕೆಂದಾಗಲೂ ಸಹ ಅಲ್ಲಿಯೂ ಬಹಳ ಸ್ಪಷ್ಟವಾಗಿ ಶೇಕಡ 50ಕ್ಕಿಂತಲೂ ಹೆಚ್ಚು ಹೋಗಬಾರದು ಎಂದು ಹೇಳಿರುತ್ತದೆ. ಆದರೂ ಸಹ, ಮಾನ್ಯ ಸಚಿವರು, "ಆರ್ಥಿಕವಾಗಿ ಹಿಂದುಳಿದಿರುವವರಿಗೆ ಶೇಕಡ 10 ರಷ್ಟು ಮೀಸಲಾತಿಯನ್ನು ಕೇಂದ್ರ ಸರ್ಕಾರ ನೀಡಿರುತ್ತದೆ" ಎಂದು ಹೇಳಿರುತ್ತಾರೆ. ಅದಕ್ಕೆ ಯಾವುದೇ ಡೇಟಾ ಇರುವುದಿಲ್ಲ. ಅಂದರೆ, ಎಷ್ಟು ಜನ ಮೇಲ್ಜಾತಿಯವರು ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದರ ಬದಲಾಗಿ, ಮುಂದುವರಿದವರು ಅಥವಾ ಬಡವರು ಇದ್ದಾರೆ ಎಂಬುದರಲ್ಲಿ ಡೇಟಾ ಇರುವುದಿಲ್ಲ. ಆದರೂ ಸಹ EWS (economically weaker section) ಗೆ ಶೇಕಡ 10 ರಷ್ಟು ಮೀಸಲಾತಿ ಕೊಟ್ಟಿದ್ದಾರೆ. ಮಾನ್ಯ ಸುಪ್ರೀಂ ಕೋರ್ಟ್‌ನಲ್ಲಿ, ಅದು ಸರಿಯಿದೆ ಎಂದು ಹೇಳಿ, ಶೇಕಡ 50 ರಷ್ಟು ಮೀಸಲಾತಿಗೆ ಇದು ಟಚ್ ಆಗುವುದಿಲ್ಲ ಹಾಗೂ ಶೇಕಡ 50ಕ್ಕಿಂತಲೂ ಹೆಚ್ಚು ಹೋಗುವ ಆಗಿಲ್ಲ

ಎಂದು ತೀರ್ಪು ನೀಡಿರುತ್ತದೆ. ಶೇಕಡ 10 ರಷ್ಟು ಮೀಸಲಾತಿ ಮತ್ತು ಶೇಕಡ 50 ರಷ್ಟು ಮೀಸಲಾತಿಗೂ ಯಾವುದೇ ಸಂಬಂಧ ಇರುವುದಿಲ್ಲ. ಶೇಕಡ 50 ರಷ್ಟು ಮೀಸಲಾತಿಯಲ್ಲಿ ಎಸ್.ಸಿ./ಎಸ್.ಟಿ. ಮತ್ತು ಓ.ಬಿ.ಸಿ. ಗೆ ಕೊಡಬೇಕೆಂದು ತೀರ್ಪು ನೀಡಿರುತ್ತದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಇಲ್ಲ. ನಾನು ಸಹ ಜಡ್ಜ್‌ಮೆಂಟ್ ಓದಿರುತ್ತೇನೆ. ಅದರಲ್ಲಿ ಶೇಕಡ 10 ರಷ್ಟು ಮೀಸಲಾತಿಗೆ ಒಪ್ಪಿಗೆ ಸೂಚಿಸಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಶೇಕಡ 10 ರಷ್ಟು ಮೀಸಲಾತಿಗೆ ಒಪ್ಪಿಗೆ ಸೂಚಿಸಿದ್ದಾರೆ. ಆದರೆ, ಒಟ್ಟಾರೆ ಮೀಸಲಾತಿ ಪ್ರಮಾಣ ಶೇಕಡ 50 ಕ್ಕಿಂತಲೂ ಜಾಸ್ತಿ ಆಗುವ ಆಗಿಲ್ಲವೆಂದು ಹೇಳಿದ್ದಾರೆ.

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅದನ್ನು ಬಿಟ್ಟು ಶೇಕಡ 10 ರಷ್ಟು ಎಂದು ಹೇಳಿದ್ದಾರೆ. ಅದನ್ನು ಮಾನ್ಯ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿರುತ್ತದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಎಸ್.ಸಿ./ಎಸ್.ಟಿ. ಮತ್ತು ಓ.ಬಿ.ಸಿ. ಯವರನ್ನು ಬಿಟ್ಟು ಶೇಕಡ 10 ರಷ್ಟು ಮೀಸಲಾತಿ ಹೇಳಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಶ್ರೀ ರಾಮದಾಸ್ ಅವರು ಮೀಸಲಾತಿಯನ್ನು ಕೇಂದ್ರ ಸರ್ಕಾರ ಓ.ಬಿ.ಸಿ. ಸೆಕ್ಟರ್‌ನಲ್ಲಿ ಹೆಚ್ಚು ಮಾಡುವುದಕ್ಕೆ ಏನಾದರೂ ಅವಕಾಶ ಇದೆಯೇ ಎಂದು ಕೇಳಿದ್ದರು. That is pertaining to only Government of India employees and education system. ಅದರಲ್ಲಿ ಪ್ರಮುಖವಾಗಿ ಹೇಳಿರುವುದೇನೆಂದರೆ, ಓ.ಬಿ.ಸಿ.ಯವರಿಗೆ ಮೀಸಲಾತಿಯನ್ನು ಏನಾದರೂ ಜಾಸ್ತಿ ಮಾಡುತ್ತೀರಾ ಎಂದು ಕೇಳಿರುತ್ತಾರೆ. ಭಾರತ ಸಂವಿಧಾನದಲ್ಲಿ scheduled caste reservation is constitutional reservation. OBC reservation is reservation given by States under directive principles. Under directive principles States can

have OBC reservation to the effect of their capacity ಎಂದು ಹೇಳದರು. ಇದು ಲಾ ಅಲ್ಲ. ಇದು ಲಾ. There is no law in India which states that reservation cannot exceed 50%. Supreme Court has reiterated, it has said ಭಾರತ ದೇಶದಲ್ಲಿ ಯಾವುದೇ ಸಂವಿಧಾನದಲ್ಲಿ ಮೀಸಲಾತಿ ಪ್ರಮಾಣ ಶೇಕಡ 50 ಅನ್ನು ದಾಟಬಾರದೆಂದು ಮಾಡಿರುವುದಿಲ್ಲ.

(ಮುಂದು...)

(1225) 27.12.2022 6.10 YL-GR (BNS) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಜೆ.ಸಿ.ಮಾಧುಸ್ವಾಮಿ (ಮುಂದು):-**

ಸರ್ವೋಚ್ಚ ನ್ಯಾಯಾಲಯವು Indra Sawhney vs. Union of India ಕೇಸ್‌ಗೆ ಸಂಬಂಧಿಸಿದಂತೆ "ಏನಾದರೂ ಮಾಡಿಕೊಳ್ಳಿ, ಶೇಕಡ 50 ಕ್ಕಿಂತ ಹೆಚ್ಚಿಗೆ ದಾಟಬೇಡಿ" ಎಂದು ತೀರ್ಪು ನೀಡಿತ್ತು. That is in practice. ಆದರೆ, ಅಂದಿನಿಂದ ಇಂದಿನವರೆಗೂ ತಮಿಳುನಾಡಿನಲ್ಲಿ ಶೇಕಡ 69 ರಷ್ಟು maintain ಮಾಡಿಕೊಂಡು ಬಂದಿದ್ದಾರೆ. ಅದಕ್ಕೆ ಸರ್ವೋಚ್ಚ ನ್ಯಾಯಾಲಯವು ಏನು ಹೇಳಲ್ಲ. ನಾವು ಹೇಳುವುದೇನೆಂದರೆ, ಮಾನ್ಯ ಸದಸ್ಯರು ಹೇಳಿದ ಪ್ರಕರಣವು, neither it is for the States nor for scheduled castes and scheduled tribes. ಆ ಕೇಸ್‌ನ ರೆಫರೆನ್ಸ್ ತೆಗೆದುಕೊಂಡು, ನಿಮ್ಮ ಸಚಿವರೇ ಹೇಳಿಕೆ ನೀಡಿದ್ದು, ನೀವು ಈಗ ಏನು ಮಾಡುತ್ತೀರಿ ಎಂದು ಕೇಳಿದರೆ ಆಗುವುದಿಲ್ಲ. ಹಾಗೆಯೇ ಅದಕ್ಕೆ ನಾರಾಯಣಸ್ವಾಮಿಯವರು, ಆ ಲೇಡಿ ಏನು ಹೇಳಿದ್ದಾರೆ ಎಂಬುದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆಯನ್ನು ಎತ್ತಿದಾಗ, ಕೇಂದ್ರ ಸರ್ಕಾರದಲ್ಲಿ ಜಾಬ್‌ಗಾಗಲಿ, education ಗಾಗಲಿ enhance ಮಾಡುವ ಸ್ಥಿತಿ ಇದೆಯೇ ಎಂದು ಕೇಳಿದ್ದಕ್ಕಾಗಿ, they said no. That never affects our amendment to the Bill.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಓ.ಬಿ.ಸಿ ಯವರಿಗೆ directive principles State ಗೆ ಮಾತ್ರ ಇದೆ ಎನ್ನುವಂಥ ಮಾತನ್ನು

ಮಾನ್ಯ ಸಚಿವರು ಹೇಳಿದ್ದರು. ಎಸ್.ಸಿ./ಎಸ್.ಟಿ., ಓ.ಬಿ.ಸಿ., ಸೆಂಟ್ರಲ್ ಲಿಸ್ಟ್‌ನಲ್ಲಿ ಓ.ಬಿ.ಸಿ. ಬರುತ್ತಾರೆ. Central Government employment ಗೆ ಅದಕ್ಕೆ provision ಇದೆ. This is provided under National Commission for Backward Classes Act ಕೆಳಗೆ ಬರುವುದಕ್ಕೆ ಕೂಡಾ ಅವಕಾಶ ಕಲ್ಪಿಸುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಂಡಲ್ ಕಮಿಷನ್ ವರದಿ ಬಂದ ಮೇಲೆ, to the tune 27% ಓ.ಬಿ.ಸಿ.ಯವರಿಗೆ ಮೀಸಲಾತಿ ನೀಡಬಹುದೆಂದು ಮಾಡಿದ್ದರು. Recently, they have amended it again and given it back to States. Now they are not taking risk. ಯಾವಾಗ ಮಹಾರಾಷ್ಟ್ರದವರು ಓ.ಬಿ.ಸಿ. ಮೀಸಲಾತಿಯನ್ನು ಶೇಕಡ 60 ರಷ್ಟು ತೆಗೆದುಕೊಂಡರು, ಅದೇ ರೀತಿ ಬೇರೆ ರಾಜ್ಯದವರು ತೆಗೆದುಕೊಂಡರು ಆಗ ಭಾರತ ಸರ್ಕಾರವು "ಇನ್ನು ಮುಂದೆ ಓ.ಬಿ.ಸಿ. ಮೀಸಲಾತಿಯನ್ನು ನಾವು ಮುಟ್ಟುವುದಕ್ಕೆ ಹೋಗುವುದಿಲ್ಲ, ನೀವೇ ತೀರ್ಮಾನ ತೆಗೆದುಕೊಳ್ಳಬೇಕು" ಎಂದು ಹೇಳಿದ್ದರು. ಈಗ it is not under their control. Whereas SC/ST reservation is constitutional. ಅದನ್ನೇ ಅವರು ಕೇಳುತ್ತಿರುವುದು, Constitutional reservation ಮಾಡಿದ ಮೇಲೆ ಪಾರ್ಲಿಮೆಂಟ್ ಒಪ್ಪುತ್ತದೆಯೇ? ಪಾರ್ಲಿಮೆಂಟ್‌ನಲ್ಲಿ ಒಪ್ಪುವುದಕ್ಕೆ ಈಗಾಗಲೇ ಸರ್ವೋಚ್ಚ ನ್ಯಾಯಾಲಯವು ಶೇಕಡ 50 ರಷ್ಟು ಮಾತ್ರ ಮೀಸಲಾತಿ ಇರಬೇಕೆಂದು ಹೇಳಿರುವುದಕ್ಕೆ ಸಂಬಂಧಿಸಿದಂತೆ ಏನಾಗಬಹುದು ಎನ್ನುವಂಥದಾಗಿದೆ. ನಾನು ಸಹ ಹೇಳುವುದೇನೆಂದರೆ, ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿ ಒಪ್ಪಲಿಲ್ಲವೆಂದಾದರೆ ಅಥವಾ ವಿಶೇಷ ಸಂದರ್ಭ ಬಂದರೆ, we are prepared to bring it under Schedule ೯ ಎಂದು ನಾನು ಹೇಳುತ್ತಿದ್ದೇನೆ. (ಗೊಂದಲ) EWS is different issue.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ವಕೀಲರು ಸಮರ್ಪಕವಾಗಿ ಸರ್ಕಾರವನ್ನೇ defend ಮಾಡುವಾಗ ಈ ವಿಚಾರದಲ್ಲಿ ನನಗೆ ತಿಳಿದಿರುವುದನ್ನು ಸ್ವಲ್ಪ ಮಾತನಾಡುತ್ತೇನೆ. ಈಗಾಗಲೇ ಮಾನ್ಯ ಸಚಿವರು ಒಪ್ಪಿಕೊಂಡಿದ್ದು, ಸಂವಿಧಾನದಲ್ಲಿ ಎಲ್ಲಿಯೂ ಸಹ ಶೇಕಡ 50 ಕ್ಕೆ ಮೀಸಲಾತಿ ನೀಡುವುದನ್ನು ನಿಲ್ಲಿಸಬೇಕೆಂದು ಹೇಳಿಲ್ಲ. ಸಂವಿಧಾನದಲ್ಲಿ ತಿಳಿಸಿರುವುದು ಬಹಳ ಸ್ಪಷ್ಟವಾಗಿದ್ದು, ಸಮಾನತೆಗೋಸ್ಕರ ಏನೆಲ್ಲಾ

ಮಾಡಬೇಕು, ಅದೆಲ್ಲವನ್ನೂ ಮಾಡಬೇಕೆಂದು ಸಂವಿಧಾನದ ಆಶಯಗಳು, Preamble of the Constitution ನಲ್ಲಿ ಹೇಳಲಾಗಿದೆ. ಆರ್ಟಿಕಲ್ 14, 15, 16, 15(4) & 16(4) ನಲ್ಲಿ ಬಹಳ ಸ್ಪಷ್ಟವಾಗಿ "ಎಲ್ಲರಿಗೂ ಸಹ ಸಮಾನದ ಅವಕಾಶ, ಹಕ್ಕು ಇದೆ" ಎಂದು ಹೇಳಲಾಗಿದೆ. ಹಾಗೆಯೇ ಶೇಕಡ 50 ರಷ್ಟು ಎಂಬುದು ಲಕ್ಷ್ಮಣ ರೇಖೆಯಾಗಿಲ್ಲ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ನಾನು ಮಾತನಾಡಿರುವುದು ತಪ್ಪು ಇರಬಹುದು. ಒಂದು ವೇಳೆ ತಪ್ಪಾಗಿ ಹೇಳಿದರೆ ಸರಿ ಮಾಡಿಕೊಳ್ಳುತ್ತೇನೆ. ಸರ್ವೋಚ್ಛ ನ್ಯಾಯಾಲಯದ ಮುಂದೆ EWS ಪ್ರಕರಣಗಳು ಬಂದಾಗ ಸುಮಾರು ಪ್ರಕರಣಗಳು ಬಾಕಿ ಉಳಿದಿತ್ತು. ಆಗ ಸರ್ವೋಚ್ಛ ನ್ಯಾಯಾಲಯದ ಮುಂದೆ ಬಂದಾಗ,... Indra Sawhney ಕೇಸ್‌ನಲ್ಲಿ ಶೇಕಡ 50 ಕ್ಕಿಂತ ಹೆಚ್ಚಿಗೆ ಮೀಸಲಾತಿ ನೀಡಬಾರದೆಂದು 9 Judges Bench ಹೇಳಿದ ಮೇಲೆಯೂ ಸಹ ಯಾವ ರೀತಿ ಶೇಕಡ 10 ರಷ್ಟು ಮೀಸಲಾತಿಯನ್ನು ಜಾಸ್ತಿ ಮಾಡಿಕೊಂಡಿದ್ದಾರೆ ಎಂದು ಹೇಳಿದ ನಂತರ, it is entirely different one. ಇದನ್ನು Constitutional amendment ಮಾಡಿ ಶೇಕಡ 10 ರಷ್ಟು ನೀಡಿದ್ದೇವೆ, it has nothing to do with 50% reservation. ಅದರಲ್ಲಿ OBC ಗೆ ಶೇಕಡ 27 ರಷ್ಟು ಮೀಸಲಾತಿ ನೀಡಿದ್ದು, ಬಾಕಿ ಉಳಿದಿರುವುದು ಎಸ್.ಸಿ./ಎಸ್.ಟಿ. ಗೆ ಎಂದು ಮಾಡಿ ಎಲ್ಲವೂ ಸೇರಿ ಶೇಕಡ 50 ಕ್ಕಿಂತ ಹೆಚ್ಚಿಗೆ ಮೀಸಲಾತಿ ದಾಟಬಾರದೆಂದು ಸ್ಪಷ್ಟವಾಗಿ ಸರ್ವೋಚ್ಛ ನ್ಯಾಯಾಲಯವು ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. If it is wrong, I am subject to correction.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, whichever community is not covered under any type of reservation, ಯಾವುದೇ ಜನಾಂಗ ಅಥವಾ ಜಾತಿಯವರಿಗೆ ಯಾವುದೇ ರೀತಿ ಮೀಸಲಾತಿ ಇಲ್ಲದಿದ್ದರೆ ಶೇಕಡ 10 ರಷ್ಟು States can give reservation ಎನ್ನುವುದು EWS. Let us be clear that it is not 10%. To the maximum of 10% States can give reservation ಎಂದು ಅವಕಾಶ ಕಲ್ಪಿಸಿದ್ದಾರೆ. ಅಂದರೆ, ಬಿ.ಸಿ.ಎಂ., ಎಸ್.ಸಿ./ಎಸ್.ಟಿ., ಬಿ.ಸಿ.ಎಂ. ಸ್ಪೆಷಲ್ ಕ್ಯಾಟಗರಿ ಇದ್ಯಾವುದರಲ್ಲಿಯೂ ಬರದೇ ಇದ್ದವರಿಗೆ ಮಾತ್ರ

ಅದು ಅನ್ವಯವಾಗುತ್ತದೆ. ಅದಕ್ಕೆ ಶೇಕಡ 50 ರಷ್ಟು ಅಲ್ಲದೇ ಇದು ಶೇಕಡ 10 ರಷ್ಟು ಎಂದು ವ್ಯಾಖ್ಯಾನಿಸಬೇಕಾಗಿದೆ. So, we have crossed 50% reservation in India.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಹೇಳುತ್ತಿಲ್ಲ. Long back we have crossed 50% reservation. ತಮಿಳುನಾಡಿನಲ್ಲಿ ಶೇಕಡ 69 ರಷ್ಟು ಮೀಸಲಾತಿಯನ್ನು ಸುಮಾರು 30 ವರ್ಷಗಳಿಂದ ನೀಡುತ್ತಿದ್ದಾರೆ. ಸರ್ವೋಚ್ಚ ನ್ಯಾಯಾಲಯದಲ್ಲಿ ಸಹ ಅದರ ವಿರುದ್ಧವಾಗಿ case file ಮಾಡಿದ್ದಾರೆ. ಆದರೆ, ಅದಕ್ಕೆ ಕಾರಣಗಳು ಇವೆ. ಮಾನ್ಯ ಸಚಿವರೇ, ಇದೇ ತಮಿಳುನಾಡಿನಲ್ಲಿ ಶೇಕಡ 69 ರಷ್ಟು ಮೀಸಲಾತಿ ನೀಡಿದಾಗ ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು ಸಂಘವು ಆ ಶೇಕಡ 69 ರಷ್ಟು ಮೀಸಲಾತಿ ವಿರುದ್ಧ ತಡೆಯಾಜ್ಞೆ ತರುತ್ತದೆ. ಆಗ ನ್ಯಾಯಮೂರ್ತಿಗಳಾದ ಶ್ರೀ ಎಂ.ಎನ್.ವೆಂಕಟಾಚಲಯ್ಯರವರು ಅದಕ್ಕೆ ತಡೆಯಾಜ್ಞೆ ತರುತ್ತಾರೆ. ಅವರು ಸಹ ಕರ್ನಾಟಕದವರೆ ಆಗಿದ್ದಾರೆ. ಆಗ ತಮಿಳುನಾಡಿನಲ್ಲಿ ಎಲ್ಲಾ ರಾಜಕೀಯ ಪಕ್ಷದವರು ಒಂದಾಗಿ ವಿಧಾನಸಭೆಯಲ್ಲಿ ಎಲ್ಲಾ ಪಕ್ಷದವರು ಒಮ್ಮತದಿಂದ under Article ೩೭C, Directive principles ನಲ್ಲಿ ತೆಗೆದುಕೊಂಡು ಬಂದು ಷೆಡ್ಯೂಲ್ 9 ನಲ್ಲಿರಿಸಿ ಆರಾಮವಾಗಿ ಶೇಕಡ 69 ರಷ್ಟು ಮೀಸಲಾತಿ ನೀಡುತ್ತಿದ್ದಾರೆ. ಅದೇ ರೀತಿ ಸರ್ಕಾರದವರು ಮಾಡಿದರೆ ನಾನು 5 ನಿಮಿಷ ಸಹ ಅದರ ಬಗ್ಗೆ ಮಾತನಾಡುತ್ತಿರಲಿಲ್ಲ. ರಾಜಕೀಯ ಚುನಾವಣೆಯನ್ನಿಟ್ಟುಕೊಂಡು ಈ ಸಮುದಾಯದವರ ಜೊತೆ ಚೆಲ್ಲಾಟ ಆಡುವುದು ತಪ್ಪು. ಏಕೆಂದರೆ, ಅವರಿಗೆ ಬೆಂಕಿಯೇ ಬೆಳಕು ಎಂದು ಹೋಗಿ ಬಿಟ್ಟಿದ್ದಾರೆ. ಬೆಂಕಿ ಏನಿದೆ ಅದನ್ನೇ ಬೆಳಕು ಎಂದು ಹೋಗಿದ್ದು, ಎಲ್ಲವೂ ಸುಟ್ಟು ಕರಕಲಾಗುತ್ತದೆ. ಆ ನೋವು ಏನೆಂಬುದು ನಮಗೆ ಗೊತ್ತು, ಆ ನೋವು ಅವರಿಗೆ ಹೇಗೆ ಗೊತ್ತಾಗಬೇಕು?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವಾಗ ಪರಿಶಿಷ್ಟ ಜಾತಿ ಸೇರಿದ್ದರು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು scheduled caste ಬಗ್ಗೆ ಹೇಳುತ್ತಿಲ್ಲ. ನಾನು ಸಹ ಶೂದ್ರ ಸಮುದಾಯಕ್ಕೆ ಸೇರಿದವನು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಸಹ ಶೂದ್ರ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಎಲ್ಲ ಶೂದ್ರರಾಗಿದ್ದಾರೆ. 1921ರವರೆಗೂ ಮಾತ್ರ ಶೂದ್ರರು. ಆಮೇಲೆ 1921ರ ನಂತರ ಲಿಂಗಾಯತರಿಗೆ, ಒಕ್ಕಲಿಗ ಸಮುದಾಯಕ್ಕೆ ಭೂಮಿ ಸಿಕ್ಕಿ ಪಾಳೇಗಾರರಾಗಿ ಬಿಟ್ಟರು. ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, city ಯಲ್ಲಿದ್ದುಕೊಂಡು ವ್ಯಾಪಾರ ಮಾಡಿದವರ ಮುಂದೆ ಭೂಮಿ ತೆಗೆದುಕೊಂಡವರೇನು ಮಣ್ಣು ತಿನ್ನುತ್ತಾರೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, city ಯಲ್ಲಿರುವುದು ಬೇರೆ. ನಾನು ಹೇಳುವುದನ್ನು ಮಾನ್ಯ ಸಚಿವರು ಕೇಳಿಸಿಕೊಳ್ಳಲಿ. ಸಾಮಾಜಿಕವಾಗಿ ಅದಕೋಸ್ಕರ ಮೀಸಲಾತಿ ನೀಡುವಾಗ our forefathers Constitution ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮೀಸಲಾತಿ ನೀಡುವ ಸಂದರ್ಭದಲ್ಲಿ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿಗೆ ಮಾತ್ರ ಮೀಸಲಾತಿ ಎಂದು ಹೇಳಿದ್ದಾರೆ. ಸಂವಿಧಾನದ ಆಶಯ ಇರುವುದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಾವಿರಾರು ವರ್ಷಗಳಿಂದ ಅವರಿಗೆ ಶಿಕ್ಷಣ ಇರಲಿಲ್ಲ. 1947 ರಲ್ಲಿ ಶೇಕಡ 11 ರಷ್ಟು ಶಿಕ್ಷಿತರು ಈ ದೇಶದಲ್ಲಿದ್ದರು. ಬ್ರಿಟೀಷರಿಂದ ನೇರವಾಗಿ bureaucracy ಕೈಯಲ್ಲಿ ಸ್ವತಂತ್ರ ಬಂದಿದೆ. Bureaucracy ನಲ್ಲಿ ಇದ್ದವರು ಇವತ್ತಿಗೂ ಸಹ ಆ ಒಂದು luxury ಮತ್ತು ಆನಂದವನ್ನು, cosy comforts ನ್ನು ಬಿಟ್ಟು ಕೊಡಲು ತಯಾರಿಲ್ಲ. ಅದರಲ್ಲಿಯೇ ಇನ್ನು ಉಳಿದುಕೊಂಡಿದ್ದು, ಸುಮಾರು 75 ವರ್ಷ ದಾಟಿ ಹೋಗಿದೆ. ಜನರಿಗೆ ಜಾಗೃತಿ ಮೂಡಿದೆ. ಆದ್ದರಿಂದ ಅದರ ಬಗ್ಗೆ ಚರ್ಚೆ ಮಾಡಲು ಹೋಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು interesting debate ಮಾಡುತ್ತಿದ್ದಾರೆ. ಆದರೆ, ಕರ್ನಾಟಕ.... ಕೊಲ್ಹಾಪುರ ಮಹಾರಾಜರಾದ His Highness ಸಾಹು ಮಹಾರಾಜರು ಮೊದಲೇ ಮೀಸಲಾತಿ ತಂದಿದ್ದರು. ಇದಾದ ನಂತರ before independence reservation ತಂದು to the tune of 75% ಮಾಡಿದ್ದು ಮೈಸೂರು ಸಂಸ್ಥಾನ. ನಾವು ಮಾಡಿದ್ದೇವೆ ಎಂದು ಭಾವಿಸುವಂತಿಲ್ಲ. ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಮುಂದೆ ನಾವು ಏನೇನು ಇಲ್ಲ. It is in practice and vogue. ಅದರ ಆಧಾರದ ಮೇಲೆಯೇ ಸಂವಿಧಾನವಾಗಿರುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಸಹ ಆ ವಿಚಾರವಾಗಿಯೇ ಮಾತನಾಡಲು ಬರುತ್ತಿದ್ದೇನೆ. ಸಾಹು ಮಹಾರಾಜರು, ಜ್ಯೋತಿ ಬಾ ಫುಲೆಯವರ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ವಿಚಾರದ ಮೇಲೆಯೂ ಮಾತನಾಡಲು ಬರುತ್ತೇನೆ. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸರ್.ಎಂ.ವಿಶ್ವೇಶ್ವರಯ್ಯನವರ ವಿರುದ್ಧ ಮಾಡಿದ್ದರು. ಅದಕ್ಕೆ ಸರ್. ಎಂ.ವಿಶ್ವೇಶ್ವರಯ್ಯನವರು ರಾಜೀನಾಮೆ ನೀಡುತ್ತೇನೆ ಎಂದು ಹೇಳಿದಾಗ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳಿದ್ದರು. ಅಂದರೆ ಅವರಿಗೆ ಆ ಒಂದು ಬದ್ಧತೆ ಇತ್ತು. ಸಮಾಜದಲ್ಲಿ ನಾವೆಲ್ಲರೂ ಸಹ ಸಮಾನರು ಎಂದು ಮಾಡಿದ್ದರು. ಆದ್ದರಿಂದ ಇಷ್ಟೆಲ್ಲಾ ಕಳಕಳಿಯಿಂದ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, I do not want to score any point on this. ಏಕೆಂದರೆ, ಮಹಾರಾಷ್ಟ್ರ ಮೀಸಲಾತಿಗೆ ಸಂಬಂಧಿಸಿದಂತೆ ಮಾನ್ಯ ಸಚಿವರು quote ಮಾಡಿ ಹೇಳಿದ್ದು, 2021ರಲ್ಲಿ ಲಕ್ಷ್ಮಣ್ ರಾವ್ ಪಾಟೀಲ್‌ರವರು ಸರ್ವೋಚ್ಚ ನ್ಯಾಯಾಲಯದಲ್ಲಿ ಮರಾಠ ಸಮುದಾಯಕ್ಕೆ ಶೇಕಡ 16 ರಷ್ಟು ಮೀಸಲಾತಿ ನೀಡಬೇಕೆಂದು ಸರ್ಕಾರ ಘೋಷಣೆ ಮಾಡಿತ್ತು. ನ್ಯಾಯಾಲಯದ ಮೊರೆ ಹೋದಾಗ ನ್ಯಾಯಾಲಯದಲ್ಲಿ ಬಹಳಷ್ಟು ಚರ್ಚೆಯಾಗಿತ್ತು. ನಾನು ಪಾರ್ಲಿಮೆಂಟ್ ಸದಸ್ಯನಾಗಿದ್ದಾಗ ಓ.ಬಿ.ಸಿ. ಮೀಸಲಾತಿ ಬಗ್ಗೆ ನಾನು ಭಾಷಣ ಮಾಡಿರುವುದನ್ನು ಮರಾಠ ಜಡ್ಜ್‌ಮೆಂಟ್‌ನಲ್ಲಿ ಕೋಟ್ ಮಾಡಿದ್ದು, State ಗೆ ಏನು ಪವರ್ ಇದೆ ಎಂಬುದರ ಬಗ್ಗೆ ನನ್ನ ಭಾಷಣದ ಮೇಲೆ ಅವರ ತೀರ್ಪು ಬಂದಿದ್ದು, ಅದನ್ನೇ ನಾನು ಇಲ್ಲಿಯೂ ಸಹ ಹೇಳುತ್ತಿದ್ದೇನೆ. State powers dilute ಆಗಬಾರದು. ನಮ್ಮ ರಾಜ್ಯಕ್ಕೆ ನಮ್ಮದೇ ಆದ ಪವರ್ ಇರುತ್ತದೆ. Directive principles ಎಂದು ಸಂವಿಧಾನದಲ್ಲಿ ಇದೆ. ಅದರಲ್ಲಿ ಹೋಗಿ ಬಿಟ್ಟಿದ್ದರೆ ನಮ್ಮ ಅಭ್ಯಂತರವೇನು ಇರಲಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, it is for OBC.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, even for others. ನಾನು ದಲಿತರಿಗೆ ಓ.ಬಿ.ಸಿ. ನೀಡಿದ್ದೀರಿ ಎಂದು ಹೇಳುತ್ತಿಲ್ಲ. 50% cross ಮಾಡುವುದರ ಬಗ್ಗೆ ಹೇಳುತ್ತಿದ್ದೇನೆ.

(ಮುಂದು)

(1226) 27.12.2022/6.20/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ ಹರಿಪ್ರಸಾದ್ (ಮುಂದು):-**

ಅದು ಆಗಿರುವ ಸಂದರ್ಭದಲ್ಲಿ ನಾವು ಅದರ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕಾಗಿತ್ತು. ಮಾನ್ಯ ಸಚಿವರು ಹೇಳಿದಂತೆ, ಎಲ್ಲಿಯೂ ಅಂಕಿ-ಅಂಶಗಳಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಂಕಿ-ಅಂಶಗಳ ಸಿಕ್ಕಿರುವುದರಿಂದ ಶೇಕಾಡ 24.5ಕ್ಕೆ ಹೆಚ್ಚು ಮಾಡಿರುವುದರಿಂದ ಬಹಳ ಸಂತೋಷ. ಅವರಿಗೆ ಮೀಸಲಾತಿ ಸಿಗಬೇಕಾಗಿರುವಂತಹದ್ದು, ಅದು ಸಿಗಬೇಕು. ಆದರೆ legal hurdles ಏನಿದೆ ಎಂಬುದು ಯಾರೂ ಸಹ ಯೋಚನೆ ಮಾಡಿಲ್ಲವಲ್ಲ. ಇದೇನೂ ಹೊಸದೇನಲ್ಲ. ಇತ್ತೀಚೆಗೆ ಛತ್ತಿಸ್‌ಗಡನಲ್ಲಿ ಶೇಕಡಾ 73 ರಷ್ಟು ಮೀಸಲಾತಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅದಿವಾಸಿಗಳಿಗೆ ಶೇಕಡಾ 33 ರಷ್ಟು ಮೀಸಲಾತಿ, ಓ.ಬಿ.ಸಿ. ಯವರಿಗೆ ಶೇಕಡಾ 27 ಮೀಸಲಾತಿ, ಪರಿಶಿಷ್ಟ ಜಾತಿಗೆ ಶೇಕಡಾ 23 ಮೀಸಲಾತಿಯನ್ನು ಕೊಟ್ಟಿದ್ದಾರೆ. ಎರಡೂ ಅಸೆಂಬ್ಲಿಯಲ್ಲಿ ಭಾರತೀಯ ಜನತಾ ಪಕ್ಷದವರು ವಿರೋಧ ಪಕ್ಷದಲ್ಲಿದ್ದಾರೆ. ಅಲ್ಲಿ 2/3$^{rd}$ ರಷ್ಟು ಕಾಂಗ್ರೆಸ್ ಪಕ್ಷ ಇರುವುದರಿಂದ ಎಲ್ಲರೂ ಸಹ unanimous ಆಗಿ ಮಾಡಿ, ಅದನ್ನು 9$^{th}$ schedule ಗೆ ಹಾಕಬೇಕೆಂದು ಅವರು ಹೇಳಿದ್ದಾರೆ. ನಮ್ಮ ಪ್ರಕಾರ ಇದೇನೂ ಹೊಸದೇನಲ್ಲ. 1994ರಲ್ಲಿ ಮಾನ್ಯ ವೀರಪ್ಪ ಮೊಯ್ಲಿಯವರಿದ್ದಾಗ, ಅವರು ಸಹ ಶೇಕಡಾ 73 ಮೀಸಲಾತಿಯನ್ನು ಕೊಟ್ಟಿದ್ದರು. ಆದಾದ ಮೇಲೆ ಇತಿಹಾಸದ ಏನಾಯಿತು ಎಂಬುದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ತಮಿಳುನಾಡಿನಲ್ಲಿ ಏನಾಯಿತು ಎಂಬುದರ ಬಗ್ಗೆ ನೋಡಿದಾಗ, ಅದು ತಾವು ಓ.ಬಿ.ಸಿ ಎಂದು ಹೇಳಬಹುದು. EWS (Economically Weaker Section) ಬಗ್ಗೆ ಬಹಳ ಚೆನ್ನಾಗಿದೆ. EWS ಎಂದರೆ, ಅವನ income limit 8.5 ಲಕ್ಷ ಹೊಂದಿದ್ದರೆ, ಅವನು ಬಡವ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆದಾಯದ 2.5 ಲಕ್ಷ ಹೊಂದಿದ್ದರೆ, ಅವನು ಸಾಹುಕಾರ. ಅದರ ಮೇಲೆ ಅವನಿಗೆ ಮೀಸಲಾತಿ ಸಿಗುವುದಿಲ್ಲ. ಇವೆಲ್ಲಾ ತಾರತಮ್ಯಗಳಿರುವುದರಿಂದ ಇದರ ಬಗ್ಗೆ ನಾನು ತಮಗೆ ಹೇಳುತ್ತಿದ್ದೇನೆ. ಪುನಃ ಅದೇ ಪರಿಸ್ಥಿತಿ ಬರುತ್ತದೆ. ಮೀಸಲಾತಿ ಕೊಟ್ಟ ತಕ್ಷಣ ಅವರಿಗೆ ಮೀಸಲಾತಿ ಸಿಗುತ್ತದೆ ಎಂದಲ್ಲ. ಓ.ಬಿ.ಸಿ.ಗಳಿಗೆ ಶೇಕಡಾ 27 ರಷ್ಟು ಮೀಸಲಾತಿ ಇದೆ. ಆ ಸಮಿತಿಯಲ್ಲಿ ನಾನೂ ಕೂಡ ಹತ್ತು ವರ್ಷ ಇದ್ದೆ. 1993 ರಿಂದ ಸುಮಾರು 25 ವರ್ಷಗಳಾದರೂ ಕೂಡ ಶೇಕಡಾ 19 ರಷ್ಟು

cross ಮಾಡುವುದಕ್ಕಾಗಲಿಲ್ಲ. ನಾವು schedule caste reservation 18 percent ಕೊಟ್ಟರೂ ಕೂಡ ಶೇಕಡಾ 11 ರಷ್ಟು cross ಮಾಡುವುದಕ್ಕಾಗಲಿಲ್ಲ. ಏಕೆಂದರೆ ಅಷ್ಟೊಂದು ಅಡಚಣೆಗಳು ಇರುತ್ತವೆ. ಮೊದಲಿನಿಂದಲೇ ಅಷ್ಟೊಂದು ಸುಲಭವಾಗಿ ಬಿಡುವುದಿಲ್ಲ. ಎಲ್ಲಾ ರೀತಿಯಲ್ಲಿ ಅಡಚಣೆಯಿರುವುದರಿಂದ ಕಾನೂನು ಮಾಡುವಾಗಲೇ, ಎಲ್ಲಾ ರೀತಿಯಲ್ಲೂ insulate ಮಾಡಿ, ಮಾಡಬೇಕಾಗಿತ್ತು. ಅವರಿಗೆ ಎಲ್ಲಾ ರೀತಿಯ ರಕ್ಷಣೆ ಕೊಟ್ಟು ಕಾನೂನು ಮಾಡಿದ್ದರೆ, ನಾವೆಲ್ಲರೂ ಅದನ್ನು ಒಪ್ಪಿಕೊಳ್ಳುತ್ತಿದ್ದೇವು. ಮಾನ್ಯ ವೀರಪ್ಪ ಮೊಯ್ಲಿಯವರು ಮೀಸಲಾತಿಯನ್ನು ಮಾಡಿದಾಗ, ಪರಿಶಿಷ್ಟ ಜಾತಿಗೆ ಶೇಕಡಾ 18 ರಷ್ಟು ಮೀಸಲಾತಿ, ಪರಿಶಿಷ್ಟ ಪಂಗಡ ಶೇಕಡಾ 5 ರಷ್ಟು ಮೀಸಲಾತಿ, ಪ್ರವರ್ಗ–1 ರಷ್ಟು ಶೇಕಡಾ 7 ಮೀಸಲಾತಿ, ಪ್ರವರ್ಗ–2(ಎ) ಶೇಕಡಾ 20 ರಷ್ಟು ಮೀಸಲಾತಿ, ಪ್ರವರ್ಗ–2(ಬಿ) ಶೇಕಡಾ 6 ರಷ್ಟು ಮೀಸಲಾತಿ, ಪ್ರವರ್ಗ–3(ಎ) ಶೇಕಡಾ 7 ರಷ್ಟು ಮೀಸಲಾತಿ, ಪ್ರವರ್ಗ–3(ಬಿ) ಶೇಕಡಾ 10 ರಷ್ಟು ಮೀಸಲಾತಿ ಅಂದರೆ ಒಟ್ಟು ಶೇಕಡಾ 73 ರಷ್ಟು ಮೀಸಲಾತಿಯನ್ನು ಕೊಟ್ಟಿದ್ದರು. ಅದರ ವಿರುದ್ಧವಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಲಾಯಿತು.  ಆದಾದ ನಂತರ ನಮ್ಮ ಸರ್ಕಾರ ಹೋಯಿತು. ಮೀಸಲಾತಿ ಹಾಗೆಯೇ ನಿಂತು ಹೋಯಿತು. ಈ ಒಂದು ಸಂದರ್ಭದಲ್ಲಿ ತೆಗೆದುಕೊಂಡಿರುವಂತಹ ನಿರ್ಣಯ ಅದು ಕೇವಲ ಚುನಾವಣೆಗೆ ತೆಗೆದುಕೊಂಡಿರುವಂತಹದ್ದು.

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):–** ಮಾನ್ಯ ಬಿ.ಕೆ. ಹರಿಪ್ರಸಾದ್‌ರವರೇ, ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯರಾಗಿದ್ದಾಗ, he did not proceed with that. Propose  ಮಾಡಿ, ಅದು ಅದು ಶೇಕಡಾ 73 ರಷ್ಟು ಮೀಸಲಾತಿಗೆ ನಿಂತು ಹೋಯಿತು. ಅದು ಮುಂದೆ ಹೋಗಲಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಚಿವರೇ, ಶೇಕಡಾ 73 ರಷ್ಟು ಮೀಸಲಾತಿ ಮಾಡಿದರಲ್ಲ, ಅದರ ವಿರುದ್ಧವಾಗಿ ಎಷ್ಟೊಂದು ದೊಡ್ಡ rally ಆಯಿತು. ರಾಜಕೀಯವಾಗಿ ಅದನ್ನು ಸುಲಭವಾಗಿ ಬಿಡುತ್ತಾರೇನು. ಅದರ ಬಗ್ಗೆ ನಾನು ಹೇಳುತ್ತಿರುವುದು. ದುರ್ಬಲ ವರ್ಗದವರಿಗೆ ಸಿಗಬೇಕೆಂದರೆ, ತಾವು ಹೇಳಿದಂತೆ, ನಾನೆಲ್ಲೋ ಸಿಟಿಯಲ್ಲಿ ಬಂದು ಬದುಕಿದೆ. ಇಲ್ಲವೆಂದರೆ, ನಾನು ನಲವತ್ತು ವರ್ಷ

ರಾಜಕೀಯ ಮಾಡುವುದಕ್ಕಾಗುತ್ತದೆಯೇ? ನನ್ನನ್ನು ಬಿಡುತ್ತಿದ್ದೀರಾ ನೀವು? ಅದೂ ಕೂಡ ಬಿಡುತ್ತಿರಲಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವೀರಪ್ಪ ಮೊಯ್ಲಿಯವರು ಶೇಕಡಾ 10 ರಷ್ಟು ನಮಗೆ ಮಾಡಿದ್ದು. ದುರ್ಬಲ ವರ್ಗದವರಿಗೆ ಅಲ್ಲ. ಮಾನ್ಯ ವೀರಪ್ಪ ಮೊಯ್ಲಿಯವರು 3(ಎ) ಮತ್ತು 3(ಬಿ) ಮೀಸಲಾತಿ ಮಾಡಿದ್ದನ್ನು ತಾವು ತೆಗೆದು ನೋಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಚಿವರೇ, ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ. ಅದು ಯಾವ ಮಟ್ಟಿಗೆ ಹೋಗಿತ್ತು ಎಂದರೆ, ದಿ. ಡಿ. ದೇವರಾಜ ಅರಸುರವರು 1977ನೇ ಇಸವಿಯಲ್ಲಿ ಹಾವನೂರು ಕಮಿಷನ್ ಜಾರಿಗೆ ತಂದಾಗ, ನಮ್ಮ ಹಿರಿಯ ನಾಯಕರಾದ ರೆಡ್ಡಿಯವರು ಕಾಂಗ್ರೆಸ್ ಪಕ್ಷದಲ್ಲಿದ್ದರು. ಭೀಮಣ್ಣ ಖಂಡ್ರೆಯವರು ಹಾವನೂರು ಕಮಿಷನ್ ನೀಡಿರುವ ವರದಿಯನ್ನು ಅಸೆಂಬ್ಲಿಯಲ್ಲಿ ಸುಟ್ಟು ಹಾಕಿಬಿಟ್ಟರು. ಅವರನ್ನು ಕೂಡ ಅಮಾನತ್ತು ಮಾಡಿದರು. ಮೀಸಲಾತಿಯ ಬಗ್ಗೆ ಆ animosity ಇರುವಾಗ,

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ income limit ಇಲ್ಲ. ಇದನ್ನು ತಾವು ಏಕೋ... That is for scholarship purpose. 2.5 lakh ಏನೊಂದು ಓದಿದ್ದೀರಿ? It is for scholarship purpose. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಆದಾಯವನ್ನು ಕೇಳುವುದಿಲ್ಲ.

**SRI B.K.HARIPRASAD:–** I stand corrected. ಮಾನ್ಯ ಸಭಾಪತಿಯವರೇ, ಮೀಸಲಾತಿ ಏನಾಗುತ್ತದೆ ಎಂದು ಹೇಳಿದರೆ, ದಿ. ಡಿ. ದೇವರಾಜು ಅರಸುರವರ ಕಾಲದಲ್ಲಿ ಶೇಕಡಾ 52 ರಷ್ಟು ಮೀಸಲಾತಿ ಇತ್ತು. ಅದು ಶೇಕಡಾ 48 ಮೀಸಲಾತಿಗೆ ಬಂತು. ದಿ. ರಾಮಕೃಷ್ಣಾ ಹೆಗಡೆಯವರು, ತಮಗೂ ಮತ್ತು ಇಲ್ಲಿ ಕುಳಿತಿರುವ ಸದಸ್ಯರುಗಳಿಗೆಲ್ಲಾ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಚುನಾವಣೆಗೆ ಮಾನ್ಯ ನಸೀರ್ ಸಾಬ್‌ರವರು ಮೀಸಲಾತಿಯನ್ನು ಕೊಟ್ಟ ನಂತರ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ಮಾನ್ಯ ರಾಮಾ ಜೋಯಿಸ್ ರವರು ಹೋಗಿದ್ದರು. ಭಾರತೀಯ ಜನತಾ ಪಕ್ಷದ ರಾಜ್ಯಸಭಾ ಸದಸ್ಯರು ನಾನೂ ಕೂಡ ಅವರ ಜೊತೆ ಇರುತ್ತಿದ್ದೆ. ಆ

ಮೀಸಲಾತಿಯನ್ನು ತೆಗೆಯಬೇಕೆಂದು ಹೋದರು. ಮೀಸಲಾತಿ ಕೊಡಬೇಕೆಂದು ಯಾವ ರೀತಿ ಪ್ರೀತಿ ಬಂದಿದೆ ಎಂಬುದರ ಬಗ್ಗೆ ನನಗೆ ಗೊತ್ತಾಗುತ್ತಿಲ್ಲ. ಈ ಒಂದು ಪರಿಸ್ಥಿತಿ ಇರುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯ ಕಡೆಗೆ ನಮಗೆ ಒ.ಬಿ.ಸಿ. ಶೇಕಡಾ 32 ರಷ್ಟು ಮೀಸಲಾತಿ ತಂದು ನಿಲ್ಲಿಸಿದ್ದೀರಿ. ಮೀಸಲಾತಿಯನ್ನು ಒ.ಬಿ.ಸಿ.ಗೆ ಕೊಡಬೇಕೆಂದು ನಾನು ಹೇಳುತ್ತಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪರಿಸ್ಥಿತಿ ಏನಾಗಬೇಕೆಂದು ನಾನು ಹೇಳುತ್ತಿದ್ದೇನೆ. ನಾನು ಹೇಳುವುದೇನೆಂದರೆ, ಮೀಸಲಾತಿಯನ್ನು ಕೊಡುವ ಸಂದರ್ಭದಲ್ಲಿ ಬಹಳ ಇತಿಹಾಸ ಬಹಳ ಇದೆ. ಮಾನ್ಯ ಸಭಾಪತಿಯವರು ಜಾಸ್ತಿ ಸಮಯವನ್ನು ತೆಗೆದುಕೊಳ್ಳಬಾರದೆಂದು ಹೇಳಿದ್ದಾರೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಭಾರತೀಯ ಜನತಾ ಪಕ್ಷ ಬಹಳ ಹುಮ್ಮಸ್ಸಿನಿಂದ ಮೀಸಲಾತಿಯನ್ನು ಕೊಡುತ್ತಿದ್ದೇವೆಂದು ಹೇಳಿರಬಹುದು. ಭಾರತೀಯ ಜನತಾ ಪಕ್ಷದ ಸೂತ್ರಧಾರಿ ಯಾರಿದ್ದಾರೆ? 2015 ರಲ್ಲಿ ಬಿಹಾರ ಚುನಾವಣೆಯಲ್ಲಿ ಮೀಸಲಾತಿಯನ್ನು ತೆಗೆಯಬೇಕು. ಈ ರಾಜ್ಯದ ಜಿಲ್ಲೆಯ ಲೋಕಾಸಭಾ ಸದಸ್ಯರೊಬ್ಬರು ನಾವು ಬಂದಿರುವುದೇ ಸಂವಿಧಾನದ ಬದಲಾವಣೆ ಮಾಡಬೇಕೆಂದು ಹೇಳಿದರು. ಭಾರತೀಯ ಜನತಾ ಪಕ್ಷದ ಸೂತ್ರಧಾರೊಬ್ಬರು ಈ ಮೀಸಲಾತಿಯನ್ನು ತೆಗೆಯಬೇಕೆಂದು ಹೇಳಿದರು. ಆಗ ಲಾಲು ಪ್ರಸಾದ್ ಯಾದವ್‌ರವರು ಮಾತ್ರ ಅದರಲ್ಲಿ ಸಂಪೂರ್ಣವಾಗಿ ಹೋರಾಟ ಮಾಡಿ, ಅವರು ಬಿಹಾರ ರಾಜ್ಯದ ಚುನಾವಣೆಯಲ್ಲಿ ಸೋಲಬೇಕಾಗಿತ್ತು. ಅವರು ಜೈಲಿಗೆ ಹೋಗಿ ಅನುಭವಿಸುತ್ತಿದ್ದಾರೆಂಬ ಬಗ್ಗೆ ಇವತ್ತು ನಾವೆಲ್ಲರೂ ನೋಡುತ್ತಿದ್ದೇವೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಸಂವಿಧಾನ ಬದಲಾವಣೆ ಮಾಡಿ, ಶೇಕಡಾ 10 ರಷ್ಟು ಮೀಸಲಾತಿಯನ್ನು ಮಾಡಿರುವುದು ತಪ್ಪಾ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಚಿವರೇ, ತಾವು ಏನು ಹೇಳಿದಿರಿ?

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ಸಂವಿಧಾನ ಬದಲಾವಣೆ ಮಾಡಿ, ನಾವು ಶೇಕಡಾ 6 ರಷ್ಟು ಮೀಸಲಾತಿ ಜಾಸ್ತಿ ಕೊಡುವುದು ತಪ್ಪಾ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಅಲ್ಲ ಸಂವಿಧಾನ ಬದಲಾವಣೆ ಮಾಡಿ, ಅದನ್ನು ಮನುಸ್ಮೃತಿಗೆ ತನ್ನಿ ಎಂದು ಹೇಳುವವರು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದು ಬೇರೆ. ಸಂವಿಧಾನ ಬದಲಾವಣೆ ಮಾಡಿ, ನಾವು ಶೇಕಡಾ 6 ರಷ್ಟು ಮೀಸಲಾತಿ ಜಾಸ್ತಿ ಕೊಟ್ಟಿರುವುದು ತಪ್ಪಾ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಚಿವರೇ, ತಾವು ಹೇಳುತ್ತಿರುವುದೇನೆಂದರೆ, ಅದಕ್ಕೆ ಸರಿಯಾದ ರೀತಿಯಲ್ಲಿ ಮಾಡಬೇಕಾಗಿತ್ತು. ರಾಜಕೀಯವಾಗಿ ಮೂಗಿಗೆ ಬೆಣ್ಣೆ ಹಚ್ಚುವುದಕ್ಕೆ ಬರಬೇಡಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ನೀವೂ ಕೂಡ ಲೈಫ್‌ನಲ್ಲಿ ಮಾಡಲಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಪಕ್ಷ ಆರವತ್ತು ವರ್ಷ ತುಪ್ಪ ಸವರಿ, ...

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಚಿವರೇ, ಎಲ್ಲವನ್ನು ನೀವೇ ಮಾಡಿದ್ದು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಬರೀ ಟೀಕೆ ಮಾಡಿದ್ದಾಯಿತು. ನಾವು ಮೀಸಲಾತಿಯನ್ನು ಹೆಚ್ಚಳ ಮಾಡಿದ್ದೇವೆ. We have done it. ನಾವು ಮೀಸಲಾಗಿ ಹೆಚ್ಚು ಮಾಡಿ ಮುಂದೆ ಬಂದಿದ್ದೇವೆ.

**(ಗೊಂದಲ)**

**ಶ್ರೀ ನಸೀರ್ ಅಹಮದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಈಗ ಚುನಾವಣೆ ಬರುತ್ತಿದೆ. ಹಾಗಾಗಿ, ಮೀಸಲಾತಿಯನ್ನು ಹೆಚ್ಚಳ ಮಾಡಿದ್ದೀರಾ?

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಯಾವುದೋ ತಲೆಗೆ ಇಟ್ಟುಕೊಂಡು, ರಾಜಕೀಯ ಮಾಡುತ್ತಿದ್ದೀರಿ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಐವತ್ತು ವರ್ಷ ರಾಜಕಾರಣ ಮಾಡಿ. .....

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, **(ಗೊಂದಲ)** ಮೀಸಲಾತಿಯನ್ನು ಪ್ರಮಾಣ ಹೆಚ್ಚು ಮಾಡಿದ್ದಕ್ಕೆ ಹೊಟ್ಟೆಹೂರಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** .... ಚುನಾವಣೆಯಲ್ಲಿ ಗೆದ್ದರೆ ಶಾಸನ ಮಾಡುವುದಕ್ಕಾಗುವುದು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:–** ಐವತ್ತು ವರ್ಷಗಳ ಕಾಲ ರಾಜಕೀಯ ಮಾಡಿದರೂ ಕೂಡ ಕಾಂಗ್ರೆಸ್ ಪಕ್ಷದವರು ಈ ಬಿಲ್ ತರುವುದಕ್ಕಾಗಲಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮತವನ್ನು ನೀವು brand ಮಾಡಿಕೊಂಡಿದ್ದೀರಿ.

**(ಗೊಂದಲ)**

**ಶ್ರೀ ನಸೀರ್ ಅಹಮದ್:–** ಮೀಸಲಾತಿ ಇಟ್ಟುಕೊಂಡು, ಇವತ್ತು ನೀವು ಅಧಿಕಾರ ಮಾಡುತ್ತಿದ್ದೀರಾ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:–** ನಮಗೆ ತಾಕತ್ತು ಇದೆ. ಹಾಗಾಗಿ ಈ ಬಿಲ್‌ನನ್ನು ತಂದಿದ್ದೇವೆ. ಇದನ್ನು ಸಹಿಸಿಕೊಳ್ಳಿ. ಇದಕ್ಕೆ ಸಹಕಾರ ಮಾಡಿ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ....

**(ಗೊಂದಲ)**

**ಸಭಾಪತಿಯವರು:–** ಡಾ. ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ. ಮಾನ್ಯ ಸದಸ್ಯರೇ ತಮ್ಮ ಸಮಯ ಅವಕಾಶ ಕೊಟ್ಟಾಗ ತಾವು ಮಾತನಾಡಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಎಸ್. ವ್ಹಿ. ಸಂಕನೂರರವರೇ, ...

**(ಗೊಂದಲ)**

**ಶ್ರೀ ನಸೀರ್ ಅಹಮದ್:–** ತಮ್ಮ ಸರ್ಕಾರ ಅಧಿಕಾರದಲ್ಲಿದೆ. ಹಾಗಾಗಿ ಮತ್ತೆ ಅಧಿಕಾರಕ್ಕೆ ಬರುವುದಕ್ಕೆ ಮೀಸಲಾತಿಯನ್ನು ಹೆಚ್ಚಳ ಮಾಡುತ್ತಿದ್ದೀರಿ.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಿದ್ದರಾಮಯ್ಯನವರ ಸರ್ಕಾರವಿದ್ದಾಗ, ಮೀಸಲಾತಿಯನ್ನು ಏತಕ್ಕೆ ಹೆಚ್ಚಿಸಲಿಲ್ಲ? ....ಸಮ್ಮಿಶ್ರ ಸರ್ಕಾರವಿದ್ದಾಗ, ಮೀಸಲಾತಿ ಹೆಚ್ಚಳ ಏತಕ್ಕೆ ಮಾಡಲಿಲ್ಲ? **(ಗೊಂದಲ)** ಐವತ್ತು ವರ್ಷ ರಾಜ್ಯಭಾರ ಮಾಡಿದಿರಿ

**(ಗೊಂದಲ)**

**ಶ್ರೀ ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಈ ಸರ್ಕಾರದವರು ಮೀಸಲಾತಿಯನ್ನು ತೆಗೆಯುವವರು. ಮೀಸಲಾತಿಯನ್ನು ಹೆಚ್ಚಳ ಮಾಡುವವರಲ್ಲ ಇದು ಬರೀ ನಾಟಕ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ,...

**ಡಾ॥ ವೈ.ಎ. ನಾರಾಯಣಸ್ವಾಮಿ:–** ಕಾಂಗ್ರೆಸ್‌ನವರು ನಿಮಗೂ ಟೋಪಿ ಹಾಕುತ್ತಾರೆ. ....

**(ಗೊಂದಲ)**

**ಶ್ರೀ ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಅಬ್ದುಲ್ ಜಬ್ಬಾರ್‌ರವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ಅವರು ಮಾತನಾಡಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ವ್ಹಿ. ಸಂಕನೂರರವರು ಮಾತನಾಡುವುದಾದರೆ, ನಾನು yield ಆಗುತ್ತೇನೆ. ಅವರು ಏನೂ ಬೇಕಾದರೂ ಮಾತನಾಡಬಹುದು. ಸದನದಲ್ಲಿ ಅವರು ಮಾತನಾಡುವ ಸಂದರ್ಭದಲ್ಲಿ ನಮಗೆ ಕೇಳುವುದಕ್ಕೆ ಬಹಳ ಆನಂದವಾಗುತ್ತದೆ. ಏಕೆಂದರೆ ಬಜೆಟ್ ಮಾಡುವಾಗ, ಅವರೊಬ್ಬರೇ ಬಜೆಟ್ ಬಗ್ಗೆ ಮಾತ್ರ ಮಾತನಾಡಿದರು. ಅವರು ಏನು ಮಾತನಾಡಲಿಲ್ಲ? ಬಜೆಟ್ ಎಷ್ಟೊಂದು ಚಂದವಾಗಿರುತ್ತದೆ ಎಂದು ಹೇಳಿದ್ದು, ನಾನು ಅದಕ್ಕೆ ವಿರೋಧವಾಗಿದ್ದರೂ ಕೂಡ ಅವರು ಹೇಳಿರುವಂತಹದ್ದನ್ನು ಕೇಳಲು ನನಗೆ ಬಹಳ ಆನಂದವಾಗುತ್ತಿತ್ತು. ಮಾನ್ಯ ಎಸ್.ವ್ಹಿ. ಸಂಕನೂರರವರು ಮಾತನಾಡುವುದಾದರೆ, ನಾನು yield ಆಗುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಹೆಚ್ಚಳ ಮಾಡಿದೆ. ಮುಂದೆ ಏನಾದರೂ complication ಬಂದರೆ, ಅದನ್ನು ಸರಿಪಡಿಸುವುದಕ್ಕೆ ಬದ್ಧರಿದ್ದೇವೆಂದು ಹೇಳಿದಾಗ, ಪ್ರಶ್ನೆ ಎಲ್ಲಿಂದ ಬರುತ್ತದೆ? ಯಾವುದೇ legal complication ಇದ್ದರೆ, ಅದನ್ನು ಎದುರಿಸುತ್ತೇವೆ ಮತ್ತು ಸರಿಪಡಿಸುತ್ತೇವೆ. ಕೇಂದ್ರ ಸರ್ಕಾರ ಕೂಡ ನಮ್ಮದೇ ಇದೆ. ಇಷ್ಟೆಲ್ಲಾ ಹೇಳಿದರೂ ಕೂಡ ಇದನ್ನು ಏತಕ್ಕೆ ವಿರೋಧಿಸುತ್ತಾರೆ? ನಾನು ಹೇಳುವುದೇನೆಂದರೆ, ಈ ವಿಧೇಯಕವನ್ನು ಅಂಗೀಕಾರ ಮಾಡಿಕೊಡಿ ಎಂದು ನಾನು ವಿನಂತಿ ಮಾಡಿಕೊಡುತ್ತೇನೆ.

(ಮುಂದು)

(1227) 27.12.2022, 6.30,TCH-MD (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕಾನೂನು ಸಚಿವರಾದ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಬಹಳ ಬುದ್ಧಿವಂತರು, ಅವರು ಬುದ್ಧಿವಂತರೆ. ಅತಿ ಬುದ್ಧಿವಂತರಾದರೆ ಸಮಸ್ಯೆ ಏನಾಗುತ್ತದೆಂದರೆ; ಸಂವಿಧಾನ ಬದಲಾವಣೆಗೂ ಮತ್ತು ತಿದ್ದುಪಡಿಗೂ ಬಹಳ ವ್ಯತ್ಯಾಸವಿದೆ. ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆಂದು ಹೇಳಿದವರು ನಾವು ಮಾಡಿದ್ದೇವೆ ಶೇ.6ರಷ್ಟು ಎಂದು ಹೇಳುತ್ತಿದ್ದಾರೆ. ಅಂದರೆ ಸಂವಿಧಾನವನ್ನೇ ಬದಲಾವಣೆ ಮಾಡುತ್ತಿದ್ದಾರೆ. ಅಯ್ಯೋ ಶಿವನೆ! ನೀವು ತಿದ್ದುಪಡಿ ಎಂದು ಹೇಳಿ. ಸಂವಿಧಾನವನ್ನೇ ಬದಲಾವಣೆ ಮಾಡುತ್ತೇವೆಂದು ರಾಜಾರೋಷವಾಗಿ ಹೇಳಿದರು. ಸುಮಾರು 70 ವರ್ಷಗಳ ಕಾಲ ಏನು ಮಾಡಿದ್ದೀರಿ ಎಂದು ನಮ್ಮನ್ನು ಕೇಳಿದರು. 1948 ನೇ ಇಸವಿಯಲ್ಲಿ ಈ ದೇಶದಲ್ಲಿ ಎಸ್‌ಸಿ/ಎಸ್‌ಟಿ ವರ್ಗದವರಿಗೆ ಉದ್ಯೋಗ ಸಿಗಬೇಕೆಂದು ಒಂದು ಲಕ್ಷ ಇಪ್ಪತ್ತನಾಲ್ಕು ಸಾವಿರ ಕೋಟಿ ಕೊಟ್ಟು ಸಾರ್ವಜನಿಕ ಉದ್ಯಮಗಳಾದ HMT (Hindustan Machine Tools), HAL (Hindustan Aeronautics Limited), BEL (Bharat Electronics Limited), BHEL (Bharat Heavy Electricals Limited) and NAL (National Aerospace Laboratories) ಗಳನ್ನು ಸ್ಥಾಪನೆ ಮಾಡಿದ್ದೇವೆ. ಇನ್ನೇನು ಬೇಕು ಹೇಳಿ. ಅಷ್ಟೆಲ್ಲಾ ಮಾಡಿದ್ದೇವೆ. ಅವುಗಳ ಮೂಲಕ ಲಕ್ಷಾಂತರ ಜನಕ್ಕೆ ಉದ್ಯೋಗಗಳನ್ನು ಕೊಟ್ಟಿದ್ದನ್ನು ಒಂದೊಂದಾಗಿ ಮಾರಾಟ ಮಾಡುತ್ತಿದ್ದಾರೆ. ಇವತ್ತಿನ ದಿವಸ ಆ ವರ್ಗದವರಿಗೆ ಎಲ್ಲೂ ಕೂಡ ಉದ್ಯೋಗದ ಅವಕಾಶಗಳು ಇಲ್ಲದಂತೆ ಮಾಡಿರುವವರು ಯಾರು; ನಾವೇನು? ನೀವು ಯಾವ ಖಾಸಗಿ ಕಂಪನಿಗಳಲ್ಲಿ ಅವರಿಗೆ ಉದ್ಯೋಗಗಳನ್ನು ಕೊಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಇವರು GATT (General Agreement on Tariffs and Trade) agreement ಮಾಡಿ ದೇಶವನ್ನು ಮಾರಾಟ ಮಾಡಿದರು.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅವರೇ ದೇಶವನ್ನು ಮಾರಾಟ ಮಾಡುತ್ತಿರುವುದು, ನಾವಲ್ಲ. ಒಂದು ಸಂಸ್ಥೆಯನ್ನೂ ಬಿಟ್ಟಿಲ್ಲ. ಆ ರೀತಿ ಮಾರಾಟ ಮಾಡಿಕೊಂಡು ತಿನ್ನುತ್ತಿದ್ದಾರೆ.

**(ಗೊಂದಲ)**

**ಡಾ.ವೈ.ಎ.ನಾರಾಯಣ ಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, GATT ಒಪ್ಪಂದದ ಮುಖಾಂತರ ಅವರೆಲ್ಲಾ ಸೇರಿ ರೈತರನ್ನು ಸಮಾಧಿ ಮಾಡಿದ್ದಾರೆ. **(ಗೊಂದಲ)** ನೀವು ಹಾಳು ಮಾಡಿದ್ದೀರಿ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಮಾನ್ಯ ಸಭಾಪತಿಯವರೇ ಒಂದು ನಿಮಿಷ...

**ಸಭಾಪತಿಯವರು:–** ಮಾನ್ಯ ಕೆ.ಅಬ್ದುಲ್ ಜಬ್ಬರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅವರು ಬ್ಯಾಂಕ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ, ದೇಶದಲ್ಲಿರತಕ್ಕಂಥ Airport, Ports ಗಳನ್ನೆಲ್ಲಾ ಮಾರಾಟ ಮಾಡುತ್ತಿದ್ದಾರೆ. ಮತ್ತೆ ಅದರ ಬಗ್ಗೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎನ್.ರವಿಕುಮಾರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಏನ್ರಿ ಇದು?

**(ಗೊಂದಲ)**

**ಡಾ.ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವರು ಸುಮಾರು 50 ವರ್ಷಗಳಿಂದ ಎಸ್.ಸಿ.,/ಎಸ್.ಟಿ.,ಯವರಿಂದ ಓಟು ಹಾಕಿಸಿಕೊಂಡು ಚುನಾವಣೆಯಲ್ಲಿ ಗೆದ್ದು ದರ್ಬಾರ್ ಮಾಡಿದ್ದಾರೆ. ಈಗ ನಾವು ಎಸ್.ಸಿ.,/ಎಸ್.ಟಿ., ಮೀಸಲಾತಿ ಪ್ರಮಾಣವನ್ನು ಹೆಚ್ಚಿಗೆ ಮಾಡುತ್ತಿದ್ದೇವೆ. . .

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಚುನಾವಣೆಯಲ್ಲಿ ಜನ ನಿಮಗೆ ಬುದ್ಧಿ ಕಲಿಸಿದ್ದಾರೆ, ಆದರೂ ಕೂಡ ನಿಮಗೆ ಬುದ್ಧಿ ಬಂದಿಲ್ಲ. **(ಗೊಂದಲ)** ಮಹಾರಾಷ್ಟ್ರದ ಬಗ್ಗೆ ಜನರಿಗೆ ಬುದ್ಧಿ ಇದೆ. ಅದಕ್ಕೆ ನಿಮಗೆ ಪಾಠ ಕಲಿಸಿರುವುದು. (ಗೊಂದಲ) ನೀವು ಮಾಡಿರುವ ಕೆಲಸಕ್ಕೆ ಜನ ನಿಮಗೆ ಈಗಾಗಲೇ ಉತ್ತರ ಕೊಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕಾನೂನು ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರು ನಾವು ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆಂದು ಹೇಳಿದರು. ಸಂವಿಧಾನವನ್ನು ಬದಲಾವಣೆ ಮಾಡಲು ಇವರಿಗೆ ಅಧಿಕಾರ ಕೊಟ್ಟವರು ಯಾರು?

(ಗೊಂದಲ)

**ಸಭಾಪತಿಯವರು:- ಈಗ ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು**

**(ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ಮತ್ತು ಶ್ರೀ ಟಿ.ಎ.ಶರವಣರವರು ಈ ಹಂತದಲ್ಲಿ ಮಾತನಾಡಿದ್ದನ್ನು ಕಡತದಲ್ಲಿ_ದಾಖಲಿಸಿರುವುದಿಲ್ಲ)**

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಸುಮಾರು 50 ವರ್ಷಗಳಿಂದ ಆ ಜನಾಂಗಕ್ಕೆ ಬರೀ ಜೋಳ ತಿನ್ನಿಸಿ ನೀವು ಅವರ ಮತ ಬಳಕೆ ಮಾಡಿಕೊಂಡು ಅಧಿಕಾರ ನಡೆಸಿದ್ದೀರಿ. **(ಗೊಂದಲ)** ಆದರೆ ನಮ್ಮ ಸರ್ಕಾರ ಅವರಿಗೆ ಮೀಸಲಾತಿಯನ್ನು ಹೆಚ್ಚಿಗೆ ಕೊಡುತ್ತೇವೆಂದರೆ ನೀವು ಅದಕ್ಕೆ ಒಪ್ಪುತ್ತಿಲ್ಲವಲ್ಲ. **(ಗೊಂದಲ)** ನಿಮಗೆ ಏನಾದರೂ ಹೃದಯ ಇದೆಯೇ? **(ಗೊಂದಲ)** ನಿಮಗೆ ಮನಸ್ಸು ಇದೆಯೇ? ನಿಮಗೆ ಏನಾದರೂ ಮಾನವೀಯತೆ ಇದೆಯೇ?

**(ಗೊಂದಲ)**

**ಸಭಾಪತಿಯವರು:-** ಡಾ.ವೈ.ಎ.ನಾರಾಯಣಸ್ವಾಮಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಜಸ್ಟೀಸ್ ಹೆಚ್.ಎನ್. ನಾಗಮೋಹನ್ ದಾಸ್ ಕಮಿಟಿಯನ್ನು ರಚನೆ ಮಾಡಿದವರು ಯಾರು?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಒಂದು ನಿಮಿಷ. ಮಾತನಾಡುವುದಾದರೆ ಸರಿಯಾಗಿ ಮಾತನಾಡಿ. ನಾನು ಎಲ್ಲರಿಗೂ ಮಾತನಾಡಲು ಅವಕಾಶ

ಕೊಡುತ್ತೇನೆ. ರಾತ್ರಿ 11 ಗಂಟೆಯಾಗಲಿ ಮಾತನಾಡಿ. ಈಗ ತಾವೆಲ್ಲಾ ಕುಳಿತುಕೊಳ್ಳಿ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಮಾತನಾಡಿ. ಮಧ್ಯೆ ಯಾರೂ ಎದ್ದು ಮಾತನಾಡಬೇಡಿ.

**(ಗೊಂದಲ)**

**ಶ್ರೀ ಶರವಣ ಟಿ.ಎ:–** ಮಾನ್ಯ ಸಭಾಪತಿಯವರೇ, ನನ್ನದೊಂದು ಮನವಿ. ಮೊನ್ನೆ ದಿವಸ ನಾವು ಸದನದ ಬಾವಿಗೆ ಇಳಿದು ಹೋರಾಟ ಮಾಡಿದೆವಲ್ಲಾ, ಅದಕ್ಕೆ ಮಾನ್ಯ ಕೃಷಿ ಸಚಿವರು ಇಂದು ಸಂಜೆ 6 ಗಂಟೆಗೆ ಸಭೆ ಕರೆದಿದ್ದಾರೆ. ಆ ಸಭೆಗೆ ನಮ್ಮನ್ನೂ ಕರೆದಿದ್ದಾರೆ. ನಾವು ಇನ್ನೂ ಹೋಗಿಲ್ಲ. ತಾವು ಯಾವ ರೀತಿ ಹೇಳುತ್ತೀರೋ ಆ ರೀತಿ ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಟಿ.ಎ.ಶರವಣರವರೇ, ಈ ಬಿಲ್ ಬಹಳ ಮುಖ್ಯವಾದುದು.

**ಶ್ರೀ ಶರವಣ ಟಿ.ಎ:–** ಮಾನ್ಯ ಸಭಾಪತಿಯವರೇ, ಸರ್ಕಾರ ಬಹಳ ಕಷ್ಟಪಟ್ಟು ಈ ಮಸೂದೆಯನ್ನು ತಂದಿದ್ದಾರೆ. ನಾವು ಕೂಡ ವಿಸ್ತಾರವಾಗಿ ಚರ್ಚೆ ಮಾಡುತ್ತೇವೆ. ಕಷ್ಟಪಟ್ಟಿರುವುದಕ್ಕೆ ಏನು ಬೇಕಾದರೂ ನಾಳೆ ಚರ್ಚೆ ಮಾಡೋಣ.

**ಸಭಾಪತಿಯವರು:–** ಮಾನ್ಯ ಟಿ.ಎ.ಶರವಣರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಒಬ್ಬೊಬ್ಬರಾಗಿ ಮಾತನಾಡಿ, ಎಲ್ಲರಿಗೂ ಅವಕಾಶ ಕೊಡುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಡಾ.ವೈ.ಎ.ನಾರಾಯಣಸ್ವಾಮಿಯವರು "ನೀವು 50 ವರ್ಷಗಳ ಕಾಲ ಎಸ್.ಸಿ., ಎಸ್.ಟಿ., ಸಮುದಾಯಕ್ಕೆ ಮರುಳು ಮಾಡಿ ನೀವು ಓಟು ಹಾಕಿಸಿಕೊಂಡಿದ್ದೀರಿ" ಎಂದು ಹೇಳಿದರು. ಆಯಿತು ನಾವು ಓಟು ಹಾಕಿಸಿಕೊಂಡು ಗೆದ್ದೆವು. ನೀವೇನಾದರೂ ಓಟು ಹಾಕಿಸಿಕೊಂಡು ಗೆಲ್ಲುತ್ತಿದ್ದೀರೇನು? ಎಂ.ಎಲ್.ಎ.,ಗಳನ್ನು ಕೊಂಡುಕೊಂಡು ಸರ್ಕಾರ ನಡೆಸುತ್ತಿದ್ದಾರೆ. ನಮಗೆ ಈ ರೀತಿ ಹೇಳುತ್ತಿದ್ದಾರೆ.

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದಕ್ಕೂ, ಇದಕ್ಕೂ ಏನು ಸಂಬಂಧ ಇದೆ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಹೌದು, ನಿಮ್ಮದು ಅನೈತಿಕ ಸರ್ಕಾರ. ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ನೀವು ಜನರ ಹತ್ತಿರ ಓಟು ಹಾಕಿಸಿಕೊಂಡು ಗೆದ್ದಿದ್ದರೆ, ಬಿಜೆಪಿ 124 ಸೀಟ್ ಗೆದ್ದಿದೆಯೆಂದು ಹೇಳಬಹುದು. ಹಾಗಾಗಿ, ನೀವು ಅದರ ಬಗ್ಗೆ ಮಾತನಾಡಬಾರದು.

**(ಗೊಂದಲ)**

**ಸಭಾಪತಿಯವರು:–** ಡಾ.ವೈ.ಎ.ನಾರಾಯಣಸ್ವಾಮಿಯವರೇ, ನೀವು ಏನು ಹೇಳುತ್ತೀರೋ ಹೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:–** ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ಕುಳಿತುಕೊಳ್ಳಿ. ಡಾ.ವೈ.ಎ.ನಾರಾಯಣಸ್ವಾಮಿಯವರು ಮಾತನಾಡುತ್ತಾರೆ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಸ್.ಸಿ., ಎಸ್.ಟಿ., ಸಮುದಾಯಕ್ಕೆ ಬರೀ ಜೋಳ ತಿನ್ನಿಸಿ ಸುಮಾರು 55 ವರ್ಷ ರಾಜ್ಯಭಾರ ಮಾಡಿದವರು ಅವರು. ನಿಮ್ಮಿಂದ ಶೇ.1ರಷ್ಟು ಮೀಸಲಾತಿಯನ್ನು ಹೆಚ್ಚಿಗೆ ಮಾಡುವುದಕ್ಕೆ ಆಗಲಿಲ್ಲ. ಈಗ ನಮ್ಮ ಸರ್ಕಾರ ಶೇ.7 ಹೆಚ್ಚಿಗೆ ಮಾಡುತ್ತೇವೆಂದು ಹೇಳಿದರೆ, ತಮಗೇಕೆ ಅಷ್ಟು ಹೊಟ್ಟೆ ಉರಿ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಅವರದ್ದು ಸರ್ಕಾರವೇ ಇಲ್ಲ, ಏಕೆ ಹೊಟ್ಟೆಹುರಿ? ನೀವೆಲ್ಲಾ ಎಂ.ಎಲ್.ಎ.,ಗಳನ್ನು ಕೊಂಡುಕೊಂಡು ಬಂದು ಸರ್ಕಾರ ರಚನೆ ಮಾಡಿದ್ದಾರೆ.

**(ಗೊಂದಲ)** ನಿಮಗೆ ಸರ್ಕಾರವೇ ಇಲ್ಲ. ಬೇಕಾದರೆ ತಾವು ಮಾನ್ಯ ಜೆ.ಸಿ.ಮಾಧುಸ್ವಾಮಿಯವರನ್ನು ಕೇಳಿ.

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದರಿಂದ ಅವರಿಗೆ ಏನು ತೊಂದರೆ ಇದೆ? ಹೃದಯ ವೈಶಾಲ್ಯತೆ ಇರಬೇಕು. ಮನಸ್ಸು ದೊಡ್ಡದು ಇರಬೇಕು. ಬಿಜೆಪಿ ಸರ್ಕಾರಕ್ಕೆ ಧಮ್ ಮತ್ತು ತಾಕತ್ತಿದೆ ಮಾಡಿದ್ದೇವೆ. ಅದನ್ನು ನಾವು ಜೀರ್ಣ ಮಾಡಿಕೊಳ್ಳುತ್ತೇವೆ. **(ಗೊಂದಲ)** ನಾವು ಮೀಸಲಾತಿಯನ್ನು ಹೆಚ್ಚಿಗೆ ಮಾಡೇ ಮಾಡುತ್ತೇವೆ. ಈಗ ನಿಮಗೇನು ತೊಂದರೆ ಹೇಳಿ?

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನೀವು ಜೆ.ಸಿ.ಮಾಧುಸ್ವಾಮಿಯವರನ್ನು ಕೇಳಿ. ಇನ್ನೂ ಕೆಲವು ತಿಂಗಳು ಇದೆ, ನಾನು adjust ಮಾಡಿಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದರು. ನಾವು ಅವರ ಮಾತಿಗೆ ಜವಾಬು ಕೊಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಾವೆಲ್ಲರೂ ಎದ್ದು ನಿಂತು ಮಾಡುತ್ತಿದ್ದೀರಿ, ನನ್ನ ಮಾತನ್ನು ಯಾರು ಕೇಳುತ್ತಿಲ್ಲವಲ್ಲ. ಈಗ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ನಸೀರ್ ಅಹ್ಮದ್ ರವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಡಾ.ವೈ.ಎ.ನಾರಾಯಣಸ್ವಾಮಿಯವರಿಗೆ ಹೇಳುವುದೇನೆಂದರೆ, ನೀವು ಸುಮಾರು 55 ವರ್ಷಗಳು ಬಿಟ್ಟುಬಿಡಿ. ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ SCP–TSP (Special Component Plan for Scheduled Castes and Tribal Sub Plan) ಎಸ್.ಸಿ.ಪಿ.ಟಿ.ಎಸ್., ನ್ನು ಜಾರಿಗೆ ತಂದವರು ಯಾರು? ಎಸ್.ಸಿ.,ಎಸ್.ಟಿ., ಜನಾಂಗಕ್ಕೆ ಬಜೆಟ್‌ನಲ್ಲಿ

allocation ಮಾಡಿಕೊಟ್ಟಿರುವವರು ಯಾರು? ಮತ್ತೆ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಎಸ್.ಸಿ., ಎಸ್.ಟಿ., ಗುತ್ತಿಗೆದಾರರಿಗೆ ಅನುದಾನ ಬಿಡುಗಡೆಯಲ್ಲಿ ರೂ. 50 ಲಕ್ಷದವರೆಗೆ ಮೀಸಲಾತಿ ಕೊಟ್ಟವರು ಯಾರು? ನೀವು ಇದನ್ನೆಲ್ಲಾ ಏಕೆ ಮರೆಯುತ್ತೀರಿ? ಹಾಗಾಗಿ, ನೀವೇಕೆ ಸುಲಭವಾಗಿ ಮಾತನಾಡುತ್ತೀರಿ? ಜನಕ್ಕೂ ಎಲ್ಲಾ ಗೊತ್ತಿದೆ. ನೀವು ಏನೇ ಮಾಡಿದರೂ . . . **(ಗೊಂದಲ)** ನಾನು ಕೋಲಾರದಿಂದ ಬಂದಿರುವುದು. ನೀವು ಕೂಡ ಅದೇ ಜಿಲ್ಲೆಯಿಂದ ಬಂದಿರುವುದು. ಕೋಲಾರದಿಂದ DSS (Dalit Sangharsh Samithi) ಬಂದಿರುವುದು.

**(ಗೊಂದಲ)**

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಇವರು ಬರೀ ಮೋಸ. ಜನರ ಮೂಗಿಗೆ ಬೆಣ್ಣೆ ಹಚ್ಚುವುದು, ಸುಳ್ಳು ಹೇಳುವುದು.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಅಷ್ಟೇ. ಎಸ್.ಸಿ., ಎಸ್.ಟಿ., ಸಮುದಾಯಕ್ಕೆ reservation ಮಾಡಿರುವುದು ಸರಿ ಇದೆಯೋ, ಇಲ್ಲವೋ ಒಪ್ಪಿಕೊಂಡು ಹೇಳಿ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಡಾ.ವೈ.ಎ.ನಾರಾಯಣಸ್ವಾಮಿಯವರೇ, ತಾವು ಒಂದು ನಿಮಿಷ ಕೇಳಿ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆಲ್ಲಾ history ಗೊತ್ತಿದೆ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಡಾ.ವೈ.ಎ.ನಾರಾಯಣಸ್ವಾಮಿಯವರೇ, ತಾವು ಕೇಳಿ. ದಲಿತ ಸಂಘರ್ಷ ಸಮಿತಿ ಹುಟ್ಟಿರುವುದು ಕೋಲಾರದಲ್ಲಿ. ಇದು ಪ್ರತಿಯೊಬ್ಬರಿಗೂ ಗೊತ್ತಿದೆ.

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:-** ನಾನು ಕೂಡ ಈ ಸದನದಲ್ಲಿ ಸುಮಾರು 20 ವರ್ಷಗಳಿಂದ ಇದ್ದೇನೆ. History ನಿಮಗಿಂತ ನನಗೆ ಚೆನ್ನಾಗಿ ಗೊತ್ತಿದೆ. **(ಗೊಂದಲ)** ಮಾನ್ಯ ನಸೀರ್ ಅಹ್ಮದ್‌ರವರೇ, ಈಗ ಬಂದಿರತಕ್ಕಂಥ ಪಾಯಿಂಟ್ ಏನೆಂದರೆ, ಎಸ್.ಸಿ.,ಎಸ್.ಟಿ. ಮೀಸಲಾತಿ ಪ್ರಮಾಣವನ್ನು ಜಾಸ್ತಿ ಮಾಡಿರುವುದು ನಿಮಗೆ ಇಷ್ಟ ಇದೆಯೋ, ಇಲ್ಲವೋ ಹೇಳಿ. Straightaway you come to the point. Whether you are going to accept it or not?

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇವರ ಉದ್ದೇಶ ಏನು, ಇವರು ಯಾವ ರೀತಿ ಈಗ ಸಂವಿಧಾನ ಬದಲಾವಣೆ ಮಾಡಲು ಹೊರಟಿದ್ದಾರೆ. ಅದರ ಬಗ್ಗೆ ಎಲ್ಲಾ ಗೊತ್ತು ಆ ಜನಾಂಗಕ್ಕೆ. ನಿಮ್ಮನ್ನು ಯಾವಾಗಲೂ ಅವರು ನಂಬುವುದಿಲ್ಲ. **(ಗೊಂದಲ)** ನೀವು ಏನೇ ನಾಟಕ ಮಾಡಿದರೂ ಕೂಡ ನಾವು ನಿಮ್ಮನ್ನು ನಂಬುವುದಿಲ್ಲ.

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಡಾ.ಬಿ.ಆರ್.ಅಂಬೇಡ್ಕರ್ ರವರು ಬರೆದಿರುವ ಸಂವಿಧಾನವನ್ನು ನಾವು ಗೌರವದಿಂದ ನೋಡುತ್ತಿದ್ದೇವೆ. ನೀವು ಅವರಿಗೆ ಎಷ್ಟು ಅವಮಾನ ಮಾಡಿದ್ದೀರೆಂದು ನಮಗೆಲ್ಲಾ ಗೊತ್ತಿದೆ. ನಾವು ಅದನ್ನೂ ಕೂಡ ಆಮೇಲೆ ಬಿಚ್ಚುತ್ತೇವೆ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯರೇ, ಒಂದು ನಿಮಿಷ. ಅವರು ಸಂವಿಧಾನವನ್ನೇ ಬದಲಾವಣೆ ಮಾಡುತ್ತೇವೆಂದು ಹೇಳಿದ್ದಾರಲ್ಲಾ, ನೀವು ಅವರಿಗೆ ಹೇಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಅಬ್ದುಲ್ ಜಬ್ಬರ್ ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:–** ನಿಮಗೂ ಟೋಪಿ ಹಾಕುತ್ತಾರೆ, ಹುಷಾರ್!

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಈಗ ನೀವು ಟೋಪಿ ಹಾಕೋತಿದ್ದೀರಲ್ಲಾ ಅದೇ ಸಾಕಾಗಿದೆ. ನೀವು ಬೇರೆಯವರಿಗೆ ಟೋಪಿ ಹಾಕಲು ಬರಬೇಡಿ ಸ್ವಲ್ಪ ಇರಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್ ರವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಮ್ಮ ಸಂವಿಧಾನವನ್ನು ಬರೆದವರಿಗೇ ಇವರು ಸರಿಯಾದ ಗೌರವ ಕೊಡಲಿಲ್ಲ. ಈಗ ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್ ರವರೇ, ತಾವು yield ಆಗಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಇವರಿಗೆ yield ಆಗುವುದೇ; ಎಲ್ಲಾದರೂ ಉಂಟೆ? ತಾವು ಹೇಳಿದಿರೆಂದು ಕುಳಿತುಕೊಂಡೆನು ಅಷ್ಟೇ. ನಾನು ನನ್ನ ಜನ್ಮದಲ್ಲಿ ಇವರಿಗೆ yield ಆಗುವುದಿಲ್ಲ.

**ಸಭಾಪತಿಯವರು:–** **"ನನ್ನ ಅನುಮತಿ ಇಲ್ಲದೇ ಯಾರೇ ಸದಸ್ಯರು ಎದ್ದು ನಿಂತು ಮಾತನಾಡಿದರೆ ಕಡತಕ್ಕೆ ಹೋಗಬಾರದು."**

**(ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ಸದಸ್ಯರಾದ ಶ್ರೀ ನಸೀರ್ ಅಹ್ಮದ್, ಶ್ರೀ ಕೆ.ಅಬ್ದುಲ್ ಜಬ್ಬರ್, ಶ್ರೀ ಎನ್.ರವಿಕುಮಾರ್, ಸರ್ಕಾರದ ಮುಖ್ಯ ಸಚೇತಕರಾದ ಡಾ.ವೈ.ಎ ನಾರಾಯಣಸ್ವಾಮಿ ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರು ಈ ಹಂತದಲ್ಲಿ ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಯಾವತ್ತೂ yield ಆಗುವುದೇ ಇಲ್ಲ. **(ಗೊಂದಲ)** ಅದರಲ್ಲೂ ಇದರ ಸೂತ್ರದಾರಿಗಂತೂ ನಾನು yield ಆಗುವುದೇ ಇಲ್ಲ. ಜೆ.ಸಿ.ಮಾಧುಸ್ವಾಮಿಗೆ yield ಆಗುತ್ತೇನೆ. ಏಕೆಂದರೆ ಅವರು ಸೂತ್ರದಾರ ಕಂಟ್ರೋಲ್‌ನಲ್ಲಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಹೆಚ್ಚಿಗೆ ಮಾಡುತ್ತಿದ್ದೇವೆ ಅನ್ನುವುದಷ್ಟೇ ಈ ವಿಧೇಯಕದ ಉದ್ದೇಶ. ಮಾನ್ಯ ಕಾನೂನು ಸಚಿವರು ಇದನ್ನು ಸ್ಪಷ್ಟಪಡಿಸಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಈಗ ಬಿಲ್ ಬಗ್ಗೆ ಮಾತನಾಡಿ, ರಾಜಕೀಯದ ಬಗ್ಗೆ ಮಾತನಾಡಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆದರೂ ಕೂಡ ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ, ಈ ಬಿಲ್‌ನ್ನು ನೀವು ತೆಗೆದುಕೊಂಡು ಬನ್ನಿ, ನಾವು ಬೆಂಬಲಿಸುತ್ತೇವೆ ಎಂದು ಇವರು ಸರ್ವ ಪಕ್ಷದ ಸಭೆಯಲ್ಲಿ ಹೇಳಿದ್ದಾರೆ. ಕಾನೂನು ಮಾಡಿ ಎಂದು ಅವರು ಹೇಳಿದ್ದಾರೆ. ಇಲ್ಲಿ ಸುಮ್ಮನೆ ವಾದಗಳನ್ನು ಮುಂದುವರೆಸುವುದಕ್ಕಿಂತ ತಾವು ಚರ್ಚೆ ಮಾಡಿ ಅನುಮೋದನೆ ಕೊಟ್ಟುಬಿಡಿ. ಈ ರಾಜ್ಯದ ಎಲ್ಲಾ ಜನರು ಇದರಿಂದ ಖುಷಿಪಡುತ್ತಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ಬೆಂಕಿಯನ್ನು ಬೆಳಕು ಎಂದು ಹೋಗಬೇಡಿ ಎಂದು ನಾನು ಮಾನ್ಯ ಜೆ.ಸಿ.ಮಾಧುಸ್ವಾಮಿಯವರನ್ನು ನೋಡಿ ಹೇಳಲಿಲ್ಲ; ನಾನು ನಿಮ್ಮನ್ನು ನೋಡಿ ಹೇಳಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಏನೆಂದು ಹೇಳಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾನಾಯಕರೇ, ಬೆಂಕಿಯನ್ನು ಬೆಳಕು ಎಂದು ತಿಳಿದು ಹೋಗಬೇಡಿ. ಏಕೆಂದರೆ, ಅದು ಸುಟ್ಟುಹಾಕಿಬಿಡುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್ ರವರ ಕಥೆ ಏನಾಯಿತು ಎಂದರೆ, ಯಾವುದನ್ನು ನಂಬಬಹುದೋ ಅದನ್ನು ಅವರು ನಂಬುವುದಿಲ್ಲ. ಯಾವುದನ್ನು ನಂಬಬಾರದು ಎಂದು ಇದೆಯೋ ಅದೇ ನಂಬಿಕೆ ಮೇಲೆ ಹಿಂದೆ ಹೋಗುತ್ತಿದ್ದಾರೆ. ಈ ಕಡೆ ಸ್ವಲ್ಪ ಗಮನ ಕೊಡಿ ಸತ್ಯ ಏನಾಗುತ್ತದೆಂದು ನಿಮಗೆ ಗೊತ್ತಾಗುತ್ತದೆ ಎಂದು ಹೇಳಿದೆನು. ಅದನ್ನು ಬಿಟ್ಟು ಇವರು ಭ್ರಮೆಯಲ್ಲೇ ಹೋಗುತ್ತಿದ್ದರೆ ನಾನು ಏನು ಮಾಡುವುದು? ಮಾನ್ಯ ಸಭಾಪತಿಯವರೇ, ಬಿ.ಕೆ.ಹರಿಪ್ರಸಾದ್ ರವರು ನನಗೆ ತುಂಬಾ ಸ್ನೇಹಿತರು. ಮತ್ತೆ ಅವರು ನನಗೆ ತುಂಬಾ ಪ್ರೀತಿಪಾತ್ರರು. ದುರಾದೃಷ್ಟಕ್ಕೆ ಅವರು ಸತ್ಯವನ್ನು ಒಪ್ಪುತ್ತಿಲ್ಲ. ಅದೇಕೆ ಎಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸತ್ಯ ಹೇಳುತ್ತೇನೆ. ನಾನು ಅದನ್ನೂ ಹೇಳಿಬಿಡುತ್ತೇನೆ ಕೇಳಿ. ನನಗೆ ನುಂಗೋ ಅಭ್ಯಾಸ ಇಲ್ಲ. ಈಗಂತೂ ನಾನು ಉಗಿಯುವ ಅಭ್ಯಾಸವನ್ನೇ ಕಲಿತುಕೊಂಡಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕಂಡ ಕಂಡಲ್ಲಿ ಉಗಿಯಬಾರದು ಎಂದು ನಾನು ಹೇಳಿದೆನು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರಾದ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಸಂವಿಧಾನದ ಬಗ್ಗೆ ಅದರಲ್ಲೂ ಕೂಡ ಆ party ಯವರಿಗೆ ಏನು ಪ್ರೀತಿ ಇದೆ ಸೂತ್ರದಾರಿಗಳು ಎಂದರೆ; ನನಗೆ ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರ ಬಗ್ಗೆ ಬಹಳ ಗೌರವ ಇದೆ. ನಾನು ಪಾರ್ಲಿಮೆಂಟ್‌ನಲ್ಲಿ ಮೊದಲು supplementary question ಹಾಕಿದಾಗ, ಅವರೇ supplement ಮಾಡಿದ್ದು. ಆದರೆ ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ಸನ್ಮಾನ್ಯ ಪ್ರಧಾನ ಮಂತ್ರಿಗಳಾದಾಗ ಸಂವಿಧಾನವನ್ನು ರಿವ್ಯೂ ಮಾಡುವುದಕ್ಕೆ ಪರಿಷ್ಕರಣೆ ಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ನೇಮಿಸುತ್ತಾರೆ. ಅದರ ಅಧ್ಯಕ್ಷರು ಸನ್ಮಾನ್ಯ ವೆಂಕಟಾಚಲಯ್ಯ ನವರು ಇರಬಹುದು. ಇವರು ಸಂವಿಧಾನವನ್ನೇ review

ಮಾಡುವಂತಹ ಪರಿಸ್ಥಿತಿಗೆ ಹೋಗುವಂತಹ ಜನ. ಇವರು ಈಗ ಸಂಪೂರ್ಣವಾದ ಅಧಿಕಾರಕ್ಕೆ ಬಂದಿದ್ದಾರೆ, ಇವರು ಏನು ಮಾಡುತ್ತಾರೆಂದು ನಾವು ಕಾದು ನೋಡಬೇಕು ಅಷ್ಟೇ. ಆದ್ದರಿಂದ ನಾವು ಏನು ಮಾಡಿದ್ದೇವೆ, ಮಾಡುವುದಿಲ್ಲ ಎಂಬುದನ್ನು ಇವರು ನಮಗೆ ಹೇಳಿಕೊಡುವುದು ಬೇಡ. ಆದ್ದರಿಂದ ನಾನು ಬಹಳ ಸ್ಪಷ್ಟವಾಗಿ ಹೇಳುವುದಾದರೆ; ಇವರು ಸಂವಿಧಾನದ ವಿರೋಧಿಗಳು, ಮೀಸಲಾತಿ ವಿರೋಧಿಗಳು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರಿಗೆ ವಿರೋಧ ಮತ್ತು ಅವಮಾನ ಮಾಡಿದ್ದಾರೆ. ಅವುಗಳ ಇತಿಹಾಸಕ್ಕೆ ಹೋದರೆ ನಾವು ಇನ್ನೆಲ್ಲೋ ಹೋಗಬೇಕಾಗುತ್ತದೆ.

**(ಮುಂದು...)**

(1228)27.12.2022/6.40/ಎಂ.ಎಂ-ಎ.ಕೆ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು):-**

ಆದ್ದರಿಂದ ಇವರು ಡಾ:ಬಿ.ಆರ್. ಅಂಬೇಡ್ಕರ್ ಅವರನ್ನು ಮಂತ್ರಿ ಮಾಡಿ, ಸಂವಿಧಾನಕ್ಕೆ ಡ್ರಾಫ್ಟ್ ಕಮಿಟಿ ಚೇರ್ಮನ್ ಮಾಡಿ; ನಮಗೆ ಅಷ್ಟೆಲ್ಲಾ ಕೆಟ್ಟ ಮನಸ್ಸಿದ್ದರೆ ನಾವು ಅದನ್ನು ಮಾಡುತ್ತಲೇ ಇರಲಿಲ್ಲ. ರಾಜಕೀಯ ಪಕ್ಷವಾಗಿ ಅವರಿಗೆ ವಿರೋಧವಾಗಿದ್ದೆವು, ಅದಕ್ಕೆ ಅವರ ವಿರುದ್ಧ ಪ್ರತಿಸ್ಪರ್ಧಿಯನ್ನು ಹಾಕಿದೆವು. ಪ್ರಜಾಪ್ರಭುತ್ವದಲ್ಲಿ ತಪ್ಪೇನಿಲ್ಲ. ನಾವು ಪ್ರಜಾಪ್ರಭುತ್ವದಲ್ಲಿ match fixing ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಆದ್ದರಿಂದ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆ ಪಡುವುದೇನೆಂದರೆ, ಸರ್ವಪಕ್ಷ ಸಭೆ ಕರೆದೆವು, ತೀರ್ಮಾನ ತೆಗೆದುಕೊಂಡೆವು, ಈಗ ಏತಕ್ಕೆ ವಿರೋಧ ಮಾಡುತ್ತೀರಿ? ಸರ್ವಪಕ್ಷ ಸಭೆಯಲ್ಲಿ ನಾನೂ ಇದ್ದೆ, ಮಾನ್ಯ ಮಾಧುಸ್ವಾಮಿಯವರೂ ಇದ್ದರು, ಕೆಲವು ವಿಚಾರಗಳಲ್ಲಿ ಅವರಿಗೂ, ನಮಗೂ ಭಿನ್ನಾಭಿಪ್ರಾಯಗಳಿತ್ತು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಆ ಸಭೆಯಲ್ಲಿ ನಾನೂ ಇದ್ದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಇವರೂ ಇದ್ದರು. ಎಲ್ಲವೂ ಆಯಿತು ಕೊನೆಗೆ ಒಪ್ಪಿಕೊಂಡಿದ್ದೇವೆ. ಒಪ್ಪಿಕೊಂಡ ಮೇಲೆ;

**ಸಭಾಪತಿಯವರು:–** ನೀವು ಎಲ್ಲ ಕಡೆಯೂ ಇರಲೇಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಎಲ್ಲೆಲ್ಲಿ ಇರುತ್ತಾರೋ ಅವರು ಅಲ್ಲೆಲ್ಲಾ ಇರುತ್ತಾರೆ. ನಾವೆಲ್ಲರೂ ಒಪ್ಪಿಕೊಂಡ ಮೇಲೆ ತರಾತುರಿಯಲ್ಲಿ; ಇನ್ನೇನು ಚುನಾವಣೆಯನ್ನು ಇವರು prepone ಮಾಡಿದರೂ ಮಾಡಿದರು. ತರಾತುರಿಯಲ್ಲಿ ತಂದು ಮಾಡುವ ಅವಶ್ಯಕತೆ ಏನಿತ್ತು? ಎಲ್ಲರ ಜೊತೆ ಚರ್ಚೆ ಮಾಡಿ ಎಂ.ಪಿ.,ಗಳ ಹತ್ತಿರವೂ ಚರ್ಚೆ ಮಾಡಿ, ಇನ್ನೊಂದು ಸಲ ಸರ್ವಪಕ್ಷಗಳ ಜೊತೆ ಚರ್ಚೆ ಮಾಡಿ ಯಾವ ರೀತಿ ಅದಕ್ಕೆ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ. ನಾನು ಪ್ರೀತಿಯಿಂದ ಕೇಳದೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನೀವು ಕುಳಿತುಕೊಳ್ಳಿ ಅವರು ಮಾತನಾಡಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು ಯಾರೇ ಮಾತನಾಡುವಾಗಲೂ ಅಡ್ಡ ಬರುವುದಿಲ್ಲ. ನಾನು ಮಾತನಾಡಿ ಮುಗಿಸುವವರೆಗೂ ಸ್ವಲ್ಪ ಕಾಯುವುದಕ್ಕೆ ಹೇಳಿ.

**ಸಭಾಪತಿಯವರು:–** ನೋಡಿ, ಅವರು ಯೀಲ್ಡ್ ಆದರೆ ಮಾತ್ರ ಮಾತನಾಡಿ. ಎಲ್ಲರೂ ಎದ್ದೆದ್ದು ಮಾತನಾಡಿದರೆ I don't like it.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ನಾರಾಯಣಸ್ವಾಮಿಯವರು ಎದ್ದೇಳುತ್ತಾರೆ ಅಥವಾ ಬೇರೆ ಯಾರೋ ಎದ್ದೇಳುತ್ತಾರೆ ಎಂದರೆ ಪರವಾಗಿಲ್ಲ. ಆದರೆ ಸಭಾನಾಯಕರಾಗಿ ನಾನು ಮಾತನಾಡುವಾಗ ಎದ್ದು ನಿಂತರೆ ನಾವು ಸದನದಲ್ಲಿ ಇನ್ನೇನು ವಾದ ಮಾಡುವುದಕ್ಕಾಗುತ್ತದೆ? ಈ ಸದನದಲ್ಲಿ ನಾವು ಯಾವ ನಿಯಮಗಳನ್ನು ಫಾಲೋ ಮಾಡುವುದಕ್ಕೆ ಆಗುತ್ತದೆ ಕೇಳಿ. ಅವರು ಮಾತನಾಡುವಾಗ ನಮ್ಮವರು ಎದ್ದು ನಿಂತರೆ ನಾನು ಅವರನ್ನು ಕೂರಿಸುತ್ತಿದ್ದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಯೀಲ್ಡ್ ಆಗುತ್ತೇನೆಂದರೆ ಮಾತ್ರ ಮಾತನಾಡುತ್ತೇನೆ.

**ಸಭಾಪತಿಯವರು:–** ಈಗ ಅವರು ಯೀಲ್ಡ್ ಆಗಿಲ್ಲ, ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಯಿತು. ಬಹಳ ಪ್ರೀತಿ ಉಂಟೆಂದು ಹೇಳಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ಕೇವಲ 5–6 ಪರ್ಸೆಂಟ್‌ಗೆ ಸಮಾಧಾನವಾಗುವುದಿಲ್ಲ. ನಿಮಗೆ ಅಷ್ಟೆಲ್ಲಾ ಬದ್ಧತೆ ಇದ್ದಿದ್ದರೆ ತಮಿಳುನಾಡಿನ ಎ.ಐ.ಎ.ಡಿ.ಎಂ.ಕೆ. ಪಕ್ಷದ ದಿ:ಜಯಲಲಿತಾ ಅವರು ಇವರ ಜೊತೆ ಇದ್ದರು. ಇವರು ಮಾಡಿರುವಂತಹ ಈ ಕಾರ್ಯವನ್ನು ಆಗಲೇ ಹೇಳಿದ ಹಾಗೆ Directive Principles of State Policy ಅಂದರೆ Article 31C ಅಡಿಯಲ್ಲಿ ತಂದು ಮಾಡಬಹುದಿತ್ತು. ಇದು ತರಾತುರಿಯ; ನೀವು ಇದನ್ನು ತರಾತುರಿಯಲ್ಲಿ ತರುವುದಕ್ಕೆ ಅವರ ಮೇಲೇನೂ ಇವರಿಗೆ ಬಹಳ ಪ್ರೀತಿ ಎಂದು ತಿಳಿದುಕೊಳ್ಳಬೇಡಿ. ಎಸ್.ಟಿ., ಸ್ವಾಮೀಜಿಗಳು ಸುಮಾರು 254 ದಿವಸ ಧರಣಿ ಕುಳಿತುಕೊಂಡಿದ್ದರು. ನಾವೆಲ್ಲರೂ ಅಲ್ಲಿಗೆ ಹೋಗಿ ನಿಮ್ಮ ಜೊತೆ ನಾವಿದ್ದೇವೆ ಎಂದು ಹೇಳಿದೆವು. ಏಕೆಂದರೆ ಅವರು ಹೆಚ್ಚಿನ ಭಾಗ ನಿಮ್ಮ ಜೊತೆ ಇದ್ದವರು. ಅವರನ್ನು ಹೇಗಾದರೂ ಮಾಡಿ ಎಬ್ಬಿಸಬೇಕೆಂದು ಎಬ್ಬಿಸಿರುವುದೇ ವಿನಃ ಸರ್ವಪಕ್ಷ ಸಭೆ ಮಾಡಿ, ಅವರ ಮೇಲೆ ಬಹಳ ಪ್ರೀತಿ ಏನೂ ಇಲ್ಲ. ನಿಮ್ಮ ಇತಿಹಾಸ ನೋಡಿದರೆ ನೀವು ಸಂಪೂರ್ಣವಾಗಿ ಸಂವಿಧಾನ ವಿರೋಧಿಗಳು. ನಿಮ್ಮ ಇತಿಹಾಸ ನೋಡಿದರೆ ಸಂಪೂರ್ಣವಾಗಿ ನೀವು ಮೀಸಲಾತಿ ವಿರೋಧಿಗಳು. ಆದ್ದರಿಂದ ನಿಮ್ಮಿಂದ ಏನೂ ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ನೀವು ಮಾಡಿರುವುದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಶೇ.56 ಅಲ್ಲ ಇನ್ನೂ ಜಾಸ್ತಿ ಮಾಡಿದರೂ ನಾವು ಅದಕ್ಕೆ ಬೆಂಬಲವಾಗಿರುತ್ತೇವೆ. ಆದರೆ ಷೆಡ್ಯೂಲ್–9 ಗೆ ಬರುವಂತಹ ಕೆಲಸವನ್ನು ಈಗಲೂ; ನಿಮಗೆ ಅಷ್ಟೊಂದು ಪ್ರೀತಿ ಇದ್ದರೆ ಇದಕ್ಕೆ ಪ್ರತ್ಯೇಕವಾಗಿ ಬೆಂಗಳೂರಿನಲ್ಲಿ ಒಂದೆರಡು ದಿವಸ ವಿಶೇಷ ಅಧಿವೇಶನವನ್ನು ಕರೆದು ಹೌದು ನಾವು ಎಸ್.ಸಿ., ಎಸ್.ಟಿ., ಮೀಸಲಾತಿಯನ್ನು ಜಾಸ್ತಿ ಮಾಡುತ್ತಿದ್ದೇವೆಂದು ವಿಶೇಷ ಅಧಿವೇಶನವನ್ನು ಕರೆದು ಜಾಸ್ತಿ ಮಾಡಿದ್ದರೆ ಚೆನ್ನಾಗಿ ಚರ್ಚೆಯಾಗಿರುತ್ತಿತ್ತು. ಅದನ್ನು ಜನಸಾಮಾನ್ಯರು ನೋಡುತ್ತಿದ್ದರು. ಅದು ಬಿಟ್ಟು ಏಕಾಏಕಿ ಸುಗ್ರೀವಾಜ್ಞೆ ತಂದು ಏಕೆಂದರೆ ಇವರ ಹಣೆಬರಹವೇ ಅಷ್ಟು. ಚರ್ಚೆ ಮಾಡದೇ ಸುಗ್ರೀವಾಜ್ಞೆ ತರುತ್ತಾರೆ. ಆದ್ದರಿಂದ ನೀವು ಏನೇ ಮಾಡಿದರೂ ಮುಂದೆ ಬರುವಂತಹ ಕಾನೂನು ತೊಡಕುಗಳಿಗೆ ನೀವು ಯಾವ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಈಗಲೇ ಸ್ಪಷ್ಟವಾಗಿ ಹೇಳಬೇಕು. ಷೆಡ್ಯೂಲ್–9ಗೆ ಆಗುವುದಕ್ಕೆ ಏನು ತೊಂದರೆಯಿತ್ತು? ಆರ್ಟಿಕಲ್ 31ಸಿ ನಲ್ಲಿ ಆಗುವುದಕ್ಕೆ ಏನು

ತೊಂದರೆಯಿತ್ತು ಎಂದು ಹೇಳಿ. ಮಾನ್ಯ ಸಚಿವರು ಏನು ಈ ತಿದ್ದುಪಡಿ ತಂದಿದ್ದಾರೆ ಅದಕ್ಕೆ ಸಂಪೂರ್ಣವಾಗಿ ನಮ್ಮ ಪಕ್ಷದ ಮತ್ತು ನನ್ನ ವೈಯಕ್ತಿಕ ಬೆಂಬಲವಿದೆಯೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು**):**–** ಮಾನ್ಯ ಸಭಾಪತಿಯವರೇ, ಮಾನ್ಯ ವಿಪಕ್ಷ ನಾಯಕರು ಬಿ.ಜೆ.ಪಿ. ಸರ್ಕಾರವನ್ನು, ಸನ್ಮಾನ್ಯ ನರೇಂದ್ರ ಮೋದಿಯವರ ಸರ್ಕಾರವನ್ನು ಮತ್ತು ಕರ್ನಾಟಕ ರಾಜ್ಯ ಸರ್ಕಾರವನ್ನು;

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಒಂದು ನಿಮಿಷ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ. ಬೆಂಕಿ ಹಾಕುವ ಕೆಲಸ ಮಾಡಿದರೆ ನಾವು ಒಪ್ಪುವುದಿಲ್ಲ.

**ಸಭಾಪತಿಯವರು:–** ಮಾನ್ಯ ನಸೀರ್ ಅಹಮದ್‌ರವರೇ, ನೀವು ಅದನ್ನೇ ಮಾಡುತ್ತಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರೇನು ರಿಪ್ಲೈ ಕೊಡುತ್ತಾರಾ? ಮಂತ್ರಿಗಳು ಇದ್ದಾರೆ, ಸಭಾನಾಯಕರು ಇದ್ದಾರೆ.

**ಶ್ರೀ ಎನ್. ರವಿಕುಮಾರ್:–** ನನಗೆ ಮಾತನಾಡುವ ಸ್ವಾತಂತ್ರ್ಯ ಇಲ್ಲವೇ? ನೀವು ಮಾತು ಮಾತಿಗೂ ಬಾವಿಗೆ ಬರುತ್ತೀರಿ. ಬೆಂಕಿ ಹಚ್ಚುವವರು ಯಾರು? (ಗೊಂದಲ) ನನಗೂ ಕೂಡ ಡೆಮಾಕ್ರಸಿ ಏನೆಂದು ಗೊತ್ತಿದೆ. ಸ್ವಾತಂತ್ರ್ಯ ಇರುವುದು ನಿಮಗೊಬ್ಬರಿಗೇ ಅಲ್ಲ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ರವಿಕುಮಾರ್‌ರವರಿಗೆ ಸ್ವಲ್ಪ ನನ್ನ ಕಡೆ ಮಾತನಾಡಲು ಹೇಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನದು ಎರಡು ಮಾತಿದೆ. ಅವರು ಒಂದೇ ಏಟಿಗೆ **XXX** ರೀತಿಯಲ್ಲಿ ತೆಗೆದುಕೊಂಡು ಬಂದರು, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸರ್ವಪಕ್ಷಗಳ ಸಭೆಯನ್ನು ಕರೆದು ಚರ್ಚೆ ಮಾಡಲಿಲ್ಲ ಎಂದು ಹೇಳಿದರು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ನನ್ನ objections ಇದೆ. ನಾನು **XXX** ಎಂಬ ಪದವನ್ನು ಎಲ್ಲಿಯೂ ಉಪಯೋಗ ಮಾಡಿಲ್ಲ. ನಾನು ಉಪಯೋಗ ಮಾಡದಿರುವಂತಹ ಪದಗಳನ್ನು ಕಡತದಿಂದ ತೆಗೆಯಬೇಕು. ನಾನು ಹೇಳಿದ್ದು ಸರ್ಕಾರ ಯಾವುದನ್ನೂ consent ಮಾಡದೇ ಮಾಡಿದ್ದಾರೆ ಎಂದು ಹೇಳಿದೆ. ಅದಕ್ಕೆ ಅವರು **XXX** ಅಥವಾ ಏನಾದರೂ ಹೇಳಿಕೊಳ್ಳಲಿ. ಮಾತನಾಡುವುದಕ್ಕೆ ಅಧಿಕಾರ ಇದೆ, ಹಕ್ಕಿದೆಯೆಂದು ಏನೇನೋ ಮಾತನಾಡುವುದಕ್ಕಾಗುವುದಿಲ್ಲ.

**ಸಭಾಪತಿಯವರು:-** **<u>ಅದನ್ನು ನಾನು ನೋಡುತ್ತೇನೆ. ಆ ರೀತಿ ಇದ್ದರೆ ಕಡತದಿಂದ ತೆಗೆಸುತ್ತೇನೆ.</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನೀವು ಸಭಾನಾಯಕರು. ಇಲ್ಲಿ ಕೇಳಿ. ಅವರು ಮಾತನಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರದ ಪರವಾಗಿ ಮಾತನಾಡುತ್ತೇನೆ. ನೀವು ದಯವಿಟ್ಟು ಕೇಳಬೇಕು. ಹಾಗೆಲ್ಲಾ ಮಾತನಾಡಿದಾಗ ನಾವು ಸುಮ್ಮನಿರುವುದಕ್ಕೆ ಆಗುವುದಿಲ್ಲ. ಸರ್ವಪಕ್ಷಗಳ ಸಭೆಯನ್ನು ಕರೆದು . . .

---

**XXX ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಸಭಾಪತಿಯವರು:-** ಇಲ್ಲಿ ಕೇಳಿ. ಅವರು ಮಾತನಾಡುತ್ತಿದ್ದಾರೆ. ನಾನು ಮಾತನಾಡದಿರುವ ಪದವನ್ನು ಕಡತದಿಂದ ತೆಗೆಯಲು ಹೇಳಿದ್ದಾರೆ. ಅದನ್ನು ಪರಿಶೀಲಿಸುತ್ತೇನೆ. **ಹಾಗೇನಾದರೂ ಇದ್ದರೆ ಅದನ್ನು ಸರಿಪಡಿಸುವ, ತೆಗೆಯಬೇಕಾದರೆ ತೆಗೆಯುವ ಕೆಲಸ ಮಾಡುತ್ತೇವೆ.** ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಅವರು ಮಾತನಾಡಲಿ. ದಯಮಾಡಿ ನೀವು ಕುಳಿತುಕೊಳ್ಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯೇನೆಂದರೆ, ನಾವು ಏಕಾಏಕಿ ಚರ್ಚೆಮಾಡದೇ, ಸಮಾಲೋಚನೆ ಮಾಡದೇ, ಮಾತುಕತೆ ಮಾಡದೆಯೇ, ವಿರೋಧ ಪಕ್ಷದವರ ಅಭಿಪ್ರಾಯವನ್ನೇ ತೆಗೆದುಕೊಳ್ಳದೇ, ಎಲ್ಲಾ ಪಕ್ಷಗಳ ಅಭಿಪ್ರಾಯಗಳನ್ನೇ ತೆಗೆದುಕೊಳ್ಳದೇ **XXX** ರೀತಿ ಏಕಾಏಕಿ ಮಾಡಿದ್ದೇವೆ ಎಂದು ಹೇಳಿದರು. ಆದರೆ ನಾವು ಆ ರೀತಿ ಮಾಡಿಲ್ಲ. ನಮಗೂ ಕೂಡ ಪ್ರಜಾಸತ್ತಾತ್ಮಕ ವ್ಯವಸ್ಥೆ ಮೇಲೆ ನಂಬಿಕೆ ಇದೆ. ನಮಗೆ ವಿರೋಧಪಕ್ಷದ ಸ್ಥಾನಮಾನಗಳ ಅರಿವಿದೆ. ಎಲ್ಲವನ್ನೂ ಮನಗಂಡು ಸರ್ವಪಕ್ಷಗಳ ಸಭೆಯನ್ನು ಕರೆದು ಚರ್ಚೆ ಮಾಡಿ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇದು ಮೊದಲನೆಯದು. ಎರಡನೆಯದಾಗಿ ಇವರು ಏಕಾಏಕಿ ನಿರ್ಣಯ ಮಾಡಿದರು. ಈ ದೇಶಕ್ಕೆ ತುರ್ತುಪರಿಸ್ಥಿತಿಯನ್ನು ತಂದರಲ್ಲಾ;

**ಸಭಾಪತಿಯವರು:-** ಈಗದು ಏತಕ್ಕೆ ಬೇಕು?

**ಶ್ರೀ ಬಿ.ಕೆ. ಹರಿಪ್ರಸಾದ್:-** ಆ ರೀತಿ ಮಾತನಾಡಿದರೆ ನಾನೂ ಮಾತನಾಡುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಅವರು ಇತಿಹಾಸದ ಪುಟ ತೆರೆದಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಎಮರ್ಜೆನ್ಸಿ ತಂದಿದ್ದು ತಾವು ಈ ರಾಷ್ಟ್ರವನ್ನು ಬುಡಮೇಲು ಮಾಡುವುದಕ್ಕೆ ಹೊರಟಿದ್ದವರು ತಾವು. ಸೇನೆಗೆ ಪೋಲೀಸರ (ಗೊಂದಲ)

---

**XXX ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಎನ್. ರವಿಕುಮಾರ್:–** ಏಕಾಏಕಿ ತುರ್ತುಪರಿಸ್ಥಿತಿಯನ್ನು ತಂದರಲ್ಲಾ (ಗೊಂದಲ) ದೂರದರ್ಶನದವರನ್ನು ಜೈಲಿಗೆ ಕಳುಹಿಸಿದರು.

(ಗೊಂದಲ)

**Sri NASEER AHMED:** Demonetization… …*(Interruptions)*… RBI…

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:–** (ಗೊಂದಲ) ಎಮರ್ಜೆನ್ಸಿಯಲ್ಲಿ ಯಾರಿಗೂ ಮೀಸಲಾತಿಯ ಹಕ್ಕಿರಲಿಲ್ಲ (ಗೊಂದಲ)

**ಶ್ರೀ ಎನ್. ರವಿಕುಮಾರ್:–** ವಿರೋಧಪಕ್ಷವನ್ನು ಜೈಲಿಗೆ ಕಳುಹಿಸಿದರು (ಗೊಂದಲ) ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಬಗ್ಗೆ ಮಾತನಾಡುತ್ತಾರೆ. (ಗೊಂದಲ) ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರನ್ನು ಮತ್ತು ಮಾನ್ಯ ಎಲ್.ಕೆ. ಅಡ್ವಾಣಿಯವರನ್ನು ಬೆಂಗಳೂರಿನ ಜೈಲಿಗೆ ಕಳುಹಿಸಿದರು.

**ಶ್ರೀ ಬಿ.ಕೆ. ಹರಿಪ್ರಸಾದ್:–** ರಾಷ್ಟ್ರವನ್ನು ಬುಡಮೇಲು ಮಾಡುವುದಕ್ಕೆ ಹೋದರೆ ಜೈಲಿಗೆ ಹಾಕುತ್ತೇವೆ (ಗೊಂದಲ)

**ಶ್ರೀ ಎನ್. ರವಿಕುಮಾರ್:–** ಇಂತಹ ಮಹಾನ್ ವ್ಯಕ್ತಿಗಳನ್ನು ಜೈಲಿಗೆ ಕಳುಹಿಸಿದರು

**ಶ್ರೀ ಬಿ.ಕೆ. ಹರಿಪ್ರಸಾದ್:–** ರಾಷ್ಟ್ರವನ್ನು ಬುಡಮೇಲು ಮಾಡುವುದಕ್ಕೆ ಹೋದರೆ ಜೈಲಿಗೆ ಹಾಕುತ್ತೇವೆ. ಯಾರನ್ನು ಬೇಕಾದರೂ ಹಾಕುತ್ತೇವೆ.

(ಗೊಂದಲ)

**ಶ್ರೀ ಎನ್. ರವಿಕುಮಾರ್:–** ಕಾಂಗ್ರೆಸ್‌ನಲ್ಲಿ ಎಲ್ಲಿದೆ ಡೆಮಾಕ್ರಸಿ? ಇವರ ಡೆಮಾಕ್ರಸಿ ಏನೆಂದು ಹೇಳಿದರೆ (ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಡೆಮಾಕ್ರಸಿಯನ್ನು ನಿಮ್ಮಿಂದ ಕಲಿಯಬೇಕಾಗಿಲ್ಲ.

**Sri NASEER AHMED:** Demonetization ಯಾರು ಮಾಡಿದರು? ಆಗ ಚರ್ಚೆ ಮಾಡಿದಿರಾ? ಆರ್.ಬಿ.ಐ.,ನವರನ್ನು ಕೇಳಿದಿರಾ?

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದಕ್ಕೆಲ್ಲಾ ಅವಕಾಶ ಕೊಡಬೇಡಿ.

**ಶ್ರೀ ಎನ್. ರವಿಕುಮಾರ್:-** ಇಡೀ ಪಕ್ಷವನ್ನು ಒಂದು ಕುಟುಂಬಕ್ಕೆ ಆಡಳಿತ (ಗೊಂದಲ) ಪಕ್ಷ ಇವರು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ.

(ಗೊಂದಲ)

**ಶ್ರೀ ಕೆ. ಅಬ್ದುಲ್ ಜಬ್ಬರ್:-** ನಿಮ್ಮ ಬಾಯಿಂದ ಡೆಮಾಕ್ರಸಿ ಹೆಸರು ಬರುವುದಕ್ಕೆ . . .

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಎರಡು ಸಲ ಸೋಲಿಸಿದರು. ಇವರು ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಮಾತನಾಡುತ್ತಾರೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಏತಕ್ಕೆ ಜೈಲಿಗೆ ಹಾಕುತ್ತೀರಿ?

(ಗೊಂದಲ)

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಂಡಲ್ ವರದಿ ಯಾರು ಮಾಡಿದ್ದು?

**ಶ್ರೀ ಎನ್. ರವಿಕುಮಾರ್:-** ಜಮ್ಮು ಕಾಶ್ಮೀರದಲ್ಲಿ ಒಬ್ಬ ಎಸ್.ಸಿ., ಎಂ.ಎಲ್.ಎ., ಆಗಿಲ್ಲ, ಒಬ್ಬ ಎಸ್.ಟಿ., ಎಂ.ಎಲ್.ಎ. ಆಗಿಲ್ಲ. . . .

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಕೋರ್ಟ್ ತೀರ್ಪನ್ನು ವಿರೋಧ ಮಾಡಿ ತುರ್ತು ಪರಿಸ್ಥಿತಿ ತಂದವರು ಇವರು (ಗೊಂದಲ)

**ಸಭಾಪತಿಯವರು:–** ಇದು ಏತಕ್ಕೆ ಬೇಕು?

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:–** ತುರ್ತು ಪರಿಸ್ಥಿತಿ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಸಭಾಪತಿಯವರು:–** ಈಗ ಬಿಲ್ ಬಗ್ಗೆ ಮಾತನಾಡುತ್ತೀರಾ ಅಥವಾ ಇದರ ಬಗ್ಗೆ ಮಾತನಾಡುತ್ತೀರಾ? ಅದರ ಬಗ್ಗೆ ಮಾತನಾಡಿದರೆ ನಾನು ಅನುಮತಿ ಕೊಡುತ್ತೇನೆ. ಬಿಲ್ ಬಗ್ಗೆ ಮಾತನಾಡುವುದಾದರೆ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಸದನದಲ್ಲಿ ಈಗ ತುರ್ತು ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ನಾನು ಹೇಳಿದ್ದೇನೆ. ಮಾನ್ಯ ರಮೇಶ್‌ರವರೇ, ಮಾತನಾಡಿ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:–** ಇಲ್ಲ, ದಯವಿಟ್ಟು ನನಗೆ ಅವಕಾಶಕೊಡಿ. ಮಂಡಲ್ ಕಮಿಷನ್ ಬಂದಾಗ ಕಮಂಡಲ್ ಯಾರು ಮಾಡಿದರು? ಇದೇ ಮಾನ್ಯ ಅಡ್ವಾಣಿಯವರು ಕಮಂಡಲ್ ಮಾಡಿಕೊಂಡು ಇಡೀ ದೇಶದಲ್ಲ; ಅದಕ್ಕೆ ನಾನು ಹೇಳಿದ್ದು ಬೆಂಕಿ ತೋರಿಸಿ ಬೆಳಕು ಎಂದು ಹೇಳಿದ ಜನ ಇವರು. ಇವರ ಕಾನೂನು ಹೇಗಾಗಿದೆ ಎಂದರೆ ತೋಳಗಳನ್ನು ಕೂರಿಸಿ ಮೀನುಗಳಿಗೆ ನ್ಯಾಯ ಕೊಡುವ ರೀತಿ ಆಗಿದೆ ಇವರಿಗೆ.

**ಶ್ರೀ ಎನ್. ರವಿಕುಮಾರ್:-** ನೀವು ಡೆಮಾಕ್ರಸಿ ಬಗ್ಗೆ ಮಾತನಾಡುತ್ತೀರಾ? ಸಿಖ್ಖರನ್ನು ಬೆಂಕಿಗೆ ಹಾಕಿ ಸುಟ್ಟು ಇಡೀ ದೇಶದಲ್ಲಿ ಭಯೋತ್ಪಾದನೆಯನ್ನು ತಂದರು. ಇವರು ಡೆಮಾಕ್ರಸಿ ಬಗ್ಗೆ ಮಾತನಾಡುತ್ತಾರೆ.

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಇದು ರಾತ್ರಿ ಎಲ್ಲಾ ಚರ್ಚೆ ಮಾಡುವ . . .

**ಶ್ರೀ ಎನ್. ರವಿಕುಮಾರ್:-** ದೇಶದಲ್ಲಿ ಸಿಖ್ಖರನ್ನು ಸುಟ್ಟವರಾರು? ಆಗ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಬಂದು ಸಿಖ್ಖರನ್ನು ಬೀದಿ ಬೀದಿಯಲ್ಲಿ ಕಾಪಾಡಿದರು.

(ಗೊಂದಲ)

**ಶ್ರೀ ಎಸ್.ರವಿ:-** (ಗೊಂದಲ) ಮಂಡಲ್ ವರದಿ ಜಾರಿಯಾಗಿದ್ದಕ್ಕೆ ನೀವಿಲ್ಲ ಬಂದು ಮಾತನಾಡುತ್ತಿದ್ದೀರಿ.

(ಗೊಂದಲ)

**ಶ್ರೀ ಎನ್. ರವಿಕುಮಾರ್:-** ನೀವು ನಮ್ಮ ಪಕ್ಷದ ಬಗ್ಗೆ ಮಾತನಾಡಿದರೆ ನಾವು ನಿಮ್ಮ ಪಕ್ಷದ ಬಗ್ಗೆ ಮಾತನಾಡುತ್ತೇವೆ. ನೀವು ಇತಿಹಾಸವನ್ನು ಕೆದಕಿದರೆ ನಾವೂ ಇತಿಹಾಸವನ್ನು ಕೆದಕುತ್ತೇವೆ. ಇತಿಹಾಸ ಗೊತ್ತಿರುವುದು ನಿಮ್ಮೊಬ್ಬರಿಗೇ ಅಲ್ಲ. ನಮಗೂ ಕೂಡ ಇತಿಹಾಸ ಗೊತ್ತಿದೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** (ಗೊಂದಲ) ಅದನ್ನು ವಾಪಸ್ ತೆಗೆದುಕೊಳ್ಳುವ ಯೋಗ್ಯತೆ ಇಲ್ಲ ಇವರಿಗೆ.

(ಮುಂದು)

(1229) 27-12-2022 6-50 KH/AK (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇವರಿಗೆ ಯೋಗ್ಯತೆ ಇಲ್ಲ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ತಾವು ಕುಳಿತುಕೊಳ್ಳುತ್ತೀರೋ ಇಲ್ಲವೋ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರು ಬೆಂಕಿ ಕಡ್ಡಿ, ಪೆಟ್ರೋಲ್ ಅನ್ನು ಜೇಬಿನಲ್ಲಿಯೇ ಇಟ್ಟುಕೊಳ್ಳುವಂತಹ ಪುಣ್ಯಾತ್ಮ. ಬೆಂಕಿ ಕಡ್ಡಿ ತರಹ ಇರುವಂತಹ ಪುಣ್ಯಾತ್ಮ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ರವಿಯವರೇ ಕುಳಿತುಕೊಳ್ಳಿ. ಮಾನ್ಯ ಪಿ.ಆರ್.ರಮೇಶ್ ರವರೇ ಮಾತನಾಡಿ. ಮಾನ್ಯ ನಸೀರ್ ಅಹ್ಮದ್‌ರವರೇ . . .

**ಶ್ರೀ ಎಸ್.ರವಿ:-** ಮಾನ್ಯ ಎನ್.ರವಿಕುಮಾರ್‌ರವರಿಗೆ ಬೇರೆ ಕೆಲಸವೇ ಇಲ್ಲ. ಅದಕ್ಕೆ ಇವರನ್ನು ಇಟ್ಟುಕೊಂಡಿದ್ದಾರೆ. ಬೆಂಕಿ ಕಡ್ಡಿ. ಈ ಪುಣ್ಯಾತ್ಮ ಸಮಾಜಕ್ಕೆ ಬೆಂಕಿ ಇಟ್ಟುಬಿಡುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಸ್.ರವಿಯವರೇ, ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ ಹೇಳಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಮ್ಮ ಅದೃಷ್ಟಕ್ಕೆ ಮಾತಿಗೆ ಇನ್ನು ಪಾಕಿಸ್ತಾನ ತರಲಿಲ್ಲ. ಪಾಕಿಸ್ತಾನ ಬರಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನೆನ್ನೆ ಹಚ್ಚಿರುವ ಬೆಂಕಿ ಇವತ್ತು ಕೂಡ ಬೆಂಕಿ ಹಚ್ಚುತ್ತಿದ್ದೀರಾ.

**ಸಭಾಪತಿಯವರು:–** ನಾನು ಈಗ ಸದನವನ್ನು adjourn ಮಾಡುತ್ತೇನೆ. ಗೌಡರೇ ಅವರು ಮಾಡಿದರೆ ನೀವೇಕೆ ಮಾಡುತ್ತೀರಿ? ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಅವರಿಗೆ ನಿದ್ದೆಯೇ ಬರುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರು ಈ ರೀತಿ ಮಾಡಿದರೆ ತಾವು ಸದನ adjourn ಮಾಡುತ್ತೀರಿ ಎಂದರೆ ಮಾಡಿ ತೊಂದರೆ ಇಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಹೇಳಿದ್ದೇನೆ. ನಾನು ಹೇಳುವುದನ್ನು ಕೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಬಿಲ್ಲು ತಂದಿರುವವರು ನಾವು ಅದಕ್ಕೆ ಬೆಂಬಲವಾಗಿ ಇದ್ದೇವೆ. ಅದಕ್ಕೆ ಉಲ್ಟಾ ಸೀದಾ ಮಾತನಾಡಿದರೆ ನಾವು ಸುಮ್ಮನೆ ಇರಬೇಕೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಾವು ಬಿಲ್ಲಿನ ಬಗ್ಗೆ ಅಷ್ಟೇ ಮಾತನಾಡಿ. ಉಳಿದಿದ್ದೆಲ್ಲಾ ಮಾತನಾಡಬೇಡಿ ಎಂದು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತುರ್ತು ಪರಿಸ್ಥಿತಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಬೇಡ ಎಂದು ಹೇಳಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಬೇಡ ಎಂದು ಹೇಳಿದರೆ ಅವರು ಮಾತನಾಡುತ್ತಿದ್ದಾರಲ್ಲವೇ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದ್ದಾರೆಯಲ್ಲವೇ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರೇ, ನಾನು ಈಗ ಅವರ ಬಾಯಿಗೆ ಹೊಲಿಗೆ ಹಾಕಲೇ. ತಾವೇ ಹೇಳುತ್ತೀರಿ.

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವುದೇ ಇಷ್ಟ ಇಲ್ಲವೆಂದು ಕಾಣುತ್ತದೆ.

**ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್‌ರವರೇ, ನಾನು ಹೇಳುವುದನ್ನು ಕೇಳುತ್ತೀರಾ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, demonetization ತಂದವರು ಯಾರು? ಜನರನ್ನು ಕ್ಯೂನಲ್ಲಿ ನಿಲ್ಲಿಸಿದ್ದು ಯಾರು?

**ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್‌ರವರೇ, ತಾವು ನಾನು ಹೇಳುವುದನ್ನು ಕೇಳುತ್ತೀರೆ. ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುತ್ತಿರೇ.

**ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅವರು ಮಾತನಾಡುತ್ತಿದ್ದಾರೆಯಲ್ಲವೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗ ತಾವು ಕುಳಿತುಕೊಳ್ಳುವುದಿಲ್ಲವೇ. ಅವರು ಹಾಗೆ. ನೀವು ಹಾಗೆ. ಎಲ್ಲರೂ ಹಾಗೆ. ಮಾನ್ಯ ಪಿ.ಆರ್.ರಮೇಶ್‌ರವರೇ ಮಾತನಾಡಿ. ಉಳಿದವರು ಏಕೆ ಮಾತನಾಡುತ್ತೀರಿ? ಬಿಲ್ಲಿನ ಬಗ್ಗೆ ಮಾತನಾಡಿ.

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿಯನ್ನು ಹೆಚ್ಚಿಗೆ ಮಾಡಬೇಕೆಂದು ಸರ್ಕಾರ ಹಾಕಿರುವ ಬಗ್ಗೆ ತಾವು ಹೇಳಿದ್ದೀರಿ. ಆದರೆ 1948 ರಲ್ಲಿ ಹೊಸದಾಗಿ ಸಂವಿಧಾನ ಬಂದಾಗ ಆಗ Article 341, Article 342 ಗೆ ಆಗ ಇದ್ದಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಇರಬಹುದು, ಆಗ ಎಷ್ಟು ಇತ್ತು ಎನ್ನುವುದು ಬಹಳ ಮುಖ್ಯ. ಆಗ ಬಹಳ ಕಡಿಮೆ ಇತ್ತು. ಆವತ್ತು ಇದ್ದಂತಹ ಜಾತಿಗಳ ಆಧಾರದ ಮೇಲೆ ಆವತ್ತಿನ ಒಂದು ಜನಸಂಖ್ಯೆಗೆ ಅನುಗುಣವಾಗಿ overall ಶೇಕಡಾ 18 ರಷ್ಟು ಎಸ್.ಸಿ., ಎಸ್.ಟಿ.,ಗೆ ಎರಡಕ್ಕೂ ಇತ್ತು; that is population based. ಇವತ್ತು ಹಲವಾರು ಜಾತಿಗಳು ಪರಿಶಿಷ್ಟ ಜಾತಿಗೆ ಸೇರಿದೆ. ಹಲವಾರು ಜಾತಿಗಳು ಪರಿಶಿಷ್ಟ ಪಂಗಡಗಳಿಗೆ ಸೇರಿದೆ. ಈ ರೀತಿ ಸೇರಿರುವಂತಹ ಆಧಾರದ ಮೇಲೆ ಇಡೀ ರಾಜ್ಯದಲ್ಲಿ ಇರುವಂತಹ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಾಗಿದೆ. ಅದನ್ನು ಹೆಚ್ಚು ಮಾಡುತ್ತಿದ್ದೇವೆ ಎನ್ನುವುದರಲ್ಲಿ ಅರ್ಥ ಇಲ್ಲ. ಮೊದಲನೆಯದಾಗಿ ಹಿಂದೆ 1950 ರಲ್ಲಿ ಶೇಕಡಾ 18 ರಷ್ಟು ಕೊಟ್ಟಿರುವುದು ಆವತ್ತಿನ ಆದೇಶಗಳಲ್ಲಿ ಇತ್ತು. ಅದರ ಪ್ರಕಾರ ಶೇಕಡಾ 18 ರಷ್ಟು ಇತ್ತು. ತದನಂತರ 1958 ರಲ್ಲಿ ಶೇಕಡಾ 15 ರಷ್ಟು ಪರಿಶಿಷ್ಟ ಜಾತಿಗೆ ಮಾಡಲಾಯಿತು. ಶೇಕಡಾ 3 ರಷ್ಟು ಪರಿಶಿಷ್ಟ ಪಂಗಡಕ್ಕೆ ಮಾಡಿದ್ದೀರಿ. ಇದನ್ನು ಏಕೆ ಮಾಡಿದ್ದೀರಿ? ಅಲ್ಲಿ ಎರಡು ಭಾಗವಾಯಿತು. ಆದಾದ ಮೇಲೆ backward ಗೆ Backward Community ಎಂದು ಇತ್ತು. Backward Caste ಇತ್ತು. Backward Tribe ಇತ್ತು. That is the system. ನಮ್ಮ ಒಂದು ವ್ಯವಸ್ಥಿತವಾದಂತಹ ಈ ಒಂದು ಕರ್ನಾಟಕದಲ್ಲಿ ಇದ್ದಂತಹ ಪಂಗಡಗಳು. ಈ ಪಂಗಡಗಳನ್ನಾಧರಿಸಿ ಇದುವರೆಗೂ ಅವಕಾಶಗಳನ್ನು ಕೊಡಲಾಗಿದೆ. ಈ ಒಂದು ವಿಷಯ ಏಕೆ ಬಂದಿದೆಯೆಂದರೆ, ಸರ್ಕಾರ ಹೊಸದಾಗಿ ಏನು ತೆಗೆದುಕೊಂಡಿಲ್ಲ. ಕೆಲವು ಅಸೋಸಿಯೇಷನ್‌ಗಳು ಮತ್ತು ನಾಯಕ students'

ಅಸೋಸಿಯೇಷನ್‌ರವರು ಹೈಕೋರ್ಟ್‌ಗೆ ಅಪ್ಲಿಕೇಷನ್ ಹಾಕುತ್ತಾರೆ. ಆ ಅಪ್ಲಿಕೇಷನ್ ಆಧಾರದ ಮೇಲೆ ಒಂದು ಆದೇಶ ಕೊಡುತ್ತಾರೆ. ಆ ಹೈಕೋರ್ಟ್ ಆದೇಶದ ಮೇರೆಗೆ ನಾಗಮೋಹನ್ ದಾಸ್‌ರವರ ಒಂದು ಕಮಿಟಿ ರಚನೆಯಾಗುತ್ತದೆ. ಆ ರಚನೆಯ ಆಧಾರದ ಮೇಲೆ 2015 ರಲ್ಲಿ ಆಗ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದ ಸಮಯದಲ್ಲಿ initiate ಆಯಿತು. ತದನಂತರ ಇವರಿಗೆ 2019ರಲ್ಲಿ ವಹಿಸಿಕೊಡುತ್ತಾರೆ. ಆಗ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಕಾಂಗ್ರೆಸ್ ಮತ್ತು ಜನತಾದಳದ ಸರ್ಕಾರ. ಆದರೆ, ಅವರು 2020 ರಲ್ಲಿ ವರದಿಯನ್ನು ಕೊಡುತ್ತಾರೆ. ನ್ಯಾಯಾಲಯ ಹೇಳುವಂತಹ ಆದೇಶವನ್ನು 2015ರಲ್ಲಿ ತಂದು, ಈ ಆದೇಶವನ್ನು 2020 ರಲ್ಲಿ ಸರ್ಕಾರ ಅನುಷ್ಠಾನಕ್ಕೆ ತರಬೇಕಾಗಿತ್ತು. ಇವತ್ತು 2022ನೇ ಇಸವಿಯನ್ನು ನಾವು ದಾಟುತ್ತಿದ್ದೇವೆ. ಸುಮಾರು 2 ವರ್ಷಗಳ ಕಾಲ ಇದನ್ನು ಹಾಗೆಯೇ ಇಟ್ಟಂತಹದ್ದು ಏಕೆ ಎನ್ನುವುದು ಪ್ರಶ್ನೆ. ಈಗ 2 ವರ್ಷಗಳಾದ ಮೇಲೆ ಇನ್ನೇನು ಚುನಾವಣೆ 3 ರಿಂದ 5 ತಿಂಗಳು ಇರುವಾಗ ಇದನ್ನು ತಂದಿರುವಂತಹ ಉದ್ದೇಶ ಏನು ಎಂಬುವುದು ಬಹಳ ಮುಖ್ಯವಾಗಿರುವಂತಹ ಅಂಶ. ನಾವು ತಂದಿದ್ದೇವೆ. ಅವರು ತಂದಿದ್ದೇವೆ ಎಂದು ನಾವು ಏನು ಬೇಕಾದರೂ ಮಾತನಾಡಬಹುದು. Population increase ಆಯಿತು, ಶೇಕಡಾ 18 ರಷ್ಟು ಇದ್ದದ್ದು ಶೇಕಡಾ 24 ರಷ್ಟು ಆಯಿತು. ಶೇಕಡಾ 24 ರಷ್ಟು ಇದ್ದದ್ದು ಶೇಕಡಾ 50 ರಷ್ಟು ಒಳಗೆ ತರಬೇಕು. ಶೇಕಡಾ 50 ರಷ್ಟು ತಂದಾಗ ಶೇಕಡಾ 24 ರಷ್ಟು ಹೋದರೆ minus ಆದಾಗ ಶೇಕಡಾ 26 ರಷ್ಟು ಆಗುತ್ತದೆ. ಶೇಕಡಾ 26 ರಷ್ಟನ್ನು ಯಾರಿಗೆ ಕೊಡುತ್ತೀರಿ? ದಯಮಾಡಿ, ಇದನ್ನು ತಾವು ಹೇಳಬೇಕು. ನಾವು ಎಸ್.ಸಿ., ಎಸ್.ಟಿ., ಗೆ ಕೊಡುವಂತಹದ್ದು ಒಂದು ಕಡೆಯಾಗಲಿ. 2002 ರಲ್ಲಿ ಸರ್ಕಾರಿ ಆದೇಶದ ಪ್ರಕಾರ 15 + 3, ಶೇಕಡಾ 18 ರಷ್ಟು 32% backward ಗೆ ಕೊಟ್ಟಿದ್ದೀರಿ. ಶೇಕಡಾ 50 ರಷ್ಟು ಒಳಗೆ ಕೊಟ್ಟಿದ್ದೀರಿ. Indra Sawhney ಪ್ರಕರಣದಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಕೊಟ್ಟಿರುವಂತಹದ್ದು. ಇವತ್ತು ಶೇಕಡಾ 18 ರಷ್ಟರಿಂದ ಶೇಕಡಾ 24 ರಷ್ಟಕ್ಕೆ ಕೊಡುತ್ತಿದ್ದೀರಾ ಸ್ವಾಗತಾರ್ಹ. ಇದು ಮಾನ್ಯ ನಾಗಮೋಹನ್ ದಾಸ್‌ರವರು ಕೊಟ್ಟಿರುವಂತಹ ವರದಿಯ ಆಧಾರದ ಮೇಲೆ ಕೊಡಲಾಗಿದೆ. ಈ ವರದಿಯನ್ನು ಎರಡು ವರ್ಷಗಳಾದ ಮೇಲೆ ತಂದಿದ್ದೀರಿ. ಆದರೆ ಇವತ್ತು ಶೇಕಡಾ 50 ರಷ್ಟು ಒಳಗೆ ತರಬೇಕಾದರೆ ಶೇಕಡಾ 24 ರಷ್ಟು ತೆಗೆದರೆ ಶೇಕಡಾ 26 ರಷ್ಟು ಯಾರಿಗೆ ಕೊಡುತ್ತೀರಿ. ಇದನ್ನು ಓಬಿಸಿ ಗೆ ಕೊಡಬೇಕು. ಓಬಿಸಿ ಗೆ ಶೇಕಡಾ 32 ರಷ್ಟು ಇತ್ತು. ಶೇಕಡಾ 32 ರಷ್ಟು ಇದ್ದದ್ದನ್ನು ಶೇಕಡಾ 26 ರಷ್ಟಕ್ಕೆ ಇಳಿಸಿದ್ದು

advantage ಆಗುತ್ತದೆಯೇ? ತಾವು ಒಬ್ಬರದನ್ನು ಕಿತ್ತು ಇನ್ನೊಬ್ಬರಿಗೆ ಕೊಟ್ಟಂತಾಯಿತು. ಅವರಿಗೆ ಕೊಡುವುದಕ್ಕೆ ತಮಗೆ ಅದು constitutional right. ಇಲ್ಲಿ ಕೊಡುವಂತಹದ್ದು Directive Principles of State Policy ಅಡಿಯಲ್ಲಿ. ನೋಡಿ ಹೇಗಿದೆ? ಇವತ್ತು ತಾವು ಕೊಡುತ್ತಿರುವಂತಹದ್ದು ಅವರ population count ಆಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಪಿ.ಆರ್.ರಮೇಶ್‌ರವರೇ, ಇದನ್ನು Directive Principles of State Policy ನಲ್ಲಿ ತಂದಿಲ್ಲ. ಇದನ್ನು State List ನಲ್ಲಿ ಮಾಡಿದ್ದಾರೆ ಅಷ್ಟೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಆದರೂ it comes under the State powers. ನಾನು ಹೇಳುವುದೇನೆಂದರೆ, ತಾವು constitution ನಲ್ಲಿ population ಗೆ ಕೊಡುವಂತಹದ್ದು. ತಾವು ಯಾವ ರೀತಿಯಲ್ಲಿ population ಅನ್ನು ಲೆಕ್ಕ ಹಾಕುತ್ತೀರಿ. 2011 census ಪ್ರಕಾರ Scheduled Caste, Scheduled Tribe ಬರುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಚಿವರೇ, ತಮಗೆ ಇದು irritate ಆಗುತ್ತದೆಯೇ? ನಮಗೆ ಶೇಕಡಾ 26 ರಷ್ಟು ಕಡಿಮೆಯಾಗುತ್ತದೆಯಲ್ಲವೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವಾಗಲೇ population ಆಧಾರದ ಮೇಲೆ ಮಾನ್ಯ ನಾಗಮೋಹನ್ ದಾಸ್‌ರವರು ಕೊಟ್ಟಿರುವ ವರದಿಯನ್ನು ಇಟ್ಟುಕೊಂಡು ಇದೆಲ್ಲಾ ಮಾಡಿದ್ದೇವೆ ಎಂದು ಹೇಳಿದ್ದೇವೆ. ಮತ್ತೆ ಮತ್ತೆ ಅದನ್ನೆ ಹೇಳಿದರೆ ಹೇಗೆ?

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇವರು ಎರಡು ವರ್ಷಗಳು ನಿಧಾನ ಮಾಡಿದರು. ತಮಗೆ ಮತ್ತೆ ಓಬಿಸಿ ಗೆ population ಸಿಗಲಿಲ್ಲವೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, don't show your intelligence. ಎರಡು ವರ್ಷಗಳು ನಿಧಾನ ಮಾಡುವುದಕ್ಕೆ ಮಾನ್ಯ ಸುಭಾಷ್ ಆಡಿ ಕಮಿಟಿ ಮಾಡಿದ್ದೇವೆ. ಇದನ್ನು ನಾನು ಹೇಳುವುದಕ್ಕೆ ಹೋಗಲಿಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, ಇಲ್ಲ. I am very sorry, Sir. Don't mislead this House. ಮಾನ್ಯ ಸುಭಾಷ್ ಆಡಿ ಕಮಿಟಿಯನ್ನು ಮಾಡಿದ್ದು ತಾವು ಪಂಚಮಶಾಲಿಯವರಿಗೆ ಕೊಡುವಂತಹದ್ದನ್ನು ಸಹ ಸೇರಿಸಿ ಕೊಟ್ಟಿದ್ದೀರಿ; not only for this.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಇವರಿಗೆ ಹೇಳುತ್ತಾ ಹೋದರೆ ಮಾನ್ಯ ಸದಾಶಿವ ಮತ್ತು ಮಾನ್ಯ ಸುಭಾಷ್ ಆಡಿ ಕಮಿಟಿಗಳು ಏನಾಯಿತು ಎನ್ನುವುದು ಹೇಳಬೇಕಾಗುತ್ತದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಇವರು ಎಲ್ಲವನ್ನೂ ಮಿಕ್ಸ್ ಮಾಡುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದರಲ್ಲಿಯೇ ಎಲ್ಲವನ್ನೂ ಮಿಕ್ಸ್ ಮಾಡಿಬಿಟ್ಟಿದ್ದಾರೆ. ನಾನೇನು ಮಾಡುವುದು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, ಅದನ್ನೇ ನಾನು ಹೇಳುತ್ತಿರುವುದು. ಅದನ್ನು ಮಾಡಿರುವಂತಹ ಉದ್ದೇಶ ಏನು?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವರು ಏನೋ ಮಾತನಾಡಬೇಕು ಎಂದು ಮಾತನಾಡುತ್ತಿದ್ದಾರೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಚಿವರೇ, ಆಯಿತು. ನಾನು ಕುಳಿತುಕೊಳ್ಳುತ್ತೇನೆ. ತಾವು ಮಾತನಾಡಿ. ನೋಡಿ, ನಾನು ನಿಜಾಂಶ ಹೇಳುವಂತಹದ್ದು, ಕೆಲವರಿಗೆ irritate ಆಗುತ್ತದೆ. ನಾವೇನು ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು population ಮೇಲೆ ಕೊಟ್ಟಿರುವುದು. ಇದನ್ನು ಏಕೆ ಒತ್ತಿ ಒತ್ತಿ ಹೇಳಬೇಕು?

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ಹೇಳಬೇಕಾಗುತ್ತದೆ. ತಾವು ಇಷ್ಟು ಹೊತ್ತು ನಾವು ಮಾಡಿದ್ದೇವೆ, ನಾವು ಮಾಡಿದ್ದೇವೆ ಎಂದು ಹೇಳಿದ್ದರಲ್ಲವೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವೇ ಹೇಳಿದ್ದೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಈಗ population ಆಧಾರದ ಮೇಲೆ ಮಾಡಬೇಕಾದರೆ ಕಾರಣ ಏನು? ಈಗ ಇರುವಂತಹ ಜಾತಿಗಳು ಜಾಸ್ತಿ ಆಯಿತು. ಎಸ್‌ಸಿ., ಎಸ್.ಟಿ., ಜಾತಿಗಳು ಜಾಸ್ತಿ ಆಯಿತು. ಇವತ್ತು ಶೇಕಡಾ 24 ರಷ್ಟು 101 ಎಸ್‌ಸಿ., ಎಸ್.ಟಿ., ಜಾತಿಗಳು ಇವೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಶೇಕಡಾ 24 ರಷ್ಟು development grant ಗೆ ಕೊಟ್ಟಿದ್ದೇವೆ. ಶೇಕಡಾ 24 ರಷ್ಟು Education Act ನಲ್ಲಿ ಇಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಮಾನ್ಯ ಸಚಿವರು ಹೇಳುವುದನ್ನು ಕೇಳಿ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರು ಶೇಕಡಾ 24 ರಷ್ಟು ಎಸ್‌ಸಿಪಿ/ಟಿಎಸ್‌ಪಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊಟ್ಟಿದ್ದಾರೆ ಎಂದಾಗ he has recognized 24% population. ಅವತ್ತೇ ಏಕೆ ಬಿಲ್ಲು ತಂದು ಮಾಡಿಕೊಡಲಿಲ್ಲ? He has recognized 24% population. Why didn't he bring a bill and amend it?

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಮ್ಮ ಕಾಲದಲ್ಲಿ ತಾನೇ ಮಾನ್ಯ ನಾಗಮೋಹನ್ ದಾಸ್‌ರವರ ಸಮಿತಿ constitute ಆಗಿರುವುದು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, 2015ರಲ್ಲಿ ಮಾನ್ಯ ಸಿದ್ಧರಾಮಯ್ಯನವರು ಬಂದು ಕೇವಲ ಒಂದು ವರ್ಷದಲ್ಲಿಯೇ ಈ ಆದೇಶ ಬಂದಿತು. ತಕ್ಷಣದಲ್ಲಿಯೇ

ಈ ಆದೇಶವನ್ನು ಆಧರಿಸಿ without any delay ಅವರು ಒಂದು ಆದೇಶ ಮಾಡಿದರು. ಅದನ್ನು put up ಮಾಡಿದರು. ಈ ಆದೇಶದ ಆಧಾರದ ಮೇಲೆ 2020 ರಲ್ಲಿ ಮಾನ್ಯ ನಾಗಮೋಹನ್ ದಾಸ್‌ರವರಿಗೆ ತಾವು ಕೊಟ್ಟಿರುವಂತಹ ವರದಿಯ ಆಧಾರದ ಮೇಲೆ ಅವರು ಕೊಟ್ಟಿರುವಂತಹ ವರದಿ.

(ಮುಂದು)

(1230)27-12-2022(07-00)bsd-rn

**ಶ್ರೀ ಪಿ.ಆರ್. ರಮೇಶ್ (ಮುಂದು)**

ಶ್ರೀ ನಾಗಮೋಹನ್ ದಾಸ್ ಆಯೋಗ 2020ರಲ್ಲಿ ವರದಿ ಕೊಟ್ಟ ಆಧಾರದ ಮೇಲೆ ಎರಡು ವರ್ಷ ನಿಧಾನವಾಗಿ ತಂದಿರುವ ಬಿಲ್ ಇದಾಗಿದೆ. ಇದನ್ನು ಹೇಳಬೇಕಾಗಿರುವುದರಿಂದ ಹೇಳಿದೆ. 2011ರ ಜನಗಣತಿ ಮೇಲೆ ಎಸ್‌ಸಿ, ಎಸ್‌ಟಿ ಜನಸಂಖ್ಯೆ ಸಿಗುತ್ತದೆ, ಆದರೆ ಒಬಿಸಿ ಸಿಗುವುದಿಲ್ಲ. ಇವತ್ತು ತಂದಿರುವ ಬಿಲ್‌ನಲ್ಲಿ ಒಬಿಸಿ ಸಹ ಸೇರುತ್ತದೆ. ಈ ಬಿಲ್ ನೇರವಾಗಿ ಒಬಿಸಿಗೆ effect ಆಗುವುದಿಲ್ಲ. ಆದರೆ ಈಗ ತರುತ್ತಿರುವ 24% ಬಿಟ್ಟರೆ ಉಳಿದಿರುವುದು 26% ಆಗುತ್ತದೆ. 26% ಗೆ ಒಬಿಸಿಗೆ ಅವರು automatic ಆಗಿ ಮತ್ತೊಂದು Government Order ಮಾಡಬೇಕಾಗುತ್ತದೆ. ಇಲ್ಲಿ ಕೊಡುತ್ತಿರುವುದು ಮುಖ್ಯ ಎಂದು ಹೇಳುತ್ತಿಲ್ಲ, ಒಬಿಸಿಗೆ ಅನ್ಯಾಯವಾಗುತ್ತದೆ ಎಂದು ಸಹ ಹೇಳುವುದಿಲ್ಲ. ಆದರೆ ಒಬಿಸಿ ಸ್ಥಿತಿಗತಿಗಳ ಬಗ್ಗೆ where they stand? What is their status? In Education how they develop? Article.340 ಪ್ರಕಾರ ಯಾವುದಾದರೂ attempt ಮಾಡಿದ್ದಾರೆಯೇ? ಯಾವರೀತಿ ಅವರಿಗೆ employment ಸಿಕ್ಕಿದೆ ಎಂಬುದರ ಬಗ್ಗೆ ಯಾವತ್ತಾದರೂ ಮಾಡಿದ್ದಾರೆಯೇ? ಅದನ್ನು ಮಾಡಿಲ್ಲ. ಇವತ್ತು ಮೀಸಲಾತಿ 32% ಏನಿತ್ತು, ಅದು ಕಡಿಮೆಯಾಗುತ್ತಾ 26%ಗೆ ಇಳಿಯುತ್ತಿದೆ. ಆದರೆ ಜನಸಂಖ್ಯೆ ಪ್ರಕಾರ ಎಷ್ಟೋ Backward Class ಗಳಲ್ಲಿ ಇದ್ದಂತಹ ಜಾತಿಗಳು Scheduled Caste ಆಗಿವೆ. ಎಷ್ಟೋ Backward Class ನಲ್ಲಿ ಇದ್ದ ಜಾತಿಗಳು Scheduled Tribe ಆಗಿವೆ. ನಾನು ಅವರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ, ಕೊಡಿ. ಆದರೆ 32%ಗೆ ಬರುವ ಜನಸಂಖ್ಯೆ ಸುಮಾರು 50 ರಿಂದ 55% ನಷ್ಟು ಬರುತ್ತಾರೆ. ಈ ಪ್ರಕಾರವಾಗಿ ತೆಗೆದುಕೊಂಡಾಗ ಒಬಿಸಿಗೆ 50% ಮೇಲೆ ಕೊಡಬೇಕಾಗುತ್ತದೆ. ಆದರೆ ಕೊಡುತ್ತಿರುವ

32% ಅನ್ನು 26%ಗೆ ಇಳಸಿದ್ದಾರೆ. ಇದಕ್ಕೆ ಒಂದು Ordinance ಅನ್ನು ತಂದಿದ್ದಾರೆ. ಈ Ordinance implement ಆಗುತ್ತದೆಯೇ? ನನಗೆ ಇದರ ಬಗ್ಗೆ ಉತ್ತರ ಕೊಡಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, The Eighth Recommendation of Subash B.Adi's High Level Committee; Constitutional recognition by the 103rd Constitutional Amendment 10% EWS there is Constitutional recognition to exceed the 50% limit ಎಂದು ವರದಿಯಲ್ಲಿ ಹೇಳಿದ್ದಾರೆ. ಇದರ text ಅನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ನಾವು ಬಿಸಿಎಂ, ಒಬಿಸಿ ಬಗ್ಗೆ ಚರ್ಚೆಯನ್ನು ತಂದಿಲ್ಲ. 6% ಕೊಡಲು ಬೇರೆ ಮೀಸಲಾತಿಯಿಂದ ಕೀಳಲೇಬೇಕು. ಅದು simple logic. ಅದನ್ನು ಗಂಟೆಗಟ್ಟಲೆ ಹೇಳಬೇಕೆ? ಜನರಲ್ ಅಥವಾ ಒಬಿಸಿ ಯಲ್ಲಿ ಕೀಳಬೇಕು. ನಾವು ಒಬಿಸಿ ಯಲ್ಲಿ ಕೀಳುತ್ತೇವೆ ಎಂದು ಹೇಳಿದ್ದೇವೆಯೇ? ಒಳ್ಳೆ ಕತೆ ಆಯಿತು. Why are you expressing apprehension? ಒಬಿಸಿ ಕಟ್ ಆಗುತ್ತದೆ ಎಂದು ಏಕೆ? ಎಲ್ಲರಿಗೂ proportional reservation ಕೊಡುವುದಿಲ್ಲ. Adequate Reservation is the word used in Constitution. Not proportional reservation. ಇದೊಂದೇ ಕೇಸ್‌ನಲ್ಲಿ in India, ಎಸ್‌ಸಿ, ಎಸ್‌ಟಿಗೆ proportional reservation ಅನ್ನು propose ಮಾಡುತ್ತಿದ್ದೇವೆ. Adequately you are reserved.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು 50% ದಾಟಿದಾಗ ಯಾವರೀತಿ ರಕ್ಷಣೆ ಸಿಗುತ್ತದೆ ಎಂದು ಕೇಳುತ್ತಿದ್ದೇವೆ. ಒಬಿಸಿ ಪ್ರಶ್ನೆ ಅಲ್ಲ. ಛತ್ತೀಸ್‌ಗಡ್‌ನಲ್ಲಿ 73% ಮಾಡಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ನಾಗಾಲ್ಯಾಂಡ್‌ನಲ್ಲಿ ಎಸ್‌ಟಿ ಗೆ 90% ಮಾಡಬಹುದು. ಹಿಮಾಚಲ ಪ್ರದೇಶದಲ್ಲಿ 75% ಮಾಡಬಹುದು. Entire Naga population will treat as STs. 90% ST reservation ಕೊಡಬಹುದು.

**ಶ್ರೀ ಬಿ.ಕೆ. ಹರಿಪ್ರಸಾದ್:–** ಅಲ್ಲಿ 60 ಸೀಟುಗಳಲ್ಲಿ 58 ಸೀಟುಗಳು ಟ್ರೈಬಲ್ ಆಗಿವೆ. ಒಂದೂ ಜನರಲ್ ಇಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ನಾನೇ ಅದನ್ನು ಹೇಳುತ್ತಿದ್ದೇನೆ. Proportional reservation ಕೊಟ್ಟರೆ the whole State of Nagaland will have only STs.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, proportional reservation ಸಿಕ್ಕರೆ ಬಾರಿ ಸಂತೋಷ, ಅದು ಸಿಕ್ಕುವುದಿಲ್ಲ. ಅದಕ್ಕೆ ನಾವು adequate reservation ಎಂದು ಹೇಳುತ್ತಿದ್ದೇವೆ. According to their population adequate reservation ಆಗುತ್ತದೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಮೀಸಲಾತಿ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಹಲವಾರಿ ಬಾರಿ ಹೇಳಿದ್ದಾರೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಾಂತರಾಜ್ ರವರು ನನಗೆ ಸ್ನೇಹಿತರು ಮತ್ತು ಚಿತ್ರದುರ್ಗದವರಾಗಿದ್ದಾರೆ. 1930ಯಲ್ಲಿ ಬ್ರಿಟಿಷರು ಮಾಡಿದ Caste Census ನಂತರ ಭಾರತ ದೇಶದಲ್ಲಿ ಯಾರೂ ಮಾಡದೇ ಇರುವುದರ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ರೂ.160 ಕೋಟಿಗಳನ್ನು ಖರ್ಚು ಮಾಡಿ, ಅದನ್ನು ಜಾರಿಗೆ ತರಲು ಯಾರೂ ಪ್ರಯತ್ನ ಪಡುತ್ತಿಲ್ಲ. ಅದು ಅವರ ಅಥವಾ ನಮ್ಮ ಸರ್ಕಾರಗಳು ಇರಬಹುದು. ಮೊನ್ನೆ ಸದಸ್ಯರೊಬ್ಬರಿಗೆ ಶ್ರೀ ಕಾಂತರಾಜ್ ವರದಿ ಬಂದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಎಲ್ಲರೂ Caste Census ಇಲ್ಲ ಎಂದು ಹೇಳುತ್ತಿರಬೇಕಾದರೆ ಅದನ್ನು ಒಪ್ಪಿಕೊಳ್ಳುವ ಒಂದು logical conclusion ಬರಬೇಕಲ್ಲವೇ ಎಂದು ನನ್ನ ಅಭಿಪ್ರಾಯ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, 2011 ಜನಗಣತಿ ಪ್ರಕಾರ SC/STs Population Census is recognized. ಒಬಿಸಿ ಜನಗಣತಿ recognize ಆಗಿಲ್ಲ. ಅದಕ್ಕೆ ಶ್ರೀ ಕಾಂತರಾಜ್ ಆಯೋಗ ನೇಮಕವಾಗಿ, ಅವರು ಏನು ಕೊಟ್ಟಿದ್ದಾರೋ, ನಮಗೆ ಗೊತ್ತಿಲ್ಲ. Government has not accepted the report. ಒಬಿಸಿಗೆ proportionate reservation ಕೊಡುತ್ತೇವೆ ಎಂದು ಹೇಳಿಲ್ಲ. It cannot be given. ಅದರ ವಿಷಯ ಇಲ್ಲ, ಅದನ್ನು ಏಕೆ ಪ್ರಸ್ತಾಪ ಮಾಡುತ್ತಾರೆ? ಆ ಚರ್ಚೆ ಬಂದಾಗ ಮಾಡಬೇಕು. ಅವರೇ ನಾಯಕ ಸಮಾಜದವರು ಕೋರ್ಟಿಗೆ ಹೋಗಿದ್ದರಿಂದ ನಿರ್ದೇಶನ ಬಂತು ಎಂದು ಹೇಳಿದ್ದಾರೆ. There are

Court directions. Only SC/STs are protected under this law, not OBC. OBC stands where they are.

**ಶ್ರೀ ಬಿ.ಕೆ. ಹರಿಪ್ರಸಾದ್:-** ನಮ್ಮ ಪ್ರಶ್ನೆ ಇಷ್ಟೇ, ಮಾನ್ಯ ಸಚಿವರು ಹೇಳಿದ್ದು ನಿಜ. ರೂ.160 ಕೋಟಿಗಳನ್ನು ಖರ್ಚು ಮಾಡಿ ಶ್ರೀ ಕಾಂತರಾಜ್ ವರದಿ ಇದ್ದು, ದೆಹಲಿಯಲ್ಲಿಯೂ Caste Census ಆಗಿ ವರದಿ ಹೊರಗೆ ಬಂದಿಲ್ಲ. ದೆಹಲಿ ವರದಿ ಹೊರಗೆ ಬರದೇ 10 ವರ್ಷ ಕಳೆದಿವೆ, ಇಲ್ಲಿ ಶ್ರೀ ಕಾಂತರಾಜ್ ವರದಿ ಆಗಿ 5 ವರ್ಷಗಳು ಕಳೆದಿವೆ. ಇದನ್ನು ಮಂಡಿಸಿ ಚರ್ಚೆ ಮಾಡಲು ಇನ್ನೂ ಆಗಿಲ್ಲ. ಆದರೆ EWS ಗೆ ಮಾತ್ರ 24 ಗಂಟೆಗಳಲ್ಲಿ ಎಲ್ಲಾ ಮಾಡಿಕೊಂಡು ರಾಜ್ಯಸಭಾ ಮತ್ತು ಲೋಕಸಭೆಗಳಿಗೆ ಹೋಗುತ್ತಾರೆ. ಅಂದರೆ ನಾವು ಮನುಷ್ಯರಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಬಾರಿ ಭಾಷಣ ಮಾಡಿ ಶ್ರೀ ಕಾಂತರಾಜ್ ಕಮಿಷನ್ ನೇಮಕ ಮಾಡಿ, ನಂತರ ಅದನ್ನು ಏಕೆ accept ಮಾಡಲಿಲ್ಲ ಎಂದು ಉತ್ತರ ಹೇಳಬೇಕಲ್ಲವೇ? Accept ಏಕೆ ಮಾಡಲಿಲ್ಲ?

**(ಗೊಂದಲ)**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಿದ್ದರಾಮಯ್ಯನವರು ಮಾಡಿದ್ದು ತಪ್ಪು ಎಂದು ನಾನು ಹೇಳಲಿಲ್ಲ, ನಾನು ಹೇಳುವುದೇನೆಂದರೆ, ಹಿಂದುಳಿದ ಜನಾಂಗಕ್ಕೆ ನ್ಯಾಯ ಕೊಡಬೇಕೆಂದರೆ ಒಂದು statistics ಬೇಡವೇ? ಯಾರೂ ಕೂಡ ಏಕೆ ಮಾಡಲಿಲ್ಲ ಎಂದು ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಎಲ್ಲಾ ಚರ್ಚೆ ಮಾಡಿ...... ಎಲ್ಲಾ ಪಕ್ಷದವರು ಮಾಡುವ ಕೆಲಸವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಶ್ರೀ ಕಾಂತರಾಜು ರವರನ್ನು ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ನೇಮಕ ಮಾಡಿದ್ದು, ರೂ.200 ಕೋಟಿ ಎಂದು ಹೇಳಿ, ರೂ.160 ಕೋಟಿಗಳನ್ನು ಬಿಡುಗಡೆ ಮಾಡಿರುವುದು ಮಾನ್ಯ ಸಿದ್ಧರಾಮಯ್ಯನವರ ಸರ್ಕಾರವಾಗಿದೆ. ಶ್ರೀ ಕಾಂತರಾಜ್ ವರದಿಯನ್ನು ಪೂರ್ಣಗೊಳಿಸಿರುವುದು ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದ ಅವಧಿಯಲ್ಲಿ ಆಗಿರುವುದರಿಂದ ಏಕೆ ಅಂಗೀಕಾರ ಮಾಡಿಲ್ಲ ಎಂದು ಅವರೇ ಉತ್ತರ ಕೊಡಬೇಕು.

**(ಗೊಂದಲ)**

**ಶ್ರೀ ಎಸ್. ರವಿ:–** ಹಾಗಾದರೆ ಈ ಸರ್ಕಾರ ಏಕೆ ಅಂಗೀಕಾರ ಮಾಡಲಿಲ್ಲ? ಅವರಿಗೂ ಸಮಯ ಇತ್ತಲ್ಲವೇ? ಮಾಡಿದ್ದರೆ ಬೇಡ ಎನ್ನುತ್ತಿದ್ದರೇ?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾಡಲ್ಲ ಎನ್ನುತ್ತಿದ್ದಾರಲ್ಲ ಅದಕ್ಕೆ ಬಾರಿ ಸಂತೋಷ. ಭಾರತೀಯ ಜನತಾ ಪಾರ್ಟಿ ಶ್ರೀ ಕಾಂತರಾಜ್ ವರದಿಯನ್ನು ಮಂಡನೆ ಮಾಡುವುದಿಲ್ಲ ಎಂದರೆ ಬಾರಿ ಸಂತೋಷ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾಡಲ್ಲ ಎನ್ನುವ ಪ್ರಶ್ನೆ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಗಮನಿಸಬೇಕು,

**ಶ್ರೀ ನಸೀರ್ ಅಹಮದ್:–** ಸದನಕ್ಕೆ wrong information ಹೋಗಬಾರದು. ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದಲ್ಲಿ ಅಧಿಕೃತವಾಗಿ report submit ಮಾಡಿದ್ದಾರೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದಲ್ಲಿ ಶ್ರೀ ಕಾಂತರಾಜು ಆಯೋಗವನ್ನು ನೇಮಕ ಮಾಡಿದ್ದು, ಅದರಂತೆ ಅವರು ವರದಿಯನ್ನು ಸಿದ್ಧಪಡಿಸಿರುತ್ತಾರೆ. ಆಗ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ವರದಿಯನ್ನು ಏಕೆ ಅಂಗೀಕರಿಸಲಿಲ್ಲ ಎಂದು ನಮಗೆ ಗೊತ್ತಿಲ್ಲ, ಅವರು ಹೇಳಿರಲಿ. ಆ ನಂತರ ನಮ್ಮ ಸರ್ಕಾರ ಬಂದ ತಕ್ಷಣ ಶ್ರೀ ಜಯಪ್ರಕಾಶ್ ಹೆಗಡೆ ನೇತೃತ್ವದಲ್ಲಿ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಅವರ ಹತ್ತಿರ ವಿವರ ಕೇಳಿದಾಗ ಶ್ರೀ ಕಾಂತರಾಜು ವರದಿಗೆ ಪದನಿಮಿತ್ತ ಕಾರ್ಯದರ್ಶಿ, ಅಂದರೆ ಕಮಿಷನರ್

ಅವರೇ ದಸ್ಕತ್ ಹಾಕಿಲ್ಲ. ಆ ಕಾರಣಕ್ಕೆ ಅದು ಅಧಿಕೃತ ಎಂದಾಗುವುದಿಲ್ಲ ಎಂದು ಅದನ್ನು ಪುನರ್‌ಪರಿಶೀಲನೆ ಮಾಡಿ ವರದಿಯನ್ನು ಕೊಡುವ ಬಗ್ಗೆ ಹೇಳಿದ್ದಾರೆ. ಈಗ ಆಯೋಗದ ಅಧ್ಯಕ್ಷರ ಸಮಕ್ಷಮದಲ್ಲಿ ಪರಿಶೀಲನೆಯಾಗುತ್ತಿದೆ ಎಂದು ನಮಗೆ ಗೊತ್ತಿರುವ ವಿಷಯವಾಗಿದೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾಂತರಾಜುರವರ ಜೊತೆ ನಿನ್ನೆ ಬೆಳಗ್ಗೆ ನಾನು ಮಾತನಾಡಿದ್ದು, ನಾನು ಅದರ ಬಗ್ಗೆ ಬಹಳ ಪರಿಣಿತ ಇದ್ದೇನೆ ಎಂದು ಹೇಳುವುದಿಲ್ಲ. ಶ್ರೀ ಕಾಂತರಾಜುರವರಿಗೆ ದೂರವಾಣಿಯಲ್ಲಿ ಮಾತನಾಡಿದಾಗ ಅವಧಿ ಮುಗಿದಿದೆ ಎಂದು ಅವರಿಗೆ ಬೆಳಗ್ಗೆ ಆದೇಶ ಇಷ್ಯೂ ಮಾಡಿದರಂತೆ. Member Secretary is also part of the Committee. Immediately, ಎಲ್ಲರೂ ಸಹಿ ಮಾಡಿದ್ದಾರೆ. Member Secretary ಯಾರಿದ್ದಾರೋ, ನನಗೆ ಗೊತ್ತಿಲ್ಲ. ಎಲ್ಲರೂ ಸಹಿ ಮಾಡಿ ಸಾಯಂಕಾಲ submit ಮಾಡುತ್ತಾರೆ. ಅವರ ಹತ್ತಿರ ಇದೆ, ಸರ್ಕಾರಕ್ಕೆ ತಲುಪಿಲ್ಲ. ನನ್ನ ಪ್ರಶ್ನೆ ಏನೆಂದರೆ, ಮೊನ್ನೆ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರೊಬ್ಬರ ಪ್ರಶ್ನೆಗೆ ಸರ್ಕಾರಕ್ಕೆ ಬಂದೇ ಇಲ್ಲ ಎಂದು ಹೇಳಿದ್ದಾರೆ. ನಾನು ಅವರ ತಪ್ಪು, ಇವರ ತಪ್ಪು ಎಂದು ಹೇಳುವುದಿಲ್ಲ.

(ಮುಂದು)

(1231) 27.12.2022/7.10/ಹೆಚ್‌ವಿ:ಆರ್‌ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮೋಹನ್‌ಕುಮಾರ್ ಕೊಂಡಜ್ಜಿಯವರು ಹೇಳುತ್ತಿರುವುದು ನಮಗೆ ಅರ್ಥವಾಗಿದೆ. ಆಯೋಗದವರು ಸರ್ಕಾರಕ್ಕೆ ವರದಿಯನ್ನು ಕೊಡಬೇಕಾಗುತ್ತದೆ. ಈಗಿನ ಹಿಂದುಳಿದ ಆಯೋಗದ ಅಧ್ಯಕ್ಷರಾದ ಮಾನ್ಯ ಜಯಪ್ರಕಾಶ್ ಹೆಗಡೆಯವರು, "ವರದಿ ನನ್ನ ಸುಪರ್ದಿಯಲ್ಲಿ ಇದೆ. ಅಧ್ಯಕ್ಷರು ಸಹಿ ಮಾಡಿರಬಹುದು, ಪದನಿಮಿತ್ತ ಕಾರ್ಯದರ್ಶಿಯವರ ಸಹಿ ಇಲ್ಲದೇ ಇರುವುದರಿಂದ ಇದಕ್ಕೆ ಮಾನ್ಯತೆ ಬರುವುದಿಲ್ಲ. ಆ ಕಾರಣದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡುತ್ತೇವೆ" ಎನ್ನುವ ಮಾತನ್ನು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಇಬ್ಬರು ಸಚಿವರುಗಳು ಎಷ್ಟು ತರಹದ ಉತ್ತರವನ್ನು ಈ ಸದನಕ್ಕೆ ಕೊಡುತ್ತಿದ್ದಾರೆ ಎಂದರೆ, ಪ್ರತಿ ಬಾರಿ ಪ್ರಶ್ನೆ ಮಾಡಿದಾಗಲೂ "ಪದ ನಿಮಿತ್ತ ಕಾರ್ಯದರ್ಶಿ ಸಹಿ ಮಾಡಿಲ್ಲ" ಎಂದು ಹೇಳುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಎಷ್ಟು ಬಾರಿ ಪ್ರಶ್ನೆಯನ್ನು ಕೇಳುತ್ತಾರೆ, ಅಷ್ಟು ಬಾರಿ ನಾವು ಉತ್ತರವನ್ನು ಕೊಡುತ್ತೇವೆ. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಿದಲ್ಲಿದ್ದಾಗ, ಆ ಆಯೋಗವನ್ನು ರಚನೆ ಮಾಡಿದ್ದರು. ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರದಲ್ಲಿದ್ದಾಗಲೇ ಆ ಆಯೋಗದವರು ತಮ್ಮ ವರದಿಯನ್ನು ನೀಡಿದ್ದಾರೆ, ಅವರು ಏತಕ್ಕೋಸ್ಕರ ಆ ವರದಿಯನ್ನು ಅಂಗೀಕರಿಸಲಿಲ್ಲ ಎನ್ನುವುದರ ಬಗ್ಗೆ ಅವರನ್ನೇ ಕೇಳಬೇಕಾಗಿದೆ.

**ಶ್ರೀ ನಸೀರ್ ಅಹ್ಮದ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳುತ್ತಿರುವುದನ್ನು ನಂಬಬೇಕೇ ಅಥವಾ ಮಾನ್ಯ ಸಭಾನಾಯಕರು ಹೇಳುತ್ತಿರುವುದನ್ನು ನಂಬಬೇಕೆ? ಯಾರನ್ನು ನಂಬಬೇಕೆಂದು ನಮಗೆ ಗೊತ್ತಾಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಅವರುಗಳು ಯಾರನ್ನೂ ನಂಬುತ್ತಿಲ್ಲ ಅದೇ ಸಮಸ್ಯೆಯಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಸಣ್ಣ ನೀರಾವರಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, report has been submitted by the Kantharaj. ತಾಂತ್ರಿಕ ಸಮಸ್ಯೆಯೇನೂ ಇಲ್ಲ. ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿಯೇ ನ್ಯಾಯಮೂರ್ತಿ ಕಾಂತರಾಜ್ ಆಯೋಗದವರು ವರದಿಯನ್ನು ಸಲ್ಲಿಸಿದ್ದಾರೆ. ಪದ ನಿಮಿತ್ತ ಕಾರ್ಯದರ್ಶಿಗಳು ಸಹಿ ಮಾಡಿರುವುದರ ಅಥವಾ ಬಿಟ್ಟಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ಅವತ್ತಿನ ಸರ್ಕಾರ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರ ಅವಧಿಯಲ್ಲಿ ನ್ಯಾಯಮೂರ್ತಿ ಕಾಂತರಾಜು ಆಯೋಗವು ವರದಿಯನ್ನು ಆಗಿನ ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಒಂದು ವೇಳೆ ವರದಿ ಸಲ್ಲಿಕೆಯಾಗಿದ್ದರೆ, ನಾನು ನನ್ನ ಸದಸ್ಯತ್ವಕ್ಕೆ ರಾಜಿನಾಮೆಯನ್ನು ನೀಡುತ್ತೇನೆ. ಮಾನ್ಯ ಸಚಿವರು ಸದನದಲ್ಲಿ ಸುಳ್ಳು ಹೇಳಬಾರದು. ಅವತ್ತಿನ ಆಯೋಗದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಕಾಂತರಾಜ್‌ರವರು "ವರದಿ ಸಿದ್ಧವಾಗಿದೆ, ನಾನು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ನನಗೆ ಅನುಮತಿ ಕೊಡಿ" ಎಂದು ಸರ್ಕಾರಕ್ಕೆ ಒಂದು ಪತ್ರವನ್ನು ಬರೆಯುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ವರದಿ ಸಿದ್ಧವಾಗಿದ್ದರೆ, ಅದನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿತ್ತು.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಅವರಿಗೆ ಟೈಂ ಕೊಡುವುದಿಲ್ಲ, ಅವರ ಪತ್ರಕ್ಕೆ ಉತ್ತರ ನೀಡುವುದಿಲ್ಲ. ಸರ್ಕಾರ ದಿಢೀರ್ ಎಂದು ಒಂದು ದಿನ ಅವರಿಗೆ ಪತ್ರ ಬರೆದು, "ನಿಮ್ಮ ಅವಧಿ ಮುಗಿದಿದೆ ಕಛೇರಿ ಖಾಲಿ ಮಾಡಬೇಕು" ಎಂದು ತಿಳಿಸಿರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಅದು ಯಾವ ಸರ್ಕಾರವೆಂದು ಅವರು ಹೇಳಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಆ ರೀತಿ ಪತ್ರವನ್ನು ಬರೆದಿದ್ದಾರೆ. ಅದಕ್ಕೆ ಬೇಕಾದ ಆಧಾರವನ್ನು ದಿನಾಂಕವಾರು ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನ್ಯಾಯಮೂರ್ತಿ ಕಾಂತರಾಜು ಆಯೋಗ ರಚನೆಯಾಗಿರುವುದು ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರದಲ್ಲಿದ್ದಾಗ, ಅವರ ಅಧಿಕಾರಾವಧಿಯಲ್ಲಿಯೇ ನ್ಯಾಯಮೂರ್ತಿ ಕಾಂತರಾಜ್‌ರವರ ಅವಧಿ ಹೆಚ್ಚು ಕಡಿಮೆ ಮುಕ್ತಾಯಗೊಂಡಿರುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಪತ್ರ ಬಂದ ಕೂಡಲೇ ಆಯೋಗದ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರು ವರದಿಗೆ ಸಹಿ ಮಾಡಿ ಅಂದಿನ ಪದ ನಿಮಿತ್ತ

ಕಾರ್ಯದರ್ಶಿಗಳು ಯಾರಿದ್ದರು, ಅವರಿಗೆ ವರದಿಯನ್ನು ಒಪ್ಪಿಸುತ್ತಾರೆ. ತಾವು ಪದ ನಿಮಿತ್ತ ಸದಸ್ಯರಿದ್ದೀರಿ, ನಮ್ಮ ಅವಧಿ ಮುಗಿದಿದೆಯೆಂದು ಪತ್ರ ಬಂದಿರುವುದರಿಂದ ನಾವೆಲ್ಲರೂ ಈ ವರದಿಯನ್ನು ನಿಮಗೆ ಕೊಡುತ್ತಿದ್ದೇವೆ, ಸರ್ಕಾರಕ್ಕೆ ವರದಿಯನ್ನು ನೀಡುವುದು ನಿಮ್ಮ ಜವಾಬ್ದಾರಿ" ಎಂದು ಹೇಳಿ ಪದನಿಮಿತ್ತ ಕಾರ್ಯದರ್ಶಿಗಳಿಗೆ ವರದಿಯನ್ನು ಕೊಟ್ಟಿದ್ದಾರೆ. ಅವರು ಯಾವ ದಿನಾಂಕದಂದು ಕೊಟ್ಟಿದ್ದಾರೆ ಎನ್ನುವುದು ಸಹ ಖಚಿತವಾಗಿದೆ. ಆದರೆ, ಆ ವರದಿಯನ್ನು ಇಲ್ಲಿಯವರೆವಿಗೂ ಯಾರೂ ಬಿಚ್ಚಿಯೂ ನೋಡಿಲ್ಲ. ಸರ್ಕಾರಕ್ಕೆ ಆ ವರದಿಯನ್ನು ಪರಿಶೀಲನೆ ಮಾಡುವುದಕ್ಕೆ, ಭಾಗಶಃ ಒಪ್ಪಿಕೊಳ್ಳುವುದಕ್ಕೆ ಬದಲಾವಣೆ ಅಥವಾ ಸಂಪೂರ್ಣವಾಗಿ ರಿಜೆಕ್ಟ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಆದರೆ, ಏತಕ್ಕೋಸ್ಕರ ಸರ್ಕಾರ ಆ ಆಯೋಗದವರು ನೀಡಿರುವ ವರದಿಯನ್ನು ಚರ್ಚೆಗೆ ತೆಗೆದುಕೊಂಡಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗಲೇ ವರದಿ ಸಿದ್ಧವಾಗಿತ್ತು. ಅದನ್ನು ಏತಕ್ಕೋಸ್ಕರ ಅವರು ಅಂಗೀಕರಿಸಲಿಲ್ಲ? ಈಗ ಈ ರೀತಿಯ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

**ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿದ್ದರಾಮಯ್ಯನವರೇ ತಪ್ಪು ಮಾಡಿರಲಿ ಅಥವಾ ಮಾನ್ಯ ಬಿ.ಎಸ್.ಯಡಿಯೂರಪ್ಪನವರೇ ತಪ್ಪು ಮಾಡಿರಲಿ, ಆಯೋಗದ ವರದಿಯನ್ನು ಒಪ್ಪಿಕೊಳ್ಳುವುದಕ್ಕೆ ಅವರಿಗಿದ್ದ ಸಮಸ್ಯೆಯೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಹಿಂದುಳಿದ ಆಯೋಗದ ಸಮಕ್ಷಮದಲ್ಲಿ ಆ ವರದಿ ಇದೆ. ಆ ಆಯೋಗದವರು ವರದಿಯನ್ನು ಕೊಟ್ಟ ಮೇಲೆ ಪರಿಶೀಲನೆ ಮಾಡಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತದೆ.

**ಸಭಾಪತಿಯವರು:–** ನೀವು ಸರ್ಕಾರಕ್ಕೆ ಅದನ್ನು ಕೊಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸನ್ಮಾನ್ಯ ಸಭಾಪತಿಯವರೇ, ಹಿಂದುಳಿದ ಆಯೋಗವೂ ಸಹ ಸರ್ಕಾರದ್ದೇ ಆಗಿದೆ. ಅದು quasi government ಏನೂ ಅಲ್ಲ. ಈ ಚರ್ಚೆಯ ದಿಕ್ಕನ್ನು

ನೋಡಿದರೆ, ಕಾಡಿನ ರಾಜ "ಸಿಂಹ" ಚುನಾವಣೆಗೆ ಹೋಗುವಂತಹ ಸಂದರ್ಭದಲ್ಲಿ ಎಲ್ಲ ಕುರಿಗಳಿಗೂ "ನೀವೆಲ್ಲ ಏನೂ ಯೋಚನೆ ಮಾಡಬೇಡಿ ನಿಮ್ಮನ್ನು ನಾನು ರಕ್ಷಣೆ ಮಾಡುತ್ತೇನೆ" ಎನ್ನುವ ಮಾತನ್ನು ಹೇಳುತ್ತದೆ. ಆದರೆ, ಮರು ದಿನ ಬೆಳಗ್ಗೆಯೇ ಬೆಳಗ್ಗಿನ ತಿಂಡಿಗೆ ಒಳ್ಳೆ ಕುರಿಮರಿಯನ್ನು ಹಿಡಿದು ತಿನ್ನುತ್ತದೆ. ಕುರಿಗಳ ಪರಿಸ್ಥಿತಿಯಾಗಿದೆ ನಮ್ಮ ಸ್ಥಿತಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದಕ್ಕೂ ಇದಕ್ಕೂ ಏನೇನು ಸಂಬಂಧವಿಲ್ಲ. ಅವರ ಕಾಲದಲ್ಲಿ ಕೊಟ್ಟಿರುವ ವರದಿಯನ್ನು, ಅಂಗೀಕರಿಸದೇ ಬೇರೆಯವರ ಕಡೆಗೆ ಅವರು ಬೆರಳು ಮಾಡಿ ತೋರಿಸುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರು ಮಾತನಾಡಲಿ ಬಿಡಿ. ಇದನ್ನು ಏತಕ್ಕೋಸ್ಕರ ತಾವು ಇಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೀರಿ?

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ನಾನು ಇಷ್ಟು ಹೊತ್ತಿನ ತನಕ ಸನ್ಮಾನ್ಯ ಸಚಿವರ ಜವಾಬ್ದಾರಿ ಹೇಳಿಕೆಯನ್ನು ಕೇಳಿದ್ದೇನೆ. "*Whereas, the report also cites the study by National Law School of India University, Bengaluru, which states 74% of the Tribal community have remained invisible and their literacy rates are lower than 3%.*" ಎಂದು ಇದೆ. ಆಯೋಗ ಕೊಟ್ಟಿರುವಂತಹ ವರದಿಯನ್ನು ಒಪ್ಪುವುದಿಲ್ಲವೆಂದು ಈ ಸರ್ಕಾರ ಹೇಳುತ್ತಿದೆ. ನ್ಯಾ॥ನಾಗಮೋಹನ್‌ದಾಸ್ ಆಯೋಗದವರು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯವರು ತಮ್ಮ ಅಧ್ಯಯನದಲ್ಲಿ ಉಲ್ಲೇಖ ಮಾಡಿರುವ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿದೆ. ಆದರೆ, ಸುಮಾರು 160 ಕೋಟಿ ರೂಪಾಯಿಗಳಷ್ಟು ಸಾರ್ವಜನಿಕರ ಹಣವನ್ನು ಖರ್ಚು ಮಾಡಿ ಇಡೀ ರಾಜ್ಯದಲ್ಲಿರುವ ಜಾತಿ ಮತ್ತು ಆರ್ಥಿಕ ಪರಿಸ್ಥಿತಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿರುವಂತಹ ವರದಿಯನ್ನು ಆಧರಿಸಿಕೊಂಡು ನ್ಯಾ॥ನಾಗಮೋಹನ್ ದಾಸ್ ಅವರಿಗೆ ಕೊಟ್ಟಿದ್ದರೆ, ಅವರು ಇನ್ನೂ ಉತ್ತಮವಾಗಿ ವರದಿಯನ್ನು ಕೊಡುತ್ತಿದ್ದರು.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರದವರು ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು(ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ

ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ತಂದಿದೆ. ಈ ವಿಧೇಯಕವನ್ನು ಜಾರಿಗೆ ತರುವುದರ ಮೂಲಕ ಎಸ್.ಸಿ., ಎಸ್.ಟಿ.,ಗಳಗೆ ಎಷ್ಟು ಪ್ರಮಾಣದಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆ ಅಷ್ಟೇ ಪ್ರಮಾಣದಲ್ಲಿ ಓ.ಬಿ.ಸಿ.,ಗೆ ಮೀಸಲಾತಿಯನ್ನು ನೀಡಲಾಗುತ್ತದೆಯೇ ಅಥವಾ ಇನ್ನೂ ಕಡಿಮೆ ಮಾಡಲಾಗುತ್ತದೆಯೇ ಎನ್ನುವ ಅಂಶಕ್ಕೆ ನಾನು ಸರ್ಕಾರದಿಂದ ಸ್ಪಷ್ಟ ಉತ್ತರವನ್ನು ಬಯಸುತ್ತಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–** ಸನ್ಮಾನ್ಯ ಸಭಾಪತಿಯವರೇ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಗೆ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ ನೀಡುವ ಬಗ್ಗೆ ಈ ವಿಧೇಯಕವನ್ನು ಸರ್ಕಾರ ತಂದಿದೆ. ಅದರ ಪರವಾಗಿ ನಾನು ಮಾತನಾಡುವುದಕ್ಕೆ ಬಯಸುತ್ತಿದ್ದೇನೆ. ನನ್ನ ಮಿತ್ರರಾದ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದ ಸಂದರ್ಭದಲ್ಲಿ "ಸರ್ಕಾರ ಏತಕ್ಕೋಸ್ಕರ ಎರಡು ವರ್ಷಗಳ ಕಾಲ ಇಟ್ಟುಕೊಂಡು, ಈಗ ಈ ವಿಧೇಯಕವನ್ನು ತರುತ್ತಿದ್ದೀರಿ ಮೊದಲೇ ಏತಕ್ಕೋಸ್ಕರ ತರಲಿಲ್ಲ" ಎನ್ನುವ ಮಾತನ್ನು ಹೇಳದ್ದಾರೆ. ಈಗ ಏತಕ್ಕೋಸ್ಕರ ಇದನ್ನು ತರಲಾಗಿದೆ ಎನ್ನುವುದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಯಾವುದೇ ಸರ್ಕಾರಗಳು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಗೆ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿಯನ್ನು ಕೊಡಲೇಬೇಕು ಎನ್ನುವ ಉದ್ದೇಶದಿಂದ ಮಾಡಲಿಲ್ಲ. ಈ ಮೀಸಲಾತಿಯನ್ನು ಪಡೆದುಕೊಳ್ಳುವುದಕ್ಕಾಗಿ ಬಹುಕಾಲದಿಂದ ಹೋರಾಟ ನಡೆಯುತ್ತಿತ್ತು. ಸುಮಾರು 50 ವರ್ಷಗಳಂದ ಈ ವರ್ಗದವರಿಗೆ ಮೀಸಲಾತಿಯನ್ನು ಹೆಚ್ಚಿಸಬೇಕೆಂದು ಹೋರಾಟ ನಡೆದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಆದರೆ, 2015ರಲ್ಲಿ "ನಾಯಕ ವಿದ್ಯಾರ್ಥಿ ಸಂಘ" ಈ ವಿಚಾರವಾಗಿ ನ್ಯಾಯಾಲಯದ ಕದ ತಟ್ಟುತ್ತದೆ. ನ್ಯಾಯಾಲಯದ ಆದೇಶದ ಮೇರೆಗೆ ಆಗಿನ ಆಡಳತಾರೂಢ ಸರ್ಕಾರ ಇದಕ್ಕೆ ಮುಂದಾಗಬೇಕಾಗಿತ್ತು. ಆ ರೀತಿಯ ಒತ್ತಡ ಬರದೇ ಇದ್ದಿದ್ದರೇ, ನ್ಯಾ॥ನಾಗಮೋಹನ್‌ದಾಸ್‌ರವರ ಆಯೋಗ ರಚನೆಯಾಗುತ್ತಿರಲಿಲ್ಲ. ಅವರ ವರದಿಯೂ ಸಹ ಇವತ್ತು ನಮ್ಮ ಮುಂದೆ ಇರುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನ್ಯಾ॥ನಾಗಮೋಹನ್‌ದಾಸ್ ಆಯೋಗದವರು ನೀಡಿರುವ ವರದಿಯಲ್ಲಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಸುವುದಕ್ಕೆ ಸುಮಾರು

ಎರಡು ವರ್ಷಗಳ ಕಾಲ ವಿಳಂಬ ಮಾಡಿರುವುದೇಕೆ ಎನ್ನುವ ಪ್ರಶ್ನೆ ಈಗ ನಮ್ಮ ಮುಂದಿದೆ. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗದ ವರದಿಯನ್ನು ಅನುಷ್ಠಾನವನ್ನು ಅವಲೋಕಿಸಲು ಸರ್ಕಾರವು ನ್ಯಾಯಮೂರ್ತಿ ಸುಭಾಷ್ ಅಡಿ ಮತ್ತು ಇತರರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ನೇಮಕ ಮಾಡಿತ್ತು. ಆ ಸಮಿತಿಯು ನೀಡಿರುವ ವರದಿಯನ್ನು ಆಧರಿಸಿ ಇವತ್ತಿನ ದಿನ ಸರ್ಕಾರ ಈ ವಿಧೇಯಕವನ್ನು ಸರ್ಕಾರ ತಂದಿದೆ. ಮೀಸಲಾತಿಯ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಅನುಸೂಚಿತ ಪಂಗಡಗಳ ಮೀಸಲಾತಿಯ ಪ್ರಮಾಣವನ್ನು ಶೇಕಡಾ 3 ರಿಂದ ಶೇಕಡಾ 7ಕ್ಕೆ ಹೆಚ್ಚು ಮಾಡಲಾಗಿದೆ ಮತ್ತು ಅನುಸೂಚಿತ ಜಾತಿಗಳ ಮೀಸಲಾತಿ ಪ್ರಮಾಣವನ್ನು ಶೇಕಡಾ 15ರಿಂದ ಶೇಕಡಾ 17ಕ್ಕೆ ಏರಿಕೆ ಮಾಡಲಾಗಿದೆ. ಮುಂದೆ ಇದು ಊರ್ಜಿತವಾಗುತ್ತದೆಯೇ ಇಲ್ಲವೇ ಎನ್ನುವುದನ್ನುಸರ್ಕಾರದ ಜವಾಬ್ದಾರಿಗೆ ಬಿಡಲಾಗಿದೆ. ಸರ್ಕಾರ ಏನು ಮಾಡಬೇಕೆಂದು ತೀರ್ಮಾನ ಮಾಡಿದೆ. ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ, ಅದರ ಇತಿಮಿತಿಗಳು ಮತ್ತು ಮುಂದೆ ಏನಾಗಬಹುದು ಎನ್ನುವುದನ್ನು ಯೋಚನೆ ಮಾಡದೇ ಯಾವುದೇ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಿಲ್ಲ. ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇದರ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಇದನ್ನು 9ನೇ ಷೆಡ್ಯೂಲ್‌ನಲ್ಲಿ ಸೇರಿಸುವುದು ಸಹ ಅವರ ಜವಾಬ್ದಾರಿಯಾಗಿರುತ್ತದೆ. ಇಷ್ಟೆಲ್ಲ ಜವಾಬ್ದಾರಿಗಳು ಅವರ ಮೇಲೆ ಇದ್ದರೂ ಸಹ ಈ ವಿಧೇಯಕವನ್ನು ನಾವು ಅಂಗೀಕರಿಸಬೇಕೇ ಬೇಡವೇ ಎನ್ನುವ ಅಂಶ ನಮ್ಮ ಮುಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು, "ಈ ವಿಧೇಯಕಕ್ಕೆ ನಮ್ಮ ಒಪ್ಪಿಗೆ ಇದೆ" ಎನ್ನುವ ವಿಚಾರವನ್ನು ನೇರವಾಗಿ ಹೇಳಿದ್ದಾರೆ. ಅವರು ಆ ರೀತಿ ಹೇಳಿದ ಮೇಲೂ ಇಷ್ಟೊಂದು ಸುತ್ತು ಬಳಸಿನ ಚರ್ಚೆಯ ಅವಶ್ಯಕತೆ ಇರಲಿಲ್ಲ. ಇಲ್ಲಿ ಯಾವ ವಿಚಾರದ ಬಗ್ಗೆ ನಾವು ನಮ್ಮ ಅಭಿಪ್ರಾಯವನ್ನು ಮಂಡಿಸಬೇಕಾಗಿದೆ ಅಥವಾ ಒಪ್ಪಿಕೊಳ್ಳಬೇಕಾಗಿದೆ; ಅದನ್ನು ಬಿಟ್ಟು ಬೇರೆಬೇರೆ ಆಯೋಗಗಳು ನೀಡಿರುವ ವರದಿಗಳ ಬಗ್ಗೆಯೇ ಚರ್ಚೆ ನಡೆಯುತ್ತಿದೆ.

(ಮುಂದುವರಿದಿದೆ)

(1232) 27.12.2022 7.20 ಪಿಕೆ:ವಿಕೆ

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು)**

ಬೇರೆ ಬೇರೆ ವಿಚಾರಗಳು ದೊಡ್ಡ ಮಟ್ಟದಲ್ಲಿ ಚರ್ಚೆ ಆಗುತ್ತಿವೆ. ಈ ಮೀಸಲಾತಿ ಪರಿಶಿಷ್ಟ ಜಾತಿ/ವರ್ಗಗಳಿಗೆ ಸಂವಿಧಾನದತ್ತವಾಗಿ ಬಂದಿರುವುದು ಎನ್ನುವುದು ಎಲ್ಲರಿಗೂ ಗೊತ್ತು. ಉಳಿದ

ಮೀಸಲಾತಿಗಳು ಬೇಡಿಕೆಗಳ ಹಿನ್ನೆಲೆಯಲ್ಲಿ ಬಂದಿರುವಂಥದ್ದು. ಪರಿಶಿಷ್ಟ ಜಾತಿ/ವರ್ಗಗಳ ಸಮುದಾಯಗಳು ಹಲವು ಶತಮಾನಗಳಿಂದ ತುಳಿತಕ್ಕೆ ಒಳಗಾಗಿ, ಹಿಂದುಳಿದಿರುವಿಕೆಯ ಕಾರಣದಿಂದ ಬಂದಿರುವಂಥದ್ದು. ಇಂತಹ ಸಂದರ್ಭದಲ್ಲಿ ಅವರಿಗೆ ಮೀಸಲಾತಿಯನ್ನು ಹೆಚ್ಚಿಸಬೇಕಾದ ಒಂದು ಪ್ರಸಂಗ ಬಂದಿದೆ. ಇಂತಹ ಪ್ರಸಂಗಗಳು ಬಂದಾಗ ಸರ್ಕಾರಗಳು ಇದಕ್ಕೆ ಒತ್ತು ಕೊಟ್ಟು ಕೆಲಸ ಮಾಡಬೇಕು. ಕಾಂಗ್ರೆಸ್‌ನವರು ಈ ನಿಟ್ಟಿನಲ್ಲಿ ಏನು ಮಾಡಲಿಲ್ಲ ಎಂದು ನಾವು ಆಪಾದನೆ ಮಾಡಿಲ್ಲ. ಆದರೆ, ಕಾಂಗ್ರೆಸ್‌ನ ಮುಖಂಡರು ಬಿಜೆಪಿಯನ್ನು, ಸಂವಿಧಾನ ವಿರೋಧಿಗಳು, ಮೀಸಲಾತಿಯ ವಿರೋಧಿಗಳು ಎಂದು ಹೇಳಿದರು. ಬಿಜೆಪಿ ಸರ್ಕಾರ ಇವತ್ತು ಮೀಸಲಾತಿಯನ್ನು ಕೊಡುವುದಕ್ಕೆ ಕಂಕಣಬದ್ಧವಾಗಿ ನಿಂತಿದೆ ಎಂದರೆ, ಇವರಲ್ಲಿ ಪರಿವರ್ತನೆಯಾಗಿದೆ; ಇವರೂ ಕೂಡ ನಮ್ಮ ಜೊತೆಯಲ್ಲಿಯೇ ಬರುತ್ತಿದ್ದಾರೆ; ಇದರಿಂದ ನಮಗೂ ಬಹಳ ಸಂತೋಷವಾಗಿದೆ ಎಂದು ಹೇಳಬೇಕಾಗಿತ್ತು. ಸಂವಿಧಾನಕ್ಕೆ 104 ತಿದ್ದುಪಡಿಗಳಾಗಿವೆ; ಕಾಂಗ್ರೆಸ್‌ನವರು ಹೆಚ್ಚು ಕಾಲ ಆಳಿದ್ದರಿಂದ ಅವರು ಹೆಚ್ಚುಬಾರಿ ತಿದ್ದುಪಡಿಗಳನ್ನು ಮಾಡಿದ್ದಾರೆ. ತಿದ್ದುಪಡಿ ಮಾಡುವುದು ಅನಿವಾರ್ಯ, ಸಾಂದರ್ಭಿಕವಾಗಿ ಮಾಡಬೇಕಾದ್ದನ್ನು ಮಾಡಿದ್ದಾರೆ. ಮಾನ್ಯ ಅನಂತ್‌ಕುಮಾರ್ ಹೆಗಡೆಯವರು ಸಂವಿಧಾನದ ಬಗ್ಗೆ ಬಾಯಿ ತಪ್ಪಿ ಮಾತನಾಡಿದರೂ ಎನ್ನುವ ಕಾರಣಕ್ಕೋಸ್ಕರ ಸನ್ಮಾನ್ಯ ಪ್ರಧಾನ ಮಂತ್ರಿಗಳು ಪಾರ್ಲಿಮೆಂಟ್‌ಗೆ ಅವರನ್ನು ಕರೆಸಿ, ನಿಲ್ಲಿಸಿ ಅವರಿಂದ ದೇಶದ ಕ್ಷಮೆ ಕೇಳಿಸಿದರು. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೇ ಡಿಸೆಂಬರ್ ತಿಂಗಳ 4ನೇ ದಿನಾಂಕದಂದು ಕಾಂಗೆಸ್‌ನ ಮುಖಂಡರಾದ ಮಾನ್ಯ ಅಮರೇಗೌಡ ಬೈಯ್ಯಾಪುರರವರು, ಸಂವಿಧಾನವನ್ನು ಬದಲಾಯಿಸಬೇಕು ಎಂದು ಹೇಳಿದರು. ಆ ಸಂದರ್ಭದಲ್ಲಿ ತಾವುಗಳು ಏನಾದರೂ ಮಾತನಾಡಿದ್ದೀರಾ? ಅವರಿಗೆ ಏನಾದರೂ ಉತ್ತರ ಕೊಟ್ಟಿದ್ದೀರಾ? ನೀವು ಅದನ್ನೂ ಕೇಳಿಯೂ ಜಾಣರಂತೆ ವರ್ತಿಸಿದಿರಿ; ಅದು ಬೇರೆ ವಿಚಾರ. ಮಾತೆತ್ತಿದರೆ, ಪರಿಶಿಷ್ಟ ಜಾತಿ/ವರ್ಗಗಳಿಗೆ ಅಥವಾ ಈ ದೇಶದ ತಳ ಸಮುದಾಯಗಳಿಗೆ ನಾವು ಮಾತ್ರ ಸಾಮಾಜಿಕ ನ್ಯಾಯವನ್ನು ಕೊಡಿಸುತ್ತೇವೆ ಎಂದು ಹೇಳುತ್ತೀರಿ. ಹೇಳಿ, ಸಂತೋಷ. ಏಕೆಂದರೆ ನಾವು ಕೇವಲ ಕೇಳುವವರೇ ಹೊರತು, ಕೊಡುವವರಲ್ಲವಲ್ಲ? ಆರ್ಟಿಕಲ್ 370 ತೆಗೆದು ಹಾಕುವವರೆಗೆ ಕಾಶ್ಮೀರದಲ್ಲಿ ಪರಿಶಿಷ್ಟ ಜಾತಿ/ವರ್ಗಗಳವರಿಗೆ ಮೀಸಲಾತಿ ಇತ್ತೇ? ಅದು ನಿಮ್ಮ ಹೊಣೆ ಆಗಿರಲಿಲ್ಲವೇ? ಆರ್ಟಿಕಲ್ 370 ಅನ್ನು ನೀವು ತೆಗೆದು ಹಾಕಿದಿರಾ?

**ಶ್ರೀ ಯು.ಬಿ.ವೆಂಕಟೇಶ್:-** ನಾನು ಮತ್ತು ಮಾನ್ಯ ನಾರಾಯಣ ಸ್ವಾಮಿಗಳು ಒಂದೇ ಗರಡಿಯಲ್ಲಿದ್ದವರು. ಮಾನ್ಯ ನಾರಾಯಣಸ್ವಾಮಿಗಳು ಬಿಜೆಪಿಗೆ ಹೋದಮೇಲೆ . . .

(ಗೊಂದಲ)

**ಸಭಾಪತಿಯವರು:-** ಇದು ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು, ಮಾನ್ಯ ವೆಂಕಟೇಶ್‌ರವರು ಮಾತನಾಡಿದ್ದು ಕಡತಕ್ಕೆ ಹೋಗಬಾರದು ಎಂದು ಸೂಚಿಸಿದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಒಬ್ಬ ಸದಸ್ಯರು ಮಾತನಾಡಬೇಕಾದರೆ ಅದನ್ನು ಕೇಳಿಸಿಕೊಳ್ಳುವ ಸೌಜನ್ಯವಾದರೂ ಇರಬೇಡವೇ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, . . . .

(ಗೊಂದಲ)

**ಸಭಾಪತಿಯವರು:- ಇದು ಯಾವುದೂ ಕಡತಕ್ಕೆ ಹೋಗಬಾರದು.**

**(ಈ ಹಂತದಲ್ಲಿ ಸಭಾಪತಿಯವರು, ಮಾನ್ಯ ಸದಸ್ಯರುಗಳು ಮಾತನಾಡಿದ್ದು ಕಡತಕ್ಕೆ ಹೋಗಬಾರದು ಎಂದು ಸೂಚಿಸಿದರು)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ, ಮಾನ್ಯ ಬೈಯ್ಯಾಪುರರವರು ಸಂವಿಧಾನವನ್ನು ಬದಲಾವಣೆ ಮಾಡಬೇಕು ಎಂದು ಹೇಳಿರುವುದರ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ಅದಕ್ಕೆ, ನಾನು ಸಂವಿಧಾನವನ್ನು ಬದಲಾವಣೆ ಮಾಡಬೇಕೆಂದು ಎಲ್ಲೂ ಹೇಳಿಲ್ಲ, ಕೆಲವು ವಿಚಾರಗಳಲ್ಲಿ ಬದಲಾವಣೆ ಆಗಬೇಕು ಎಂದು ಹೇಳಿದ್ದೇನೆ ಎನ್ನುವ ಸ್ಪಷ್ಟೀಕರಣ ಕೊಟ್ಟಿದ್ದಾರೆ.

**ಸಭಾಪತಿಯವರು:-** ಅದನ್ನು ರೆಕ್ಟಿಫೈ ಮಾಡಿಕೊಳ್ಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯವನ್ನು ಕೊಡುವಂತಹ ಬದ್ಧತೆ ಎಲ್ಲಾ ಸರ್ಕಾರಗಳಿಗೂ ಇರಬೇಕಾಗುತ್ತದೆ. ಸಂವಿಧಾನವನ್ನು ಯಾರು ಗೌರವಿಸುತ್ತಾರೋ ಅವರೆಲ್ಲರೂ ಕೂಡ ಈ ಒಂದು ವ್ಯವಸ್ಥೆಯನ್ನು ಒಪ್ಪಲೇಬೇಕಾಗುತ್ತದೆ. ಇವತ್ತು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ನನಗೆಷ್ಟು ಕ್ರೆಡಿಟ್ ಸಿಗುತ್ತದೆ ಅಥವಾ ನನ್ನ ಪಕ್ಷಕ್ಕೆ ಎಷ್ಟು ಕ್ರೆಡಿಟ್ ಸಿಗುತ್ತದೆ ಎಂದು ಯೋಚಿಸುವುದಲ್ಲ. ನೀವು ಕೊಡುವ ಮೀಸಲಾತಿಯ ಕ್ರೆಡಿಟ್‌ನ ಪಾಲನ್ನು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಇವತ್ತು ನಮ್ಮ ಬದ್ಧತೆಯನ್ನು ಪ್ರದರ್ಶನ ಮಾಡುವಂತಹ ಸಂದರ್ಭ ಬಂದಿದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ನಾವು ಇದರ ಪರವಾಗಿದ್ದೇವೆ ಎಂದು ಹೇಳಿದರು. ಅಂದಮೇಲೆ ಸುತ್ತಿ ಬಳಸಿ, ಬೇರೆ ಬೇರೆ ವಿಚಾರಗಳನ್ನು ತಂದು ಇಲ್ಲಿ ದ್ವಂದ್ವ ಮಾಡುವಂಥದ್ದು ಬೇಡ. ಇದನ್ನು ಜನ ನೋಡುತ್ತಿದ್ದಾರೆ. ಪರಿಶಿಷ್ಟ ಜಾತಿ/ವರ್ಗಗಳು ಯಾವರೀತಿ ಅವರ ಜೀವನದಲ್ಲಿ ಸಂಕಷ್ಟಗಳನ್ನು ಎದುರಿಸಿದ್ದಾರೆ, ಇವತ್ತು ಅವರನ್ನು ಯಾವರೀತಿ ಆ ಸಂಕಷ್ಟದಿಂದ ಪಾರು ಮಾಡಬೇಕು ಎನ್ನುವುದರ ಹಿನ್ನೆಲೆಯಲ್ಲಿ ಇವತ್ತಿನ ಈ ವಿಚಾರ ಬಂದಿದೆ. ಇದರಲ್ಲಿ ಅನೇಕ ವರ್ಷಗಳಿಂದ ಪರಿಶಿಷ್ಟ ಜಾತಿಗೆ ಮೀಸಲಾತಿ ಕೊಡುವಾಗ ಸುಮಾರು 33 ಜಾತಿಗಳಿತ್ತು. ಇವತ್ತು 101 ಜಾತಿಗಳಿವೆ. ಆದರೆ, ಬಹುಕಾಲದಿಂದ ಅವರಿಗೆ ಮೀಸಲಾತಿಯಿಂದ ವಂಚನೆ ಕೂಡ ಆಗಿದೆ. ಪರಿಶಿಷ್ಟ ವರ್ಗದಲ್ಲಿ 9 ಜಾತಿಗಳಿತ್ತು; ಇವತ್ತು 54 ಜಾತಿಗಳಿವೆ. ಯಾವ ಜಾತಿಗಳನ್ನು ಪರಿಶಿಷ್ಟ ಜಾತಿಯ ಒಳಗೆ ಅಥವಾ ಪರಿಶಿಷ್ಟ ಪಂಗಡದ ಒಳಗೆ ಸೇರಿಸಿದರೋ ಅಂದರೆ, ಅವರು ಓಬಿಸಿ ಇರಬಹುದು ಅಥವಾ ಬೇರೆ ಕಡೆ ಇರುವವರಾಗಿದ್ದಿರಬಹುದು, ಅವರುಗಳನ್ನು ಸೇರಿಸಿದಾಗ ಅವರು ಎಲ್ಲಿ ಇದ್ದರೋ ಆ ಮೀಸಲಾತಿಯನ್ನು ಅಲ್ಲಿಯೇ ಬಿಟ್ಟರು. ಆ ಮೀಸಲಾತಿಯನ್ನು ಇಲ್ಲಿಗೆ ಹೊತ್ತು ತರಲಿಲ್ಲ. ಆ ಮೀಸಲಾತಿ ಬಿಟ್ಟು ಬಂದಮೇಲೆ ಅಲ್ಲಿದ್ದ ಓಬಿಸಿಯಲ್ಲಿ ಎಷ್ಟು ಪರ್ಸೆಂಟೇಜ್ ಇತ್ತೋ ಅದು ಹಾಗೆಯೇ ಇದೆ. ಅದು ಈ ಪಟ್ಟಿಗೆ ಬರಲಿಲ್ಲ. ದ್ವಂದ್ವ ಪ್ರಾರಂಭವಾಗಿದ್ದೇ ಇಲ್ಲಿ. ನೀವು ಯಾವ ನಾಲ್ಕು ಜನರಿಗೆ ಒಂದು ತಟ್ಟೆಯಲ್ಲಿ ನಿರ್ದಿಷ್ಟ ಪ್ರಮಾಣದಲ್ಲಿ ಅನ್ನ ಕೊಟ್ಟಿದ್ದಿರೋ ಅದೇ ತಟ್ಟೆಯಲ್ಲಿ 40 ಜನರೂ ಊಟ ಮಾಡಿ ಎಂದು ಹೇಳಿದರೆ ಯಾರ ಹೊಟ್ಟೆಯನ್ನು ತುಂಬಿಸುವುದಕ್ಕೆ ಆಗುತ್ತದೆ? ಹೀಗೆ ಮಾಡುವುದರಿಂದ ಯಾರ ಹೊಟ್ಟೆಯನ್ನು ತುಂಬಿಸಿದಿರಿ? ಇದು ಪ್ರಶ್ನೆಯಾಗಿದೆ. ಅದಕ್ಕಾಗಿ ಇಷ್ಟೆಲ್ಲಾ ಕಾನೂನುಗಳನ್ನು ಮಾಡಬೇಕಾಗಿದೆ. ಇವತ್ತು ಬೇಕಾದಷ್ಟು ಮಾತನಾಡಬಹುದು, ಪ್ರಶ್ನೆ ಅದಲ್ಲ. ಆಯೋಗಗಳು ಬಹಳ ಕಾಲದಿಂದ

ರಚನೆಯಾಗಿದೆ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಸದಾಶಿವ ಆಯೋಗ ರಚನೆಯಾಗಿತ್ತು. ಅದರ ವರದಿ ಬಂದು ಬಹಳ ಕಾಲವಾಗಿದೆ. ಇದುವರೆಗೂ ಅದರ ಬಗ್ಗೆ ಯಾರೂ ಮಾತನಾಡುತ್ತಿಲ್ಲ ಏಕೆ? ಅದು ಕೂಡ ಇವತ್ತು ಪೆಂಡಿಂಗ್ ಇದೆ. 5 ವರ್ಷಗಳ ಕಾಲ ಪೂರ್ಣಾವಧಿ ಕಾಂಗ್ರೆಸ್ ಸರ್ಕಾರ ಇತ್ತು. ಸಮ್ಮಿಶ್ರ ಸರ್ಕಾರವೂ ಇತ್ತು. ಆಗ ಇದರ ಬಗ್ಗೆ ಒಂದು ದಿವಸವೂ ಚಕಾರವೆತ್ತಲಿಲ್ಲ. ನಾವು ಇವತ್ತು ಅದರ ಬಗ್ಗೆ ಮಾತನಾಡುತ್ತೇವೆ. ಆ ವರದಿ ಬಂದು 20 ವರ್ಷಗಳಾತ್ತಿವೆ. ಇವತ್ತಿಗೂ ಅದರ ಬಗ್ಗೆ ಚಕಾರ ಎತ್ತುತ್ತಿಲ್ಲ. ಆದರೆ ಬೀದಿಯಲ್ಲಿ ಹೋರಾಟ ನಡೆಯುತ್ತಿದೆ. ಅದಕ್ಕೆ ಯಾರು ಉತ್ತರ ಕೊಡಬೇಕು? ಎರಡು ವರ್ಷ ತಡವಾಯಿತು, ಅದಕ್ಕೆ ಕಾರಣವೇನು ಎಂದಿಷ್ಟನ್ನು ಮಾತ್ರ ಕೇಳುತ್ತೀರಿ. ಆದರೆ, 20 ವರ್ಷದಿಂದ ವಿಳಂಬವಾಗಿದ್ದಕ್ಕೆ ಕಾರಣ ಕೊಡಿ. ಅಲ್ಲೂ ಕೂಡ ಇತ್ಯರ್ಥ ಆಗಬೇಕಿದೆ. ನಮ್ಮ ಸರ್ಕಾರ ಅದಕ್ಕೂ ಕೂಡ ಬದ್ಧವಾಗಿದೆ. ಇತ್ಯರ್ಥ ಮಾಡಬೇಕು; ಅದರ ಅಂತ್ಯವನ್ನು ಕಾಣಬೇಕು ಎನ್ನುವುದು ನಮ್ಮ ಸರ್ಕಾರದ ನಿರ್ಧಾರವಾಗಿದೆ. ಅದನ್ನು ಒಂದು ವೇಳೆ ನಾಳೆ ತಂದರೆ, ನೀವು, ಚುನಾವಣೆಯ ಹಿನ್ನೆಲೆಯಲ್ಲಿ ತಂದಿದ್ದೀರಿ ಎಂದು ಕೇಳಬಹುದು. ನೀವೇನಾದರೂ ಕೇಳಬಹುದು, ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಮೀಸಲಾತಿ ಕೊಟ್ಟರೋ ಇಲ್ಲವೋ ಎನ್ನುವುದಷ್ಟೇ ಇಲ್ಲಿ ಮುಖ್ಯವಾಗುತ್ತದೆ. ಅದೂ ಕೂಡ ಇವತ್ತು ಇತ್ಯರ್ಥ ಆಗಬೇಕು. ಇಂತಹ ಪರಿಸ್ಥಿತಿಯಲ್ಲಿ ಇವತ್ತು ದ್ವಂದ್ವ ಮಾಡದೇ, ಏನು ಈ ತಳ ಸಮುದಾಯಗಳಿಗೆ ಕೊಡಬೇಕಾಗಿದೆಯೋ ಅದನ್ನೂ ಕೊಡುವ ಕೆಲಸವನ್ನು ಮಾಡಬೇಕು. ಕ್ರೆಡಿಟ್ ನನ್ನ ಪಕ್ಷಕ್ಕೆ ಹೋಗುತ್ತದೆಯೋ ಅಥವಾ ಅವರ ಪಕ್ಷಕ್ಕೆ ಹೋಗುತ್ತದೆಯೋ; ನಾನು ಮಾತನಾಡಿದ್ದಕ್ಕೆ ಸಿಕ್ಕಿತೋ ಅಥವಾ ಅವರು ಮಾತನಾಡಿದ್ದಕ್ಕೆ ಸಿಕ್ಕಿತೋ ಎನ್ನುವುದು ಬೇರೆ ವಿಚಾರ. ಆದರೆ ಈ ಸಮುದಾಯಗಳಿಗೆ ಕಾಡಿಸುವುದನ್ನು-ಬೇಡಿಸುವುದನ್ನು ನಿಲ್ಲಿಸಬೇಕು. ನಾವು ಮಾತೆತ್ತಿದರೆ ಸಂವಿಧಾನದ ಬಗ್ಗೆ ಹೇಳುತ್ತೇವೆ; ಮಾನ್ಯ ಅಂಬೇಡ್ಕರ್‌ರವರ ಬಗ್ಗೆ ಮಾತನಾಡುತ್ತೇವೆ. ಯಾರು ಯಾರು ಏನೇನು ಮಾಡಿದರು ಎಂದು ಅವರೇ ಹೇಳಿಬಿಟ್ಟಿದ್ದಾರೆ. ಅವರಿಗೆ ಒಂದು ಸಲ ನೋವು ಆಗಿ, "ಕಾಂಗ್ರೆಸ್ ಸುಡುವ ಮನೆ" ಎಂದು ಹೇಳುತ್ತಾರೆ. ಏಕೆ ಹೇಳಿದರು? ಬೇಸರವಾಗಿ ಅವರು ಹೇಳಿದರು, ನೋವಿನಿಂದ ಹೇಳಿದರು. ಅವರು ಎರಡು ಸಲ ಸೋತಿದ್ದಕ್ಕೆ ಕಾರಣವೇನು ಎಂದು ಕೇಳಿದರೆ, ನಾವೇನು ಮಾಡುವುದಕ್ಕೆ ಆಗುತ್ತದೆ? ಪ್ರಜಾಪ್ರಭುತ್ವ ವ್ಯವಸ್ಥೆಯೇ ಹಾಗಿದೆ ಎಂದು ಹೇಳುತ್ತೀರಿ. ಆದರೆ ಅವರು ಚುನಾವಣೆಗೆ ನಿಂತಾಗ ಅವರ ವಿರುದ್ಧವಾಗಿ ಒಬ್ಬ ಅಭ್ಯರ್ಥಿಯನ್ನು ನಿಲ್ಲಿಸುತ್ತಾರೆ. ದೇಶ

ಇವತ್ತು ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ದೇವರು ಎಂದು ಹೇಳುತ್ತದೆ. ಆದರೆ ಮಾನ್ಯ ಅಂಬೇಡ್ಕರ್‌ರವರ ವಿಚಾರದಲ್ಲಿ ಎಷ್ಟೋ ಕಡೆ ಅಡ್ಜೆಸ್ಟ್‌ಮೆಂಟ್‌ಗಳಾಗುತ್ತವೆ. ಅವರು ಸಂವಿಧಾನ ಕರ್ತೃ. ಅವರ ವಿರುದ್ಧ ಅಭ್ಯರ್ಥಿಯನ್ನು ಹಾಕುವುದಿಲ್ಲ ಎಂದು ಕಾಂಗ್ರೆಸ್ ಪಕ್ಷ ನಿರ್ಧಾರ ತೆಗೆದುಕೊಂಡಿದ್ದರೆ ಇವತ್ತು ಎಷ್ಟೋ ಚೆನ್ನಾಗಿ ಇರುತ್ತಿತ್ತು. ಆ ಆಪಾದನೆ ಕೂಡ ನಿಮ್ಮ ಮೇಲೆ ಬರುತ್ತಿರಲಿಲ್ಲ. ಇದು ಬೇರೆ ವಿಷಯ. ಮಾನ್ಯ ರಮೇಶ್‌ಕುಮಾರ್‌ರವರು ಸದನದಲ್ಲಿ ಒಂದು ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಂಬೇಡ್ಕರ್‌ರವರ ವಿಚಾರದಲ್ಲಿ ಕಾಂಗ್ರೆಸ್ ಕೂಡ ಬಹಳ ತಪ್ಪು ಮಾಡಿದೆ, ಅವರನ್ನು ನಾವು ಹಾಗೆಯೇ ಗೆಲ್ಲಿಸಬಹುದಾಗಿತ್ತು, ಅವರು ಸತ್ತಾಗ ದೆಹಲಿಯಲ್ಲಿ ಅವರ ಅಂತ್ಯಕ್ರಿಯೆಗೆ ಜಾಗ ಕೊಡಬೇಕಾಗಿತ್ತು; ಅದನ್ನು ಕೊಟ್ಟಿಲ್ಲ ಎಂದು ಹೇಳಿದ್ದರು.

(ಮುಂದು .. . )

(1233) 27-12-2022 7.30 ಡಿಎಸ್-ವಿಕೆ

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):-**

ಅವರನ್ನು ಬಾಂಬೆಗೆ ತೆಗೆದುಕೊಂಡು ಹೋಗುವುದಕ್ಕೂ ನಾವು ಅವರಿಗೆ ಸಹಾಯ ಮಾಡಿಲ್ಲ, ಅದನ್ನೆಲ್ಲಾ ಅವರೇ ಹೇಳಿಕೊಂಡಿದ್ದಾರೆ. ಇಂಥದ್ದೆಲ್ಲಾ ಇರತಕ್ಕಂಥ ಈ ಸಂದರ್ಭದಲ್ಲಿ ನಾವು ಹಿಂದಿನ ಚರಿತ್ರೆಗಳನ್ನು ನಾವು ಕೆಣಕುವುದು ಬೇಡ. ಆ ಕಾರಣದಿಂದಲೇ ನಾನು ತಮ್ಮೆಲ್ಲರಲ್ಲೂ ಮನವಿ ಮಾಡುತ್ತೇನೆ. ಚರ್ಚೆ ಬಿಡಿ, ಈಗ ಆಗಿರುವಂಥದ್ದಕ್ಕೆ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಅದಕ್ಕೆ ನಾವೆಲ್ಲರೂ ಸೇರಿ ಸಹಕಾರ ಕೊಡೋಣವೆನ್ನುವ ಮಾತನ್ನು ಹೇಳುತ್ತಾ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ, ನಮಸ್ಕಾರ.

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಇಲ್ಲಿ ಮಾತನಾಡುತ್ತಾ ನಾವು ಇದನ್ನು ತಂದಿದ್ದೇವೆಂದು

ಹೇಳುತ್ತಿದ್ದರು. ಅವರು ಒಂದು ಮಾತನ್ನು ತಿಳಿದುಕೊಳ್ಳಬೇಕು. ನಾಗಮೋಹನ್‌ದಾಸ್ ಸಮಿತಿಯು ಸಮ್ಮಿಶ್ರ ಸರ್ಕಾರ ಇದ್ದಾಗ ರಚನೆಯಾಗುತ್ತದೆ. 2020ರಲ್ಲಿ ವರದಿಯನ್ನು ಕೊಡುತ್ತಾರೆ. ಎರಡು ವರ್ಷ ಇಟ್ಟುಕೊಳ್ಳುತ್ತಾರೆ ಹಾಗೂ ಇಷ್ಟೊಂದು ಚರ್ಚೆಯಾಗಿದೆ. ಆದರೆ ಈ ವರದಿಯನ್ನು ಅನುಷ್ಠಾನಗೊಳಿಸಬೇಕೆಂದು ಸರ್ವಪಕ್ಷಗಳ ಸಭೆ ನಡೆದಾಗ ನಾವೆಲ್ಲರೂ ಸೇರಿ ರಾಜ್ಯ ಮಟ್ಟದಲ್ಲಿ ತೀರ್ಮಾನವಾಗಬೇಕೆಂದು ತೀರ್ಮಾನವಾಗುತ್ತದೆ. ನಮ್ಮ ಸಲಹೆಗಳನ್ನು ತೆಗೆದುಕೊಂಡು ಅವರು ಮಾಡುತ್ತಾರೆ. ಆದರೆ ಮರುದಿನ ಪತ್ರಿಕೆಯಲ್ಲಿ ನಮ್ಮ ಸಾಧನೆ ಎಂದು ದೊಡ್ಡ ದೊಡ್ಡ ಜಾಹೀರಾತು ಕೊಡುತ್ತಾರೆ. ಈ ಸಂಕುಚಿತ ಮನೋಭಾವದಿಂದ ಹೊರಗಡೆ ಬರಬೇಕೆಂದು ನಾನು ಆಡಳಿತ ಪಕ್ಷವನ್ನು ಕೇಳುತ್ತಿದ್ದೇನೆ. ರಾಜ್ಯದಲ್ಲಿ ಒಟ್ಟಾರೆಯಾಗಿ ಸರ್ವಪಕ್ಷಗಳ ತೀರ್ಮಾನವಾದರೆ ಅದು ರಾಜ್ಯದ ತೀರ್ಮಾನವಾಗುತ್ತದೆ, ಕನ್ನಡಿಗರ ತೀರ್ಮಾನವಾಗುತ್ತದೆ. ಎಸ್‌ಸಿ-ಎಸ್‌ಟಿ ವಿಚಾರದಲ್ಲಿ ಇವರು ಮಾಡುತ್ತಿರುವ ರಾಜಕಾರಣವನ್ನು ಬಿಡಬೇಕು ಎಂದು ತಮ್ಮ ಮೂಲಕ ನಾನು ಮನವಿ ಮಾಡುತ್ತಿದ್ದೇನೆ. ಗಡಿ ಬಗ್ಗೆ ಮಾತನಾಡಿದಾಗ ಸರ್ವಪಕ್ಷಗಳು ಸೇರಿ ಒಂದು ತೀರ್ಮಾನವನ್ನು ಮಾಡಿದಾಗ ಅದು ರಾಜ್ಯದ ತೀರ್ಮಾನವಾಗುತ್ತದೆ ಹೊರತು ಯಾವುದೇ ಪಕ್ಷದ ತೀರ್ಮಾನವಾಗುವುದಿಲ್ಲ. ಎಸ್‌ಸಿ-ಎಸ್‌ಟಿ ಗಳಿಗೆ ಮೀಸಲಾತಿಯನ್ನು ಕೊಡಬೇಕು. ಎಸ್‌ಸಿ ಗೆ ಶೇಕಡ 15 ಇರುವುದನ್ನು ಶೇಕಡ 17 ಮಾಡಬೇಕು ಮತ್ತು ಎಸ್‌ಟಿ ಗೆ ಶೇಕಡ 3 ಇರುವುದನ್ನು ಶೇಕಡ 7 ಮಾಡಬೇಕೆನ್ನುವ ಒತ್ತಾಯವನ್ನು ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಮಾಡಿಕೊಂಡು ಬಂದಿರುವುದು ನಿಜ ಹಾಗೂ ಅದನ್ನು ಸ್ವಾಗತ ಮಾಡಿರುವುದು ಸಹ ನಿಜ. ಆದರೆ ಇವರು ಅದರಲ್ಲಿ ರಾಜಕಾರಣ ಮಾಡತಕ್ಕಂಥಾದ್ದು ಅದು ಎಸ್‌ಸಿ-ಎಸ್‌ಟಿ ಜನಾಂಗಕ್ಕೆ ಮಾಡತಕ್ಕಂಥ ಅಪಮಾನವೆಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ರಾಜಕಾರಣ ಬೇಡ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಅವರನ್ನು ಕೇಳುವುದೇನೆಂದರೆ, ಅವರು ಎಲ್ಲವನ್ನು ಮಾಡಿದ್ದಾರೆ. ಅದು ಶೆಡ್ಯೂಲ್-9 ಗೆ ಬರುವ ರೀತಿಯಲ್ಲಿ ಪ್ರಯತ್ನ ಮಾಡಿದ್ದೇ ಆದರೆ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ನಾವೆಲ್ಲರೂ ಒಮ್ಮತದಿಂದ ಸಹ ಚರ್ಚೆಯೇ ಇಲ್ಲದೇ ಸ್ವಾಗತ ಮಾಡುತ್ತಿದ್ದೆವು. ಇವರು ಎಲ್ಲೋ ಒಂದು ಕಡೆ ಇನ್ನು ಮೂರು ತಿಂಗಳುಗಳಲ್ಲಿ ಚುನಾವಣೆಯನ್ನಿಟ್ಟುಕೊಂಡು ರಾಜಕೀಯ ಗಿಮ್ಮಿಕ್ ಮಾಡಲಿಕ್ಕೆ ಹೊರಟ್ಟಿದ್ದಾರಲ್ಲಾ, ಒಂದು ವೇಳೆ

ಎಸ್‌ಸಿ–ಎಸ್‌ಟಿ ಗೆ ಅನ್ಯಾಯವಾದರೆ ಅವರೇ ಆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಈ ರಾಜ್ಯದ ಜನ ನಿಮಗೆ ಛೀಮಾರಿಯನ್ನು ಹಾಕುತ್ತಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಏಕೆಂದರೆ ಕಾಂಗ್ರೆಸ್ ಪಕ್ಷದ ವಿಚಾರ ಬಂದಾಗ ಮಾನ್ಯ ನಾರಾಯಣಸ್ವಾಮಿಯವರು ಸುತ್ತಿಬಳಸಿ ಮಾತನಾಡುತ್ತಾರೆ. ಅವರು ಕಾಶ್ಮೀರದವರೆಗೂ ಹೋಗಿದ್ದರು, ನಾನು ಕಾಶ್ಮೀರದವರೆವಿಗೂ ಹೋಗಬೇಕಾಗಿಲ್ಲ. ಈ ದೇಶಕ್ಕೆ ಅಂಬೇಡ್ಕರ್‌ರವರು ಕೊಟ್ಟಿರುವಂಥ ಸಂವಿಧಾನವನ್ನು ಮನಃಪೂರ್ವಕವಾಗಿ ಒಪ್ಪಿಕೊಂಡವರು ಯಾರಾದರೂ ಇದ್ದರೆ ಅದು ಕಾಂಗ್ರೆಸ್‌ನವರು ಎನ್ನುವ ಮಾತನ್ನು ಹೇಳುತ್ತೇನೆ. **XXX** ಏಕೆಂದರೆ ಶ್ರೀ ರಾಮಾಜೋಯಿಸ್‌ರವರು ಸುಪ್ರೀಂ ಕೋರ್ಟ್...... ಸಂವಿಧಾನಕ್ಕೆ 73, 74ನೇ ತಿದ್ದುಪಡಿಯನ್ನು ತಂದಾಗ ಶ್ರೀ ರಾಮಾಜೋಯಿಸ್‌ರವರು ಆವತ್ತು ವಿರೋಧವನ್ನು ಮಾಡಿದರು. (ಗೊಂದಲ) ನಾನು ಮುಕ್ತಾಯ ಮಾಡುತ್ತೇನೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ನಾಗರಾಜುರವರು ಏನಾದರೂ ಮಾತನಾಡಬಾರದು. ದಯವಿಟ್ಟು ಅದನ್ನು ಕಡತದಿಂದ ತೆಗೆಯಬೇಕು.

**ಸಭಾಪತಿಯವರು:–** ವಿಧೇಯಕದ ಮೇಲೆ ಮಾತನಾಡಿ ಎಂದು ನಾನು ಹೇಳುತ್ತೇನೆ. ಆ ಪಕ್ಷ ಈ ಪಕ್ಷ ಎಂದು ವಿರೋಧ ಜಾಸ್ತಿ ಬರುತ್ತದೆ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೆ, ಈ ವಿಧೇಯಕ ಕರ್ನಾಟಕದ ವಿಧೇಯಕ. ಸರ್ವಪಕ್ಷದಲ್ಲಿ ತೀರ್ಮಾನ ಆಗಿರುವಂಥ ವಿಧೇಯಕ. ಸರ್ವಪಕ್ಷಗಳಲ್ಲಿ ಆಗಿರುವಂಥ ವಿಧೇಯಕವನ್ನು ಅವರು ಇದು ನಮ್ಮ ವಿಧೇಯಕ, ಇಷ್ಟು ವರ್ಷ ಕಾಂಗ್ರೆಸ್ ಪಕ್ಷದವರು ಏನು ಮಾಡಿದರು ಎಂದು ಕೇಳಿದರೆ ಅದಕ್ಕೆ ಏನು ಅರ್ಥ?

---

**XXX ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, **XXX** ತಾವು ಇದರ ಬಗ್ಗೆ ಹೇಳಬೇಕು.

**ಸಭಾಪತಿಯವರು:-** **ಅದನ್ನು ಕಡತದಿಂದ ತೆಗೆದು ಹಾಕುತ್ತೇನೆ**.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು ಮುಕ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ನಾಗರಾಜುರವರೆ, ನೀವು ಬಹಳ ಚೆನ್ನಾಗಿ ಮಾತನಾಡುತ್ತೀರಿ ಎಂದು ಅವಕಾಶ ಕೊಟ್ಟರೆ ನೀವು ಈ ರೀತಿ ಅಡ್ಡಾಡಿ ಮಾತನಾಡುತ್ತೀರಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ೩೦ ಸೆಕೆಂಡ್ ಸಮಯ ಕೊಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಭಾರತೀಯ ಜನತಾ ಪಕ್ಷ ಒಳ್ಳೆಯದು ಎಂದು ಅವರು ಹೇಳಬೇಕೇನು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರು ಅದನ್ನು ಸ್ವಾಗತ ಮಾಡಿದ್ದಾರೆಂದು ಹೇಳಿದ್ದಾರೆ. ಪುನಃ ಇಂತಹದ್ದನ್ನೆಲ್ಲಾ ಮಾಡಿ ಪೂರ್ತಿ ಹೆಚ್ಚು-ಕಡಿಮೆ ಆಗಿಬಿಡುತ್ತದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ನಾನು conclude ಮಾಡುತ್ತೇನೆ. ಈ ವಿಧೇಯಕವನ್ನು ಸರ್ವ ಪಕ್ಷಗಳ ತೀರ್ಮಾನದಿಂದ ತಂದಿರುವುದು ನಿಜ ತಾನೆ. ಹಾಗಿರಬೇಕಾದರೆ ಈ ಶ್ರೇಯಸ್ಸು ರಾಜ್ಯದ ಕನ್ನಡಿಗರಿಗೆ ಸೇರಬೇಕಾಗುತ್ತದೆ. ಆದರೆ ಅವರು ನಾವು ಮಾಡಿದ್ದೇವೆ, ೫೦ ವರ್ಷಗಳಿಂದ ನೀವು ಮಾಡಿಲ್ಲವೆಂದು ಹೇಳುವುದು ಎಷ್ಟು ಸರಿ? ಅದನ್ನು ನಾನು ಒಪ್ಪುತ್ತಿಲ್ಲ. ಈ ವಿಧೇಯಕವನ್ನು ನಾವು ಸ್ವಾಗತ ಮಾಡುತ್ತೇವೆ ಮತ್ತು ಮುಂದಿನ ದಿನಗಳಲ್ಲಿ ಇದರಲ್ಲಿ ಏನಾದರೂ Court ಒಪ್ಪದೇ ಇದ್ದರೆ ಅದರ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ.

---

**XXX ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ**

**ಶ್ರೀ ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೆ, ಇದು ಶೆಡ್ಯೂಲ್-9ರಲ್ಲಿ ಸೇರಿದರೆ ಮಾತ್ರ ನಾವು ಸ್ವಾಗತ ಮಾಡುತ್ತೇವೆ.

**ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 2022 ನ್ನು ನಾನು ಸ್ವಾಗತ ಮಾಡುತ್ತೇನೆ. ಎಸ್‌ಸಿ ಗೆ ಶೇಕಡ 15 ಇರುವುದನ್ನು ಶೇಕಡ 17 ಮಾಡಬೇಕು ಮತ್ತು ಎಸ್‌ಟಿ ಗೆ ಶೇಕಡ 3 ಇರುವುದನ್ನು ಶೇಕಡ 7 ಮಾಡಿದ್ದಾರೆ. ಇವರು ಎಸ್‌ಸಿ-ಎಸ್‌ಟಿ ಬಗ್ಗೆ ಮಾತನಾಡುತ್ತಿದ್ದಾರೆ. ಎಸ್‌ಸಿ-ಎಸ್‌ಟಿ ಗೆ ಇವರು ಸಹಾಯ ಮಾಡುತ್ತಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈಗ ನನ್ನ ಕಳಕಳಿ ಏನೆಂದರೆ, 2019 ರ ಚುನಾವಣೆಯಲ್ಲಿ Koli ಸಮಾಜವನ್ನು ಎಸ್‌ಟಿ ಗೆ ಸೇರಿಸುತ್ತೇವೆಂದು ನಾನು ರಕ್ತದಲ್ಲಿ ಬರೆದುಕೊಡುತ್ತೇವೆಂದು ಹೇಳಿ ಬಂದಿರುವವರು ಈ ಸದನದಲ್ಲಿ ಈ ಪಕ್ಷದಲ್ಲಿದ್ದಾರೆ. ಆ ರೀತಿ ಇದು ಆಗಬಾರದು. ಏಕೆಂದರೆ, ಈಗ ವಿಧೇಯಕವನ್ನು ತಂದಿದ್ದಾರೆ. ಈ ವಿಧೇಯಕ ನಾಳೆ ಶಿಕ್ಷಣಕ್ಕಾಗಲಿ, ಯಾವುದೇ ಹುದ್ದೆಗಳಿಗಾಗಲಿ ತೆಗೆದುಕೊಂಡ ಮೇಲೆ ಯಾರಾದರೂ ಕೋರ್ಟ್‌ಗೆ ಹೋಗಿ ಇದು ಶೆಡ್ಯೂಲ್-9 ರಲ್ಲಿ ಬಂದಿಲ್ಲವೆಂದು ಅಪೀಲು ಹೋದರೆ ಶಿಕ್ಷಣ ಮಾಡಿದವರು, ಹುದ್ದೆ ತೆಗೆದುಕೊಂಡವರ ಗತಿ ಏನು? ನಾವು ಇದನ್ನು ಮಾಡುವುದಕ್ಕೆ ವಿರೋಧವೇನು ಇಲ್ಲ. ಎಲ್ಲರೂ ಒಪ್ಪಿಗೆ ಕೊಟ್ಟಿದ್ದೇವೆ. ಆದರೆ ಇದನ್ನು ಮಾಡಬೇಕಾದರೆ ಶೆಡ್ಯೂಲ್-9 ರಲ್ಲಿ ಹಾಕಿಕೊಂಡು ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ, ಇಲ್ಲಿ ರಾಜ್ಯ ಸರ್ಕಾರ ಒಂದೇ ಇದೆ, ಕೇಂದ್ರ ಸರ್ಕಾರವು ಒಂದೇ ಇದೆ. ಇಷ್ಟು ತರಾತುರಿಯಲ್ಲಿ ಮಾಡುವ ಅವಶ್ಯಕತೆ ಇದೆಯಲ್ಲಾ ಅದಕ್ಕೆ ಸ್ವಲ್ಪ ಸಮಯವನ್ನು ತೆಗೆದುಕೊಂಡು ಶೆಡ್ಯೂಲ್-9 ರಲ್ಲಿ ಹಾಕಿ ಮಾಡಿದರೆ ಎಲ್ಲರಿಗೂ ಉತ್ತಮವಾದ ಸೌಲಭ್ಯ ಸಿಗುತ್ತದೆ ಎನ್ನುವ ಕಳಕಳಿ ಇದೆ. ಇವರು ಇತ್ತೀಚೆಗೆ ನಾಗಮೋಹನ್ ದಾಸ್ ರವರ ವರದಿ ಆಧಾರದ ಮೇಲೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇವರು ಎಷ್ಟು ಮೀಸಲಾತಿಯನ್ನು ಹೆಚ್ಚು ಮಾಡುತ್ತಿದ್ದಾರೆ, ಈಗ ರಾಜ್ಯದ ತುಂಬಾ ಅಲ್ಲ, ಸದಾಶಿವ ಆಯೋಗದ್ದು protest ನೆಡೆದಿದೆ. ಆ ಸದಾಶಿವ ಆಯೋಗದ ವರದಿಯನ್ನು ಏಕೆ ಇದರಲ್ಲಿ ಪರಿಗಣಿಸಿಲ್ಲ. ಪರಿಗಣಿಸಬಹುದಾಗಿತ್ತಲ್ಲವೇ? ಅದನ್ನು ಪರಿಗಣಿಸಿ

ಮೀಸಲಾತಿ ಕೊಟ್ಟರೆ ಎಲ್ಲರಿಗೂ ಉಪಯೋಗವಾಗುತ್ತಿತ್ತು ಎನ್ನುವುದು ನನ್ನ ಭಾವನೆ. ಅದಕ್ಕೆ ಅವರು ಮಾಡಿದ್ದು, ನಾವು ಮಾಡಿದ್ದು ಎಂದು ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ. ಯಾರೇ ಮಾಡಿದರೂ ಸಮಾಜಕ್ಕೆ ಒಳ್ಳೆಯದ್ದನ್ನು ಮಾಡಿದರೆ ಎಲ್ಲರ ಸಹಕಾರ ಇರುತ್ತದೆ. ಸಮಾಜಕ್ಕೆ ಮೋಸ ಮಾಡಿದರೆ ಯಾರು ಸಹಕಾರ ಮಾಡುವುದಿಲ್ಲ. ಸದಾಶಿವ ಆಯೋಗದ ವರದಿಯನ್ನು ಇದರಲ್ಲಿ ಪರಿಗಣಿಸಿ ಜಾರಿಗೆ ತಂದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 2022 ನ್ನು ಸರ್ಕಾರ ಈಗ ಮಂಡಿಸಿದೆ. ಕೆಳಮನೆಯಲ್ಲಿ ಈ ವಿಧೇಯಕ ಪಾಸ್ ಆಗಿ ಬಂದಿದೆ. ನಾಗಮೋಹನ್ ದಾಸ್ ವರದಿಯ ಆಧಾರದ ಮೇಲೆ ಮತ್ತು ಸದಾಶಿವ ಆಯೋಗದ ವರದಿಯ ಆಧಾರದ ಮೇಲೆ ಸರ್ಕಾರ ಮಂಡಿಸಿದೆ ಎಂದು ಹೇಳಿದ್ದಾರೆ. ಈ ವರದಿಯ ಒಂದು ಕಾಪಿ ನನಗೆ ಚರ್ಚೆ ಮಾಡುವುದಕ್ಕೆ ಬೇಕು ಎಂದು ಕಾನೂನು ಇಲಾಖೆಯಲ್ಲಿ ನಾನು ಕೇಳಿದೆ. ಆದರೆ ಕಾನೂನು ಇಲಾಖೆಯಲ್ಲಿ ನನಗೆ ಈ ವರದಿಯೇ ಸಿಗಲಿಲ್ಲ. ಅಂದರೆ, ಈ ವರದಿಯನ್ನು ಬಹಿರಂಗ ಪಡಿಸಿದ್ದಾರೆಯೋ ಅಥವಾ ಇಲ್ಲವೋ? ಇದನ್ನು ಸಾರ್ವಜನಿಕ ಚರ್ಚೆಗೆ ಬಿಟ್ಟಿದ್ದಾರೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಸರ್ವಪಕ್ಷ ಸಭೆಯನ್ನು ಮಾನ್ಯ ಸಚಿವರು ಕರೆದಿದ್ದಾರೆ. ಸರ್ವಪಕ್ಷ ಸಭೆಯ ಚರ್ಚೆಯಲ್ಲಿ ನಾನು ಭಾಗಿಯಾಗಿದ್ದೆ. ಅಲ್ಲಿ ಕೆಲವು ವಿಷಯಗಳ ಬಗ್ಗೆ ಚರ್ಚೆಯಾಗಿತ್ತು ನಿಜ. ಆದರೆ ಆ ಸಭೆಯಲ್ಲಿ ನಿರ್ಣಯ ಏನಾಗಿತ್ತು?

(ಮುಂದು)

(1234) 27/12/2022/7:40/ಎಸ್‌ಪಿಆರ್-ಬಿಎನ್‌ಎಸ್(ಜಿಆರ್)

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು):-**

ಈ ಒಂದು ತಿದ್ದುಪಡಿಯನ್ನು ತರಬೇಕಾದರೆ, ಅನುಚ್ಛೇದ (9) ರಲ್ಲಿ ಇದನ್ನು ಸೇರಿಸುವುದಕ್ಕೆ ವಿಶೇಷವಾದ ಸದನವನ್ನು ಕರೆದು, ಕೆಳಮನೆ ಮತ್ತು ಮೇಲ್ಮನೆ – ಎರಡೂ ಮನೆಗಳ ವಿಶ್ವಾಸವನ್ನು

ತೆಗೆದುಕೊಂಡು, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರದವರು ಇದಕ್ಕೆ ಸಮ್ಮತಿಯನ್ನು ಸೂಚಿಸುತ್ತಾರೋ ಅಥವಾ ಇಲ್ಲವೋ ಎನ್ನುವುದನ್ನು ಪರಿಗಣಿಸಿ, ನಂತರದಲ್ಲಿ ಈ ವಿಧೇಯಕವನ್ನು ಮಂಡಿಸಬೇಕಾಗಿತ್ತು ಎಂದು ಅವತ್ತಿನ ದಿವಸ ಈ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು. ಇದರಲ್ಲಿ ಮೊಟ್ಟಮೊದಲನೇಯದಾಗಿ ಶ್ರೀ ನಾಗಮೋಹನ್‌ದಾಸ್ ಆಯೋಗದ ವರದಿಯನ್ನು ನಮಗೆ ನೀಡುತ್ತಿಲ್ಲ. ಸರ್ವ ಪಕ್ಷಗಳ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಕ್ಕೆ ಸರ್ಕಾರವು ಹಿಂದೆ ಸರಿಯುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಳ ಮಾಡುವುದಕ್ಕೆ ಯಾವುದೇ ಅಭ್ಯಂತರವಿಲ್ಲ ಎಂಬುದಾಗಿ ನಾವು ಸರ್ವ ಪಕ್ಷಗಳ ಸಭೆಯಲ್ಲಿ ಹೇಳಿದ್ದೇವೆ. ಇವತ್ತಿನ ದಿವಸ ನಮ್ಮ ಪಕ್ಷ ಮೀಸಲಾತಿಯನ್ನು ಹೆಚ್ಚಳ ಮಾಡುವುದಕ್ಕೆ ಬದ್ಧವಾಗಿದೆ. ಕೆಳಮನೆಯಲ್ಲಿ ನಮ್ಮ ಪಕ್ಷದ ಎಲ್ಲಾ ಸದಸ್ಯರು ಈ ರೀತಿಯಾಗಿ ಮಾಡಿದ್ದಾರೆ. ಸದಾಶಿವ ಆಯೋಗದ ವರದಿಯ ಬಗ್ಗೆ ನಾನು ಕೆಲವು ಆಕ್ಷೇಪಣೆಗಳನ್ನೂ ಸಹ ಮಾಡಿದ್ದೆನು. ಡಾ॥ ವೈ.ಎ.ನಾರಾಯಣಸ್ವಾಮಿ ಹಾಗೂ ಶ್ರೀ ಅರವಿಂದ ಕುಮಾರ ಅರಳಿ ರವರುಗಳು ಈ ಬಗ್ಗೆ ಈಗಾಗಲೇ ಉಲ್ಲೇಖಿಸಿದ್ದಾರೆ. ಸದಾಶಿವ ಆಯೋಗದ ವರದಿಯು ಬಹಳ ವರ್ಷಗಳಿಂದ ಸರ್ಕಾರದ ಬಳಿ ಇದೆ. ಇದನ್ನು ನಾವು ಒಪ್ಪಬೇಕು ಎನ್ನುವ ರೀತಿಯಲ್ಲಿ ನಾಗಮೋಹನ್‌ದಾಸ್ ಆಯೋಗದ ವರದಿಯಲ್ಲಿ ಒಂದು ಶಿಫಾರಸ್ಸು ಮಾಡಲಾಗಿತ್ತು ಎಂಬುದಾಗಿ ಮಾಜಿ ಮುಖ್ಯಮಂತ್ರಿಗಳಾದ ಹಾಗೂ ಆಗಿನ ಜೆ.ಡಿ.(ಎಸ್) ಪಕ್ಷದ ಅಧ್ಯಕ್ಷರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ರವರು ಪ್ರಸ್ತಾಪಿಸಿದ್ದರು. ಆಗ ನಾನು ಅಲ್ಲಿಯೇ ಇದ್ದು, ಈ ಬಗ್ಗೆ ಆಕ್ಷೇಪಿಸಿದ್ದೇನು. ಸದಾಶಿವ ಆಯೋಗದ ವರದಿಯನ್ನು ನಾಗಮೋಹನ್‌ದಾಸ್ ಆಯೋಗಕ್ಕೆ ನೀಡುವ Term of Referenceರಲ್ಲಿ ಉಲ್ಲೇಖ ಮಾಡುವ ಅವಶ್ಯಕತೆ ಇರಲಿಲ್ಲ. ನಾಗಮೋಹನ್‌ದಾಸ್ ಆಯೋಗದ ವರದಿಯಲ್ಲಿ he has exceeded his brief. ಇವರು ತಮ್ಮ ವರದಿಯಲ್ಲಿ ಸದಾಶಿವ ಆಯೋಗದ ವರದಿಯನ್ನು ಉಲ್ಲೇಖಿಸುವ ಬಗ್ಗೆ Term of Referenceನಲ್ಲಿ ಇರಲಿಲ್ಲ. ನಾಗಮೋಹನ್‌ದಾಸ್ ಆಯೋಗ ಕುರಿತಾದ ಅಧಿಸೂಚನೆಯಲ್ಲಿರುವ Term of Reference ಈ ರೀತಿ ಇದೆ:

"Examine and report whether the reservation limits can be enhanced to Scheduled Castes and Scheduled Tribes in Karnataka in proportion to their population as per 2001 census, i.e., from15% to 17% for Scheduled Castes and 3% to 7% for Scheduled Tribes.

Whether there is an additional representation in education and employment of Scheduled Castes and Scheduled Tribes, when compared to their population. …"

These are there Term of Reference for the Justice Nagmohandas Commission to submit its report. ಇವತ್ತಿನ ದಿವಸ ನಾಗಮೋಹನ್‌ದಾಸ್ ಆಯೋಗದ ವರದಿಯನ್ನು ಸದಾಶಿವ ಆಯೋಗದ ವರದಿಯಲ್ಲಿ ಲಿಂಕ್ ಮಾಡಿ ಎಲ್ಲಿಯೋ ಒಂದು ಕಡೆ ಸದಾಶಿವ ಆಯೋಗದ ವರದಿಗೆ…, ನಾನು ಅಂದಿನ ಸಭೆಯಲ್ಲಿಯೂ ಸಹ ಇದೇ ಮಾತನ್ನು ಹೇಳಿದ್ದೇನೆ. ಸದಾಶಿವ ಆಯೋಗದ ವರದಿಯ ಪರವಾಗಿ ಸಮಾಜದ ಕೆಲವು ಸಮುದಾಯಗಳಿವೆ. ಇದೇ ಅಂಶದ ಬಗ್ಗೆ ಡಾ॥ ವೈ.ಎ.ನಾರಾಯಣಸ್ವಾಮಿ ಹಾಗೂ ಶ್ರೀ ಅರವಿಂದ ಕುಮಾರ ಅರಳಿ ರವರುಗಳು ಈಗಾಗಲೇ ಉಲ್ಲೇಖಿಸಿದ್ದಾರೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಸದಾಶಿವ ಆಯೋಗದ ವರದಿಯು ಬಿಡುಗಡೆಯಾಗಿಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿರವರೇ ಸ್ವಲ್ಪ ಸುಮ್ಮನಿರಿ; ಇದು ಬಹಳ ಗಂಭೀರವಾದ ವಿಚಾರವಾಗಿದೆ. ಶ್ರೀ ಮೋಹನ್ ಕುಮಾರ್ ಕೊಂಡಜ್ಜಿರವರೇ ಈ ಬಗ್ಗೆ ನಿಮಗೆ ಗೊತ್ತಿಲ್ಲ; you don't know. ನಾನು ಹೇಳುವುದುನ್ನು ಕೇಳಿ. ಇದರಲ್ಲಿ ಏನಾಗಿದೆ ಎಂದರೆ, ಅಂದಿನ ಸರ್ವ ಪಕ್ಷಗಳ ಸಭೆಯಲ್ಲಿ ನಾನು ಮುಖ್ಯಮಂತ್ರಿಗಳ ಮತ್ತು ವಿರೋಧ ಪಕ್ಷದ ನಾಯಕರ ಅನುಮತಿಯನ್ನು ಪಡೆದುಕೊಂಡು….

**ಸಭಾಪತಿಯವರು:-** ಶ್ರೀ ಪ್ರಕಾಶ್ ಕೆ.ರಾಥೋಡ್ ರವರೇ, ಈ ವಿಧೇಯಕದ ಬಗ್ಗೆ ಮಾತ್ರವೇ ಮಾತನಾಡಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಬಗ್ಗೆ ಮಾತನಾಡುತ್ತಿದ್ದೇನೆ. It is there in the report of Nagmohandas Commission.

ಆ ವರದಿಯಲ್ಲಿದೆ. ಈ ವಿಷಯವನ್ನು ಹೊರತುಪಡಿಸಿ, ಬೇರೆ ಮಾತನಾಡುತ್ತಿಲ್ಲ. ಅವರ ಶಿಫಾರಸ್ಸುಗಳ ಬಗ್ಗೆ ಮಾತನಾಡುತ್ತಿದ್ದೇನೆ. ಸರ್ವ ಪಕ್ಷಗಳ ಸಭೆಯಲ್ಲಿ ಏನು ಚರ್ಚಿಸಲಾಯಿತು ಎನ್ನುವುದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಅವತ್ತಿನ ದಿವಸ ನಾನು ಆಕ್ಷೇಪಣೆ ಮಾಡಿದ್ದೇನೆ. ಸಭಾನಾಯಕರೂ ಸಹ ಅಂದಿನ ಸಭೆಯಲ್ಲಿದ್ದರು. ಪ್ರಸ್ತುತ ವಿಧೇಯಕವನ್ನು ಜಾರಿಗೊಳಿಸುವುದರ ಬಗ್ಗೆ ಆಕ್ಷೇಪಣೆ ಇದೆ. ಇವತ್ತಿನ ಸರ್ಕಾರವು ಪ್ರಸ್ತುತ ವಿಧೇಯಕವನ್ನು ಮಂಡಿಸಿದ್ದು, ಇದರಲ್ಲಿ ಸಂವಿಧಾನದ ಅನುಚ್ಛೇದ 15, 16, 38, 341 ಮತ್ತು 342 ಇಂತಹ ಹಲವಾರು ಅನುಚ್ಛೇದಗಳ ಬಗ್ಗೆ ಉಲ್ಲೇಖಿಸಲಾಗಿದೆ. ಹೀಗಾಗಿ ಸರ್ಕಾರ ಈ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಸದಾಶಿವ ಆಯೋಗದ ವರದಿಯನ್ನು ನಾಗಮೋಹನ್‌ದಾಸ್ ಆಯೋಗದ ವರದಿಯ ಆಧಾರದ ಮೇಲೆ ಮಾಡಲಾಗಿದೆ – ಈ ಬಗ್ಗೆ ಸರ್ಕಾರಕ್ಕಿರುವ ವಿಚಾರದ ಬಗ್ಗೆಯೂ ಸಹ ಸರ್ಕಾರವು ಸ್ಪಷ್ಟೀಕರಣವನ್ನು ನೀಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ, ಅಂದಿನ ದಿನ ಸದಾಶಿವ ಆಯೋಗದ ವರದಿಯ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ, ಸರ್ವ ಪಕ್ಷಗಳ ಸಭೆಯನ್ನು ಕರೆದು, ಎರಡೂ ಸದನದಲ್ಲಿ ಈ ಬಗ್ಗೆ ಚರ್ಚಿಸಿ ಈ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳೋಣ ಎಂಬುದಾಗಿ ನನಗೆ ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದ್ದರು. ಹೀಗಾಗಿ ಸದರಿ ವರದಿಯನ್ನು in toto ಆಗಿ ಅಂಗೀಕರಿಸಲಾಗಿದೆಯೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಸರ್ಕಾರವು ಸ್ಪಷ್ಟೀಕರಣವನ್ನು ನೀಡಬೇಕು. ಪ್ರಸ್ತುತ ವಿಧೇಯಕದಲ್ಲಿ ಸಂವಿಧಾನದ ಅನುಚ್ಛೇದ 341 ಮತ್ತು 342 ಗಳ ಬಗ್ಗೆ ಉಲ್ಲೇಖವಿದೆ. ಇದರಲ್ಲಿ ಕೆಲವು ಜಾತಿಗಳನ್ನು ಸೇರಿಸಬೇಕು ಹಾಗೂ ಕೆಲವನ್ನು ತೆಗೆಯಬೇಕು ಎನ್ನುವುದರ ಬಗ್ಗೆ ಉಲ್ಲೇಖವಿದೆ. ಈ ವಿಧೇಯಕದಲ್ಲಿ ಸಂವಿಧಾನದ ಅನುಚ್ಛೇದ 15, 16 ಮತ್ತು 38 ಗಳ ಉಲ್ಲೇಖಿಸಿದ್ದು, ಇದರಲ್ಲಿಯೂ ಸಹ ಕೆಲವು ಜಾತಿಗಳ ಬಗ್ಗೆ ತಿಳಿಸಲಾಗಿದೆ.

ಸಂವಿಧಾನದ ಅನುಚ್ಛೇದ 15(4) ಮತ್ತು 16 (4A) ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ:

15 (4) Nothing in this article or in clause ( 2 ) of Article 29 shall prevent the State from making any special provision for the advancement of any socially and educationally backward classes of citizens or for the Scheduled Castes and the Scheduled Tribes.

16 (4A) Nothing in this article shall prevent the State from making any provision for reservation in matters of promotion, with consequential seniority, to any class or classes of posts in the services under the State in favour of the Scheduled Castes and the Scheduled Tribes which, in the opinion of the State, are not adequately represented in the services under the State."

ಈ ರೀತಿಯಾಗಿ ಸಂವಿಧಾನದ ಅನುಚ್ಛೇದಗಳನ್ನು ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ; ಸಂತೋಷ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಅತೀ ಕೆಳಗಡೆ ಇರುವವರನ್ನು ಮೇಲ್ದರ್ಜೆಗೆ ತರಬೇಕು ಎನ್ನುವ ವಿಚಾರದ ಹಿನ್ನೆಲೆಯಲ್ಲಿ ಸಂವಿಧಾನದ ಅನುಚ್ಛೇದಗಳಿವೆ. ಆದರೆ, ಸರ್ಕಾರವು ಈ ರೀತಿಯಾಗಿ ಉಲ್ಲೇಖಿಸಬೇಕಾದರೆ, ಹೆಚ್ಚಿನ ಮೀಸಲಾತಿಯನ್ನು ನೀಡಬೇಕಾದರೆ..., ಪ್ರಸ್ತುತ ಮಂಡಿಸಿರುವ ವಿಧೇಯಕದಲ್ಲಿ "if circumstances arise..." ಎಂಬುದಾಗಿ ಉಲ್ಲೇಖಿಸಲಾಗಿದೆ. ಬೇರೆ ಜಾತಿಗಳ ಮೀಸಲಾತಿ ವಿಚಾರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಾಮಾನ್ಯ ವರ್ಗದಡಿ ಮೀಸಲಾತಿ ನೀಡುತ್ತೇವೆ ಎಂದು ಸರ್ಕಾರವು ತಿಳಿಸಿದೆ. ಈ ರೀತಿಯಾಗಿ ಹೇಳಿದ ನಂತರ, ಯಾವ ಸಾಮಾನ್ಯ ವರ್ಗದ ಮೀಸಲಾತಿಯನ್ನು ಸರ್ಕಾರವು ತೆಗೆಯುತ್ತದೆ ಎನ್ನುವುದರ ಬಗ್ಗೆ ವಿಧೇಯಕದಲ್ಲಿ ತಿಳಿಸಿಲ್ಲ. ಹೀಗಾಗಿ ಈ ಬಗ್ಗೆಯೂ ಸಹ ಸರ್ಕಾರವು ಸ್ಪಷ್ಟೀಕರಣವನ್ನು ನೀಡಬೇಕು. ಅಂದರೆ, ಸಾಮಾನ್ಯ ವರ್ಗದಲ್ಲಿ ಲಭ್ಯವಿರುವ ಮೀಸಲಾತಿಯನ್ನು ತೆಗೆದು ಅದನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುತ್ತದೆ. ಈ ವರ್ಗದ ಜನರು ಐದು ಸಾವಿರ ವರ್ಷಗಳಿಂದ ಶೋಷಣೆಗೊಳಗಾಗಿದ್ದಾರೆ; ಹೀಗಾಗಿ ಸರ್ಕಾರದ ಉದ್ದೇಶವು ಬಹಳ ಚೆನ್ನಾಗಿದೆ. ಆದರೆ, ಯಾರ ಮೀಸಲಾತಿಯನ್ನು ನಮಗೆ ನೀಡಲಾಗುತ್ತಿದೆ ಎನ್ನುವುದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಈ ವಿಚಾರದಲ್ಲಿ ಸರ್ಕಾರವು Ordinance ಮತ್ತು ವಿಧೇಯಕವನ್ನು ಮಂಡಿಸಿದ್ದು, ಇದನ್ನು ಜಾರಿಗೊಳಿಸುವುದಾಗಿ ತಿಳಿಸುತ್ತಿದೆ. ಆದರೆ ಬಹಳಷ್ಟು ಲೋಪದೋಷಗಳು ಈ ವಿಧೇಯಕದಲ್ಲಿವೆ. ಇದರ ಬಗ್ಗೆ ಸರ್ಕಾರವು ಸ್ಪಷ್ಟೀಕರಣವನ್ನು ನೀಡಬೇಕು. ಡಾ॥ ವೈ.ಎ.ನಾರಾಯಣಸ್ವಾಮಿ ರವರು ಮಾತನಾಡುವ ಸಂದರ್ಭದಲ್ಲಿ, ಸಂವಿಧಾನ ರಚನೆಯಾದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಎಷ್ಟು ಜಾತಿಗಳಿದ್ದವು ಎನ್ನುವುದರ ಬಗ್ಗೆ ಉಲ್ಲೇಖಿಸಿದ್ದಾರೆ. ಆಗ ಕೇವಲ 6 ಜಾತಿಗಳಿದ್ದವು. ಆ ಪೈಕಿ ಲಂಬಾಣಿ ಜನಾಂಗವೂ ಸಹ ಒಂದು.

ನಂತರದಲ್ಲಿ ಹೆಚ್ಚಿನ ಜಾತಿಗಳನ್ನು ಸೇರ್ಪಡೆಗೊಳಿಸುತ್ತಾ ಬಂದಿದ್ದಾರೆ. ಹೀಗಾಗಿ ನನಗೆ ಮತ್ತು ವಿಶೇಷವಾಗಿ ಕೆಲವು ಸಮುದಾಯಗಳಗಿರುವ ಆತಂಕವೇನೆಂದರೆ..., ಹಾಲಿ ಮಂಡಿಸಿರುವ ವಿಧೇಯಕದ ಬಗ್ಗೆ ಸರ್ಕಾರವು ಬಹಳ ದೊಡ್ಡ ವಿವರಣೆಯನ್ನು ನೀಡಿದೆ. ಬಹುಶಃ ನಾನು ಸದನಕ್ಕೆ ಬಂದ ಮೇಲೆ, ವಿಧೇಯಕಕ್ಕೆ ಇಂತಹ ದೊಡ್ಡ ವಿವರಣೆಯನ್ನು ನೀಡಿರುವುದನ್ನು ಇವತ್ತಿನವರೆಗೆ ನೋಡಿಲ್ಲ. ಅಂದರೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿಧೇಯಕಕ್ಕೆ ಸಂಬಂಧಪಟ್ಟಂತೆ ಸರ್ಕಾರವು ವಿವರಣೆಯನ್ನು ನೀಡಿದೆ. ಯಾವುದೇ ವಿಧೇಯಕಕ್ಕೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿವರಣೆಯನ್ನು ನೀಡಿಲ್ಲ. ಇಲ್ಲಿ ಎಷ್ಟು ಪುಟಗಳಿವೆ ಎನ್ನುವುದನ್ನು ತಾವು ನೋಡಬೇಕು. ಇದರಲ್ಲಿ ಸರ್ಕಾರದ ಉದ್ದೇಶವನ್ನು ತಿಳಿಸಿದ್ದಾರೆ; ಒಳ್ಳೆಯದು. ಆದರೆ, ನಮಗಿರುವ ಅನುಮಾನವೇನೆಂದರೆ, ಎಲ್ಲಿಯೋ ಒಂದು ಕಡೆ ಕೆಲವು ಸಮುದಾಯಗಳಿಗೆ ತೊಂದರೆಯಾಗುವ ನಿರ್ಣಯಗಳನ್ನು ಸರ್ಕಾರವು ತೆಗೆದುಕೊಳ್ಳಬಹುದು ಎನ್ನುವುದಾಗಿರುತ್ತದೆ. ಸದಾಶಿವ ಆಯೋಗದ ವರದಿಯ ಬಗ್ಗೆ ವಿಧೇಯಕದಲ್ಲಿ ಪ್ರಸ್ತಾಪಿಸಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಉಪ ಸಮಿತಿಯನ್ನು ರಚಿಸಿದ್ದು, ಚರ್ಚೆಗಳಾಗುತ್ತಿವೆ. ಸಾರ್ವತ್ರಿಕ ಚುನಾವಣೆ ಎದುರಿಸುತ್ತಿರುವ ಸಂದರ್ಭದಲ್ಲಿ ಈ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಸದರಿ ವರದಿಯಿಂದಾಗಿ, ಎಲ್ಲಿಯೋ ಯಾರಿಗೋ ತೊಂದರೆ ಕೊಡಬೇಕಾಗಬಹುದು ಎನ್ನುವ ಬಗ್ಗೆ ನಮಗೆ ಆಕ್ಷೇಪಣೆ ಇದೆ. ಹೀಗಾಗಿ ಈ ಬಗ್ಗೆ ಸರ್ಕಾರವು ಸ್ಪಷ್ಟೀಕರಣವನ್ನು ನೀಡಬೇಕೆಂದು ನಾನು ಭಾವಿಸುತ್ತೇನೆ.

(ಮುಂದು)

1235/27-12-2022/7-50/bkp-bns(gr) (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು..):**

ವಿಶೇಷವಾಗಿ ಲಂಬಾಣಿ ಸಮುದಾಯದವರಿಗೆ, ನಮಗೆ ಉತ್ತರ ಕರ್ನಾಟಕದ ಭಾಗದಲ್ಲಿ ..

**ಸಭಾಪತಿಯವರು:–** ಯಾರಿಗೆ ಹೇಳುತ್ತಿದ್ದೀರಿ?

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೆ, it is related to the Bill. ನಾನು ಬೇರೆ ಏನೂ ಮಾತನಾಡುತ್ತಿಲ್ಲ.

**ಸಭಾಪತಿಯವರು:–** ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೆ, ಬಹುಶಃ ಇದರ ಬಗ್ಗೆ ಯಾರು ಮಾತನಾಡುವುದಿಲ್ಲ. ಕೆಳ ಮನೆಯಲ್ಲೂ ಮಾತನಾಡಿಲ್ಲ, ಇಲ್ಲಿಯೂ ಮಾತನಾಡಿಲ್ಲ. ನಮ್ಮ ನೋವನ್ನು ಸರ್ಕಾರದ ಮುಂದೆ ಹೇಳಲಿಲ್ಲವೆಂದರೆ ಮತ್ತೆ ನಾವು ಯಾರ ಮುಂದೆ ಹೇಳಬೇಕು? ಮಾನ್ಯ ಸಭಾಪತಿಯವರೆ, ನಮಗೆ ಏನು ನೋವು ಆಗುತ್ತಿದೆ ಎಂದರೆ ಉತ್ತರ ಕರ್ನಾಟಕ ಭಾಗದಲ್ಲಿ 1977 ಆದ ಮೇಲೆ ನಮಗೆ ಸಿಕ್ಕಿದಂತಹ ಮೀಸಲಾತಿ ಅದರಲ್ಲೂ area restriction ತೆಗೆದಮೇಲೆ. ನಮಗೆ ಸಿಕ್ಕಿರುವ ಮೀಸಲಾತಿ ಹತ್ತಿರ, ಹತ್ತಿರ 40 ವರ್ಷಗಳಾಗಿರಬಹುದು. ಇನ್ನೂ ಸಹ ನಮ್ಮ ಸಮಾಜದವರು ಶೋಷಣೆಗೆ ಒಳಗಾಗಿ ಬಡತನ ರೇಖೆಗಿಂತ ಕೆಳಗಡೆ ಇದ್ದಾರೆ, ನಾನು ಸರ್ಕಾರದ ಗಮನಕ್ಕೆ ಏನು ತರುತ್ತಿದ್ದೇನೆಂದರೆ, ಇಂತಹ ಯಾವುದೇ ನಿರ್ಣಯಗಳನ್ನು ನೀವು ತೆಗೆದುಕೊಳ್ಳಬೇಡಿ. ಯಾವುದೇ ಈ ಸಮುದಾಯಗಳ ಬಗ್ಗೆ ನಿರ್ಣಯಗಳನ್ನು ನೀವು ತೆಗೆದುಕೊಳ್ಳಬೇಡಿ. ಈ ಬಿಲ್ ಅನ್ನು ಬೆಂಬಲಿಸೋಣ. ಆದರೆ, ನಮ್ಮ ಒಳಗಡೆ ಇರುವಂತಹ ನೋವಿನ ಬಗ್ಗೆ ಹೇಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೆ, ಇದು ಏನಾಗಿದೆ ಎಂದರೆ, ನೀವು ಇದನ್ನು ತರಲಾಗುತ್ತದೆ ಎಂದು ಹೇಳುತ್ತೀರಿ, ನಾವು ಬೇಡವೆಂದು ಹೇಳುತ್ತೇವೆ. ಇದು ಏನಾಗಿದೆ ಎಂದರೆ ನಮ್ಮ ನಮ್ಮಲ್ಲಿಯೇ ಜಗಳ ಹಚ್ಚುತ್ತಿದ್ದಾರೆ. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಬೇಕು. ಈ ಜಗಳವನ್ನು ಏತಕ್ಕೆ ತರುತ್ತಿದ್ದಾರೆಂದರೆ, ಪರಿಶಿಷ್ಟ ಜಾತಿಯಲ್ಲಿ ಶೋಷಣೆಗೆ ಒಳಗಾಗಿ ಸಂವಿಧಾನದಲ್ಲಿ ಕೆಲವು ಹಕ್ಕುಗಳನ್ನು ಕೊಟ್ಟಿದ್ದಾರೆ. ಎಲ್ಲೋ ಒಂದು ಕಡೆ ತೊಂದರೆ ಮಾಡಬೇಕೆಂದು ನಮ್ಮ ನಮ್ಮಲ್ಲಿಯೇ ಜಗಳ ಹಚ್ಚುತ್ತಿದ್ದಾರೆ. ನಾವೆಲ್ಲರೂ ಅಣ್ಣ-ತಮ್ಮಂದಿರು ಎಂದು ತಾವು ಅರ್ಥ ಮಾಡಿಕೊಳ್ಳಬೇಕು. ನಾವೆಲ್ಲರೂ ಒಂದಾಗಿ ಬಾಳಬೇಕು, ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದೇವೆ. ನಿಮ್ಮ ನಮ್ಮ ನಡುವೆ ಈ ಬೇಧ-ಭಾವವನ್ನು ತರಿಸಿ, ನಮ್ಮಲ್ಲಿಯೇ ಜಗಳವಾಡುವಂತಹ ವ್ಯವಸ್ಥೆ ಇವತ್ತು ನಡೆಯುತ್ತಿದೆ. ಇದರ ಬಗ್ಗೆ ನಾವು ಎಚ್ಚರ ವಹಿಸಬೇಕು, ಇದರ ಬಗ್ಗೆ ಸರ್ಕಾರ ಗಮನಕೊಡಬೇಕು. ಅಂತಹ ಯಾವುದೇ ಒಂದು ನಿರ್ಣಯ ತೆಗೆದುಕೊಂಡರೂ ಸಹ ಮುಂದೆ ನಮಗೆ ತೊಂದರೆಯಾಗುತ್ತದೆ. ಆದ್ದರಿಂದ, ಈ ವಿಷಯವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಇನ್ನು ಸಹ ಹಲವಾರು ವಿಷಯಗಳಿವೆ. ಆದರೆ, ನಮ್ಮ ಸಭಾ ನಾಯಕರು

ಮಾತನಾಡಿದ್ದಾರೆ, ಕೆಳಮನೆಯಲ್ಲೂ ಮಾತನಾಡಿದ್ದಾರೆ, ಕೆಲವು ವಿಚಾರಗಳು ಎಲ್ಲಿಯೂ ಪ್ರಸ್ತಾಪವಾಗ ಬೇಕಾಗಿಲ್ಲ. ನಮಗೆ ಆಗಿರುವ ನೋವುಗಳನ್ನು ನಾನು ಹೇಳಿಕೊಂಡಿದ್ದೇನೆ. ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:-** ಇದರ ಬಗ್ಗೆ ಕ್ಲಾರಿಫಿಕೇಷನ್ ಮಾತ್ರ ಕೇಳಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಕ್ಲಾರಿಫಿಕೇಷನ್‌ಬೇಕಾಗುತ್ತದೆ.

**ಸಭಾಪತಿಯವರು:-** ಇಲ್ಲ ಆಗುವುದಿಲ್ಲ, ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವರು ಬಹಳ ಮಹತ್ವದ ಕೆಲಸ ಮಾಡಿದ್ದಾರೆ, ನಾನು ಸರ್ಕಾರಕ್ಕೆ ಅಭಿನಂದನೆ ಹೇಳಬೇಕು.

**ಸಭಾಪತಿಯವರು:-** ಎರಡು ನಿಮಿಷದಲ್ಲಿ ಹೇಳಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವರು ಬಹಳ ಮಹತ್ವದ ಕೆಲಸ ಮಾಡಿದ್ದಾರೆ, ನಾನು ಸರ್ಕಾರಕ್ಕೆ ಅಭಿನಂದನೆ ಹೇಳಬೇಕು. ಈ ವಿಷಯದ ಮೇಲೆ ಮಾತನಾಡಲಿಕ್ಕೆ ಆಗುವುದಿಲ್ಲವೆಂದರೆ ಹೇಗೆ? ಈ ವಿಷಯವನ್ನು ಸಂಜೆ ತೆಗೆದುಕೊಂಡು ಬಂದು ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಇದು ಮಹತ್ವದ ವಿಷಯ ಆಗಿರುವುದಿಲ್ಲವೇ? ಶೋಷಿತರಿಗೆ ಕೊಡುತ್ತಿರುವಂತಹ ಸೌಲಭ್ಯದ ಬಗ್ಗೆ ನಾನು ಮಾತನಾಡಬಾರದೇ?

**ಸಭಾಪತಿಯವರು:-** 5 ನಿಮಿಷ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 5 ನಿಮಿಷದಲ್ಲಿ ಆಗುವುದಿಲ್ಲ, ನನಗೆ 20 ನಿಮಿಷ ಕಾಲಾವಕಾಶ ಕೊಡಿ.

**ಸಭಾಪತಿಯವರು:–** 20 ನಿಮಿಷ, 30 ನಿಮಿಷ ಖಂಡಿತವಾಗಿಯೂ ಆಗುವುದಿಲ್ಲ. ನಾನು ಬೆಲ್ ಹೊಡೆದಾಗ ಕುಳಿತುಕೊಳ್ಳಿ, 5 ನಿಮಿಷ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವರ್ಗಕ್ಕೆ ಶೈಕ್ಷಣಿಕವಾಗಿ, ಉದ್ಯೋಗದಲ್ಲಿ ಬಹಳ ಅನ್ಯಾಯವಾಗಿದೆ ಎಂದು ಹೇಳಿ ಅನೇಕ ವರದಿಗಳನ್ನು ಆಧರಿಸಿ ಇವತ್ತು ನಮ್ಮ ಸರ್ಕಾರ ಈ ಒಂದು ಮೀಸಲಾತಿ ಹೆಚ್ಚಳ ಮಾಡತಕ್ಕಂತಹ ಮಹತ್ವದ ಕೆಲಸವನ್ನು ಮಾಡಿದೆ. ಈ ಸರ್ಕಾರವನ್ನು ನಾನು ಬಹಳ ಸಂತೋಷದಿಂದ ಅಭಿನಂದಿಸುತ್ತೇನೆ. ಆದರೆ, ಇವತ್ತು ಈ ಸರ್ಕಾರ ಯಾವ ಯಾವ ಆಧಾರವನ್ನು ಪರಿಗಣಿಸಿ, ಈ ಮೀಸಲಾತಿಯನ್ನು ತಂದಿದ್ದಾರೆ, ಹೆಚ್ಚಳ ಮಾಡಿದ್ದಾರೆ ಎನ್ನುವ ವಿಚಾರದಲ್ಲಿ ಮಾತನಾಡುವುದಾದರೆ, 2019 ರಲ್ಲಿ ನ್ಯಾಯ ಮೂರ್ತಿಗಳಾದಂತಹ ಶ್ರೀ ನಾಗಮೋಹನ್ ದಾಸ್ ನೇತೃತ್ವದಲ್ಲಿ ಒಂದು ಆಯೋಗ ರಚನೆಯಾಗುತ್ತದೆ. ಅವರು ಕೊಟ್ಟಂತಹ ವರದಿಯನ್ನು ಆಧರಿಸಿ, ಮತ್ತೆ, ಕೂಡಲೇ ಮತ್ತೊಬ್ಬ ನ್ಯಾಯ ಮೂರ್ತಿಗಳಾದಂತಹ ಸುಭಾಶ್ ಅಡಿಯವರ ನೇತೃತ್ವದಲ್ಲಿ ಅದನ್ನೆಲ್ಲಾ ಪರಿಶೀಲನೆ ಮಾಡಿ , ಮತ್ತೆ, ಲಾ ಸ್ಕೂಲ್ ಸಂಶೋಧನೆಯ ಅಧ್ಯಯನಗಳನ್ನು ಕೂಡ ತೆಗೆದುಕೊಂಡು ಈ ಒಂದು ಮೀಸಲಾತಿಯನ್ನು ಸರ್ಕಾರ ಹೆಚ್ಚಳ ಮಾಡುತ್ತಿದೆ. ಈ ವರ್ಗಕ್ಕೆ ಅನ್ಯಾಯವಾಗಿದೆ ಎಂದು ಹೇಳಿ ಶ್ರೀ ನಾಗಮೋಹನ್ ದಾಸ್ ವರದಿಯನ್ನು ಆಯೋಗವನ್ನು ರಚನೆ ಮಾಡಿದಂತಹ ಅಂದಿನ ಸರ್ಕಾರಗಳು ಅಂದರೆ, ಜೆ.ಡಿ(ಎಸ್) ಮತ್ತು ಕಾಂಗ್ರೆಸ್‌ನ ಸಮ್ಮಿಶ್ರ ಸರ್ಕಾರ ಈ ಒಂದು ಘನ ಉದ್ದೇಶವನ್ನು ಇಟ್ಟುಕೊಂಡೇ ಈ ವರ್ಗಕ್ಕೆ ಕೊಡಬೇಕೆಂದು ಹೇಳಿ ಅವರೇ ಆಯೋಗವನ್ನು ರಚನೆ ಮಾಡಿದರು. ಅದೆಲ್ಲವನ್ನು ಆಧಾರವಾಗಿಟ್ಟುಕೊಂಡು ಇವತ್ತು ಇದನ್ನು ಹೆಚ್ಚಳ ಮಾಡಿದೆ. ಆದ್ದರಿಂದ, ಪ್ರಥಮವಾಗಿ ಈ ವರ್ಗಕ್ಕೆ ಅನ್ಯಾಯವಾಗಿದೆ ಎಂದು ಹೇಳಿ , ಇವರಿಗೆ ಮೀಸಲಾತಿಯನ್ನು ಹೆಚ್ಚಳ ಮಾಡಬೇಕೆಂದು ಹೇಳಿ ಬಹಳ ಘನ ಉದ್ದೇಶ ಮಾಡಿದ್ದು ಅಂದಿನ ಜೆ.ಡಿ., (ಎಸ್) ಮತ್ತು ಕಾಂಗ್ರೆಸ್ ಸರ್ಕಾರ. ಆದ್ದರಿಂದ, ಅಂದಿನ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇಂದು ಇದನ್ನು ಅನುಷ್ಠಾನಕ್ಕೆ ತರುವಂತಹ

ಸಂದರ್ಭದಲ್ಲಿ ಸರ್ವ ಪಕ್ಷಗಳ ಸಭೆಯನ್ನು ಕರೆದು ಆಡಳಿತ ಪಕ್ಷ ಎಲ್ಲರ ಒಕ್ಕೊರಲಿನ ಸಹಕಾರವನ್ನು ಪಡೆದು ಈ ಒಂದು ಮೀಸಲಾತಿಯನ್ನು ಹೆಚ್ಚಳ ಮಾಡಿದೆ. ಇದು ಬಹಳ ಸ್ವಾಗತಾರ್ಹವಾದ ಕೆಲಸವಾಗಿದೆ. ಆದರೆ, ಈ ಚುನಾವಣೆ ಸಂದರ್ಭದಲ್ಲಿ ಹೆಚ್ಚು ಮಾಡಿರತಕ್ಕಂತಹ ಈ ಮೀಸಲಾತಿ ಈ ನಾಡಿನ ಎಲ್ಲಾ ಜನರಲ್ಲೂ ಕೂಡ ಒಂದು ರೀತಿಯಲ್ಲಿ ಕಂಪನ ಉಂಟು ಮಾಡಿದೆ. ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ. ಇದನ್ನು ಬಿಜೆಪಿ. ಪಕ್ಷದವರೇ ಮಾಡಲಿ, ಮತ್ತೆ, ಯಾವುದೇ ಪಕ್ಷದವರು ಮಾಡಲಿ, ಚುನಾವಣಾ ಸಂದರ್ಭದಲ್ಲಿ ಇಂತಹ ಒಂದು ಪ್ರಮುಖ ನಿರ್ಧಾರ ಮಾಡಿದರೆ ನಾಡಿನ ಜನರಲ್ಲಿ ಇದರ ಬಗ್ಗೆ ಸಂಶಯ, ಅನುಮಾನ, ಕಂಪನ ಉಂಟಾಗುವುದು ಸ್ವಾಭಾವಿಕ. ಆದರೆ, ಇವತ್ತು ನಮ್ಮ ಬಿ.ಜೆ.ಪಿ., ಪಕ್ಷದ ನಾಯಕರು ಒಂದು ರಾಜಕೀಯ ಇಚ್ಛಾಶಕ್ತಿಯನ್ನು ಮೆರೆದಿದ್ದಾರೆ. ಬಿಜೆಪಿ. ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಕಳೆದ 3 ವರ್ಷಗಳಿಂದ ಈ ನಾಡಿನಲ್ಲಿ ಈ ವರ್ಗಕ್ಕೆ ಮಾತ್ರವಲ್ಲ, ಈ ಒಂದು ಸಮುದಾಯದಲ್ಲಿ ಎಷ್ಟೊಂದು ವರ್ಗ ಇದೆ, ಅವರೆಲ್ಲರಿಗೂ ಸಹ ಮೂಗಿಗೆ ತುಪ್ಪವನ್ನು ಸುರಿದಿದೆ. ಅವರು ಚಳುವಳಿ ಮಾಡಿದಾಗ ನಿಮಗೂ ಸಹ ಮೀಸಲಾತಿಯನ್ನು ಹೆಚ್ಚಳ ಮಾಡುತ್ತೇವೆ. ಸವಲತ್ತು ಕೊಡುತ್ತೇವೆಂದು ಹೇಳಿ ಎಲ್ಲರಿಗೂ ಭರವಸೆಯನ್ನು ಕೊಟ್ಟಿದೆ. ಆದರೆ, ಇದನ್ನು ಯಾವ ಸರ್ಕಾರವೂ ಕೂಡ ಏಕ ಕಾಲದಲ್ಲಿ ಮಾಡಲಿಕ್ಕೆ ಆಗುವುದಿಲ್ಲವೆನ್ನುವುದನ್ನು ಕೂಡ ನಾನು ಒಪ್ಪುತ್ತೇನೆ. ಆದರೆ, ಇಷ್ಟೆಲ್ಲಾ ಪ್ರೀತಿಯಿಂದ, ಅಪ್ಪುಗೆಯಿಂದ ಅನ್ಯಾಯಕ್ಕೆ ಒಳಗಾಗಿರುವಂತಹ ತಳ ಸಮುದಾಯದ ಕ್ಷೇಮವನ್ನು ಬಯಸಿ, ಈ ಮೀಸಲಾತಿಯನ್ನು ಹೆಚ್ಚಳ ಮಾಡಿರುವುದರ ಬಗ್ಗೆ ಕಾನೂನು ಸಚಿವರು ವಿವರಣೆಯನ್ನು ನೀಡುತ್ತಾ ಹೇಳಿದರು. ಇಂದಿರಾಶಾನಿ ಕೇಸ್‌ನಲ್ಲಿ ಏನಾಯಿತು ಮತ್ತು ಸುಪ್ರೀಂ ಕೋರ್ಟ್ ಏನೇನು ತೀರ್ಪುಗಳನ್ನು ಕೊಟ್ಟಿದೆ ಎಂದು ಎಲ್ಲವನ್ನೂ ಹೇಳಿದರು. ಮತ್ತೆ Schedule – ೯ ನಲ್ಲಿ ಸೇರಿಸಿದ್ದರೂ ಸಹ ತಮಿಳುನಾಡು ಪ್ರಕರಣವನ್ನು ಕೈಗೆತ್ತಿಕೊಂಡಿದೆ ಎನ್ನುವದನ್ನು ಸಹ ಹೇಳಿದರು. ಈಗ Schedule –೯ ನಲ್ಲಿ ಸೇರಿಸಿದರೂ ಕೂಡ ಸುಪ್ರೀಂ ಕೋರ್ಟ್ ವಿಚಾರಣೆಯನ್ನು ಮಾಡುತ್ತದೆ ಎಂದ ಮೇಲೆ ಈಗಾಗಲೇ ನಾಲ್ಕಾರು ರಾಜ್ಯಗಳಲ್ಲಿ ಆಗಿರತಕ್ಕಂತಹ ಎಲ್ಲಾ ಮೀಸಲಾತಿ ಹೆಚ್ಚಳದ ಬಗ್ಗೆ ಸುಪ್ರೀಂ ಕೋರ್ಟ್ ಮುಂದೆ ಮೊಕದ್ದಮೆಗಳಿವೆ. ಆದರೆ, ನಾಳೆ ಸುಪ್ರೀಂ ಕೋರ್ಟ್ ಏನು ತೀರ್ಪು ಕೊಡುತ್ತದೆ ಎಂದು

ನಮಗೆ ಯಾರಿಗೂ ಗೊತ್ತಿಲ್ಲ. ಒಂದು ವೇಳೆ Schedule -೯ ನಲ್ಲಿ ಸೇರಿರುವಂತಹದ್ದು ಎಲ್ಲಾ ಕೂಡ ಕ್ರಮಬದ್ಧ, ಅದರ ಬಗ್ಗೆ ನಮ್ಮ ಪ್ರಶ್ನೆ ಇಲ್ಲವೆಂದು ಹೇಳಬಹುದು. ಇಲ್ಲವೇ Schedule-೯ ನಲ್ಲಿ ಸೇರದೇ ಇದ್ದರೂ ಕೂಡ ಆ ರಾಜ್ಯಗಳು ಕೊಟ್ಟಿರುವಂತಹ ಮೀಸಲಾತಿಯನ್ನು ಒಪ್ಪಬಹುದು. ಇದು ಕಾನೂನು ಪ್ರಕಾರ ಸಿಂಧು ಎಂದು ಸಹ ಹೇಳಬಹುದು. ಇಂತಹ ಸನ್ನಿವೇಶ ಇರುವಾಗ ನಾನು ಈ ಘನ ಸರ್ಕಾರದಲ್ಲಿ ಯಾವ ಈ ಒಂದು ತಳ ಸಮುದಾಯದ ಬಗ್ಗೆ ಪ್ರೀತಿ-ವಿಶ್ವಾಸ ಮತ್ತು ಗೌರವವನ್ನು ಇಟ್ಟುಕೊಂಡು ನಾವು ಎಲ್ಲರೂ ಕೂಡ ಈ ಒಂದು ವಿಧೇಯಕದ ಮೂಲಕ ಅವರಿಗೆ ಹೆಚ್ಚು ಮೀಸಲಾತಿಯನ್ನು ಕೊಡುತ್ತಿದ್ದೇವೆ, Schedule-೯ ನಲ್ಲಿ ಸೇರಿಸಲೇಬೇಕೆನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಮಾಡಬೇಕು. ಇಲ್ಲವೆಂದರೆ ಇಡೀ ನಾಡಿನ ಜನರು, ಈ ವರ್ಗದ ಜನರು ನಮ್ಮ ಎಲ್ಲಾ ರಾಜಕಾರಣಿಗಳನ್ನೂ ಕೂಡ, ಎಲ್ಲಾ ಪಕ್ಷದ ನಾಯಕರನ್ನೂ ಕೂಡ ಸಂಶಯದಿಂದ ನೋಡುವಂತಹ ದಿನ ಬರುತ್ತದೆ.

**ಮುಂದು.**

**(1236) 27.12.2022 08.00 ಎಸ್‌ವಿ-ಜಿಆರ್** (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):**

ನಾಳೆ ಒಂದು ವೇಳೆ ಷೆಡ್ಯೂಲ್ ೯ರಲ್ಲಿ ಇದನ್ನು ಸೇರಿಸಿದರೆ ಅದರಲ್ಲಿ ಇರತಕ್ಕಂತಹ ಅಂಶವನ್ನು ಸುಪ್ರೀಂ ಕೋರ್ಟ್ ಒಪ್ಪುವುದೇ ಆದ ಸಂದರ್ಭದಲ್ಲಿ ಖಾಯಂ ಆಗಿ ಈ ವರ್ಗದ ಜನ ಈ ಎಲ್ಲಾ ಮೀಸಲಾತಿಯನ್ನು ಅನುಭವಿಸಬಹುದು. ಒಂದು ವೇಳೆ ಆಗಲಿಲ್ಲ ಎಂದಾಗ ನಾವು ಮಾಡಿಯೂ ಕೂಡ ಈ ವರ್ಗಕ್ಕೆ ಏನೂ ಪ್ರಯೋಜನ ಆಗುವುದಿಲ್ಲ. ಆದ್ದರಿಂದ ಇವತ್ತು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಎರಡೂ ಕಡೆಯಲ್ಲಿ ಬಿ.ಜೆ.ಪಿ., ಸರ್ಕಾರ ಇದೆ. ದಯವಿಟ್ಟು ಇದನ್ನು ಷೆಡ್ಯೂಲ್ ೯ರಲ್ಲಿ ಸೇರಿಸಬೇಕು ಎಂದು ಪಾರ್ಲಿಮೆಂಟ್‌ನಲ್ಲಿ ಮಾಡಬೇಕು ಎನ್ನುವ ಆಗ್ರಹವನ್ನು ಈ ಬಿಲ್ ಮುಖೇನ ಸರ್ಕಾರ ಮಾಡಬೇಕಾಗಿತ್ತು ಎನ್ನುವುದು ನನ್ನ ಭಾವನೆ. ಅದು ಮಾಡಲಿಲ್ಲ ಎಂದು ಹೇಳಿದರೆ ನಮ್ಮೆಲ್ಲರ ಮೇಲೆ ಕೂಡ ಒಂದು ತೂಗುಗತ್ತಿ ಇರುತ್ತದೆ. ಈ ಜನರಿಗೆ ನಾವು ನ್ಯಾಯ

ಕೊಡುವುದಕ್ಕಾಗುವುದಿಲ್ಲ ಎನ್ನುವುದರ ಬಗ್ಗೆ ನನಗೆ ಅನುಮಾನ ಹುಟ್ಟುತ್ತದೆ. ಇಂದು ನಾವು 2%, 4% ಹೆಚ್ಚು ಮಾಡಿದ್ದೇವೆ. ಇನ್ನೂ 10% ಹೆಚ್ಚಳ ಮಾಡಿದರೂ ಕೂಡ ಈ ಸಮುದಾಯಕ್ಕೆ ಏನೂ ಪ್ರಯೋಜನವಾಗುವುದಿಲ್ಲ ಎಂದು ನಾನು ಹೇಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಇದಕ್ಕೆ ಕಾರಣವಾದರೂ ಇಷ್ಟು. ರಾಜ್ಯ ಸರ್ಕಾರದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ದೀರ್ಘಕಾಲದಿಂದ ಭರ್ತಿ ಮಾಡುತ್ತಿಲ್ಲ. ಇಂದು ಲಕ್ಷಾಂತರ ಹುದ್ದೆಗಳಲ್ಲಿ ಹೊರಗುತ್ತಿಗೆ ಮೇಲೆ ಕಾರ್ಯ ನಿರ್ವಹಿಸಲಾಗುತ್ತಿದೆ. ಹೊರಗುತ್ತಿಗೆ ಮೇಲೆ ನೇಮಕಾತಿ ಎಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಯಾವ ನೇಮಕಾತಿಯನ್ನೂ ಮಾಡುತ್ತಿಲ್ಲ. ಹೊರಗುತ್ತಿಗೆಯಲ್ಲಿ ಯಾವ ಮೀಸಲಾತಿಯೂ ಇಲ್ಲ. ಯಾರಿಗೂ ಮೀಸಲಾತಿ ಕೊಡುತ್ತಿಲ್ಲ. ಗುತ್ತಿಗೆ ಆಧಾರದ ಮೇಲೆ ಇರುವವರಿಗೆ ಎಲ್ಲಿಯೂ ಮೀಸಲಾತಿ ಇಲ್ಲ. ಹತ್ತಾರು ವರ್ಷಗಳಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ಸಹ ತುಂಬಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಈ ಸಮುದಾಯಗಳಿಗೆ ಕೊಡುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಹತ್ತಾರು ವರ್ಷಗಳಿಂದ ಯಾವ ಸರ್ಕಾರವೂ ಭರ್ತಿ ಮಾಡಿರುವುದಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿ ಆಗಲೀ, ಕಾಲೇಜುಗಳಲ್ಲಾಗಲೀ, ಸರ್ಕಾರಿ ಕಛೇರಿಗಳಲ್ಲಾಗಲೀ ಆಗಿರುವುದಿಲ್ಲ. ಇವತ್ತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಇತ್ತೀಚಿನ ದಿನಗಳಲ್ಲಿ ಖಾಸಗೀಕರಣದಿಂದ ದೇಶದ ಅಭಿವೃದ್ಧಿ ಎನ್ನುವ ಒಂದೇ ಮಂತ್ರದಿಂದ ಸಾರ್ವಜನಿಕ ವಲಯದಲ್ಲಿರುವಂತಹ ಕಂಪನಿಗಳನ್ನು ಖಾಸಗೀಕರಣಗೊಳಿಸುತ್ತಿದ್ದೇವೆ. ಇದನ್ನು ಖಾಸಗೀಕರಣ ಮಾಡುತ್ತಿರುವುದರಿಂದ ಎಲ್ಲಾ ಮೀಸಲಾತಿ ಹುದ್ದೆಗಳು ಕೂಡ ರದ್ದಾಗುತ್ತಿವೆ. ರದ್ದಾಗಿ ಹೋಗಿದೆ. ಈ ರೀತಿ ನಾವು ಸರ್ಕಾರಿ ಹುದ್ದೆಗಳನ್ನು, ಕಾರ್ಖಾನೆಗಳನ್ನು, ಸಂಸ್ಥೆಗಳನ್ನು ಖಾಸಗೀಕರಣ ಮಾಡುತ್ತಾ ಹೋದರೆ ಈ ಮೀಸಲಾತಿ ಹುದ್ದೆಗಳು ರದ್ದಾಗಿ ಹೋಗುತ್ತಿವೆ. ಇಂತಹ ಕಡೆಗಳಲ್ಲಿ ನಾವು ಇನ್ನೂ 10% ಕೊಟ್ಟರೂ ಏನು ಉಪಯೋಗ? ನಾವೆಲ್ಲರೂ ಸೇರಿ ಈ ಸಮುದಾಯಕ್ಕೆ ವಂಚನೆ ಮಾಡಿದಂತೆ ಆಗುವುದಿಲ್ಲವೇ? ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸಿ 2400 ಹುದ್ದೆಗಳನ್ನು ರದ್ದು ಮಾಡುವುದು ಎಂದು ಸಚಿವ ಸಂಪುಟ ಉಪ ಸಮಿತಿಯಲ್ಲಿ ತೀರ್ಮಾನವಾಗಿರುವ

ಬಗ್ಗೆ ಒಂದು ದಿನಪತ್ರಿಕೆಯಲ್ಲಿ ಓದಿದ್ದೆನು. ಈ ರೀತಿ ಇಲಾಖೆಗಳನ್ನು ಮುಚ್ಚಿ ಹುದ್ದೆಗಳನ್ನು ವಿಲೀನಗೊಳಿಸಿದರೆ ಈ ಮೀಸಲಾತಿ ಹುದ್ದೆಗಳು ಎಲ್ಲಿ ಉಳಿಯುತ್ತವೆ? ಈ ವರ್ಗದವರಿಗೆ ಮೀಸಲಾತಿಯನ್ನು ಕೊಟ್ಟು ಏನು ಪ್ರಯೋಜನ?

ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಒಂದು ವಿನಂತಿಯನ್ನು ಮಾಡುತ್ತೇನೆ. ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಬಿ.ಜೆ.ಪಿ., ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಮರೋಪಾದಿಯಲ್ಲಿ ಎಲ್ಲವನ್ನೂ ಖಾಸಗೀಕರಣಗೊಳಿಸಲಾಗುತ್ತಿದೆ. ಖಾಸಗೀಕರಣ ಮಾಡುವುದು ಮೀಸಲಾತಿ ವಿರೋಧಿ ಎನ್ನುವುದನ್ನು ಈ ಸದನದಲ್ಲಿ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಒಂದೆಡೆ ಹೀಗೆ ಮಾಡುತ್ತಾ ಮತ್ತೊಂದೆಡೆ ಮೀಸಲಾತಿಯನ್ನು ಹೆಚ್ಚು ಮಾಡಿದ್ದೇವೆಂದು ಹೇಳಿದರೆ ನಾವೆಲ್ಲರೂ ಕೂಡ ಈ ವರ್ಗಗಳಿಗೆ ವಂಚನೆ ಮಾಡಿದಂತೆ, ಮೋಸ ಮಾಡಿದಂತೆ ಆಗುತ್ತದೆ ಎನ್ನುವುದು ನನ್ನ ನೋವು. ಇದು ನನ್ನ ಅಳಲು. ಇನ್ನೂ 10% ಹೆಚ್ಚು ಮಾಡಿ. ಆದರೆ ರಾಜ್ಯದಲ್ಲಿರತಕ್ಕಂತಹ ಖಾಲಿ ಹುದ್ದೆಗಳನ್ನಾದರೂ ಭರ್ತಿ ಮಾಡಬೇಕು. ನಿಗದಿತ ಸಮಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಅದನ್ನೇನೂ ಮಾಡದೆ ಚುನಾವಣೆಯ ಹೊಸ್ತಿಲಲ್ಲಿ ಈ ವರ್ಗಕ್ಕೆ ಮೀಸಲಾತಿ ಹೆಚ್ಚು ಮಾಡಿದ್ದೇವೆ, ಬಹಳ ದೊಡ್ಡ ಸಹಾಯ ಮಾಡಿದ್ದೇವೆ ಎಂದು ಹೇಳಿದರೆ ವಿರೋಧ ಪಕ್ಷದವರಿರಬಹುದು, ಆಡಳಿತ ಪಕ್ಷದವರಿರಬಹುದು ನಾವೆಲ್ಲರೂ ಈ ಸಮುದಾಯಕ್ಕೆ ವಂಚನೆ ಮಾಡಿದಂತಾಗುತ್ತದೆ.

ಖಾಸಗಿ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ತರಬೇಕು. ಖಾಸಗಿ ವಲಯದಲ್ಲಿಯೂ ಮೀಸಲಾತಿಯನ್ನು ಕೊಡಬೇಕೆಂದು ಒಂದು ನೀತಿಯನ್ನು ಕೇಂದ್ರ ಸರ್ಕಾರವೇ ಜಾರಿಗೆ ತರಲಿ. ಖಾಸಗಿ ವಲಯದಲ್ಲಿಯೂ ಕೂಡ ಈ ಮೀಸಲಾತಿಗೆ ಅವಕಾಶ ಕೊಡಿಸಬೇಕು. ಆಗ ಈ ವರ್ಗದವರಿಗೆ ಸರ್ಕಾರಗಳು ಕೊಟ್ಟಂತಹ ಮೀಸಲಾತಿಗಳು ಉಪಯೋಗಕ್ಕೆ ಬರುತ್ತವೆ. ಇದನ್ನು ನಾವು ಅರ್ಥ ಮಾಡಿಕೊಳ್ಳದೆ ಸುಮ್ಮನೆ ಮೀಸಲಾತಿ ಹೆಚ್ಚಳ ಮಾಡಿದ್ದೇವೆ ಎಂದು ಹೇಳಿದರೆ ಏನೂ ಆಗುವುದಿಲ್ಲ. ಇದರ ಬಗ್ಗೆ ಹೊರಗೆ ಜನರು ಮಾತನಾಡುತ್ತಿರುವುದನ್ನು ನಾನು ಹೇಳುತ್ತಿದ್ದೇನೆ. ಈ ಸದನದಲ್ಲಿ ನಾನು ಜನರ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಮೀಸಲಾತಿ ಪ್ರಕಟಣೆಗೊಂಡ ಮೇಲೆ, ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನ ಆದ ಮೇಲೆ ಜನರು ಈ ವಿಧೇಯಕದ ಬಗ್ಗೆ ಈ ರೀತಿಯ

ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದು ಚುನಾವಣೆ ಗಿಮಿಕ್, ಏನೂ ಆಗುವುದಿಲ್ಲ. ಹಾಗಾದರೆ ಷೆಡ್ಯೂಲ್ ೯ ನಲ್ಲಿ ಸೇರಿಸಲಿ.

**(ಈ ಹಂತದಲ್ಲಿ ಮಾನ್ಯ ಸಭಾನಾಯಕರು ಮಾತನಾಡಲು ನಿಂತರು)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾನಾಯಕರೇ, ನಾನು ಮುಗಿಸಿಬಿಡುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರ ಮಾತನಾಡುವ ಸಮಯ ಪ್ರಾರಂಭವಾಗಿ ಈಗಾಗಲೇ 16 ನಿಮಿಷಗಳು ಮುಗಿದಿವೆ. ಇನ್ನು ನಾಲ್ಕು ನಿಮಿಷಗಳಲ್ಲಿ ಮುಗಿಸುತ್ತಾರೆ. ಆಗ ಮಂತ್ರಿಗಳು ಉತ್ತರವನ್ನು ಕೊಡಬಹುದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇನ್ನೂ 10 ನಿಮಿಷ ಆಗೇ ಇಲ್ಲ.

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಇಲ್ಲ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ. ಇಲ್ಲಿ ಬರೆದಿದ್ದಾರೆ. ನೀವು ಪ್ರಾರಂಭ ಮಾಡಿರುವುದು 7.50 ಗಂಟೆಗೆ. ಇನ್ನು ಮೂರೇ ನಿಮಿಷ ಇದೆ. ದಯಮಾಡಿ ಮುಗಿಸಿ. ಅದು ನೀವೇ ಹೇಳಿರುವ ಮಾತು. ಅದಕ್ಕಿಂತ ಹೆಚ್ಚು ಸಮಯ ಕೊಡಲು ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮುಗಿಸುತ್ತೇನೆ. ನನಗೆ ಮೋಸ ಮಾಡುವುದು ಬೇಡ ಎಂದು ಇದೆ. ನಾವು ಎಲ್ಲಾ ರಾಜಕೀಯ ಪಕ್ಷದವರು ರಾಜಕೀಯ ಮಾಡುತ್ತೇವೆ. ರಾಜಕೀಯ ಇಚ್ಛಾಶಕ್ತಿಯನ್ನು ಮೆರೆಯುತ್ತೇವೆ. ಆದರೆ ನಾಡಿನ ಜನರಿಗೆ, ತಳ ಸಮುದಾಯದವರಿಗೆ, ಶತ ಶತಮಾನಗಳಿಂದ ಶೋಷಣೆಗೆ ಒಳಗಾದ ವರ್ಗಕ್ಕೆ ಮೀಸಲಾತಿಯನ್ನು ಹೆಚ್ಚಳ ಮಾಡುವಾಗ ಕೊನೆಯದಾಗಿ ನನ್ನದೊಂದು ವಿನಂತಿ ಇದೆ. ನಾಳೆ ಕೇಂದ್ರದಲ್ಲಿ ಬೇರೆ ಸರ್ಕಾರ ಬರಬಹುದು. ರಾಜ್ಯದಲ್ಲಿ ಬೇರೆ ಸರ್ಕಾರ ಬರಬಹುದು. ಇಂದು ಈ ಸರ್ಕಾರ ಕೊಟ್ಟಿದೆ. ಇದನ್ನು ವಿರೋಧ ಪಕ್ಷದವರು ಒಕ್ಕೊರಲಿನಿಂದ ಹೇಳಿದ್ದರೂ ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿಯನ್ನು ಕಾಂಗ್ರೆಸ್–ಜೆಡಿಎಸ್ ಸರ್ಕಾರ ಜಾರಿ ಮಾಡಿದ್ದರೂ ಕೊಡುತ್ತಿರುವುದು ಈ ಸರ್ಕಾರದ ಅವಧಿಯಲ್ಲಿ. ಈ ಸರ್ಕಾರವೇ ಕ್ರೆಡಿಟ್ ತೆಗೆದುಕೊಳ್ಳಲಿ. ಆದರೆ ಈ ನಾಡಿನ ಜನ ತೀರ್ಮಾನ ಮಾಡುತ್ತಾರೆ. ಈ

ವರ್ಗದ ಜನ ತೀರ್ಮಾನ ಮಾಡುತ್ತಾರೆ. "ಮಂಡೆ ಬೋಳಾದರೇನು, ಮನ ಬೋಳಾಗಬೇಕು." ನಾವು ತಿರುಪತಿಗೆ ಹೋಗಿ ಮುಡಿಕೊಟ್ಟು ಬಂದರೆ ಏನೂ ಆಗುವುದಿಲ್ಲ. ಮನಸ್ಸು ಬದಲಾದರೆ ಮಾತ್ರ ಏನಾದರೂ ಸಮಾಜಕ್ಕೆ ಒಳ್ಳೆಯದಾಗುವುದು.

ಷೆಡ್ಯೂಲ್ 9 ನಲ್ಲಿ ಸೇರಿಸಿ ಎಂದು ಏಕೆ ಕೇಂದ್ರ ಸರ್ಕಾರಕ್ಕೆ ನಾವು ಒತ್ತಾಯ ಮಾಡಬಾರದು? ಅದನ್ನು ಮಾಡಬೇಕು ಎನ್ನುವುದು ನನ್ನ ಒತ್ತಾಯ. ಬಿಜೆಪಿ ಸರ್ಕಾರವೇ ಇದೆ. ನಾವೆಲ್ಲರೂ ಒಂದು ವಿಮಾನದಲ್ಲಿ ಹೋಗೋಣ. ಎಲ್ಲಾ ವಿರೋಧಪಕ್ಷಗಳ ನಾಯಕರನ್ನು ಕರೆದುಕೊಂಡು ಪ್ರಧಾನ ಮಂತ್ರಿಯವರ ಬಳಿಗೆ ಹೋಗಿ ದಯಮಾಡಿ ಸಂಸತ್ತಿನಲ್ಲಿ ಷೆಡ್ಯೂಲ್ 9 ಗೆ ಸೇರಿಸಬೇಕು ಎಂದು ಒಕ್ಕೊರಲಿನಿಂದ ಆಗ್ರಹಿಸೋಣ.

**(...ಮುಂದು)**

**(1237) 27-12-2022 (8.10) ಕೆಜಿ-ಜಿಆರ್** (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು.,):-**

ದಯವಿಟ್ಟು, ಈ ಕೆಲಸವನ್ನು ಮಾಡಲಿ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಅದರಲ್ಲೂ ವಿಶೇಷವಾಗಿ ನ್ಯಾಯಮೂರ್ತಿಯವರಾದ ಶ್ರೀ ನಾಗಮೋಹನ್‌ದಾಸ್‌ರವರಿಗೆ ಮತ್ತು ನ್ಯಾಯಮೂರ್ತಿಯವರಾದ ಶ್ರೀ ಸುಭಾಶ್ ಆಡಿಯವರಿಗೆ ಈ ವರದಿಯನ್ನು ಕೊಟ್ಟಿದ್ದಕ್ಕಾಗಿ ಈ ಸದನದ ಮೂಲಕ ಅವರಿಗೆ ತುಂಬು ಹೃದಯದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಉಪ ಸಭಾಪತಿಯವರು:-** ಧನ್ಯವಾದಗಳು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ಸ್ವಾಗತಿಸಿರುವವರಿಗೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಎಲ್ಲಾ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಶೋಷಿತ ಸಮಾಜದ ಜೊತೆಗೆ ಯಾರು ಇದ್ದೇವೆ, ಯಾರು ಇಲ್ಲ ಎನ್ನುವುದನ್ನು ಅವರವರ ಆತ್ಮ ಸಾಕ್ಷಿಗೆ ಬಿಟ್ಟುಬಿಡುವುದು ಸರಿ ಎಂದು ನಾನು ಈ ಸಭೆಯಲ್ಲಿ ಅಂದುಕೊಳ್ಳುತ್ತೇನೆ. ಏಕೆಂದರೆ, ಎಲ್ಲರೂ champions ಆಗಿ ಬಿಟ್ಟಿದ್ದೇವೆ. ಹಾಗಾಗಿ, ಅವರವರ ಆತ್ಮ

ಸಾಕ್ಷಿಗೆ ಬಿಟ್ಟುಬಿಡುತ್ತೇನೆ. ನಾವು ಇದನ್ನು ಏತಕ್ಕೆ Schedule ೯ ನಲ್ಲಿ ತರಲ್ಲಿಲ್ಲವೆಂದರೆ, ಮಾನ್ಯ ನ್ಯಾಯಮೂರ್ತಿಗಳಾದ ಶ್ರೀ ಸುಭಾಶ್ಆಡಿಯವರು ರೇಕಮೆಂಡ್ ಮಾಡಬೇಕಾದರೆ, 103ನೇ ಸಂವಿಧಾನಿಕ ತಿದ್ದುಪಡಿ ಏನಾಗಿದೆ ಅದು 50% ಮೀಸಲಾತಿಯನ್ನು ದಾಟುವುದಕ್ಕೆ envisage ಮಾಡಿದೆ ಎಂದು ಹೇಳಿದ್ದಾರೆ. ನಾನು honest ಆಗಿ ಮಾತನಾಡುತ್ತೇನೆ. ಹಾಗಾಗಿ, ನಾವು ನ್ಯಾಯಮೂರ್ತಿಗಳಾದ ಶ್ರೀ ಸುಭಾಶ್ಆಡಿಯವರ ವರದಿಯನ್ನು ಆಧಾರವಾಗಿಟ್ಟುಕೊಂಡು 60% ಅನ್ನು cross ಮಾಡುತ್ತಿಲ್ಲ ಎನ್ನುವ ಕಾರಣಕ್ಕೆ ತಕ್ಷಣ ಇದನ್ನು Schedule ೯ಗೆ ತರುವುದು ಬೇಡವೆಂದು ತೀರ್ಮಾನ ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, if required, Resolution pass ಆಗಬೇಕಾಗುತ್ತದೆ. ನಮ್ಮ Legislative Assembly ನಲ್ಲಿ ಮತ್ತು Legislative Council ನಲ್ಲಿ, ಇದು ಏನಾದರೂ ಹಿಂದೇಟಾದರೆ, ನಾವು Resolution ಅನ್ನು ಮಾಡಿಯಾದರೂ ಸಹ ತರಬೇಕೆಂದು ಸರ್ಕಾರದ ಆಲೋಚನೆ ಇದೆ. ಆ stage ಯಾವಾಗ ಬರುತ್ತದೆ ಎಂದರೆ, Bill enact ಆಗಿ pass ಆಗಿ ಕೇಂದ್ರಕ್ಕೆ ಕಳುಹಿಸಿದ ಮೇಲೆ ನಾವು ಆ ನಿರ್ಧಾರವನ್ನು ತೆಗೆದುಕೊಳ್ಳಬಹುದು. ಅವರು ಅಲ್ಲಿಯವರೆಗೆ ಏಕಾಏಕಿ ಒಪ್ಪುವುದಿಲ್ಲ. ಮಾಡುವುದಿಲ್ಲವೆಂದು ನಾವು Schedule ೯ ಗೆ ಸೇರಿಸುವುದಕ್ಕೆ ಆಗುವುದಿಲ್ಲ. If it is rejected, if it is adverse. ಏಕೆಂದರೆ, ಈಗ fractured decision ಇದೆ, Supreme Court ನಲ್ಲಿ. ನಿಮ್ಮ E.W.S., case ನಲ್ಲಿ 50% ಕ್ರಾಸ್ ಮಾಡಬಹುದು ಎನ್ನುವುದರ ಬಗ್ಗೆ different opinion ಗಳನ್ನು ಕೊಟ್ಟು, ಈಗ 60% ಹೋಗಿರುವುದು ತಪ್ಪು ಎಂದು ಎಲ್ಲಿಯೂ ತೀರ್ಮಾನವಾಗಿಲ್ಲ. 50% ಕ್ರಾಸ್ ಮಾಡಿರುವುದು ತಪ್ಪು ಎಂದು ಆಗಿಲ್ಲ. It was a Court's decision. 50% ಗೆ restrict ಆಗಬೇಕು ಎಂದಿದ್ದು ಸಂವಿಧಾನ ಅಲ್ಲ, ಕಾನೂನು ಅಲ್ಲ. Supreme Court ಹೇಳಿದ್ದನ್ನು exempt ಮಾಡಿಕೊಳ್ಳುವುದಕ್ಕೆ ಮಾಡಿರುವಂತಹ ಪ್ರಯತ್ನ. 103$^{rd}$ Constitutional amendment ರಲ್ಲಿ ಸ್ಪಷ್ಟವಾಗಿ ನಾವು 10% ಹೆಚ್ಚಿಗೆ ಮಾಡಿರುವುದರಿಂದ...

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 50% reservation cross ಆಗಬೇಕಾ, ಬೇಡವಾ ಎಂದು ಹೇಳ Supreme Court ನಿಂದ

fractured opinion ಇದೆ ಎಂದು ಹೇಳಿದ್ದಾರೆ. It is not on that. It is on 10% E.W.S., reservation ಬಗ್ಗೆ ಇದೆ. 50% reservation ಮೇಲೆ ಅಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಇರುವಂತಹ opinion ನಲ್ಲಿ ಸಂವಿಧಾನದ 103ನೇ ತಿದ್ದುಪಡಿಯಲ್ಲಿ ನಾವು 50% ದಾಟುತ್ತಿದ್ದೇವೆ ಎನ್ನುವುದೇ ನಮಗೆ, ನಾನು ಅದರ ವರದಿಯನ್ನು ತಮಗೆ ಕೊಡುತ್ತೇನೆ. ಅವರು ಆ ವರದಿಯಲ್ಲಿ ಶಿಫಾರಸ್ಸು ಮಾಡಿದ್ದಾರೆ. ಸಂವಿಧಾನದ 103ನೇ ತಿದ್ದುಪಡಿ ಏನಾಗಿದೆ, it gives powers to states to enhance 50% reservation ಅಂತ, ಹಾಗಾಗಿ, ನಾವು ಅದರಲ್ಲಿ risk ತೆಗೆದುಕೊಳ್ಳುತ್ತಿದ್ದೇವೆ, ಅದರ ಕೆಳಗಡೆ ನಾವು fit ಆಗಬಹುದಾ ಎಂಬ ಒಂದು ಅಲೋಚನೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ, ನಾವು ಶ್ರೀ ನಾಗಮೋಹನ್‌ದಾಸ್‌ರವರ ವರದಿಗೆ ಸೀಮಿತವಾಗಿ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಇದು ಸ್ಪಷ್ಟ. ಇದರಲ್ಲಿ ಎ.ಜೆ.ಸದಾಶಿವರವರ ಕಮಿಟಿ ಬಗ್ಗೆ ಮಾತನಾಡಿರುವುದು, ಶ್ರೀ ನಾಗಮೋಹನ್‌ದಾಸ್‌ರವರು ಮಾತನಾಡಿರುವುದು, ಬೇರೆಯದರ ಬಗ್ಗೆ ಶ್ರೀ ನಾಗಮೋಹನ್‌ದಾಸ್‌ರವರು ಮಾತನಾಡಿರುವುದನ್ನು ಸರ್ಕಾರ consider ಮಾಡಿಲ್ಲ. ನಾವು ಸರ್ಕಾರ ಇಲ್ಲಿಯವರೆಗೆ consider ಮಾಡಿಲ್ಲ. ಅವರು one line recommendation ಮಾಡಿದ್ದಾರೆ. 'However, A.J.Sadashiva Commission's Report can also be considered in giving internal reservation to Scheduled Castes and Scheduled Tribes, because this is a proportional reservation' ಎಂದು ಹೇಳಿದ್ದಾರೆ. ಇದು proportional reservation ಆಗಿದ್ದರಿಂದ ಒಳಮೀಸಲಾತಿಯನ್ನು ಕಲ್ಪಿಸಬಹುದು, ಸರ್ಕಾರ ಯೋಚನೆ ಮಾಡಬೇಕೆಂದು, ಮುಂದುವರೆದು, creamy layer identify ಮಾಡುವುದು ಸೂಕ್ತವೆಂದು ಶಿಫಾರಿಸ್ಸಿನಲ್ಲಿ ಹೇಳುತ್ತಾರೆ. Creamy layer amongst Scheduled Castes and Scheduled Tribes ಅನ್ನು ನೀವು identify ಮಾಡುವುದು ಸೂಕ್ತವೆಂದು ಹೇಳುತ್ತಾರೆ. ಮೂರನೆಯದಾಗಿ. Scheduled Castes man whoever already availed these services, he should let go. ಅದನ್ನು ಯಾರಿಗಾದರೂ ಬಿಟ್ಟುಬರುವುದು ಸೂಕ್ತ, ಒಳ್ಳೆಯದು ಎಂಬ ಹಿತದೃಷ್ಟಿಯಲ್ಲಿ ಶ್ರೀ

ನಾಗಮೋಹನ್‌ದಾಸ್‌ರವರು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಪ್ರಕಾಶ್ ಕೆ ರಾಥೋಡ್‌ರವರು ಇದನ್ನು ಓದಿದ್ದಾರೆ. ನಾವು ಆ aspect ಅನ್ನು touch ಮಾಡಿಲ್ಲ. ನಾವು honestly ಯಾವ aspect ಅನ್ನು touch ಮಾಡಿಲ್ಲ. ಈಗ ನಮ್ಮ ಮುಂದೆ ಇರುವುದು population ಆಧಾರಿತವಾಗಿ Scheduled Castes and Scheduled Tribes ಗಳಿಗೆ ಏನು reservation ಕೊಡಬೇಕೆಂದು ಇತ್ತೋ, ಅದನ್ನು ನಾವು ಎರಡು ಕಾರಣಕ್ಕೆ ಕೊಡುವುದು. ಒಂದು direction of the High Court ಇರುವುದರಿಂದ, plus under the 103rd Constitutional amendment, we may cross 50% ಎಂದು ಶ್ರೀ ಸುಭಾಶ್ ಆಡಿಯವರು ಒಂದು ವರದಿಯನ್ನು ಕೊಟ್ಟಿರುವುದರಿಂದ, law pass ಮಾಡಿದರೆ ಸಾಕಾಗಬಹುದು ಎಂದು ಇಟ್ಟುಕೊಂಡಿದ್ದೇವೆ. Ordinance ಅನ್ನು ಯಾರು ಕೇಂದ್ರ ಸರ್ಕಾರದ ಮುಂದೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ. ಈ law pass ಆದಮೇಲೆ, ಈಗಾಗಲೇ ನಾನು House ಕೇಳಿದ್ದೇವೆ, we are committed to the cause of Scheduled Castes and Scheduled Tribes. ಇದನ್ನು ಯಾರಾದರೂ ಒಪ್ಪಲಿ, ಬಿಡಲಿ, ರಾಜಕೀಯಕ್ಕೆ ಮಾಡುತ್ತಿದ್ದೇವೆಯೋ, ನಾಟಕಕ್ಕೆ ಮಾಡುತ್ತಿದ್ದೇವೋ, ಮೆಚ್ಚಿಸುವುದಕ್ಕೆ ಮಾಡುತ್ತಿದ್ದೇವೆಯೋ ನಮಗೆ ಅದರ ಸ್ಥಿತಿ ಇಲ್ಲ. ನಾವು ಇದನ್ನು ಅಂತ್ಯ ಕಾಣುವವರೆಗೆ ಹೋರಾಟ ಮಾಡುವುದಕ್ಕೆ ಸಿದ್ದರಾಗಿಯೇ ಈ ಕೆಲಸಕ್ಕೆ ಕೈ ಹಾಕಿದ್ದೇವೆ. We will see that. ನಾವು ಇದನ್ನು ಮಾಡಿಯೇ ಮಾಡುತ್ತೇವೆ. ನಾವು ಈ reservation ಅನ್ನು ತೆಗೆದುಕೊಂಡು ಹೋಗೆಹೋಗುತ್ತೇವೆ ನಾವು Scheduled Castes ಗೆ ಎರಡು ಪ್ಲಸ್ 4 ಅನ್ನು ಕೊಡುವುದಕ್ಕೆ commit ಆಗಿದ್ದೇವೆ. ಸಭೆಯಲ್ಲಿ ಏನು apprehension ಇದೆ, it may be rejected by the Supreme Court ಇದೆಯಲ್ಲ ಇದಕ್ಕೆ solution ಕಂಡುಹಿಡಿಯುವುದಕ್ಕೆ ಖಂಡಿತವಾದ ಪ್ರಯತ್ನವನ್ನು ಮಾಡುತ್ತೇವೆ. ಸರ್ಕಾರಗಳು ನಡೆಯಬೇಕಾದರೆ, ಪ್ರಯತ್ನಗಳು ಮುಖ್ಯ. ಸ್ವಲ್ಪ ಪ್ರಯತ್ನಗಳು ಮುಖ್ಯ. ನ್ಯಾಯಾಲಯದಲ್ಲಿ ಆ ರೀತಿಯಾಗುತ್ತದೆ, ಇದು ಈ ರೀತಿಯಾಗುತ್ತದೆ ಎಂದು ಏನು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. We have to act. ಆಮೇಲೆ repercussions ಏನೇನು ಆಗುತ್ತದೆಯೋ, ಅದನ್ನು face ಮಾಡಬೇಕಾಗುತ್ತದೆ. ನಾವು ಈಗ ಸರ್ಕಾರ. ನಾವು ಈಗ act ಅನ್ನು ಮಾಡುತ್ತಿದ್ದೇವೆ. We are prepared to face any sort of repercussions on this. We will see that they are given so much of

reservation in future. ದಯಮಾಡಿ, ಇದನ್ನು ಪರ್ಯಾಲೋಚನೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಒಂದು ಮನವಿ ಇದೆ. ದಯವಿಟ್ಟು ಅವಕಾಶ ಕೊಡಿ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಮಾತನಾಡಿದ್ದು ಮುಗಿದಿದೆ ಅಲ್ಲವೇ, ಆಯಿತು. ಒಂದು ನಿಮಿಷದಲ್ಲಿ ಹೇಳಿ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ಸಚಿವರು ಹೇಳಿದ್ದನ್ನು ಮತ್ತು ಸರ್ಕಾರದ ಇಚ್ಚಾಶಕ್ತಿಯನ್ನು ಒಪ್ಪುತ್ತೇವೆ. ಅದಕ್ಕೆ ನಮ್ಮೆಲ್ಲರ ಸಹಕಾರ ಇದೆ. ಆದರೆ, Schedule ೯ ಗೆ ಏಕೆ ಸೇರಿಸುವುದಿಲ್ಲ? Why?

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ ಮಾನ್ಯ ಸಚಿವರು ಹೇಳುತ್ತಾರೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು why ಎಂದರೆ, 103ನೇ amendment ನಲ್ಲಿ 50% ಕ್ರಾಸ್ ಮಾಡುವುದಕ್ಕೆ constitutional amendment ಆಗಿದೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅದು ಏನೇ ಇರಲಿ,, Schedule ೯ ನಲ್ಲಿ ಸೇರಿಸಬೇಕು ಎನ್ನುವಂಥದ್ದರ ಬಗ್ಗೆ ಇದೆಯಲ್ಲವೇ;

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಬಗ್ಗೆ ನಮಗೆ ನ್ಯಾಯಮೂರ್ತಿಗಳಾದ ಶ್ರೀ ಸುಭಾಶ್ ಆಡಿಯವರು ಸ್ಪಷ್ಟವಾಗಿ you can go ahead as per the 103rd Constitutional amendment ಎಂದು ಶಿಫಾರಸ್ಸು ಮಾಡಿದ್ದಾರೆ. We are taking this report for consideration, not your words. ನಾವು ಎಲ್ಲವನ್ನು ಯೋಚನೆ ಮಾಡಿ ಬಿಲ್ಲನ್ನು ಮಾಡಿದ್ದೇವೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ವರದಿಯಲ್ಲಿ ಹೇಳಿರಬಹುದು, ಅವರು Schedule ೯ ಗೆ ಸೇರಿಸಬಾರದು ಎಂದು ಹೇಳಿದ್ದಾರೆಯೇ? ಏಕೆ Schedule ೯ ಗೆ ಸೇರಿಸುವುದಕ್ಕೆ ಆಗುವುದಿಲ್ಲ?

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಮಾತನಾಡಿದಕ್ಕೆ ತಮಗೆ clarificaton ಸಿಕ್ಕಿದೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ವರದಿಯಲ್ಲಿ ಹೇಳಿರುವುದನ್ನು ಮಾಡಬೇಕಾ ಅಥವಾ ಮಾನ್ಯ ಸದಸ್ಯರು ಹೇಳುವುದನ್ನು ಮಾಡಬೇಕೇ?

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು Schedule ೯ ನಲ್ಲಿ ಸೇರಿಸಬಾರದು ಎಂದು ಹೇಳಿದ್ದಾರೆಯೇ?

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ದಯವಿಟ್ಟು ಕುಳಿತುಕೊಳ್ಳಿ. ತಾವು ಅರ್ಥ ಮಾಡಿಕೊಳ್ಳಿ. ವಿರೋಧ ಪಕ್ಷದ ನಾಯಕರೇ, ತಾವು 2 ನಿಮಿಷ ಮಾತನಾಡಿ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಮಾಡುತ್ತಿರುವುದು ಆ ವರ್ಗಕ್ಕೆ ವಂಚನೆ ಇದು.

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ರಮೇಶ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಅಂತಿಮವಾಗಿ ಮಾತನಾಡಿ. ಬಿಲ್ಲನ್ನು ತೆಗೆದುಕೊಳ್ಳೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಏನಾದರೂ ಸಹ ಮಾಡುತ್ತೇವೆಂದು ಹೇಳಿದ್ದಾರೆ. 103rd Constitutional amendment ಆದಂತಹ ಸಂದರ್ಭದಲ್ಲಿ ನಾನು Parliament ನಲ್ಲಿದ್ದೆ. ನಾನು ಅದರ ಬಗ್ಗೆ ಏನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, precedents ಏನು ಹೇಳುತ್ತೇ, ಎಷ್ಟೋ cases 50% reservation cross ಆದಾಗ Supreme Court reject ಮಾಡಿದೆ. ಇದಕ್ಕೆ ಬೇಕಾದರೆ, ಸಂಪೂರ್ಣವಾದಂತಹ ಮಾಹಿತಿಯನ್ನು ಕಳುಹಿಸಿ ಕೊಡುತ್ತೇನೆ. ಕಾನೂನು ಇಲಾಖೆಯಲ್ಲಿ ಇರುವವರು ಅದನ್ನು study ಮಾಡಿದ ಮೇಲೆ, Schedule 9 ನಲ್ಲಿ ತರುವುದರಲ್ಲಿ ಏನಿದೆ? ಅವರು ಮಾಡುವುದನ್ನು ಮಾಡುತ್ತಿದ್ದಾರೆ. ಅದನ್ನು ತರುವುದರಿಂದ ಯಾರಿಗೆ ಏನು ನಷ್ಟವಾಗುತ್ತದೆ? ವರದಿಯಲ್ಲಿ ತರಬಾರದು ಎಂದು ಏನಾದರೂ ಹೇಳಿದ್ದಾರೆಯೇ?

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, Parliament ಕೆಲವು ವಿಷಯಗಳಲ್ಲಿ Court interfere ಆಗಬಾರದು ಎಂದು ಹೇಳಿ ಮಾಡಿಕೊಂಡಿರುವಂತಹ schedule ಅದು.

ಎಲ್ಲವನ್ನು Schedule ೯ ನಲ್ಲಿ ತೆಗೆದುಕೊಂಡು ಹೋಗಿ judiciary power ಅನ್ನು ಯಾರು restrict ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, it is our right.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ತಮಿಳುನಾಡಿನವರು Schedule ೯ ನಲ್ಲಿ ತಂದಿದ್ದರೂ ಸಹ, ಅವರು litigation entertain ಮಾಡಿದ್ದಾರೆ. ಅದಕ್ಕೆ ನಾನು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ we will see that our party will take up the cause and we are committed.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಈ ರೀತಿ interrupt ಮಾಡುತ್ತಿದ್ದರೆ. ಹೇಗೆ ಸದನವನ್ನು ನಡೆಸುವುದಕ್ಕೆ ಆಗುತ್ತದೆ?

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇದು ಭಿಕ್ಷೆಯಲ್ಲ, ಇದು ಹಕ್ಕು,

(ಗೊಂದಲ)

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಏನು ಹಕ್ಕನ್ನು ಕೇಳಿದ್ದಿರೋ, ಅದಕ್ಕೆ ಮಾನ್ಯ ಸಚಿವರು clarification ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ. Schedule ೯ ಅನ್ನು ಏಕೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಇಷ್ಟು ವರ್ಷಗಳ ಕಾಲ ಏಕೆ ಕೊಟ್ಟಿರಲಿಲ್ಲ?

(ಗೊಂದಲ)

**(ಈ ಹಂತದಲ್ಲಿ ಎರಡೂ ಕಡೆಯ ಸದಸ್ಯರು ಒಂದೇ ಬಾರಿಗೆ ಸದನದಲ್ಲಿ ಎದ್ದು ನಿಂತು ಮಾತನಾಡತೊಡಗಿದರು)**

**ಸಭಾಪತಿಯವರು:–** ಮಾನ್ಯ ರಾಥೋಡ್‌ರವರೇ, ತಾವು ಹೇಳಿ ಮುಗಿಸಿ. ಪೀಠದಿಂದ ಹೇಳಿದ ಮಾತುಗಳನ್ನು ಕೇಳದಿದ್ದವರಿಗೆ respond ಮಾಡುವಂತಹ ಅವಶ್ಯಕತೆ ಇಲ್ಲ. ತಾವು ಮಾತನಾಡಿದ ನಂತರ ಬಿಲ್ಲನ್ನು ತೆಗೆದುಕೊಳ್ಳುತ್ತೇನೆ

(ಗೊಂದಲ)

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, only two things ಅನ್ನು ಹೇಳುತ್ತೇನೆ. ಮೊದಲನೆಯದಾಗಿ, ಮಾನ್ಯ ಸಚಿವರು ನಾನು ನ್ಯಾಯಮೂರ್ತಿಗಳಾದ ನಾಗಮೋಹನ್‌ದಾಸ್‌ರವರ ವರದಿಯನ್ನು ನೋಡಿದ್ದೇನೆ ಎಂದು ಹೇಳಿದ್ದಾರೆ. ಅವತ್ತು ಸರ್ವ ಪಕ್ಷಗಳ ಸಭೆಯಲ್ಲಿ ಮಾನ್ಯ ಸಚಿವರು ಕೊಟ್ಟಂತಹ ಒಂದು ಮಾಹಿತಿಯನ್ನು ನೋಡಿದ್ದೇವೆ. ಆದರೆ, ನಾವು Law Department ರವರನ್ನು ಕೇಳಿದಾಗ, they have not given. ಆ ವರದಿ ಇಲ್ಲವೆಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಸಚಿವರು direction ಮಾಡಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, I will see that the entire report copy will be given to you tomorrow.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, last point. ಮಾನ್ಯ ಸಚಿವರು ಶ್ರೀ ಸದಾಶಿವ ಆಯೋಗದ ವರದಿಯನ್ನು ಪರಿಗಣಿಸಿಲ್ಲವೆಂದು ಹೇಳಿದ್ದಾರೆ. ಈಗ ಅದನ್ನು ಮಾಡಿಸಿಲ್ಲ. ಮುಂದೆ ಒಳಮೀಸಲಾತಿ ಕೊಡುವಂತಹ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ.

**(ಮುಂದು.,)**

**(1238) 27-12-2022 (8.20) ಎಂವಿ-ಎಂಡಿ(ವಿಕೆ)** (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು...):**
ಒಳಮೀಸಲಾತಿ ಮಾಡಬಾರದು ಎಂದು ಹೇಳಿದವನು ನಾನು ಮತ್ತು ನಮ್ಮ ಸಮುದಾಯದವರು. ಅದನ್ನು ಪರಿಗಣಿಸಬೇಕಾದರೆ, ನಮ್ಮ ಸಮುದಾಯದ ಅನಿಸಿಕೆಗಳು ಮತ್ತು ಬೇರೆ ಸಮುದಾಯಗಳ ಅನಿಸಿಕೆಗಳನ್ನು ತೆಗೆದುಕೊಂಡು ನಿರ್ಣಯ ತೆಗೆದುಕೊಳ್ಳಲಿ ಎಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಸಚಿವರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗ ಒಳಮೀಸಲಾತಿಯ ಕ್ಯಾಬಿನೆಟ್ ಸಮಿತಿಗೆ ನಾನೇ ಅಧ್ಯಕ್ಷನಾಗಿದ್ದೇನೆ. ನಮ್ಮ terms of reference ನಲ್ಲಿ ಶ್ರೀ ಎ.ಜೆ.ಸದಾಶಿವರವರ ಆಯೋಗದ recommendations ನಲ್ಲಿ ಇಲ್ಲ. ಒಳಮೀಸಲಾತಿಯನ್ನು ಕೊಡಬೇಕೆ, ಬೇಡವೇ ಎನ್ನುವುದರ ಬಗ್ಗೆ. ಮತ್ತೆ ಕೊಡುವುದಾದರೆ ಯಾವ ಪ್ರಮಾಣದಲ್ಲಿ ಮತ್ತು ಯಾವ categorisation ನಲ್ಲಿ ಕೊಡಬೇಕು ಎಂದು ಕ್ಯಾಬಿನೆಟ್‌ಗೆ recommend ಮಾಡಬೇಕಾಗಿರುವುದು ನನ್ನ ಕೆಲಸವಾಗಿದೆ. ನಾನು ಈ ಸಭೆಯ ಮುಂದೆ ಹೇಳುತ್ತೇನೆ. ನಾವು ಎಲ್ಲಾ ಪಕ್ಷದವರ hear ಮಾಡದೆ, decision ಮಾಡುವುದಿಲ್ಲ ಮತ್ತು recommendation ಅನ್ನು ನೀಡುವುದಿಲ್ಲ. ನಾನು ನಿನ್ನೆಯ ದಿವಸ ಮಾನ್ಯ ಸಚಿವರಾದ ಶ್ರೀ ಪ್ರಭು ಚವ್ಹಾಣ್‌ರವರಿಗೂ ಸಹ ತಿಳಿಸಿದ್ದೇನೆ. ನಮ್ಮಲೇ ಬೇರೆಯವರು ಬಂದು ಕೇಳಿದಾಗ ಅವರಿಗೂ ಸಹ ತಿಳಿಸಿದ್ದೇನೆ. Unless we hear all the sides, I will not take decision at least. Because I am the Chairman.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 8 ರವರೆಗೆ**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 8 ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 8 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಅಂಗೀಕರಿಸುವುದು."**

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು **ಮಸೂದೆಗೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.**

**ಉಪ ಸಭಾಪತಿಯವರು:–** ಸದನವನ್ನು ನಾಳೆ ಬೆಳಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಸದನವು ರಾತ್ರಿ 8 ಗಂಟೆ 23 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 28ನೇ ಡಿಸೆಂಬರ್ ಮಾಹೆ, 2022ರ ಬುಧವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

<><><>